16ನೇ
ವಾರ್ಷಿಕ ವರದಿ
2018-19

16TH
ANNUAL REPORT
2018-19

ಕಾವೇರಿ ನೀರಾವರಿ ನಿಗಮ ನಿಯಮಿತ
16 ನೇ ವಾರ್ಷಿಕ ವರದಿ 2018-19

ವಿಷಯಾನುಕ್ರಮಣಿಕೆ

ಕ್ರಮ. ಸಂಖ್ಯೆ	ಪರಿವಿಡಿ	ಪುಟ ಸಂಖ್ಯೆ
1	ನಿರ್ದೇಶಕರ ಮಂಡಳಿ	2
2	ಸಭಾ ಸೂಚನಾ ಪತ್ರ	3
3	ನಿರ್ದೇಶಕರ ವರದಿ	4–17
4	ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ವರದಿ	18
5	ಕಾರ್ಯದರ್ಶಿಯ ಪರಿಶೋಧಕ ವರದಿ	19–25
6	ಸ್ವತಂತ್ರ ಲೆಕ್ಕಪರಿಶೋಧಕರ ವರದಿ	26–44
7	ಸಮತೋಲನ ಪಟ್ಟಿ	45
8	ಲಾಭ ಮತ್ತು ನಷ್ಟದ ತಃಖ್ತೆ	46
9	ನಗದು ಪ್ರವಹನ ಪಟ್ಟಿ	47
10	ಈಕ್ವಿಟಿಯಲ್ಲಿನ ಬದಲಾವಣೆಗಳ ವಿವರಣಾ ಪಟ್ಟಿ	48
11	ನಿಗಮಿತ ಮಾಹಿತಿ ಮತ್ತು ಗಮನಾರ್ಹ ಲೆಕ್ಕಪತ್ರ ಕಾರ್ಯನೀತಿಗಳು	49–66
12	2018–19ನೇ ಸಾಲಿನ ಯೋಜನೆಗಳ ವರದಿ	67–152

ನೋಂದಾಯಿತ ಕಛೇರಿ:

ಕಾವೇರಿ ಭವನ ಕಾಂಪ್ಲೆಕ್ಸ್, ಗೋಕುಲಂ, 4ನೇ ಹಂತ, ಮಂಜುನಾಥಪುರ, ಮೈಸೂರು-570 020.

ಕಾರ್ಪೊರೇಟ್ ಕಛೇರಿ:

ಮೇಲ್ಮೈ ಜಲ ಮಾಹಿತಿ ಕೇಂದ್ರ ಕಟ್ಟಡ, 3ನೇ & 4ನೇ ಮಹಡಿ, ಆನಂದರಾವ್ ವೃತ್ತ, ಬೆಂಗಳೂರು-560 009

ದೂರವಾಣಿ: 080-22354900, 22352997, 22352998 (ಫ್ಯಾಕ್ಸ್)

ನಿರ್ದೇಶಕರ ಮಂಡಳಿ	
ಶ್ರೀ. ಬಿ.ಎಸ್.ಯಡಿಯೂರಪ್ಪ	ಅಧ್ಯಕ್ಷರು
ಶ್ರೀ ಟಿ.ಎಂ.ವಿಜಯ್ ಭಾಸ್ಕರ್, ಭಾ.ಆ.ಸೇ.	ನಿರ್ದೇಶಕರು
ಶ್ರೀಮತಿ ಸಿ.ಎನ್. ಮೀನಾ ನಾಗರಾಜ್, ಭಾ.ಆ.ಸೇ.	ನಿರ್ದೇಶಕರು
ಶ್ರೀ ಪಿ.ರವಿಕುಮಾರ್, ಭಾ.ಆ.ಸೇ.	ನಿರ್ದೇಶಕರು
ಶ್ರೀ ಐ.ಎಸ್.ಎನ್.ಪ್ರಸಾದ್, ಭಾ.ಆ.ಸೇ.	ನಿರ್ದೇಶಕರು
ಶ್ರೀ ರಾಕೇಶ್ ಸಿಂಗ್, ಭಾ.ಆ.ಸೇ.	ನಿರ್ದೇಶಕರು
ಶ್ರೀ ಎನ್.ಲಕ್ಷ್ಮಣರಾವ್ ಪೇಶ್ವೆ, ಕೆ.ಇ.ಎಸ್.	ನಿರ್ದೇಶಕರು
ಶ್ರೀ ಎಂ.ಶಿವಸ್ವಾಮಿ	ನಿರ್ದೇಶಕರು
ಶ್ರೀ ಎಸ್.ಎಲ್.ಶಿವಪ್ರಸಾದ್	ನಿರ್ದೇಶಕರು
ಶ್ರೀ ಎಸ್.ಎನ್.ಪ್ರಸಾದ್	ನಿರ್ದೇಶಕರು
ಶ್ರೀ ಕೆ.ಜೈಪ್ರಕಾಶ್, ಕೆ.ಇ.ಎಸ್.	ವ್ಯವಸ್ಥಾಪಕ ನಿರ್ದೇಶಕರು

ಪ್ರಧಾನ ವ್ಯವಸ್ಥಾಪಕರು – ಹಣಕಾಸು
ಶ್ರೀ ಗಂಗಾಧರ. ಬಿ. ಕೆ.

ನಿರ್ದೇಶಕರು (ತಾಂತ್ರಿಕ)
ಶ್ರೀ ಎಂ. ಬಂಗಾರಸ್ವಾಮಿ

ಕಂಪನಿ ಕಾರ್ಯದರ್ಶಿ
ಪ್ರಿಯದರ್ಶಿನಿ ಭಂಡಿವಾಡ್, ಸಿ.ಎಸ್., ಎಲ್ಎಲ್ಬಿ

ಮುಖ್ಯ ಆಡಳಿತಾಧಿಕಾರಿಗಳು
ಶ್ರೀಮತಿ ಮಮತಾದೇವಿ ಜಿ.ಎಸ್.

ಮಂಡಳಿ ಸಮಿತಿಗಳು

ಲೆಕ್ಕ ಪರಿಶೋಧನಾ ಸಮಿತಿ
ಶ್ರೀ ರಾಕೇಶ್ ಸಿಂಗ್, ಭಾ.ಆ.ಸೇ.
ಶ್ರೀ ಎನ್.ಲಕ್ಷ್ಮಣರಾವ್ ಪೇಶ್ವೆ, ಕೆ.ಇ.ಎಸ್.
ಶ್ರೀ ಕೆ.ಜೈಪ್ರಕಾಶ್,ಕೆ.ಇ.ಎಸ್.
ವ್ಯವಸ್ಥಾಪಕ ನಿರ್ದೇಶಕರು ಸದಸ್ಯರು

ಹಣಕಾಸು ಉಪಸಮಿತಿ
ಶ್ರೀ ರಾಕೇಶ್ ಸಿಂಗ್, ಭಾ.ಆ.ಸೇ.
ಶ್ರೀ ಎನ್.ಲಕ್ಷ್ಮಣರಾವ್ ಪೇಶ್ವೆ, ಕೆ.ಇ.ಎಸ್.
ಶ್ರೀ ಕೆ.ಜೈಪ್ರಕಾಶ್,ಕೆ.ಇ.ಎಸ್.
ವ್ಯವಸ್ಥಾಪಕ ನಿರ್ದೇಶಕರು ಸದಸ್ಯರು

ತಾಂತ್ರಿಕ ಉಪಸಮಿತಿ
ಶ್ರೀ ಎಸ್.ಎನ್.ಪ್ರಸಾದ್ – ಅಧ್ಯಕ್ಷರು
ಶ್ರೀ ಎಲ್. ಬಸವರಾಜು – ಸದಸ್ಯರು
ಶ್ರೀ ಎಸ್.ಎಲ್.ಶಿವಪ್ರಸಾದ್ – ಸದಸ್ಯರು
ಶ್ರೀ ರವೀಂದ್ರ ಸೈಮನ್ – ಸದಸ್ಯರು
ಶ್ರೀ ಆರ್.ಚೆಲುವರಾಜು – ವಿಶೇಷ ಆಹ್ವಾನಿತರು
ಶ್ರೀ ಸಿ.ಎಂ.ಶಿವಶಂಕರ್ – ವಿಶೇಷ ಆಹ್ವಾನಿತರು
ಶ್ರೀ ಕೆ.ಜೈಪ್ರಕಾಶ್, ಕೆ.ಇ.ಎಸ್. – ಸದಸ್ಯ ಕಾರ್ಯದರ್ಶಿ

ಕಾರ್ಪೋರೇಟ್ ಸಾಮಾಜಿಕ ಹೊಣೆಗಾರಿಕೆ ಸಮಿತಿ
ಶ್ರೀ ರಾಕೇಶ್ ಸಿಂಗ್, ಭಾ.ಆ.ಸೇ.
ಎನ್.ಲಕ್ಷ್ಮಣರಾವ್ ಪೇಶ್ವೆ, ಕೆ.ಇ.ಎಸ್.
ಶ್ರೀ ಕೆ.ಜೈಪ್ರಕಾಶ್, ಕೆ.ಇ.ಎಸ್.
ವ್ಯವಸ್ಥಾಪಕ ನಿರ್ದೇಶಕರು ಸದಸ್ಯರು

ನೋಂದಾಯಿತ ಕಛೇರಿ
ಕಾವೇರಿ ಭವನ ಸಂಕೀರ್ಣ, ಗೋಕುಲಂ, 4ನೇ ಹಂತ,
ಮಂಜುನಾಥಪುರ, ಮೈಸೂರು – 570 020.

ಕಾರ್ಪೋರೇಟ್ಕಛೇರಿ
ಮೇಲ್ಮೈ ಜಲ ಮಾಹಿತಿ ಕೇಂದ್ರ ಕಟ್ಟಡ, 3ನೇ & 4ನೇ ಮಹಡಿ,
ಆನಂದರಾವ್ ವೃತ್ತ, ಬೆಂಗಳೂರು–560 009.

ಮುಖ್ಯ ಹಣಕಾಸು ಅಧಿಕಾರಿ (ಸಿಎಫ್ಓ)
ಶ್ರೀ.ಕೆ. ದೇವದಾಸ್ ಎ.ಸಿ.ಎ

ಬ್ಯಾಂಕರುಗಳು:

ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ
ಡಾ॥ ಅಂಬೇಡ್ಕರ್ ವೀದಿ ಶಾಖೆ, ಬೆಂಗಳೂರು.

ವಿಜಯಾ ಬ್ಯಾಂಕ್
ಕಾರ್ಪೊರೇಟ್ ಬ್ಯಾಂಕಿಂಗ್ ಶಾಖೆ,
ರೆಸಿಡೆನ್ಸಿ ರಸ್ತೆ, ಬೆಂಗಳೂರು.

ಬ್ಯಾಂಕ್ ಆಫ್ ಇಂಡಿಯಾ
ಬೆಂಗಳೂರು ಲಾರ್ಜ್ ಕಾರ್ಪೋರೇಟ್ ಶಾಖೆ,
ಬೆಂಗಳೂರು.

ಆ್ಯಕ್ಸಿಸ್ ಬ್ಯಾಂಕ್,
ಆನಂದರಾವ್ ವೃತ್ತ, ಬೆಂಗಳೂರು.

ಕರ್ನಾಟಕಗ್ರಾಮೀಣ ಬ್ಯಾಂಕ್,
ಬಳ್ಳಾರಿ.

ಟ್ರಸ್ಟೀಸ್ & ಬಾಂಡ್ಹೋಲ್ಡರ್:

ಕೆನರಾ ಬ್ಯಾಂಕ್,
ಜೆ.ಸಿ.ರಸ್ತೆ, ಬೆಂಗಳೂರು

ರಿಜಿಸ್ಟ್ರಾರ್ ಆಫ್ ಟ್ರಾನ್ಸ್ಫರ್ಸ್ ಏಜೆಂಟ್ಸ್ ಆಫ್ ಬಾಂಡ್
ಬಿಜಿಎಸ್ಇ ಫೈನ್ಯಾನ್ಷಿಯಲ್ ಲಿಮಿಟೆಡ್,
ಜೆ.ಸಿ.ರಸ್ತೆ, ಬೆಂಗಳೂರು.
ಬಾಂಡ್‌ಗಳ ಮಾರುಕಟ್ಟೆ ಕೇಂದ್ರ
ಬಾಂಬೆ ಸ್ಟಾಕ್ ಎಕ್ಸ್ಚೇಂಜ್, ಮುಂಬೈ

ಕಾನೂನು ಸಲಹೆಗಾರರು
ಶ್ರೀ ಎಂ.ಆರ್.ಸಿ. ರವಿ, ವಕೀಲರು
ಮಲ್ಲೇಶ್ವರಂ, ಬೆಂಗಳೂರು.

ಶ್ರೀ ಕೆ.ಎಸ್.ಭೀಮಯ್ಯ,ವಕೀಲರು
ಮಲ್ಲೇಶ್ವರಂ, ಬೆಂಗಳೂರು 560 003

ಲೆಕ್ಕಪರಿಶೋಧಕರು
ಮೆ॥ ಕಿಚ್ಚಾ & ಪ್ರಭುಕೇಸವನ್,
ಚಾರ್ಟರ್ಡ್ಅಕೌಂಟೆಂಟ್ಸ್
ಚೆನ್ನೈ.

ಆಂತರಿಕ ಲೆಕ್ಕ ಪರಿಶೋಧಕರು
ಮೆ॥ ಕೆ.ಕೆ.ಚೆನ್ನಾನಿ&ಅಸೋಸಿಯೇಟ್ಸ್,
ಚಾರ್ಟರ್ಡ್ಅಕೌಂಟೆಂಟ್ಸ್, ಬೆಂಗಳೂರು.

ಕಾವೇರಿ ನೀರಾವರಿ ನಿಗಮ ನಿಯಮಿತ

ನೋಂದಾಯಿತ ಕಛೇರಿ

ಕಾವೇರಿ ಭವನ ಸಂಕೀರ್ಣ, ಗೋಕುಲಂ, 4ನೇ ಹಂತ, ಮಂಜುನಾಥಪುರ, ಮೈಸೂರು–570 020.

16ನೇ ವಾರ್ಷಿಕ ಸಾಮಾನ್ಯ ಸಭೆಯ ಸೂಚನಾ ಪತ್ರ

ಕಾವೇರಿ ನೀರಾವರಿ ನಿಗಮ ನಿಯಮಿತ ಸಂಸ್ಥೆಯ ಸರ್ವಸದಸ್ಯರ 16ನೇ ವಾರ್ಷಿಕ ಸಾಮಾನ್ಯ ಸಭೆಯನ್ನು ಸೋಮವಾರ ದಿನಾಂಕ:30–12–2019ರಂದು ಮಧ್ಯಾಹ್ನ4:00 ಗಂಟೆಗೆ ಈ ಕೆಳಕಂಡ ವಿಷಯಗಳನ್ನು ಪರಿಗಣಿಸಿ ವ್ಯವಹರಿಸಲು ಮುಖ್ಯಮಂತ್ರಿಗಳ ಗೃಹ ಕಛೇರಿ, "ಕೃಷ್ಣ", ಬೆಂಗಳೂರು ಇಲ್ಲಿ ಕರೆಯಲಾಗಿದೆ ಎಂದು ಈ ಮೂಲಕ ಸೂಚಿಸಲಾಗಿದೆ.

ಸಾಮಾನ್ಯ ವ್ಯವಹಾರ

1. 2018–19ನೇ ಸಾಲಿನ 31–03–2019ರಂದು ಇದ್ದಂತೆ, ನಿರ್ದೇಶಕರ ವರದಿ, ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ಸಂಬಂಧಿತ ಟೀಕೆ ಟಿಪ್ಪಣಿಗಳು, ಶಾಸನಬದ್ಧ ಲೆಕ್ಕಪರಿಶೋಧಕರ ವರದಿ, 31–03–2019ರಂದು ಇದ್ದಂತೆ ಲೆಕ್ಕಪರಿಶೋಧಿತ ಸಂತುಲನ ಪಟ್ಟಿ, ಅದೇ ದಿನಕ್ಕೆ ಕೊನೆಗೊಂಡ ವರ್ಷದ ಲಾಭ ಮತ್ತು ನಷ್ಟದತಃಖ್ತೆ, ನಗದು ಪ್ರವಹನ ಪಟ್ಟಿ, ಇಕ್ವಿಟಿ ಷೇರು ಬದಲಾವಣ ವಿವರಣ ಪಟ್ಟಿ ಹಾಗೂ ಸಂಬಂಧಿತ ಟಿಪ್ಪಣಿ ಇವುಗಳನ್ನು ಸ್ವೀಕರಿಸಿ, ಪರಿಗಣಿಸಿ, ಅಂಗೀಕರಿಸುವುದು.

2. ಕಂಪನಿ ಕಾಯ್ದೆ2013ರ ಪರಿಚ್ಛೇದ139ರ ಅಡಿ ನೇಮಕವಾದ ಕಂಪನಿಯ ಶಾಸನಬದ್ಧ ಲೆಕ್ಕಪರಿಶೋಧಕರಿಗೆ ಸಂಭಾವನೆಯನ್ನು ನಿಗಧಿಪಡಿಸುವುದು.

ಮಂಡಳಿ ಆದೇಶದ ಮೇರೆಗೆ

ಸಹಿ/–
ಕಂಪನಿ ಕಾರ್ಯದರ್ಶಿ

ಸ್ಥಳ: ಬೆಂಗಳೂರು
ದಿನಾಂಕ: 27–12–2019

ಟಿಪ್ಪಣಿ:
ಸಭೆಯಲ್ಲಿ ಹಾಜರಿದ್ದು ಮತ ಹಾಕಲು ಅಧಿಕಾರ ಪಡೆದಿರುವ ಸದಸ್ಯರು ತನ್ನ ಬದಲಿಗೆ ಸಭೆಯಲ್ಲಿ ಹಾಜರಿರಲು ಮತ್ತು ಮತ ಚಲಾಯಿಸಲು ಬೇರೊಬ್ಬರನ್ನು ನೇಮಿಸಬಹುದು ಮತ್ತು ಈ ಪ್ರತಿ ನಿಧಿ ಕಂಪನಿಯ ಸದಸ್ಯನಾಗಿರಬೇಕಿಲ್ಲ.

ನಿರ್ದೇಶಕರ ವರದಿ

ಮಾನ್ಯ ಸದಸ್ಯರಿಗೆ

31, ಮಾರ್ಚ್ 2019ಕ್ಕೆ ಕೊನೆಗೊಂಡ ವರ್ಷದ 16ನೇ ವಾರ್ಷಿಕ ವರದಿಯೊಂದಿಗೆ ಲೆಕ್ಕಪರಿಶೋಧನೆಗೆ ಒಳಪಟ್ಟ ಸಮತೋಲನ ಪಟ್ಟಿ, ನಗದು ಪ್ರವಹನ ಪಟ್ಟಿ ಹಾಗೂ ಇತರೆ ನಿಗಮದ ಕಾರ್ಯ ಚಟುವಟಿಕೆಗಳನ್ನು ಮಂಡಿಸಲು ನಿಮ್ಮ ನಿರ್ದೇಶಕರುಗಳು ಹರ್ಷಿಸುತ್ತಾರೆ.
ಕಂಪನಿ ಕಾಯ್ದೆ 1956ರ ನಿಬಂಧನೆಗಳ ಅಡಿಯಲ್ಲಿ ನಿಮ್ಮ ಕಂಪನಿಯನ್ನು ಒಂದು ಸಂಪೂರ್ಣ ಸರ್ಕಾರದ ಸಾಮ್ಯದ ಕಂಪನಿಯಾಗಿ ಸ್ಥಾಪಿಸಲಾಗಿದೆ.

ಆರ್ಥಿಕ ಕಾರ್ಯ ನಿರ್ವಹಣೆ

ಕಾವೇರಿ ಕೊಳ್ಳದಲ್ಲಿ ಬರುವ ಯೋಜನೆಗಳು ಜಲಾಶಯಗಳು, ನಾಲೆಗಳು ಮತ್ತು ನಾಲಾಜಾಲಗಳನ್ನು ಒಳಗೊಂಡಿರುತ್ತದೆ. ನಿಗಮವು 1ನೇ ಏಪ್ರಿಲ್ 2016 ರಂದು IND-ASಅನ್ನು ಅಳವಡಿಸಿಕೊಂಡು ಅವಶ್ಯವಿರುವಲ್ಲಿ ಅನುಷ್ಠಾನಗೊಳಿಸಿದೆ. ಆರ್ಥಿಕ ತಃಖ್ತೆಯು ಸಮತೋಲನ ಪಟ್ಟಿ, ಲಾಭ ಮತ್ತು ನಷ್ಟದ ತಃಖ್ತೆ, ನಗದು ಪ್ರವಹನ ಪಟ್ಟಿ ಹಾಗೂ ಇಕ್ವಿಟಿ ಬದಲಾವಣೆ 31–03–2019ರಲ್ಲಿ ಇದ್ದಂತೆ ಒಳಗೊಂಡಿರುತ್ತದೆ.

31ನೇ ಮಾರ್ಚ್ 2019ಕ್ಕೆ ಅನ್ವಯವಾಗುವಂತೆ ಕಂಪನಿಯ ರಾಜಸ್ವ ವೆಚ್ಚ ಈ ಕೆಳಕಂಡಂತಿದೆ.

(ರೂ.ಗಳಲ್ಲಿ)

ಯೋಜನೆಯ ಹೆಸರು	2018–19	2017–18
ಸಿಬ್ಬಂದಿ ವೇತನ ಮತ್ತಿತರ ಸವಲತ್ತುಗಳು	1,180,587,452	981,843,277
ಆರ್ಥಿಕ ವೆಚ್ಚ	1,741,591,650	1,328,926,177
ಸವಕಳಿ	89,037,305	80,052,941
ಇತರೆ ವೆಚ್ಚ	1,984,196,233	1,313,803,966
ವೆಚ್ಚಗಳು	**4,995,412,641**	**3,704,626,362**
ಕಡಿತ(–) ಸ್ವೀಕೃತಿಗಳು		
ಸರ್ಕಾರದ ಅನುದಾನ ನಿರ್ವಹಣಾಕಾಮಗಾರಿಗಳಿಗಾಗಿ	2,498,900,000	2,157,869,000
ಇತರೆ ಸ್ವೀಕೃತಿಗಳು	149,381,921	138,285,649
ಒಟ್ಟು ವೆಚ್ಚಗಳು	**2,347,130,720**	**1,408,471,713**
ಕಡಿತ(–) ಪ್ರಗತಿಯಲ್ಲಿರುವ ಕೆಲಸಗಳಿಗೆ ವರ್ಗಾವಣೆ	2,347,130,720	1,408,471,713
ತೆರಿಗೆಯ ಮೊದಲು ನಿವ್ವಳ ಲಾಭ	**139,741,909**	**181,734,230**

ಕಾರ್ಪೋರೇಟ್ ಸಾಮಾಜಿಕ ಜವಾಬ್ದಾರಿ

ಕಂಪನಿ ಕಾಯ್ದೆ 2013ರ ಅನುಚ್ಛೇದ 135ರಡಿಯಲ್ಲಿ ನಿರ್ಧಿಷ್ಟ ಪಡಿಸಿರುವಂತೆ ದಿನಾಂಕ : 04–02–2015ರಂದು ನಡೆದ ಮಂಡಳಿ ಸಭೆಯಲ್ಲಿ ಕಾರ್ಪೋರೇಟ್ ಸಾಮಾಜಿಕ ಜವಾಬ್ದಾರಿ (ಸಿ.ಎಸ್.ಆರ್) ಸಮಿತಿಯನ್ನು ರಚಿಸಿರುತ್ತದೆ.

ಕಂಪನಿ ಕಾಯ್ದೆ 2013 ರಡಿ 2018–19ನೇ ಸಾಲಿಗೆ ಮೊದಲನೇ ಬಾರಿ ನಿಗಮವು ಲಕ್ಷ ರೂ.81.00 ಕಾರ್ಪೋರೇಟ್ ಸಾಮಾಜಿಕ ಜವಾಬ್ದಾರಿ ಅಡಿ ಅನೇಕ ಚಟುವಟಿಕೆಗಳಿಗೆ ಮೀಸಲಿಡಲಾಗಿದೆ. ಅದರಂತೆ, ಕಾರ್ಪೋರೇಟ್ ಸಾಮಾಜಿಕ ಜವಾಬ್ದಾರಿ ಸಮಿತಿಯ 2ನೇ ಸಭೆ ದಿನಾಂಕ:30–11–2019 ರಲ್ಲಿ 2019–20ನೇ ಸಾಲಿಗೆ ಸಿ.ಎಸ್.ಆರ್. ಅನುದಾನ ರೂ.81.00 ಲಕ್ಷಗಳನ್ನು ಜಿಲ್ಲಾ ಮಕ್ಕಳ ರಕ್ಷಣಾಕಛೇರಿ, ಬೆಂಗಳೂರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಕರ್ನಾಟಕ ಸರ್ಕಾರಕ್ಕೆ ನೀಡಲು ನಿರ್ದೇಶಕರ ಮಂಡಳಿಯು ಶಿಫಾರಸ್ಸು ಮಾಡಿದೆ.

ಶಾಸನಬದ್ಧ ಲೆಕ್ಕಪರಿಶೋಧಕರು

ಕಂಪನಿ ಕಾಯ್ದೆ 2013 ರ ಅನುಚ್ಛೇದ 139 (5) ರಡಿಯಲ್ಲಿ ಸಿ & ಎಜಿ ರವರ ಪತ್ರಸಂಖ್ಯೆ: CA.V/COY/KARNATAKA,CAUNER(1)/1, ದಿನಾಂಕ: 18–09–2019ರಲ್ಲಿ ಮೆ॥ಕಿಚ್ಚಾ & ಪ್ರಬುಕೇಸವನ್, ಚಾರ್ಟರ್ಡ್ ಅಕೌಂಟೆಂಟ್ಸ್ ಇವರನ್ನು 2018–19 ನೇ ಸಾಲಿನ ಶಾಸನಬದ್ಧ ಲೆಕ್ಕಪರಿಶೋಧಕರನ್ನಾಗಿ ನೇಮಿಸಿರುತ್ತಾರೆ.

ಲೆಕ್ಕಪರಿಶೋಧಕರ ವರದಿಯಲ್ಲಿ ಹೆಚ್ಚಿನ ಟೀಕೆಗಳು ಹಾಗೂ ಟಿಪ್ಪಣಿಗಳು ಯೋಜನೆ ಪೂರ್ಣಗೊಂಡ ನಂತರ ಅನುಸರಿಸಬೇಕಾಗಿರುತ್ತದೆ. ಹಾಗೂ ಕಂಪನಿಯ ಆಂತರಿಕ ಹಣಕಾಸು ನಿಯಂತ್ರಣದಲ್ಲಿ ಖಾತೆಗಳು ಮತ್ತು ಲೆಕ್ಕ ಪುಸ್ತಕಗಳ ಸಮನ್ವಯ ಮತ್ತು ದೃಢೀಕರಣಗಳು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತಿಲ್ಲ ಎಂದು ಲೆಕ್ಕಪರಿಶೋಧಕರು ಅಭಿಪ್ರಾಯಪಡಿಸಿದ್ದಾರೆ. ಅಕೌಂಟಿಂಗ್ ಸ್ಟಾಂಡರ್ಡ್ಸ್ ಉಲ್ಲೇಖಿತ ಖಾತೆಗಳ ಹಾಗೂ ಪುಸ್ತಕಗಳಲ್ಲಿ ಯಾವುದೇ ತಪ್ಪು ಹೇಳಿಕೆಗಳು ಕಂಡು ಬಂದಿರುವುದಿಲ್ಲ. ಅದಲ್ಲದೆ, ನಿಗಮವು ಲೆಕ್ಕ ಪರಿಶೋಧಕರ ಟೀಕೆಗಳಿಗೆ ಉತ್ತರಗಳನ್ನು ನೀಡಲಾಗಿದ್ದು, ಅನುಬಂಧದಲ್ಲಿ ಲಗತ್ತಿಸಲಾಗಿದೆ.

ಕಾರ್ಯದರ್ಶಿಯ ಪರಿಶೋಧಕ ವರದಿ

ಶ್ರೀ ಆರ್.ಸಿ. ವೆಂಕಟೇಶ್ ರಾವ್, ಪಿ.ಸಿ.ಎಸ್., ರವರು ದಿನಾಂಕ:24–12–2019ರಂದು ತಮ್ಮ ವರದಿಯನ್ನು ನೀಡಿರುತ್ತಾರೆ. ಕಾರ್ಯದರ್ಶಿಯ ವರದಿಯಲ್ಲಿ ಯಾವುದೇ ಪ್ರತಿಕೂಲ ಷರಾ ಇರುವುದಿಲ್ಲ ಹಾಗೂ ಈ ವರದಿಯ ಉದ್ಧೃತ ಭಾಗವನ್ನು ಅನುಬಂಧದಲ್ಲಿ ಲಗತ್ತಿಸಲಾಗಿದೆ.

ನಿರ್ದೇಶಕರು

ಮಂಡಳಿಯು ಕರ್ನಾಟಕ ಸರ್ಕಾರದಿಂದ ನೇಮಿಸಲ್ಪಟ್ಟ ಹನ್ನೊಂದು (11) ನಿರ್ದೇಶಕರನ್ನು ಒಳಗೊಂಡಿದೆ, ವ್ಯವಸ್ಥಾಪಕ ನಿರ್ದೇಶಕರು ಮಾತ್ರ ಪೂರ್ಣಾವಧಿ ನಿರ್ದೇಶಕರಾಗಿರುತ್ತಾರೆ. ಎಲ್ಲಾ ನಿರ್ದೇಶಕರುಗಳು ಕರ್ನಾಟಕ ಸರ್ಕಾರದಿಂದ ನೇಮಕಗೊಂಡವರಾಗಿದ್ದು, ಸರ್ಕಾರಿಸೇವೆಯಲ್ಲಿರುವ / ಸೇವೆಯಿಂದ ನಿವೃತ್ತರಾಗಿರುವ ಅಧಿಕಾರಿಗಳಾಗಿದ್ದು, ವಿವಿಧ ಕ್ಷೇತ್ರಗಳಲ್ಲಿ ಅನುಭವವನ್ನು ಹೊಂದಿದವರಾಗಿದ್ದಾರೆ.

ಹಿಂದಿನ ವಾರ್ಷಿಕ ಸಾಮಾನ್ಯ ಸಭೆ ಮತ್ತು ಈ ವರದಿಯ ದಿನಾಂಕದ ನಡುವೆ ಮಂಡಳಿಯ ರಚನೆಯಲ್ಲಿ ಆದ ಬದಲಾವಣೆಗಳು ಇಂತಿವೆ.

ಸರ್ಕಾರದ ಅಧಿಸೂಚನೆ ಸಂಖ್ಯೆ: ಡಬ್ಲ್ಯೂಆರ್‌ಡಿ 18 ಎನ್‌ಪಿಸಿ 2018 ದಿನಾಂಕ:19–08–2019ರಂತೆ ಶ್ರೀ ಹೆಚ್.ಡಿ.ಕುಮಾರಸ್ವಾಮಿ, ಅಧ್ಯಕ್ಷರು ಹಾಗೂ ನಿರ್ದೇಶಕರು, ಕಾವೇರಿ ನೀರಾವರಿ ನಿಗಮದ ನಿಯಮಿತ ಇವರ ಸ್ಥಾನದಲ್ಲಿ ಶ್ರೀ ಬಿ.ಎಸ್.ಯಡಿಯೂರಪ್ಪ ಇವರನ್ನು ಕಾವೇರಿ ನೀರಾವರಿ ನಿಗಮದ ನಿಯಮಿತದ ಅಧ್ಯಕ್ಷರು ಹಾಗೂ ನಿರ್ದೇಶಕರನ್ನಾಗಿ ನಾಮ ನಿರ್ದೇಶನ ಮಾಡಲಾಗಿದೆ.

ಸರ್ಕಾರದ ಅಧಿಸೂಚನೆ ಸಂಖ್ಯೆ: ಡಬ್ಲ್ಯೂಆರ್‌ಡಿ 18 ಎನ್‌ಪಿಸಿ 2018 ದಿನಾಂಕ: 19–08–2019ರಂತೆ ಡಾ. ಇ. ವಿ. ರಮಣ ರೆಡ್ಡಿ, ಭಾ.ಆ.ಸೇ., ನಿರ್ದೇಶಕರು, ಕಾವೇರಿ ನೀರಾವರಿ ನಿಗಮದ ನಿಯಮಿತ ಇವರ ಸ್ಥಾನದಲ್ಲಿ ಶ್ರೀ ಪಿ.ರವಿಕುಮಾರ್, ಭಾ.ಆ.ಸೇ., ಇವರನ್ನು ಕಾವೇರಿ ನೀರಾವರಿ ನಿಗಮದ ನಿಯಮಿತದ ನಿರ್ದೇಶಕರನ್ನಾಗಿ ನಾಮ ನಿರ್ದೇಶನ ಮಾಡಲಾಗಿದೆ.

ಸರ್ಕಾರದ ಅಧಿಸೂಚನೆ ಸಂಖ್ಯೆ: ಡಬ್ಲ್ಯೂಆರ್‌ಡಿ 21 ಎನ್‌ಪಿಸಿ 2015 ದಿನಾಂಕ:26–06–2019ರಂತೆ ಕು.ವಿ.ಮಂಜುಳ, ಭಾ.ಆ.ಸೇ.,ನಿರ್ದೇಶಕರು, ಕಾವೇರಿ ನೀರಾವರಿ ನಿಗಮದ ನಿಯಮಿತ ಇವರ ಸ್ಥಾನದಲ್ಲಿ ಶ್ರೀಮತಿ ಸಿ.ಎನ್.ಮೀನಾ ನಾಗರಾಜ್, ಭಾ.ಆ.ಸೇ., ಇವರನ್ನು ಕಾವೇರಿ ನೀರಾವರಿ ನಿಗಮದ ನಿಯಮಿತದ ಮಹಿಳಾ ನಿರ್ದೇಶಕರನ್ನಾಗಿ ನಾಮ ನಿರ್ದೇಶನ ಮಾಡಲಾಗಿದೆ.

ಸರ್ಕಾರದ ಅಧಿಸೂಚನೆ ಸಂಖ್ಯೆ: ಡಬ್ಲ್ಯೂಆರ್‌ಡಿ 15 ಎನ್‌ಪಿಸಿ 2018 ದಿನಾಂಕ:19–08–2019ರಂತೆ ಶ್ರೀ ಕೆ.ಜೈಪ್ರಕಾಶ್, ಕೆ.ಇ.ಎಸ್., ನಿರ್ದೇಶಕರು, ಕಾವೇರಿ ನೀರಾವರಿ ನಿಗಮದ ನಿಯಮಿತ ಇವರ ಸ್ಥಾನದಲ್ಲಿ ಶ್ರೀ ಎನ್.ಲಕ್ಷ್ಮಣ್‌ರಾವ್ ಪೇಶ್ವೆ, ಕೆ.ಇ.ಎಸ್., ಇವರನ್ನು ಕಾವೇರಿ ನೀರಾವರಿ ನಿಗಮದ ನಿಯಮಿತದ ನಿರ್ದೇಶಕರನ್ನಾಗಿ ನಾಮ ನಿರ್ದೇಶನ ಮಾಡಲಾಗಿದೆ.

ಸರ್ಕಾರದ ಅಧಿಸೂಚನೆ ಸಂಖ್ಯೆ: ಡಬ್ಲ್ಯೂಆರ್‌ಡಿ 18 ಎನ್‌ಪಿಸಿ 2018 ದಿನಾಂಕ: 20–09–2019ರಂತೆ ಡಾ. ಏಕ್‌ರೂಪ್‌ಕೌರ್, ಭಾ.ಆ.ಸೇ. ನಿರ್ದೇಶಕರು, ಕಾವೇರಿ ನೀರಾವರಿ ನಿಗಮದ ನಿಯಮಿತ ಇವರ ಸ್ಥಾನದಲ್ಲಿ ಶ್ರೀ ಐ.ಎಸ್.ಎನ್.ಪ್ರಸಾದ್, ಭಾ.ಆ.ಸೇ. ಇವರನ್ನು ಕಾವೇರಿ ನೀರಾವರಿ ನಿಗಮದ ನಿಯಮಿತದ ನಿರ್ದೇಶಕರನ್ನಾಗಿ ನಾಮ ನಿರ್ದೇಶನ ಮಾಡಲಾಗಿದೆ.

ಸರ್ಕಾರದ ಅಧಿಸೂಚನೆ ಸಂಖ್ಯೆ: ಡಬ್ಲ್ಯೂ ಆರ್‌ಡಿ 18 ಎನ್‌ಪಿಸಿ 2018 ದಿನಾಂಕ: 22–08–2019ರಂತೆ ಶ್ರೀ ಹೆಚ್.ಎಲ್.ಪ್ರಸನ್ನ, ಕೆ.ಇ.ಎಸ್., ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮದ ನಿಯಮಿತ ಇವರ ಸ್ಥಾನದಲ್ಲಿ ಶ್ರೀ ಕೆ.ಜೈಪ್ರಕಾಶ್, ಕೆ.ಇ.ಎಸ್., ಇವರನ್ನು ಕಾವೇರಿ ನೀರಾವರಿ ನಿಗಮದ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರನ್ನಾಗಿ ನಾಮ ನಿರ್ದೇಶನ ಮಾಡಲಾಗಿದೆ.

ನಿಗಮವು ನಿರ್ಗಮಿತ ನಿರ್ದೇಶಕರುಗಳು ಸಲ್ಲಿಸಿದ ಅಮೂಲ್ಯ ಸೇವೆ / ಮಾರ್ಗ ದರ್ಶನವನ್ನು ಶ್ಲಾಘಿಸಿ ನಿರ್ದೇಶಕ ಮಂಡಳಿಯು ಕೃತಜ್ಞತೆಗಳನ್ನು ಸಲ್ಲಿಸುತ್ತದೆ.

ಸ್ವತಂತ್ರ ನಿರ್ದೇಶಕರ ಘೋಷಣೆ

ಕರ್ನಾಟಕ ಸರ್ಕಾರವು ಅಧಿಸೂಚನೆ ಸಂಖ್ಯೆ: ಜಸಂಇ 15ಎನ್‌ಪಿಸಿ2018 (1), ಸಂಖ್ಯೆ: ಜಸಂಇ 15 ಎನ್‌ಪಿಸಿ 2018(2), ಸಂಖ್ಯೆ: ಜಸಂಇ 15ಎನ್‌ಪಿಸಿ 2018(3), ದಿನಾಂಕ:30–08–2019ರಂದು ಈ ಕೆಳಕಂಡ ನಿರ್ದೇಶಕರುಗಳನ್ನು ಸ್ವತಂತ್ರ ನಿರ್ದೇಶಕರನ್ನಾಗಿ ನಿಗಮಕ್ಕೆ ನೇಮಿಸಿದೆ.

1) ಶ್ರೀ ಎಂ.ಶಿವಸ್ವಾಮಿ
2) ಶ್ರೀ ಎಸ್.ಎಲ್.ಶಿವಪ್ರಸಾದ್
3) ಶ್ರೀ ಎಸ್.ಎನ್.ಪ್ರಸಾದ್

ನಿಗಮವು ನಿರ್ಗಮಿತ ಸ್ವತಂತ್ರ ನಿರ್ದೇಶಕರಾದ ಶ್ರೀ ಎಲ್.ಬಸವರಾಜುರವರು ಸಲ್ಲಿಸಿದ ಅಮೂಲ್ಯ ಸೇವೆ / ಮಾರ್ಗದರ್ಶನವನ್ನು ಶ್ಲಾಘಿಸಿ ನಿರ್ದೇಶಕ ಮಂಡಳಿಯು ಕೃತಜ್ಞತೆಗಳನ್ನುಸಲ್ಲಿಸುತ್ತದೆ.

ಮಂಡಳಿ ಸಭೆಗಳು

ಪ್ರಸಕ್ತ 2018–19 ನೇ ಸಾಲಿನಲ್ಲಿ ಆರು (6) ಮಂಡಳಿ ಸಭೆಗಳನ್ನು ನಡೆಸಲಾಯಿತು.

ನಿರ್ದೇಶಕರ ನೇಮಕಾತಿ, ಸಂಭಾವನೆ ಹಾಗೂ ಕರ್ತವ್ಯಗಳ ಕುರಿತು ಕಂಪನಿಯ ಕಾರ್ಯನೀತಿ:

ಸರ್ಕಾರ ಆದೇಶ ಸಂಖ್ಯೆ: ಸಾಉಇ 8 ಎಸ್‌ಪಿಯು 2011, ದಿನಾಂಕ 22.10.2011 (ಸಾರ್ವಜನಿಕ ಉದ್ದಿಮೆ ಇಲಾಖೆ) ರಲ್ಲಿ ನಿರ್ದೇಶಕರ ಆಸೀನ ಭತ್ಯೆಯನ್ನು ರೂ. 500/–ರಿಂದರೂ. 1,000/–ಕ್ಕೆ ಹೆಚ್ಚಿಸಿ ಆದೇಶದ ದಿನಾಂಕದಿಂದ ಅನ್ವಯವಾಗುವಂತೆ ಮಾರ್ಪಡಿಸಿ ಆದೇಶಿಸಿದೆ. ಈ ಆದೇಶವನ್ನು ನಿಗಮದಲ್ಲಿ ಅಳವಡಿಸಿಕೊಳ್ಳಲು ದಿನಾಂಕ 05.12.2011ರಂದು ನಡೆದ 36ನೇ ನಿರ್ದೇಶಕರ ಸಭೆಯಲ್ಲಿ ಅಂಗೀಕಾರವಾಗಿರುತ್ತದೆ.

ಕಂಪನಿಯ ನಿರ್ದೇಶಕರುಗಳು ಸರ್ಕಾರದಿಂದ ನಾಮ ನಿರ್ದೇಶನಗೊಂಡಿರುತ್ತಾರೆ. ಕಾರ್ಯನಿರ್ವಾಹಕರಲ್ಲದ ನಿರ್ದೇಶಕರಿಗೆ ಹಾಜರಾಗುವ ಪ್ರತಿಯೊಂದು ಮಂಡಳಿ ಸಭೆಗೆ ಸಂಭವನೀಯ ಖರ್ಚು ರೂ.1,000/– ಹೊರತಾಗಿ ಇನ್ನಾವುದೇ ಸಂಭಾವನೆಯನ್ನು ಪಾವತಿಸುತ್ತಿಲ್ಲ. ಕರ್ನಾಟಕ ಇಂಜಿನಿಯರಿಂಗ್ ಸರ್ವಿಸ್‌ಗೆ ಸೇರಿರುವ ವ್ಯವಸ್ಥಾಪಕ ನಿರ್ದೇಶಕರಿಗೆ ಪಾವತಿಸಿರುವ ಸಂಭಾವನೆ ವಿವರಗಳನ್ನು ಲೆಕ್ಕ ಪತ್ರದಲ್ಲಿ ನೀಡಲಾಗಿದೆ.

ಕಛೇರಿಗಳಲ್ಲಿ ಮಹಿಳೆಯರಿಗೆ ಲೈಂಗಿಕ ಕಿರುಕುಳ (ತಡೆಹಿಡಿಯುವಿಕೆ, ನಿಷೇಧ, ಪರಿಹಾರ) ಕಾಯ್ದೆ 2013 ರಅಡಿಯಲ್ಲಿ ಬಹಿರಂಗಪಡಿಸುವಿಕೆ.

ಮಹಿಳೆಯರಿಗೆ ಲೈಂಗಿಕ ಕಿರುಕುಳ (ತಡೆಹಿಡಿಯುವಿಕೆ, ನಿಷೇಧ, ಪರಿಹಾರ) ಕಾಯ್ದೆ 2013 ರಅಡಿಯಲ್ಲಿ ನಿಗಮವು ಸುತ್ತೋಲೆ ದಿನಾಂಕ 20.07.2016 ರಂದುಆಂತರಿಕ ದೂರುಗಳ ಸಮಿತಿಯನ್ನು ರಚಿಸಿರುತ್ತದೆ.

ಈ ಸಮಿತಿಗೆ ಇದೂವರೆವಿಗೂ ಯಾವುದೇ ದೂರುಗಳು ಬಂದಿರುವುದಿಲ್ಲ.

ನಿರ್ದೇಶಕರ ಹೊಣೆಗಾರಿಕೆ ವಿವರಣಾ ಪತ್ರ:

ಪ್ರಸ್ತುತ ಕಂಪನಿ ಕಾಯ್ದೆ 2013 ಪರಿಚ್ಛೇದ 134 (3) (ಸಿ) ಹಾಗೂ ಪರಿಚ್ಛೇದ 134 (5)ರ ಅನ್ವಯ ನಿಮ್ಮ ನಿರ್ದೇಶಕರ ಹೇಳಿಕೆ ಏನೆಂದರೆ;

(ಎ) ವಾರ್ಷಿಕ ಲೆಕ್ಕ ಪತ್ರಗಳನ್ನು ಸಿದ್ಧಪಡಿಸುವಾಗ ಅನ್ವಯಿಸುವ ಲೇಖಾ ಪ್ರಮಾಣಗಳನ್ನು ಮಹತ್ವದ ಅಸಾಂಗತ್ಯಗಳಿಗೆ ಸೂಕ್ತ ವಿವರಣೆಯೊಂದಿಗೆ ಅನುಸರಿಸಲಾಗಿದೆ.

(ಬಿ) ನಿಗಮದ ವ್ಯವಹಾರ ಸ್ವರೂಪಕ್ಕೆ ಅನುಗುಣವಾಗಿಲೇಖಾ ಕಾರ್ಯನೀತಿಯನ್ನು ಆಯ್ಕೆಮಾಡಿ, ಶಾಸನ ಬದ್ಧ ಲೆಕ್ಕಪರಿಶೋಧಕರ ಸಲಹೆ ಪಡೆದು ಅವುಗಳನ್ನು ಅನುಸರಿಸಿ 31–03–2019ರಲ್ಲಿ ಇದ್ದಂತೆ ಕಂಪನಿಯ ನೈಜ ಹಾಗೂ ನಿಷ್ಪಕ್ಷಪಾತ ಚಿತ್ರಣ ನೀಡಲು ಅನುವಾಗುವಂತೆ ಯೋಗ್ಯ ಮತ್ತು ವಿವೇಕಯುಕ್ತ ನಿರ್ಣಯ ಮತ್ತು ಅಂದಾಜುಗಳನ್ನು ಮಾಡಲಾಗಿದೆ.

(ಸಿ) ಕಂಪನಿ ಕಾಯ್ದೆ 2013ರ ಉಪಬಂಧಗಳನ್ವಯ ನಿಗಮದ ಆಸ್ತಿ ಸಂರಕ್ಷಣೆಗಾಗಿ ವಂಚನೆ ಅಕ್ರಮಗಳನ್ನು ತಡೆಗಟ್ಟಲು ಮತ್ತು ಪತ್ತೆ ಹಚ್ಚಲು ಸಾಧ್ಯವಾಗುವಂತೆ ಲೆಕ್ಕ ಪತ್ರಗಳನ್ನು ಸಮರ್ಪಕವಾಗಿ ನಿರ್ವಹಣೆ ಮಾಡಲು ಸೂಕ್ತ ಮತ್ತು ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ.

(ಡಿ) ಕಂಪನಿಯ ಲೆಕ್ಕ ಪರಿಶೋಧಕರು ಗಮನಿಸಿದ ಅಂಶಗಳನ್ನು ಲೆಕ್ಕಪತ್ರಗಳಲ್ಲಿ ಸೂಕ್ತವಾಗಿ ಪರಿಗಣಿಸಲಾಗಿದೆ.

(ಇ) ನಿಮ್ಮ ನಿರ್ದೇಶಕರುಗಳು 31 ಮಾರ್ಚ್ 2019ರ ಅಂತ್ಯಕ್ಕೆ ವಾರ್ಷಿಕ ಲೆಕ್ಕ ಪತ್ರಗಳನ್ನು ಅಸ್ತಿತ್ವ ಸಂಸ್ಥೆಗಳ ಆಧಾರದ ಮೇಲೆ ಸಿದ್ಧ ಪಡಿಸಿರುತ್ತಾರೆ.

(ಎಫ್) ನಿಮ್ಮ ನಿರ್ದೇಶಕರುಗಳು ಅನ್ವಯವಾಗುವ ಎಲ್ಲ ಕಾಯ್ದೆಗಳ ನಿಬಂಧನೆಗಳನ್ನು ಪಾಲಿಸಲು ಸೂಕ್ತ ಪದ್ಧತಿಗಳನ್ನು ಯೋಜಿಸಲಾಗಿದೆ ಮತ್ತು ಅಂತಹ ಪದ್ಧತಿಗಳು ಸೂಕ್ತವಾಗಿವೆ ಮತ್ತು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತಿವೆ.

ಕಂಪನಿ ಕಾಯ್ದೆ 2013 ರ ಪರಿಚ್ಛೇದ 186 ರ ಅಡಿಯಲ್ಲಿನ ಸಾಲ, ಬಂಡವಾಳ ಹೂಡಿಕೆ ಅಥವಾ ಗ್ಯಾರಂಟಿ ವಿವರಗಳು:

ಕಂಪನಿ ಕಾಯ್ದೆ 2013ರ ಪರಿಚ್ಛೇದ 186ರ ಅಡಿಯಲ್ಲಿನ ಪ್ರಸಕ್ತ ವರ್ಷದಲ್ಲಿ ಯಾವುದೇ ಸಾಲ, ಬಂಡವಾಳ ಹೂಡಿಕೆ ಬದ್ಧತೆ ಅಥವಾ ಗ್ಯಾರಂಟಿಗಳನ್ನು ನೀಡಿರುವುದಿಲ್ಲ. ಆದ್ದರಿಂದ ಉಪಬಂಧಗಳು ಅನ್ವಯಿಸುವುದಿಲ್ಲ.

ಮೀಸಲು ನಿಧಿಗೆ ಯಾವುದಾದರೂ ಹಣ ವರ್ಗಾಯಿಸಿದ್ದಲ್ಲಿ ಬಹಿರಂಗ ಪಡಿಸುವಿಕೆ :

ಕಂಪನಿಯು ಯಾವುದೇ ಡಿವಿಡೆಂಡ್ ಅನ್ನು ಘೋಷಿಸದ ಕಾರಣ ಮೀಸಲು ನಿಧಿಗೆ ಹಣದ ವರ್ಗಾವಣೆಯು ಅನ್ವಯಿಸುವುದಿಲ್ಲ.

ಕಂಪನಿ ಆರ್ಥಿಕ ಸ್ಥಿತಿಯ ಮೇಲೆ ಪರಿಣಾಮ ಬೀರುವಯಾವುದೇಗುರುತರವಾದ ಬದಲಾವಣೆಗಳು ಮತ್ತು ಬದ್ಧತೆಗಳು:

ಈ ವರದಿಯ ದಿನಾಂಕಕ್ಕೆ ಅನ್ವಯವಾಗುವ ಲೆಕ್ಕ ಪತ್ರದ ಆರ್ಥಿಕ ವರ್ಷದಲ್ಲಿ ಕಂಪನಿಯ ಆರ್ಥಿಕ ಸ್ಥಿತಿ ಮೇಲೆ ಪರಿಣಾಮ ಬೀರುವ ಯಾವುದೇ ಗುರುತರವಾದ ಬದಲಾವಣೆಗಳು ಮತ್ತು ಬದ್ಧತೆಗಳು ಉಂಟಾಗಿರುವುದಿಲ್ಲ.

ಇಂಧನ ಸಂರಕ್ಷಣೆ, ತಂತ್ರಜ್ಞಾನ ಅಳವಡಿಕೆ, ವಿದೇಶಿ ವಿನಿಮಯ ಗಳಿಕೆಗಳು ಮತ್ತು ವ್ಯಯ:

ಇಂಧನ ಸಂರಕ್ಷಣೆ:

ಕಂಪನಿಯ ಯಾವುದೇ ತಯಾರಿಕಾ ಚಟುವಟಿಕೆಗಳನ್ನು ಹೊಂದಿರುವುದಿಲ್ಲ. ಈ ಕಂಪನಿಯು ಕರ್ನಾಟಕ ಸರ್ಕಾರದಿಂದ ಕಾಲ ಕಾಲಕ್ಕೆ ವಹಿಸುವ ನೀರಾವರಿ ಮೂಲ ಸೌಕರ್ಯ ಕಲ್ಪಿಸುವ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತದೆ. ಆದರೆ ಕಂಪನಿಯು ವಿದ್ಯುತ್‌ಚ್ಛಕ್ತಿಯನ್ನು ಬಳಸಿಕೊಳ್ಳುವ ಏತ ನೀರಾವರಿ ಯೋಜನೆಗಳನ್ನು ಹೊಂದಿದೆ. ಕಂಪನಿಯು ವಿದ್ಯುತ್ ಕ್ಷಮತೆಯುಳ್ಳ ನೀರೆತ್ತುವ ಯಂತ್ರಗಳನ್ನು ಆಯ್ಕೆ

ಮಾಡಿ ಕೊಳ್ಳುವುದರೊಂದಿಗೆ ಯಂತ್ರೋಪಕರಣಗಳಿಂದ ಪಂಪ್ ಮಾಡುವುದು ಮತ್ತು ವಿದ್ಯುತ್‌ಚ್ಛಕ್ತಿ ಮೇಲ್ವಿಚಾರಣೆ ಮಾಡುವ ಮೂಲಕ ವಿದ್ಯುತ್‌ಸಂರಕ್ಷಣೆಮಾಡಲಾಗುತ್ತದೆ.

ತಂತ್ರಜ್ಞಾನ ಅಳವಡಿಕೆ:

ನೀರಾವರಿ ಉದ್ದೇಶಕ್ಕಾಗಿ ವಿವಿಧ ಯೋಜನೆಗಳಿಗೆ ಸೂಕ್ಷ್ಮ ನೀರಾವರಿ ಪದ್ಧತಿಯನ್ನು (ಎಂಐಎಸ್) ಯನ್ನು ಅಳವಡಿಸಿಕೊಳ್ಳಲಾಗಿದೆ.

ವಿದೇಶಿ ವಿನಿಮಯ ಗಳಿಕೆ ಮತ್ತು ವ್ಯಯ :

ಕಂಪನಿಗೆ ಯಾವುದೇ ವಿದೇಶಿ ವಿನಿಮಯದ ಗಳಿಕೆ ಮತ್ತು ಖರ್ಚು ಇರುವುದಿಲ್ಲ ಮತ್ತು ಯಾವುದೇ ವಿದೇಶಿ ವಿನಿಮಯ ವಿತರಣೆಯೂ ಇಲ್ಲ.

ಆಡಳಿತಾತ್ಮಕ ಚರ್ಚೆಗಳು ಮತ್ತು ವಿಶ್ಲೇಷಣಾ ವರದಿಗಳು :

i. ಮುಂದುವರಿದ ನೀರಾವರಿ ಯೋಜನೆಗಳನ್ನು ಪೂರ್ಣಗೊಳಿಸುವ ಉದ್ದೇಶದಿಂದ ಕರ್ನಾಟಕ ಸರ್ಕಾರವು ಈ ಕಂಪನಿಯನ್ನು ವಿಶೇಷೋದ್ದೇಶ ವಾಹಕವಾಗಿ ಸ್ಥಾಪಿಸಿದೆ. ಅದರಂತೆ ಕಂಪನಿಯ ಕಾರ್ಯ ಚಟುವಟಿಕೆಗಳನ್ನು ಸ್ಪರ್ಧಾತ್ಮಕ ಸ್ಥಿತಿಯ ಕಾರ್ಯಾಚರಣೆಗಳೊಂದಿಗೆ ಹೋಲಿಸಲಾಗುವುದಿಲ್ಲ.

ii. ಕಂಪನಿಯು ಅಣೆಕಟ್ಟುಗಳಿಗೆ ಪ್ರವೇಶ ಶುಲ್ಕ ಮತ್ತು ಇತರೆ ಆದಾಯಗಳ ಹೊರತುಪಡಿಸಿ ಇತರೆ ಯಾವುದೇ ಆದಾಯವನ್ನು ಗಳಿಸುತ್ತಿಲ್ಲ.

iii. ಕಂಪನಿಯು ಪರ್ಯಾಪ್ತ ಆಂತರಿಕ ನಿಯಂತ್ರಣ ವ್ಯವಸ್ಥೆಗಳನ್ನು ಹೊಂದಿದೆ.

iv. ಕಂಪನಿಯ ಎಲ್ಲ ಕ್ಷೇತ್ರ ಕಛೇರಿಗಳ ಆಂತರಿಕ ಲೆಕ್ಕಪರಿಶೋಧನೆಗಾಗಿ ಸನ್ನದು ಲೆಕ್ಕಿಗರ ಸಂಸ್ಥೆಯೊಂದನ್ನು ನೇಮಿಸಿದೆ.

ವಿಪತ್ತು ನಿರ್ವಹಣಾ ನೀತಿ:

ಕಂಪನಿಯ ಅಸ್ತಿತ್ವಕ್ಕೆಧಕ್ಕೆ ಉಂಟು ಮಾಡುವ ಅಂಶಗಳು ಅತೀ ಕಡಿಮೆ ಇರುವುದರಿಂದ, ಕಂಪನಿಯು ಯಾವುದೇ ವಿಪತ್ತು ನಿರ್ವಹಣಾ ನೀತಿಯನ್ನು ಅಳವಡಿಸಿಕೊಂಡಿರುವುದಿಲ್ಲ.

ಅಸ್ತಿತ್ವದಲ್ಲಿರುವ ಸಂಸ್ಥೆಯ ಆಧಾರ ಮತ್ತು ಕಂಪನಿಯ ಮುಂದಿನ ಕಾರ್ಯೋನ್ಮುಕತೆಗೆ ಧಕ್ಕೆ ತರುವ ಯಾವುದೇ ನಿಯಂತ್ರಕರು ಅಥವಾ ನ್ಯಾಯಾಲಯಗಳು ಅಥವಾ ಟ್ರಿಬ್ಯೂನಲ್‌ಗಳ ಗುರುತರ ಆದೇಶಗಳು

ನಿಯಂತ್ರಕರು / ನ್ಯಾಯಾಲಯಗಳು ಕಂಪನಿಯ ಅಸ್ತಿತ್ವ ಹಾಗೂ ಮುಂದಿನ ಕಾರ್ಯೋನ್ಮುಖತೆಗೆ ಧಕ್ಕೆ ತರುವಂತಹ ಯಾವುದೇ ಆದೇಶಗಳನ್ನು ಹೊರಡಿಸಿರುವುದಿಲ್ಲ. ಆದ್ದರಿಂದ ಕಂಪನಿ (ಲೆಕ್ಕ) ಕಾಯ್ದೆ 2014ರ ನಿಯಮ 8 (5) (Vii)ರಲ್ಲಿ ಬಹಿರಂಗ ಪಡಿಸುವಿಕೆಯು ಅನ್ವಯವಾಗುವುದಿಲ್ಲ.

ಕಂಪನಿ (ಲೆಕ್ಕ) ಕಾಯ್ದೆ 2014ರ ನಿಯಮ 8(5) (Vii)ರ ಪ್ರಕಾರ ಆರ್ಥಿಕ ಪಟ್ಟಿಗಳಿಗೆ ಸಂಬಂಧಪಟ್ಟಂತೆ ಆಂತರಿಕ ಆರ್ಥಿಕ ನಿಯಂತ್ರಣಗಳ ವಿವರಗಳು

ಕಂಪನಿಯು ತನ್ನ ಕಾರ್ಯಚಟುವಟಿಕೆಗಳ ವಿಸ್ತಾರಕ್ಕೆ ಅನುಗುಣವಾಗಿ ಸಮರ್ಪಕ ಆಂತರಿಕ, ಆರ್ಥಿಕ ನಿಯಂತ್ರಣ ವ್ಯವಸ್ಥೆಯನ್ನು ಹೊಂದಿದೆ.

ಕಂಪನಿ ಕಾಯ್ದೆ 2013ರ ಕಲಂ 188ರ ಪ್ರಕಾರ ಸಂಬಂಧಿತ ವ್ಯಕ್ತಿಗಳೊಡನೆ ಗುತ್ತಿಗೆ ಅಥವಾ ವ್ಯವಸ್ಥೆಗಳನ್ನು ಮಾಡಿಕೊಂಡಿರುವ ವಿವರಗಳು

ಕಂಪನಿ ಕಾಯ್ದೆ 2013ರ ಕಲಂ 188ರ ಪ್ರಕಾರ ಸಂಬಂಧಿತ ವ್ಯಕ್ತಿಗಳೊಡನೆ ಕಂಪನಿಯು ಯಾವುದೇ ಗುತ್ತಿಗೆ ಅಥವಾ ವ್ಯವಸ್ಥೆಗಳನ್ನು ಮಾಡಿಕೊಂಡಿರುವುದಿಲ್ಲ.

ವಾರ್ಷಿಕ ಲೆಕ್ಕ ಪತ್ರದ ಸಾರ

ಕಂಪನಿ ಕಾಯ್ದೆ 2013 ಕಲಂ 92ರ ಮತ್ತು ಕಂಪನಿ (ಆಡಳಿತ ಮತ್ತು ನಿರ್ವಹಣೆ) ನಿಯಮಗಳು 2014ರ ನಿಯಮ 12ರನ್ವಯ ವಾರ್ಷಿಕ ಲೆಕ್ಕ ಪತ್ರಸಾರವನ್ನು ಅನುಬಂಧದಲ್ಲಿ ಲಗತ್ತಿಸಲಾಗಿದೆ.

ಆಡಿಟ್ ಸಮಿತಿ ನಿರ್ಮಾಣ ಬಹಿರಂಗಪಡಿಸುವಿಕೆ ಹಾಗೂ ಜಾಗರೂಕಕಾರ್ಯವಿಧಾನ ನಿಬಂಧನೆ

ಕಂಪನಿ ಕಾಯ್ದೆ 2013ರ ಪರಿಚ್ಛೇದ 177ರಡಿ ನಿಯಮ 6 ಮತ್ತು 7 ರಡಿ ಕಂಪನಿಗಳ (ನಿರ್ದೇಶಕ ಮಂಡಳಿ ಸಭೆಗಳು ಮತ್ತು ಅಧಿಕಾರಗಳು) ನಿಯಮಗಳು – 2013 ನಿಗಮಕ್ಕೆ ಅನ್ವಯವಾಗುವುದಿಲ್ಲ. ಆದ್ದರಿಂದ ಕಂಪನಿ ಕಾಯ್ದೆ 2013ರ ಪರಿಚ್ಛೇದ 177(8) & (9) ರಡಿ ಬಹಿರಂಗಪಡಿಸುವಿಕೆ ಅವಶ್ಯಕವಿರುವುದಿಲ್ಲ.

ನಿಗಮವು ಆಡಿಟ್ ಸಮಿತಿಯನ್ನು 5 ನಿದೇಶಕರುಗಳ ಸಹಿತ ಪುನರ್ ರಚನೆ ಮಾಡಿದೆ. ಇವರಲ್ಲಿ ಒಬ್ಬ ಸ್ವತಂತ್ರ ನಿರ್ದೇಶಕರನ್ನು ನೇಮಿಸಲಾಗಿದೆ.

ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ವರದಿ :

ಕಂಪನಿ ಕಾಯ್ದೆ 2013 ಕಲಂ 143 (6)ರಡಿ 2018–19ನೇ ಸಾಲಿನ ಲೆಕ್ಕಪತ್ರಗಳ ಮೇಲೆ ಭಾರತದ ನಿಯಂತ್ರಕರು ಮತ್ತು ಮಹಾಲೇಖ ಪರಿಶೋಧಕರು ನೀಡಿರುವ ವರದಿಯನ್ನು ಇದರೊಂದಿಗೆ ಲಗತ್ತಿಸಲಾಗಿದೆ.

ಕೃತಜ್ಞತೆಗಳು :

ಕಂಪನಿಯ ವ್ಯವಹಾರಗಳಲ್ಲಿ ಹೃತ್ಪೂರ್ವಕ ಸಹಕಾರ ನೀಡಿದ ಕರ್ನಾಟಕ ಸರ್ಕಾರ, ಭಾರತ ಸರ್ಕಾರ, ಬ್ಯಾಂಕುಗಳು, ಹಣಕಾಸು ಸಂಸ್ಥೆಗಳಿಗೆ ನಿರ್ದೇಶಕರು ಧನ್ಯವಾದಗಳನ್ನು ಸಲ್ಲಿಸ ಬಯಸುತ್ತಾರೆ.

ಈ ಪರಿಶೀಲನಾ ಅವಧಿಯಲ್ಲಿ ಆಡಳಿತ ವರ್ಗ ಮತ್ತು ಸಿಬ್ಬಂದಿ ನಡುವಿನ ಸಂಬಂಧ ಸೌಹಾರ್ದಯುತವಾಗಿದೆ.

ಕಂಪನಿಯು ಅಧಿಕಾರಿಗಳು ಮತ್ತು ಸಿಬ್ಬಂದಿಯ ಕಾರ್ಯತತ್ಪರತೆ ಮತ್ತು ನಿಷ್ಟೆಯನ್ನು ಮನಗೊಂಡಿದ್ದು, ನಿರ್ದೇಶಕರು ಅಧಿಕಾರಿ ಮತ್ತು ಸಿಬ್ಬಂದಿಯನ್ನು ಶ್ಲಾಘಿಸಿರುತ್ತಾರೆ.

ಮಂಡಳಿಯ ಪರವಾಗಿ
ಕಾವೇರಿ ನೀರಾವರಿ ನಿಗಮ ನಿಯಮಿತ

ಸ್ಥಳ: ಬೆಂಗಳೂರು — **ಸಹಿ/–**
ದಿನಾಂಕ: 30–12–2019 — **ಅಧ್ಯಕ್ಷರು**

2018–19ನೇ ಸಾಲಿನ ನಿರ್ದೇಶಕರ ವರದಿಯ ಅನುಬಂಧ

2018–19 ನೇ ಸಾಲಿನ ಶಾಸನಬದ್ಧ ಲೆಕ್ಕಪರಿಶೋಧಕರ ವರದಿಯ ಮೇರೆಗೆ ದಾಖಲಾದ ನ್ಯೂನ್ಯತೆಗಳ ಬಗ್ಗೆ ಪ್ರತ್ಯುತ್ತರ

ಲೆಕ್ಕಪರಿಶೋಧಕರ ವರದಿಯ ಪರಾಮರ್ಶೆ	ಶಾಸನಬದ್ಧ ಲೆಕ್ಕಪರಿಶೋಧಕರ ವರದಿಯ ಮೇರೆಗೆ ದಾಕಲಾದ ನ್ಯೂನ್ಯತೆಗಳು	ಉತ್ತರ / ಪ್ರತಿಕ್ರಿಯೆಗಳು
2	ಕಂಪನಿಯಿಂದ ತಯಾರಿಸಲ್ಪಟ್ಟ 'ಐ.ಎನ್.ಡಿ.ಎ.ಎಸ್.' ಲೆಕ್ಕಪತ್ರಗಳು "ಭಾರತೀಯ ಲೆಕ್ಕಪತ್ರ ಪ್ರಮಾಣೀಕರಣ (ಐ.ಎನ್.ಡಿ.ಎ.ಎಸ್.) ಅಧಿನಿಯಮ –133 ಕ್ಕೆ ಹೊಂದಾಣಿಕೆ ಇರುವುದಿಲ್ಲ; ಅವುಗಳಲ್ಲಿ ಕೆಳಕಂಡವುಗಳು ಸೇರಿವೆ;	ಕಂಪನಿಯು ಲೆಕ್ಕಪತ್ರಗಳ ತಯಾರಿಸಿರುವ ಮೂಲಗಳನ್ನು ಟಿಪ್ಪಣಿ ಸಂಖ್ಯೆ: 2.1 ರಲ್ಲಿ ಸ್ಪಷ್ಟವಾಗಿ ತಿಳಿಸಿದೆ. ಕಂಪನಿಯು ಐ.ಎನ್.ಡಿ.ಎ.ಎಸ್. ನಿಯಮಗಳನ್ನು ಅಳವಡಿಸಿಕೊಂಡಿರುತ್ತದೆ.
	ಎ) ಐ.ಎನ್.ಡಿ.ಎ.ಎಸ್.105 "ಮಾರಾಟ ಮತ್ತು ಸ್ಥಗಿತಗೊಂಡ ಕಾರ್ಯಾಚರಣೆಗಳ ಸಂಬಂಧಿತ ಪ್ರಸಕ್ತ ಆಸ್ತಿಗಳು"– ಚಿರಾಸ್ತಿ, ಯಂತ್ರೋಪಕರಣಗಳು ನಿಷ್ಕ್ರಿಯ ಹಂತ ತಲುಪಿದ್ದು, ವಿಲೇವಾರಿ ಮಾಡಬೇಕಾಗಿದ್ದು, ಇವುಗಳನ್ನು ಪ್ರಸ್ತುತಪಡಿಸುವಿಕೆ, ವಿಂಗಡಣೆ ಮತ್ತು ಬಹಿರಂಗಪಡಿಸಿರುವುದಿಲ್ಲ (ಟಿಪ್ಪಣಿ ಸಂಖ್ಯೆ:2.3, ಪ್ಯಾರ 6 ಕೂಡ)	ಟಿಪ್ಪಣಿ ಸಂಖ್ಯೆ:2.3, ಪ್ಯಾರ 6 (ಗಮನಿಸಿ): ಕಂಪನಿಯು ಯಾವುದೇ ರೀತಿಯ ಸ್ವತ್ತುಗಳ ಮಾರಾಟವನ್ನು ತಿಳಿಸಿರುವುದಿಲ್ಲ ಹಾಗೂ ಯಾವುದೇ ನಿಷ್ಕ್ರಿಯ/ ಸ್ಥಗಿತಗೊಂಡಕೆಲಸಗಳು ವಿಲೇವಾರಿ ಮಾಡಲು ಇರುವುದಿಲ್ಲ. ಯಾವುದೇ ಕೊರತೆ ಹಾಗೂ ಪರಿಣಾಮವಿದ್ದಲ್ಲಿ ಲೆಕ್ಕಪರಿಶೋಧನೆಯು ಗಮನಕ್ಕೆ ತಂದಿರುವುದಿಲ್ಲ.
	ಬಿ) ಐ.ಎನ್.ಡಿ.ಎ.ಎಸ್. 107 "ಹಣಕಾಸಿನ ದಸ್ತಾವೇಜುಗಳು: ಬಹಿರಂಗಪಡಿಸುವುದು" – ಹಣಕಾಸಿನ ಲಿಖಿತ ಸ್ವತ್ತುಗಳವಿಂಗಡಣೆಯ ಬಹಿರಂಗಪಡಿಸುವಿಕೆಗಳು ಅಗತ್ಯಗಳ ಪ್ರಕಾರ ಅನುಸರಣೆಯಾಗಿರುವುದಿಲ್ಲ.	ಟಿಪ್ಪಣಿ ಸಂಖ್ಯೆ: 2.7ಸಿ (ಗಮನಿಸಿ) : ಅಗತ್ಯಕ್ಕನುಸಾರವಾಗಿ ಕಂಪನಿಯು ಈಗಾಗಲೇ ಹಣಕಾಸಿನ ದಸ್ತಾವೇಜುಗಳ ಬಗ್ಗೆ ಸ್ಪಷ್ಟನೆ ನೀಡಿದೆ. ಹಣಕಾಸು ಸ್ವತ್ತುಗಳಿಂದ ಗಳಿಸುವ ಬಡ್ಡಿಯನ್ನು, ಪರಿಣಾಮಕಾರಿ ಬಡ್ಡಿ ದರದ ಮಾದರಿಯಲ್ಲಿ ಅಂದರೆ, ಬ್ಯಾಂಕ್‌ನ ಬಡ್ಡಿದರದಲ್ಲಿ ನಿಶ್ಚಿತ ಠೇವಣಿ ಮಾದರಿಯಲ್ಲಿ ಪರಿಗಣಿಸಲಾಗುತ್ತದೆ ಮತ್ತು ಇದು ಈಗ ಚಾಲ್ತಿಯಲ್ಲಿ ಇಲ್ಲದ ವಿಧಾನವೇನೂ ಅಲ್ಲವೆಂದು ಸ್ಪಷ್ಟವಾಗಿ ಹೇಳಲಾಗಿದೆ. ನ್ಯೂನ್ಯತೆಗಳು ಮತ್ತು ಅದರಿಂದಾಗುವ ಪರಿಣಾಮಗಳೇನಾದರೂ ಇದ್ದಲ್ಲಿ ಅವುಗಳನ್ನು ಲೆಕ್ಕ ಪರಿಶೋಧನೆಯಲ್ಲಿ ಉಲ್ಲೇಖಿಸಿರುವುದಿಲ್ಲ.
	ಸಿ) ಐ.ಎನ್.ಡಿ.ಎ.ಎಸ್. 109 "ಹಣಕಾಸಿನ ದಸ್ತಾವೇಜುಗಳ" – ಗುರುತಿಸುವಿಕೆ, ಮಾಪನ ಮತ್ತು ಹಣಕಾಸಿನ ಲಿಖಿತ ಸ್ವತ್ತುಗಳ ತೊಡೆದುಹಾಕುವಿಕೆಯು ಅಗತ್ಯಗಳ ಪ್ರಕಾರ ಅನುಸರಣೆಯಾಗಿರುವುದಿಲ್ಲ.	ಕಂಪನಿಯು ಹಣಕಾಸು ಆಸ್ತಿಗಳು ಮತ್ತು ಹಣಕಾಸು ಹೊಣೆಗಾರಿಕೆಗಳನ್ನು ವರದಿ ಮಾಡಲು ಯಾವುದೇ ಅಧೀನ ಸಂಸ್ಥೆಗಳನ್ನು ಹೊಂದಿರುವುದಿಲ್ಲ. ಅಧೀನ ಸಂಸ್ಥೆಗಳಲ್ಲಿ ಆಸಕ್ತ ಅಥವಾ ಹಕ್ಕುಗಳು ಮತ್ತು ವಿಮೆ ಒಪ್ಪಂದ ಮುಂಗಡ ಒಪ್ಪಂದ, ಸಾಲ ಬದ್ಧತೆ ಹಕ್ಕುಗಳು ಇತ್ಯಾದಿ ಯಾವುದೇ ನಿರ್ಬಂಧಗಳನ್ನು ಹೊಂದಿರುವುದಿಲ್ಲ.
	ಡಿ) ಐ.ಎನ್.ಡಿ.ಎ.ಎಸ್. 113 "ನೈಜ ಮೌಲ್ಯ ಮಾಪನ" – ಸ್ವತ್ತುಗಳ ಹಾಗೂ ಹೊಣೆಗಾರಿಕೆಗಳ ನೈಜ ಮೌಲ್ಯ ಮಾಪನ ಹಾಗೂ ಇವುಗಳ ಬಹಿರಂಗಪಡಿಸುವಿಕೆ ಅಗತ್ಯಗಳ ಪ್ರಕಾರ ಅನುಸರಣೆಯಾಗಿರುವುದಿಲ್ಲ.	ಕಂಪನಿಯು ಮಾರುಕಟ್ಟೆ ಆಧಾರಿತವಾಗಿ ಮೌಲ್ಯ ನಿಗದಿಪಡಿಸುವಂತಹ ಯಾವುದೇ ಆಸ್ತಿಯನ್ನು ಹೊಂದಿರುವುದಿಲ್ಲ. ಹೀಗಾಗಿ ಯಾವುದೇ ಆಸ್ತಿಯನ್ನು ಸಾಮಾನ್ಯ ವ್ಯವಹಾರದ ಮೂಲಕ ಮಾರಲು ಅಥವಾ ಅದರ ಹೊಣೆಗಾರಿಕೆಯನ್ನು ವರ್ಗಾಯಿಸಲು ಬೆಲೆಯನ್ನು ಅಂದಾಜಿಸುವ ಅಗತ್ಯವಿರುವುದಿಲ್ಲ. ಹೀಗಾಗಿ ಪ್ರಸಕ್ತ ಮಾರುಕಟ್ಟೆ ಪರಿಸ್ಥಿತಿಯಲ್ಲಿ ಮತ್ತು ಆಸ್ತಿಗಳ ಸ್ಥಳದಲ್ಲಿ ಮಾರುಕಟ್ಟೆ ಸಹಭಾಗಿಗಳ ನಡುವೆ ನಿಗದಿತ ದಿನಾಂಕದಂದು ಯಾವುದೇ ವ್ಯವಹಾರ ನಡೆಯುವುದಿಲ್ಲ.
	ಇ) ಐ.ಎನ್.ಡಿ.ಎ.ಎಸ್. 12 "ಆದಾಯ ತೆರಿಗೆ" – ಮುಂದೂಡಲ್ಪಟ್ಟ ತೆರಿಗೆಯನ್ನು ಒಳಗೊಂಡ ಆದಾಯ ತೆರಿಗೆಯ ಗುರುತಿಸುವಿಕೆ ಮತ್ತು ಬಹಿರಂಗಪಡಿಸುವಿಕೆ ತಯಾರಿಸಿದ್ದು, ಇದು ಅಗತ್ಯಗಳ ಪ್ರಕಾರ ಅನುಸರಣೆಯಾಗಿರುವುದಿಲ್ಲ.	ಟಿಪ್ಪಣಿ ಸಂಖ್ಯೆ: 2.13 (ಗಮನಿಸಿ) : ಪ್ರಸಕ್ತವಧಿಗೆ ಮತ್ತು ಹಿಂದಿನ ಅವಧಿಗೆ ಸಲ್ಲಿಕೆ ಮಾಡದ ತೆರಿಗೆಯನ್ನು ಹೊಣೆಗಾರಿಕೆ ಎಂದು ಪರಿಗಣಿಸಲಾಗಿದ್ದು, ಅದನ್ನು ಹಣಕಾಸು ತಖ್ತೆಯಲ್ಲಿ ಉಲ್ಲೇಖಿಸಲಾಗಿದೆ. ನ್ಯೂನ್ಯತೆಗಳು ಮತ್ತು ಅವುಗಳಿಂದ ಉಂಟಾಗಬಹುದಾದ ಪರಿಣಾಮವನ್ನು ಲೆಕ್ಕಪರಿಶೋಧನೆಯಲ್ಲಿ ತೋರಿಸಿರುವುದಿಲ್ಲ.

	ಎಫ್) ಐ.ಎನ್.ಡಿ.ಎ.ಎಸ್. 16 "ಚಿರಾಸ್ತಿ ಹಾಗೂ ಯಂತ್ರೋಪಕರಣಗಳು" ಅಗತ್ಯಗಳ ಪ್ರಕಾರ ಅನುಸರಣೆಯಲ್ಲಿರುವುದಿಲ್ಲ. ಅವುಗಳಲ್ಲಿ ಕೆಳಕಂಡವುಗಳು ಸೇರಿವೆ;	ಟಿಪ್ಪಣಿ ಸಂಖ್ಯೆ: 2.3, 2.4 & 2.17 (ಗಮನಿಸಿ) : ಕಂಪನಿಯು ಯೋಜನೆಗಳ ಬಂಡವಾಳಪೂರಣಕ್ಕೆ ಪ್ರಜ್ಞಾಪೂರ್ವಕ ನೀತಿಯನ್ನು ಅನುಸರಿಸುತ್ತದೆ. ಯೋಜನೆಗೆ ಸಂಬಂಧಿಸಿದಂತೆ ಮಾಡಲಾದ ಖರ್ಚನ್ನು ಯೋಜನೆಯ ಉದ್ದೇಶದ ಬಳಕೆಯ ಮುನ್ನ ಅದರ ಅಭಿವೃದ್ಧಿ ಹಂತದಲ್ಲಿ ಗಳಿಸಲಾದ ನಿವ್ವಳ ಆದಾಯವನ್ನು ಕಾರ್ಯಾರಂಭ ಪೂರ್ವ ವೆಚ್ಚಗಳೆಂದು ಪರಿಗಣಿಸಲಾಗಿದ್ದು, ಅವುಗಳನ್ನು ಪ್ರಗತಿಯಲ್ಲಿರುವ ಬಂಡವಾಳ ಯೋಜನೆ ಅಡಿಯಲ್ಲಿ ತೋರಿಸಲಾಗಿದೆ.
	I. ವೆಚ್ಚ, ಮಾಪನ ಹಾಗೂ ತರುವಾಯದ ವೆಚ್ಚದ ಗುರುತಿಸುವಿಕೆ	ತದನಂತರ ವೆಚ್ಚಗಳನ್ನು, ಮೊತ್ತವನ್ನು ಒಳಗೊಂಡ ಆಸ್ತಿಗಳಲ್ಲಿ ಸೇರ್ಪಡೆಗೊಳಿಸಲಾಗಿದೆ ಅಥವಾ ಪ್ರತ್ಯೇಕ ಆಸ್ತಿಯಾಗಿ ಪರಿಗಣಿಸಲಾಗಿದೆ.
	II. ಬಂಡವಾಳಿಕರಣ ಮತ್ತು ಸವಕಳಿ ಲೆಕ್ಕಾಚಾರ	ಕಂಪನಿಯು ತನ್ನ ಆಸ್ತಿಗಳು ಘಟಕಗಳು ಮತ್ತು ಸಲಕರಣೆಗಳನ್ನು ಅವುಗಳ ಅಂದಾಜಿತ ಬಳಕೆ ಆಧಾರದ ಮೇಲೆ ನೇರ ವಿಧಾನವನ್ನು ಬಳಸಿ ನಿರ್ಧರಿಸಲಾಗಿದೆ.
	ಜಿ) ಐ.ಎನ್.ಡಿ.ಎ.ಎಸ್. 20 " ಸರ್ಕಾರದ ಧನ ಸಹಾಯಕ್ಕಾಗಿ ಲೆಕ್ಕಪರಿಶೋಧನೆ ಮತ್ತು ಸರ್ಕಾರದ ಸಹಾಯದ ಪ್ರಕಟಣೆ" – ಸರ್ಕಾರದ ಸಹಾಯದ ಬಹಿರಂಗಪಡಿಸುವಿಕೆ ಮಾಡಿರುವುದು ಅಗತ್ಯಗಳ ಪ್ರಕಾರ ಅನುಸರಣೆಯಾಗಿರುವುದಿಲ್ಲ.	ಟಿಪ್ಪಣಿ ಸಂಖ್ಯೆ: 2.8, 2.11 ಸಿ (ಗಮನಿಸಿ) : ಸರ್ಕಾರದಿಂದ ಪಡೆದ ಅನುದಾನವನ್ನು ಪರಿಗಣಿಸಲಾಗಿದ್ದು, ಅದನ್ನು ಜಮಾ–ಖರ್ಚು ತಖ್ತೆಯಲ್ಲಿನ ವೆಚ್ಚದಲ್ಲಿ ಇಳಿಕೆ ಎಂದು ವ್ಯವಸ್ಥಿತವಾಗಿ ತೋರಿಸಲಾಗಿದೆ.
	ಹೆಚ್) ಐ.ಎನ್.ಡಿ.ಎ.ಎಸ್. 23 "ಸಾಲದ ವೆಚ್ಚಗಳು" ಟಿಪ್ಪಣಿ ಸಂಖ್ಯೆ:2.11 ರನ್ವಯ ಅನುಸರಣೆಯಲ್ಲಿರುವುದಿಲ್ಲ. ಅವುಗಳಲ್ಲಿ ಕೆಳಕಂಡಿದ್ದು ಸೇರಿವೆ: (ಗಮನಿಸಿ)	
	I. ಗುರುತಿಸುವಿಕೆ, ವೆಚ್ಚಗಳ ಲೆಕ್ಕಾಚಾರ, ಅರ್ಹತೆಯುಳ್ಳ ಬಂಡವಾಳೀಕರಣ ಸ್ವತ್ತುಗಳ ಅಳತೆ	ಗುರುತಿಸುವಿಕೆ, ವೆಚ್ಚಗಳ ಲೆಕ್ಕಾಚಾರ, ಅರ್ಹತೆಯುಳ್ಳ ಬಂಡವಾಳೀಕರಣ ಸ್ವತ್ತುಗಳ ಅಳತೆಯ ವಿಮರ್ಶೆಯನ್ನು ಬಂಡವಾಳೀಕರಣದ ಹೊತ್ತಿನಲ್ಲಿ ಮಾಡಲಾಗುವುದು.
	ಐ) ಐ.ಎನ್.ಡಿ.ಎ.ಎಸ್. 24 "ಸಂಬಂಧಿತ ವ್ಯಕ್ತಿಗಳೊಂದಿಗೆ ಮಾಡಿದ ವ್ಯವಹಾರಗಳ ಬಹಿರಂಗಪಡಿಸುವಿಕೆ" – ಬಹಿರಂಗಪಡಿಸುವಿಕೆಗಳು ಅಗತ್ಯಗಳ ಪ್ರಕಾರ ಅನುಸರಣೆಯಾಗಿರುವುದಿಲ್ಲ.	ನಿಗಮವು ಒಂದು ಸರ್ಕಾರದ ಉದ್ಯಮವಾಗಿರುವುದರಿಂದ ಸಂಬಂಧಿತ ವ್ಯಕ್ತಿಗಳೊಂದಿಗೆ ಮಾಡಿದ ವ್ಯವಹಾರಗಳ ಬಹಿರಂಗಪಡಿಸುವಿಕೆಯ ಅವಶ್ಯಕತೆ ಇರುವುದಿಲ್ಲ.
	ಜೆ) ಐ.ಎನ್.ಡಿ.ಎ.ಎಸ್.32 "ಹಣಕಾಸಿನ ಸಾಧನೆಗಳ ಪ್ರಸ್ತುತಿ" – ಹಣಕಾಸಿನ ಸಾಧನೆಗಳ ಪ್ರಸ್ತುತಿಯನ್ನು ಅಗತ್ಯಗಳ ಪ್ರಕಾರ ಅನುಸರಣೆಯಾಗಿರುವುದಿಲ್ಲ. (ಟಿಪ್ಪಣಿ ಸಂಖ್ಯೆ: 2.7 ಸಿ ಗಮನಿಸಿ)	ಕಂಪನಿಯು ಯಾವುದೇ ಹಣಕಾಸಿನ ಸಾಧನೆಗಳನ್ನು ಹೊಂದಿರುವುದಿಲ್ಲ. ಆದ್ದರಿಂದ ಪ್ರತ್ಯೇಕವಾಗಿ ಬಹಿರಂಗಪಡಿಸುವಿಕೆ ಅವಶ್ಯಕವಿರುವುದಿಲ್ಲ.
	ಕೆ) ಐ.ಎನ್.ಡಿ.ಎ.ಎಸ್. 33 "ಪ್ರತಿ ಷೇರಿನ ಗಳಿಕೆ" – ಪ್ರತಿ ಷೇರಿನ ಗಳಿಕೆಯ ಪ್ರಸ್ತುತಿ ಮತ್ತು ಬಹಿಂಗಪಡಿಸುವಿಕೆ ಅಗತ್ಯಗಳ ಪ್ರಕಾರ ಅನುಸರಣೆಯಾಗಿರುವುದಿಲ್ಲ. (ಟಿಪ್ಪಣಿ ಸಂಖ್ಯೆ: 2.21 ಗಮನಿಸಿ)	ಅಗತ್ಯಗಳ ಅನುಸಾರ ಪ್ರತಿ ಷೇರಿನ ಗಳಿಕೆ ಲಾಭ ಮತ್ತು ನಷ್ಟದ ತಃಖ್ತೆಯಲ್ಲಿ ಬಹಿರಂಗಪಡಿಸಲಾಗಿದೆ.
	ಎಲ್) ಐ.ಎನ್.ಡಿ.ಎ.ಎಸ್. 36 "ಆಸ್ತಿಯ ಮೌಲ್ಯ ತಗ್ಗಿಸುವಿಕೆ" – ಗುರುತು ಪಡಿಸುವಿಕೆ ಮತ್ತು ಬಹಿರಂಗಪಡಿಸುವಿಕೆಯು ಅಗತ್ಯಗಳ ಪ್ರಕಾರ ಅನುಸರಣೆಯಾಗಿರುವುದಿಲ್ಲ. (ಟಿಪ್ಪಣಿ ಸಂಖ್ಯೆ: 2.14 ಮತ್ತು 4ಈ ಗಮನಿಸಿ)	ಕಂಪನಿಯು ತನ್ನ ಯಾವುದೇ ಆಸ್ತಿಯನ್ನು ಮೌಲ್ಯ ತಗ್ಗಿಸುವಿಕೆಗೆ ಗುರುತಿಸಿರುವುದಿಲ್ಲ.
	ಎಂ) ಐ.ಎನ್.ಡಿ.ಎ.ಎಸ್. 37 "ಹವಣಿಕೆಗಳು, ಅನಿಶ್ಚಿತ ಹೊಣೆಗಾರಿಕೆಗಳು ಮತ್ತು ಅನಿಶ್ಚಿತ ಸ್ವತ್ತುಗಳು – ಕೆಲವು ವೆಚ್ಚಗಳ ಹವಣಿಕೆಗಳ ಗುರುತಿಸುವಿಕೆ, ಅನಿಶ್ಚಿತ ಹೊಣೆಗಾರಿಕೆಗಳು ಮತ್ತು ಬದ್ಧತೆಗಳನ್ನು ನೀಡಿರುವುದಿಲ್ಲ ಹಾಗೂ ಅಗತ್ಯಗಳ ಅನುಸಾರ ಬಹಿರಂಗಪಡಿಸಿರುವುದಿಲ್ಲ. (ಟಿಪ್ಪಣಿ ಸಂಖ್ಯೆ: 2.15 ಮತ್ತು 30 ಗಮನಿಸಿ)	ಕಂಪನಿಯು ಯಾವುದೇ ಅನಿಶ್ಚಿತ ಆಸ್ತಿಯನ್ನು ಪರಿಗಣಿಸಿಲ್ಲ ಮತ್ತು ಬಹಿರಂಗಪಡಿಸಿಲ್ಲ. ಅನಿಶ್ಚಿತ ಹೊಣೆಗಾರಿಕೆಗಳನ್ನು ಗುರುತಿಸಿ ಸರಿಯಾಗಿ ಬಹಿರಂಗಪಡಿಸಲಾಗಿದೆ.
	ಎನ್) ಐ.ಎನ್.ಡಿ.ಎ.ಎಸ್. 40 "ಹೂಡಿಕೆ ಆಸ್ತಿ" – ಗುರುತಿಸುವಿಕೆ, ಮಾಪನ ಮತ್ತು ಹೂಡಿಕೆ ಆಸ್ತಿಯ ಬಹಿರಂಗಪಡಿಸುವಿಕೆ (ಬೃಂದಾವನ್ ಉದ್ಯಾನವನದ ಹೊಟೆಲ್ ಕಟ್ಟಡಗಳು) ಅಗತ್ಯಗಳ ಪ್ರಕಾರ ಅನುಸರಣೆಯಾಗಿರುವುದಿಲ್ಲ. ಐ.ಎನ್.ಡಿ.ಎ.ಎಸ್. ಲೆಕ್ಕಪತ್ರದ ಮೇಲೆ ಈ ಮೇಲಿನ ವಿಷಯದ ಪ್ರಭಾವವನ್ನು ಅಳೆಯಲು ಸಾಧ್ಯವಿರುವುದಿಲ್ಲ.	ಟಿಪ್ಪಣಿ ಸಂಖ್ಯೆ: 2.22 ಡಿ ಅಡಿ ತಿಳಿಸಿರುವಂತೆ, ಕಂಪನಿಯು ಯಾವುದೇ ಆಸ್ತಿಯನ್ನು ಹೂಡಿಕೆ ಸ್ವತ್ತು ಎಂದು ಪರಿಗಣಿಸಿರುವುದಿಲ್ಲ.

3	ಲಾಭ ಮತ್ತು ನಷ್ಟದ ತಖ್ತೆಯು ಕಂಪನಿ ಕಾಯ್ದೆ 2013 – ಷೆಡ್ಯೂಲ್ III ವಿಭಾಗ II ಮತ್ತು 'ಐ.ಎನ್.ಡಿ.ಎ.ಎಸ್.' ಅಗತ್ಯಗಳಿಗೆ ಅನುಗುಣವಾಗಿ ಇರುವುದಿಲ್ಲ ಮತ್ತು ಹಣಕಾಸು ವರದಿಯ ಸಿದ್ಧತೆ ಮತ್ತು ಮಂಡನೆಯ ಚೌಕಟ್ಟು ಸಹ ಐ.ಸಿ.ಎ.ಐ. ನಿಗದಿಪಡಿಸಿರುವ ಭಾರತೀಯ ಲೆಕ್ಕಪತ್ರ ಮಾನದಂಡಗಳಿಗೆ ಅನುಸಾರವಾಗಿರುವುದಿಲ್ಲ. ಲಾಭ ಮತ್ತು ನಷ್ಟದ ವರ್ಗೀಕರಣದ ಪರಿಗಣನೆ, ವೆಚ್ಚಗಳು, ಆದಾಯ ತೆರಿಗೆ ಉದ್ದೇಶಕ್ಕಾಗಿ ಕಂಪನಿಯಿಂದ ಪ್ರತ್ಯೇಕ ಜಮಾ ಖರ್ಚು ತಃಖ್ತೆ ಮುಂತಾದ ವಿಷಯಗಳಲ್ಲಿ ಕಂಪನಿಯು ಅನುಸರಣೆ ಹೊಂದಿರುವುದಿಲ್ಲ; ಅವುಗಳು ಹೀಗಿವೆ;	ಕಂಪನಿ ಕಾಯ್ದೆ 2013 – ಷೆಡ್ಯೂಲ್ III ರ ವಿಭಾಗ ಖಖ ನಿಯಮಗಳ ಅನುಸಾರವಾಗಿ ಆದಾಯ ಮತ್ತು ಖರ್ಚು ತಖ್ತೆಯನ್ನು ಸಿದ್ಧಪಡಿಸಿರುತ್ತದೆ ಮತ್ತು ಐ.ಎನ್.ಡಿ.ಎ.ಎಸ್. ನ ಅಗತ್ಯದ ಅನುಸಾರವಾಗಿ ಅದನ್ನು ಮಂಡಿಸಿರುತ್ತದೆ. ಆದಾಯ ಮತ್ತು ಖರ್ಚುಗಳನ್ನು ವರ್ಗೀಕರಿಸಲಾಗಿದ್ದು, ಸ್ಥಿರತೆ ಕಾಯ್ದುಕೊಕೊಳ್ಳಲಾಗಿದೆ. ಆದಾಯ ತೆರಿಗೆ ಉದ್ದೇಶಕ್ಕಾಗಿ ಪ್ರತ್ಯೇಕ ಲಾಭ ಮತ್ತು ನಷ್ಟ ತಖ್ತೆಯನ್ನು ಸಿದ್ಧಪಡಿಸಲಾಗಿದ್ದು, ಇದನ್ನು ಶಾಸನಬದ್ಧ ಲೆಕ್ಕಾಧಿಕಾರಿಗಳು ಹಾಗೂ ತೆರಿಗೆ ಲೆಕ್ಕಾಧಿಕಾರಿಗಳು ಪ್ರಮಾಣೀಕರಿಸಿರುತ್ತಾರೆ.
	I. ಆದಾಯ ಹಾಗೂ ವೆಚ್ಚಗಳ ಗುರುತಿಸುವಿಕೆ ಮತ್ತು ವಿಂಗಡಣೆ	ಕಳೆದ ವರ್ಷಗಳಲ್ಲಿ ಮಾಡಿದಂತೆ ಕಂಪನಿಯು ಆದಾಯ ಹಾಗೂ ವೆಚ್ಚಗಳ ಗುರುತಿಸುವಿಕೆ ಮತ್ತು ವಿಂಗಡಣೆ ಮಾಡಿದೆ.
	II. ವೆಚ್ಚದ ಅಂಶ ಹಾಗೂ ಐ.ಎನ್.ಡಿ.ಎ.ಎಸ್. 16 ಮತ್ತು ಲೆಕ್ಕಪತ್ರದ ಆಚರಣೆಗಳ ಅಳತೆ ಮತ್ತು ಗುರುತಿಸುವಿಕೆ ಮಾನದಂಡಗಳ ಅನುಸರಣೆಯಲ್ಲಿಲ್ಲದಿದ್ದರೂ ವೆಚ್ಚಗಳು, ನೆಟ್–ಆಫ್ ಬ್ಯಾಂಕ್ ಬಡ್ಡಿ ಹಾಗೂ ಸರ್ಕಾರದ ನಿರ್ವಹಣೆ ಅನುದಾನ – ರೂ. 23,471.30 ಲಕ್ಷಗಳು ಸಿ.ಡಬ್ಲ್ಯೂ.ಐ.ಪಿ.ಗೆ ವರ್ಗಾವಣೆ ಮಾಡಲಾಗಿದೆ.	ಸರ್ಕಾರವು ನಿರ್ದಿಷ್ಟ ಉದ್ದೇಶಕ್ಕಾಗಿ ನಿರ್ವಹಣೆ ವೆಚ್ಚವನ್ನು ಪೂರೈಸಲು ಅನುದಾನವನ್ನು ಬಿಡುಗಡೆ ಮಾಡುತ್ತದೆ. ಅದರಂತೆ ಕಂಪನಿಯು ಲಾಭ ಮತ್ತು ನಷ್ಟದ ತಃಖ್ತೆಯಲ್ಲಿ ವೆಚ್ಚವನ್ನು ನೆಟ್–ಆಫ್ ಮಾಡಿದೆ.
	III. ಆದಾಯ ತೆರಿಗೆಯ ಉದ್ದೇಶಕ್ಕಾಗಿ, ಪರಿಷ್ಕೃತ ಆದಾಯವನ್ನು ಫೈಲ್ ಮಾಡಲು ಕಂಪನಿಯು ಪ್ರತ್ಯೇಕವಾದ ಲಾಭ ಮತ್ತು ನಷ್ಟದ ತಃಖ್ತೆಯನ್ನು ತಯಾರಿಸುತ್ತದೆ (ಟಿಪ್ಪಣಿ ಸಂಖ್ಯೆ: 2.13 ಮತ್ತು ಪ್ಯಾರಾ 4 ಗಮನಿಸಿ). ಈ ಲಾಭ ಮತ್ತು ನಷ್ಟದ ತಃಖ್ತೆಯ ಅನುಪಸ್ಥಿತಿಯಲ್ಲಿ ಆದಾಯ ತೆರಿಗೆಯ ನಿಬಂಧನೆಗಳ ಸಮರ್ಪಕತೆಯನ್ನು ಅಳೆಯಲು ಸಾಧ್ಯವಿರುವುದಿಲ್ಲ.	ಆದಾಯ ತೆರಿಗೆಯ ನಿಬಂಧನೆಯನ್ನು ಲಾಭ ಮತ್ತು ನಷ್ಟದ ತಃಖ್ತೆಯ ಆಧಾರದ ಮೇಲೆ ಮಾಡಲಾಗುತ್ತದೆ, ಹೊರತು ಆದಾಯ ತೆರಿಗೆಯ ಆಧಾರದ ಮೇಲೆ ಮಾಡಲಾಗುವುದಿಲ್ಲ.
4	'ಐ.ಎನ್.ಡಿ.ಎ.ಎಸ್.' ಲೆಕ್ಕಪತ್ರಗಳು ಕಂಪನಿ ಕಾಯ್ದೆ 2013 – ಷೆಡ್ಯೂಲ್ ಖಖಖ ವಿಭಾಗ ಖಖ ಮತ್ತು 'ಐ.ಎನ್.ಡಿ.ಎ.ಎಸ್.' ಅಗತ್ಯಗಳಿಗೆ ಅನುಗುಣವಾಗಿ ಇರುವುದಿಲ್ಲ. ವಿಂಗಡಣೆ / ಲೈನ್ ಐಟಂಗಳ ಮರುವಿಂಗಡಣೆ / ಮರು ಲೈನ್ ಐಟಂಗಳು ಮತ್ತು ಇತರೆ ಅವಶ್ಯಕ ಬಹಿರಂಗಪಡಿಸುವಿಕೆಗಳನ್ನು ಸಂಬಂಧಿಸಿದಂತೆ (ಹೆಚ್ಚುವರಿ ಮಾಹಿತಿ ನೀಡುವ ಟಿಪ್ಪಣಿಗಳ ಜೊತೆಗೆ); ಕೆಳಗಿನವುಗಳನ್ನು ಒಳಗೊಂಡಂತೆ	ಲೆಕ್ಕಪತ್ರಗಳನ್ನು ಕಂಪನಿ ಕಾಯ್ದೆ 2013 ಷೆಡ್ಯೂಲ್ III ಹಾಗೂ 'ಐ.ಎನ್.ಡಿ.ಎ.ಎಸ್.' ನಿಬಂಧನೆಗಳ ಅನ್ವಯ ಹಾಗೂ ಪ್ರಾಯೋಗಿಕ ಅನುಸಾರ ತಯಾರಿಸಲಾಗಿದೆ.
	ಎ) ಭದ್ರತಾ ಠೇವಣಿಗಳು, ಅರ್ನೆಸ್ಟ್ ಹಣ ಠೇವಣಿಗಳು, ಕಾರ್ಯಕ್ಷಮತೆ ಖಾತರಿ ಠೇವಣಿಗಳು ಗುತ್ತಿಗೆ ಪಾವತಿಗಳ ಹೊಣೆಗಾರಿಕೆಗಳು, ಸರಬರಾಜು ಮತ್ತು ವೆಚ್ಚಗಳನ್ನು ಪ್ರಸ್ತುತ ಹಾಗೂ ಅಪ್ರಸ್ತುತ ಎಂದು ವಿಂಗಡಣೆ ಮಾಡಿರುವುದಿಲ್ಲ. (ಟಿಪ್ಪಣಿ ಸಂಖ್ಯೆ: 7 ಗಮನಿಸಿ)	ಹಣಕಾಸಿನ ಸ್ವತ್ತುಗಳಡಿ ಭದ್ರತಾ ಠೇವಣಿಗಳನ್ನು ಅಪ್ರಸ್ತುತ ಸ್ವತ್ತುಗಳೆಂದು ವಿಂಗಡಿಸಲಾಗಿದೆ ಮತ್ತು ಹೊಣೆಗಾರಿಕೆಗಳನ್ನು ನಿಬಂಧನೆಗಳ ಅನುಸಾರ ವಿಂಗಡಣೆ ಮಾಡಲಾಗಿದೆ.
	ಬಿ) ಐ.ಎನ್.ಡಿ.ಎ.ಎಸ್.ನ ವಿಭಾಗ II ಷೆಡ್ಯೂಲ್ III ರ ಯಾವುದೇ ಲೈನ್ ಐಟಂ ಅನ್ನು ಒಪ್ಪಿದೆ ಎಂದು ಗುರುತಿಸುವುದಿಲ್ಲ (ಟಿಪ್ಪಣಿ ಸಂಖ್ಯೆ: 19 ಗಮನಿಸಿ)	ಲೈನ್ ಐಟಂ ಎಂದು ತೋರಿಸಲು ಒಪ್ಪಿಗೆ ಗುರುತಿಸಿರುವುದಿಲ್ಲ.
5	ಚರಾಸ್ತಿ, ಘಟಕ ಮತ್ತು ಉಪಕರಣಗಳು, ಪ್ರಗತಿಯಲ್ಲಿರುವ ಬಂಡಾವಳ ಕಾಮಗಾರಿ (ಸಿ.ಡಬ್ಲ್ಯೂ.ಐ.ಪಿ) ಹಾಗೂ ಸವಕಳಿಯ ಬಗ್ಗೆ.	
	ಎ) ಕಂಪನಿಯು ಚರಾಸ್ತಿ ಮತ್ತು ಘಟಕ ಮತ್ತು ಉಪಕರಣಗಳ ಬಂಡವಾಳೀಕರಣದ ಕೆಲಸವನ್ನು ಪೂರ್ಣಗೊಳಿಸಬೇಕಿರುತ್ತದೆ ಹಾಗೂ ಭೌತಿಕವಾಗಿ ಪೂರ್ಣಗೊಂಡ ಯೋಜನೆಗಳು/ ಸ್ವತ್ತುಗಳು ಅನುಭೋಗಕ್ಕೆ ಯೋಗ್ಯವಾಗಿದ್ದು, ಇವುಗಳ ಸವಳೀಕರಣಕ್ಕೆ ಹವಣಿಕೆಯನ್ನು ಮಾಡಿರುವುದಿಲ್ಲ ಆದ ಕಾರಣ ಚಿರಾಸ್ತಿ, ಯಂತ್ರೋಪಕರಣಗಳು ಅಧಿಕ ಮೌಲ್ಯಯುತವಾಗಿದ್ದು ಹಾಗೂ ಸವಕಳಿ ವೆಚ್ಚವು ಕಡಿಮೆಯಾಗಿರುತ್ತದೆ.	ಕಂಪನಿಯು ಯೋಜನಾ ವೆಚ್ಚಗಳ ಬಂಡವಾಳೀಕರಣಕ್ಕಾಗಿ ಲೆಕ್ಕ ವಿಧಾನದಲ್ಲಿ ಪೂರ್ಣತೆ ವಿಧಾನವನ್ನು ಪ್ರಜ್ಞಾಪೂರ್ವಕವಾಗಿ ಅಳವಡಿಸಿಕೊಂಡಿದೆ. ಅಣೆಕಟ್ಟುಗಳು, ನಾಲೆಗಳು, ವಿತರಣಾ ನಾಲೆಗಳು ಮತ್ತು ಇತರೆ ನೀರಾವರಿ ಯೋಜನೆಗಳು ಸಮಗ್ರವಾಗಿ ಯೋಜನೆ ಭಾಗವಾಗಿರುತ್ತದೆ ಮತ್ತು ಅವುಗಳನ್ನು ಸಂಯುಕ್ತ ಜಾಲಗಳನ್ನಾಗಿ ಪರಿಗಣಿಸಲಾಗಿದೆ. ಕೆಲವೊಂದು ನೀರಾವರಿ ಯೋಜನೆಗಳನ್ನು ಪೂರ್ಣಗೊಳಿಸಲಾಗಿದ್ದು, ಅವುಗಳಿಗೆ ನೀರು ಹರಿಸಲಾಗಿದ್ದರೂ, ಅಂತಹ ಕೆಲವು ಕಾಮಗಾರಿಗಳನ್ನು ಪ್ರಗತಿಶೀಲ ಬಂಡವಾಳ ಕಾರ್ಯಗಳ ಅಡಿಯಲ್ಲೇ ಮುಂದುವರಿಸಲಾಗಿದೆ.

	ಬಿ) ಲೆಕ್ಕಪರಿಶೋಧನೆ, ಅಂತಿಮಗೊಳಿಸುವಿಕೆಯ ಹೊಂದಾಣಿಕೆ ಗುರುತಿಸುವಿಕೆ, ದಸ್ತಾವೇಜು, ಭೌತಿಕ ನಿಯಂತ್ರಣ ಮತ್ತು ಚಿರಾಸ್ತಿ, ಯಂತ್ರೋಪಕರಣಗಳು, ಒಡೆತನ, ವೆಚ್ಚದ ಹಂಚಿಕೆ ಪ್ರಸ್ತುತ ಬಂಡವಾಳೀಕರಣದಲ್ಲಿ ಕೆಲವು ಅನಿಶ್ಚತೆಗಳು ಕಂಡುಬಂದಿರುತ್ತದೆ	ಐ.ಎನ್.ಡಿ.ಎ.ಎಸ್. ಲೆಕ್ಕಪತ್ರ ವಿಧಾನಕ್ಕೆ ಪರಿವರ್ತನೆ ಹಿನ್ನೆಲೆಯಲ್ಲಿ, ಕಂಪನಿಯು ತನ್ನ ಎಲ್ಲ ಸ್ವತ್ತು, ಘಟಕ ಮತ್ತು ಉಪಕರಣಗಳ ವರ್ಗಾವಣೆ ಮೌಲ್ಯವನ್ನು ಮುಂದುವರೆಸಲು ನಿರ್ಧರಿಸಿದೆ ಮತ್ತು ಇವುಗಳ ಕ್ರೋಡೀಕೃತ ಸವಕಳಿ ವೆಚ್ಚವನ್ನು ಕಡಿಮೆಯೆಂದು ತೋರಿಸಲಾಗಿದೆ. ಆಸ್ತಿಗಳು ಉದ್ದೇಶಿತ ಬಳಕೆಗೆ ಸಿದ್ಧವಾಗುವವರೆಗೂ ವೆಚ್ಚವು ಆಸ್ತಿಗಳ ಸ್ವಾಧೀನತೆಯ ಮೇಲೆ ಆಧಾರಪಟ್ಟಿರುತ್ತದೆ.
	ಸಿ) ಸರ್ಕಾರದಿಂದ ವರ್ಗಾವಣೆಗೊಂಡ ಆಸ್ತಿ / ಸ್ವತ್ತುಗಳ ಜೀವಿತಾವಧಿಯನ್ನು ಬಂಡವಾಳ ಕ್ರೋಡೀಕರಣ ಸಮಯದಲ್ಲಿ ಹೊಸದಾಗಿರುವಂತೆ ಪರಿಗಣಿಸಲಾಗಿದೆ. ಆದ ಕಾರಣ ಚರಾಸ್ತಿ, ಯಂತ್ರೋಪಕರಣಗಳು ಅಧಿಕ ಮೌಲ್ಯಯುತವಾಗಿದ್ದು ಹಾಗೂ ಸವಕಳಿ ವೆಚ್ಚವು ಕಡಿಮೆಯಾಗಿರುತ್ತದೆ. (ಟಿಪ್ಪಣಿ ಸಂಖ್ಯೆ: 2.4 ಗಮನಿಸಿ)	ಕಂಪನಿಯು ಸ್ವತ್ತು, ಘಟಕ ಮತ್ತು ಉಪಕರಣಗಳ ಸವಕಳಿಯನ್ನು ಅವುಗಳ ಅಂದಾಜು ಕಾರ್ಯಾವಧಿಯನ್ನು ಪರಿಗಣಿಸಿ ನೇರ ವಿಧಾನದಲ್ಲಿ ಲೆಕ್ಕ ಮಾಡುತ್ತದೆ. ಯಾವುದೇ ಆಸ್ತಿಗೆ ಹೊಸ ಸೇರ್ಪಡೆಯಾದರೆ ಅಥವಾ ಯಾವುದೇ ಆಸ್ತಿಯನ್ನು ಮಾರಾಟ ಮಾಡಿದರೆ, ಬಳಕೆಯಿಂದ ಹೊರಗಿಟ್ಟರೆ, ಕೆಡವಿದರೆ ಅಥವಾ ನಾಶ ಮಾಡಿದರೆ, ಅಂತಹ ಸ್ವತ್ತುಗಳ ಸವಕಳಿಯನ್ನು ಪ್ರಮಾಣಾನುಗುಣವಾಗಿ ಲೆಕ್ಕ ಮಾಡಲಾಗುತ್ತದೆ. ಮಾಸಿಕವಾಗಿ ಸೇರ್ಪಡೆ ಮತ್ತು ವಿಲೇವಾರಿಗಳನ್ನು ಈ ವೇಳೆ ಪರಿಗಣಿಸಲಾಗುತ್ತದೆ.
6	ಸಂಬಂಧಿತ ಮಾಹಿತಿಯ ಅನುಪಸ್ಥಿತಿಯಲ್ಲಿ ಲೋಕೋಪಯೋಗಿ ದಾಖಲೆಗಳಿಗೆ ಸಂಬಂಧಿಸಿದ ಸಾಲ ಮತ್ತು ಮುಂಗಡಗಳು, ಠೇವಣಿಗಳು, ಸ್ವೀಕೃತಗಳು ಹಾಗೂ ಪ್ರಸ್ತುತ ಹೊಣೆಗಾರಿಕೆಗಳು ಲೆಕ್ಕಪತ್ರಗಳ ಪುಸ್ತಿಕೆಯೊಂದಿಗೆ ಹೊಂದಾಣಿಕೆ ಇರುವುದಿಲ್ಲ. ಲೆಕ್ಕಪತ್ರಗಳ ಮೇಲಿನ ಪ್ರಭಾವವನ್ನು ಖಚಿತಪಡಿಸಲು ನಮ್ಮಿಂದ ಸಾಧ್ಯವಾಗುತ್ತಿಲ್ಲ. ಕಳೆದ ವರ್ಷಗಳ ವರದಿಯಲ್ಲಿಯೂ ಸಹ ಹೋಲುವ ವೀಕ್ಷಣೆ ಇರುತ್ತದೆ.	ಕಂಪನಿಯು, ಅನುಕೂಲದ ದೃಷ್ಟಿಯಿಂದ ವಿಭಾಗ ಮತ್ತು ಉಪವಿಭಾಗಗಳಲ್ಲಿ ಲೆಕ್ಕಪತ್ರದ ಪುಸ್ತಿಕೆಗಳನ್ನು ಪಿ.ಡಬ್ಲ್ಯೂ.ಡಿ. ವ್ಯವಸ್ಥೆಯ ಅನುಸಾರ ನಿರ್ವಹಿಸುತ್ತಿದೆ.
7	ಕಂಪನಿಯ ವಿರುದ್ಧವಿರುವ ವಿವಾದಾತ್ಮಕ ದಾವೆಗಳ ಅನಿಶ್ಚಿತ ಹೊಣೆಗಾರಿಕೆಗಳನ್ನು ಪೂರ್ಣವಾಗಿ ನಿಶ್ಚಯಿಸಿ ಬಹಿರಂಗಪಡಿಸಿರುವುದಿಲ್ಲ.	ಕಂಪನಿಯು ಸಾಧ್ಯವಾದಷ್ಟು ಮಟ್ಟಿಗೆ ಅನಿಶ್ಚಿತ ಹೊಣೆಗಾರಿಕೆಯನ್ನು ಖಚಿತಪಡಿಸಿ, ನಿಶ್ಚಯಿಸಿ ಬಹಿರಂಗಪಡಿಸಿರುತ್ತದೆ.
8	ಅವಧಿಯ ಬಿಲ್ಲುಗಳನ್ನು, ಹಳೆ ಬಿಲ್ಲುಗಳನ್ನು ಸಹ ಲೆಕ್ಕಹಾಕಿರುವುದಿಲ್ಲ ಹಾಗೂ ಸರಿಯಾದ ಅನುಮೋದನೆ ಪಡೆಯದೆ ಬಿಲ್ಲುಗಳನ್ನು ಹೆಚ್ಚಿಗೆ ಪ್ರಮಾಣದ ಕೆಲಸಕ್ಕೆ ಲೆಕ್ಕಹಾಕಿರುವುದು ಹೀಗೆ ಕೆಲವು ಅನಿಶ್ಚಿತತೆಗಳು ಲೆಕ್ಕಪರಿಶೋಧನೆ ಯಲ್ಲಿ ಕಂಡುಬಂದಿರುತ್ತವೆ. ಅದಾಗ್ಯೂ ಲೆಕ್ಕಪತ್ರಗಳ ಮೇಲೆ ಐ.ಎನ್.ಡಿ.ಎ.ಎಸ್.ನ ಪರಿಣಾಮವನ್ನು ಖಚಿತಪಡಿಸುವುದು ಸಾಧ್ಯವಿರುವುದಿಲ್ಲ. ನಮ್ಮ ಕಳೆದ ವರ್ಷದ ವರದಿಯಲ್ಲೂ ಯಥಾ ಪ್ರಕಾರದ ಅಂಶವನ್ನು ಹೊಂದಿರುತ್ತದೆ. (ಟಿಪ್ಪಣಿ ಸಂಖ್ಯೆ: 2.18 ಗಮನಿಸಿ)	ಟಿಪ್ಪಣಿ ಸಂಖ್ಯೆ: 2.18 (ಗಮನಿಸಿ) : ಸಮತೋನ ಪಟ್ಟಿಯಲ್ಲಿ ಪಾವತಿಸಲು ದೃಢೀಕರಿಸಲಾದ ಬಿಲ್ಲುಗಳು ಸಂಬಂಧಪಟ್ಟ ವಿಭಾಗಗಳಲ್ಲಿ ಸ್ವೀಕೃತಿಯ ಆಧಾರದ ಮೇಲೆ ಹೊಣೆಗಾರಿಕೆಯನ್ನು ಗುರುತಿಸಲಾಗಿದೆ.
9	ಮುಂಗಡಗಳು, ಠೇವಣಿಗಳು, ಸ್ವೀಕೃತಗಳು, ಗುತ್ತಿಗೆದಾರರು, ಪ್ರಸ್ತುತ ಹೊಣೆಗಾರಿಕೆಗಳು ವ್ಯಾಪಾರ ಠೇವಣಿಗಳು ಮತ್ತು ಸ್ಥಿರ ಠೇವಣಿಗಳ ಬಾಕಿ ದೃಢೀಕರಣ ಹಾಗೂ ಪರಿಣಾಮಕಾರಿ ಹೊಂದಾಣಿಕೆಗಳಿಗೆ ಒಳಪಟ್ಟಿರುತ್ತದೆ. ಅದಾಗ್ಯೂ, ಇದರ ಪ್ರಭಾವ ಐ.ಎನ್.ಡಿ.ಎ.ಎಸ್. ಲೆಕ್ಕಪತ್ರಗಳ ಮೇಲೆ ಖಚಿತಪಡಿಸಲು ಸಾಧ್ಯವಿರುವುದಿಲ್ಲ. (ಟಿಪ್ಪಣಿ ಸಂಖ್ಯೆ: 2.22 ಗಮನಿಸಿ)	ಬ್ಯಾಂಕಿನಲ್ಲಿರುವ ಸ್ಥಿರ ಠೇವಣಿಗಳು ಠೇವಣಿ ರಸೀದಿಯಿಂದ ಬೆಂಬಲಿತವಾಗಿರುತ್ತದೆ ಹಾಗೂ ಠೇವಣಿಯ ಒಂದು ಭಾಗ ವಿದ್ಯುತ್ ಮಂಡಳಿಗೆ ಸಂಬಂಧಿಸಿದಂತೆ ಕಾರ್ಯ ನಿರ್ವಹಿಸಲು ಬಳಕೆಯಲ್ಲಿರುತ್ತದೆ. ಇದನ್ನು ಕಾರ್ಯ ಪೂರ್ಣಗೊಂಡ ನಂತರ ಸರಿಪಡಿಸಲಾಗುತ್ತದೆ.
10	ಯೋಜನೆಯ ಒಪ್ಪಂದದ ಪ್ರಕಾರ ಕಾರ್ಯಗತಗೊಳಿಸುವಲ್ಲಿನ ವಿಳಂಬಗಳಿಗೆ ದಂಡಗಳನ್ನು ವಿಧಿಸಿರುವುದಿಲ್ಲ. ಅದರ ಪರಿಣಾಮವಾಗಿ ಇತರೆ ಆದಾಯ, ಲಾಭ, ತೆರಿಗೆಯ ನಿಬಂಧನೆ ಮತ್ತು ಅಪ್ರಸ್ತುತ ಸ್ವತ್ತು–ಸಿ.ಡಬ್ಲ್ಯೂ.ಐ.ಪಿ.ಗಳನ್ನು ಹೆಚ್ಚುವರಿಯಾಗಿ ಹಾಗೂ ಪ್ರಸ್ತುತ ಸ್ವತ್ತುಗಳನ್ನು ಕಡಿಮೆಗೊಳಿಸಲಾಗಿರುತ್ತದೆ. ಅದಾಗ್ಯೂ, ಐ.ಎನ್.ಡಿ.ಎ.ಎಸ್. ಲೆಕ್ಕಪತ್ರಗಳ ಮೇಲಿನ ಪ್ರಭಾವವನ್ನು ಪ್ರಮಾಣೀಕರಿಸುವುದು ನಮ್ಮಿಂದ ಸಾಧ್ಯವಿರುವುದಿಲ್ಲ.	ಟೆಂಡರ್ ಒಪ್ಪಂದದ ಷರತ್ತುಗಳನ್ವಯ ದಂಡವನ್ನು ವಿಂಳಂಬಗಳಿಗೆ ವಿಧಿಸಲಾಗುತ್ತಿದೆ.

11	ಆದಾಯ ಸಂಗ್ರಹಣೆಯ ಬೇಡಿಕೆ ಉದಾಹರಣೆಗೆ ನೀರಿನ ದರ, ಬಾಡಿಗೆ, ವಿದ್ಯುತ್, ನಿಲುಗಡೆ ಶುಲ್ಕ, ಪ್ರವೇಶ ಶುಲ್ಕ, ಮಳಿಗೆಗಳ ಸ್ವೀಕೃತಗಳನ್ನು ಕಾಲಕಾಲಕ್ಕೆ ಗುರುತಿಸಿ ಸಂಗ್ರಹಿಸಿರುವುದಿಲ್ಲ. ಇದರ ಪರಿಣಾಮವಾಗಿ ಇತರೆ ಆದಾಯ, ಲಾಭ, ತೆರಿಗೆಯ ನಿಬಂಧನೆ ಮತ್ತು ಅಪ್ರಸ್ತುತ ಸ್ವತ್ತು–ಸಿ.ಡಬ್ಲ್ಯೂ.ಐ.ಪಿ.ಗಳನ್ನು ಕಡಿಮೆಗೊಳಿಸಲಾಗಿರುತ್ತದೆ. ಅದಾಗ್ಯೂ, ಐ.ಎನ್.ಡಿ.ಎ.ಎಸ್. ಲೆಕ್ಕಪತ್ರಗಳ ಮೇಲಿನ ಪ್ರಭಾವವನ್ನು ಪ್ರಮಾಣೀಕರಿಸುವುದು ನಮ್ಮಿಂದ ಸಾಧ್ಯವಿರುವುದಿಲ್ಲ.	ಟಿಪ್ಪಣಿ ಸಂಖ್ಯೆ: 2.7ಎ ಗಮನಿಸಿ; ಇದರಲ್ಲಿ ನಿಖರವಾಗಿ ಉಲ್ಲೇಖಿಸಿದಂತೆ ಯಾವುದೇ ಅಳತೆ ಅಥವಾ ಅಂತಿಮ ಸಂಗ್ರಹಣೆಗೆ ಸಂಬಂಧಿಸಿದಂತೆ ಅನಿಶ್ಚಿತತೆ ಕಂಡುಬಂದಲ್ಲಿ ಆದಾಯ ಗುರುತಿಸುವಿಕೆಯನ್ನು ಅನಿಶ್ಚಿತತೆ ಬಗೆಹರಿಸುವವರೆಗೆ ಮುಂದೂಡಲಾಗುತ್ತದೆ.
12	ಕೆಲವು ಕಡ್ಡಾಯವಾದ ಶಾಸನಬದ್ಧ ಅವಶ್ಯಕತೆಗಳು ಅಂದರೆ, ಕೆಲಸದ ಬಿಲ್‌ಗಳು, ಸರಬರಾಜು ಬಿಲ್‌ಗಳು, ಮುಖ್ಯ ಕಛೇರಿಯ ವೆಚ್ಚಗಳು ಮತ್ತು ಇತ್ಯರ್ಥಗೊಳಿಸಿದ ಹಾಗೂ ವಿತರಣೆಗೊಂದ ದಾವೆಗಳ ಅನುಸರಣೆಯಲ್ಲಿ ಇಲ್ಲದಿರುವ ಕಾರಣಗಳಿಂದ ಕಂಪನಿಯು ಹೊಣೆಗಾರಿಕೆ, ದಂಡ ಮತ್ತು ಬಡ್ಡಿ ಇತ್ಯಾದಿಗಳನ್ನು ಒದಗಿಸಿರುವುದಿಲ್ಲ	ಅನುಸರಣೆಯಲ್ಲಿ ಇಲ್ಲದ ಗುರುತಿನ ಹೊಣೆಗಾರಿಕೆಯನ್ನು ಸೇವಾ ತೆರಿಗೆಯಲ್ಲಿ ಒದಗಿಸಲಾಗಿದೆ.
13	(i) ಲೆಕ್ಕಪತ್ರಗಳ ಪುಸ್ತಿಕೆಗಳ ಅನುಸಾರ ಅನುದಾನದ ಬಳಕೆ (ಭೂಮಿ ಕಾರ್ಯ ಮತ್ತು ಸ್ಥಾಪನೆಗಳೆರಡೂ) ಬಂಡವಾಳ ಪ್ರಗತಿ ವರದಿ (ವಿಭಾಗಗಳಲ್ಲಿ) ಮತ್ತು ಬಳಕೆ ಪತ್ರದ ಸಾರಾಂಶದ (ಎಸ್.ಎಲ್.ಎ.ಒ) ಜೊತೆಗೆ ಪೂರ್ಣವಾಗಿ ಹೊಂದಾಣಿಕೆ ಇರುವುದಿಲ್ಲ. ಇಂತಹ ಹೊಂದಾಣಿಕೆಗಳ ಅನುಪಸ್ಥಿತಿಯಲ್ಲಿ ಅನೇಕ ಪ್ರಕ್ರಿಯೆಗಳ/ವಿಧಾನಗಳ ಅಂತಿಮಗೊಳಿಸುವಿಕೆ ಉದಾಹರಣೆಗೆ ಭೂಸ್ವಾದೀನ ತೀರ್ಪು/ಒಪ್ಪಿಗೆ ತೀರ್ಪು/ಬಡ್ಡಿ ಇತ್ಯಾದಿ ಹಾಗೂ ಐ.ಎನ್.ಡಿ.ಎ.ಎಸ್. ಲೆಕ್ಕಪತ್ರಗಳ ಮೇಲಿನ ಪ್ರಭಾವ ಖಚಿತಗೊಳಿಸಲು ಸಾಧ್ಯವಿರುವುದಿಲ್ಲ.	ಅನುದಾನದ ಬಳಕೆಯನ್ನು ವರ್ಷಾರಂಭದಲ್ಲಿ ಪ್ರತ್ಯೇಕ ಯೋಜನೆ/ಕಾರ್ಯಗಳಿಗೆ ಹಂಚಿಕೆ ಮಾಡಿದ ಆಧಾರದ ಮೇಲೆ ಬಳಕೆ ಮಾಡಲಾಗಿರುತ್ತದೆ.
	(ii) ಭೂಸ್ವಾಧೀನ ನಿಯಂತ್ರಣದ ಅನುಪಸ್ಥಿತಿ, ಒಟ್ಟು ಅಸಮರ್ಪಕ ಸಮನ್ವಯ, ಸಾರವಿಲ್ಲದ ದಾಖಲಾತಿಗಳು, ವಿಭಾಗಗಳಿಗೆ ಜಾಗದ ವರ್ಗಾವಣೆಗಳ ಅನುಚಿತ ಲೆಕ್ಕಾಚಾರ, ಹೊಂದಾಣಿಕೆಯಾಗದ ಸಾಲದ ಬಾಕಿ, ವಿಶೇಷ ಭೂಸ್ವಾಧೀನಾಧಿಕಾರಿಗಳ ಪುಸ್ತಿಕೆಗಳೊಂದಿಗೆ ಹೊಂದಾಣಿಕೆಯಾಗಿರುವುದಿಲ್ಲ ಎಂಬ ಅಂಶಗಳನ್ನು ಹಣಕಾಸಿನ ನಮೂದುಗಳನ್ನುಭೂಸ್ವಾಧೀನಕ್ಕೆ ಸಂಬಂಧಿಸಿದಂತೆ ಗಮನಿಸಲಾಯಿತು.	ಪ್ರಸ್ತುತ ವಿಧಾನವನ್ನು ವಿಮರ್ಶಿಸಲಾಗುವುದು ಹಾಗೂ ಅಗತ್ಯ ಕಂಡುಬಂದಲ್ಲಿ ತಿದ್ದುಪಡಿ ಮಾಡಲಾಗುವುದು.
14	ಎ) ಕಂಪನಿಯು, ಕರ್ನಾಟಕ ಸರ್ಕಾರದಿಂದ ರೂ.1,34,156/– ಲಕ್ಷಗಳನ್ನು (ಕಳೆದ ವರ್ಷ ರೂ.1.97.141/– ಲಕ್ಷಗಳು) ಇಕ್ವೀಟಿ ಹಣವಾಗಿಪಡೆದಿರುತ್ತದೆ. ಹಾಗೂ ಇದನ್ನು ಷೇರು ಅರ್ಜಿಗಳ ಬಾಕಿ ಹಣ ಹಂಚಿಕೆಯಲ್ಲಿ ಬಹಿರಂಗಪಡಿಸಿರುತ್ತದೆ. ಅದಾಗ್ಯೂ ಕಂಪನಿ ಕಾಯ್ದೆ 2013 ಮತ್ತು ಇದರ ಉಪಬಂಧಗಳನ್ನು ಅನುಸರಿಸುತ್ತಿಲ್ಲ ಹಾಗೂ ಈ ಹಣವನ್ನು ಗೊತ್ತುಪಡಿಸಿದ ಬ್ಯಾಂಕ್ ಖಾತೆಯಲ್ಲಿ ನಿರ್ವಹಿಸಲಾಗಿಲ್ಲ. (ಟಿಪ್ಪಣಿ ಸಂಖ್ಯೆ: 15(2) ಗಮನಿಸಿ)	ಕಂಪನಿಯು ಷೇರುಗಳ ಹಂಚಿಕೆಯನ್ನು ಆಹ್ವಾನಿಸಿರುವುದಿಲ್ಲ. ಸರ್ಕಾರವು ನಿಧಿಯನ್ನು ಇಕ್ವಿಟಿ ರೂಪದಲ್ಲಿ ಹೂಡಿಕೆಯಾಗಿ ಕಾಮಗಾರಿಗಳನ್ನು ಕೈಗೊಳ್ಳಲು ನೀಡಿರುತ್ತದೆ. ಸರ್ಕಾರದಿಂದ ಪಡೆದ ಇಂತಹ ನಿಧಿಯನ್ನು ಷೇರು ಹಂಚಿಕೆ ಹಣ ಎಂದು ತೋರಿಸಲಾಗಿದೆ ಹಾಗೂ ಇದಕ್ಕೆ ಕಂಪನಿ ಕಾಯ್ದೆ 2013 ರ ಉಪಬಂಧ ಈ ವ್ಯವಹಾರಕ್ಕೆ ಅನ್ವಯಿಸುವುದಿಲ್ಲ.
	ಬಿ) ಕಂಪನಿ ಕಾಯ್ದೆ 2013 ರ ಪರಿಚ್ಛೇದ 46(2) ರಡಿ ಷೇರು ಅರ್ಜಿಗಳ ಹಣವನ್ನು ಸ್ವೀಕೃತ ದಿನಾಂಕದಿಂದ 60 ದಿನಗಳೊಳಗೆ ಹಂಚಿಕೆ ಮಾಡಬೇಕಾಗಿದೆ. ಈ ಅಗತ್ಯವು ಅನುಸರಣೆಯಲ್ಲಿರುವುದಿಲ್ಲ.	

15	ಎ) 2017–18ನೇ ಸಾಲಿನಲಿ ಕಂಪನಿಯು ಸೇವಾ ತೆರಿಗೆ ಇಲಾಖೆಯಿಂದ ಬೇಡಿಕೆ ಸೂಚನೆ ರೂ.3.73 ಕೋಟಿಗಳಿಗೆ ಸ್ವೀಕರಿಸಿರುತ್ತದೆ. ತದನಂತರ ಸೇವಾ ತೆರಿಗೆ ಇಲಾಖೆಯು ಬ್ಯಾಂಕ್ ಖಾತೆಯನ್ನು ವಶಪಡಿಸಿಕೊಂಡು ರೂ.2.00 ಕೋಟಿ ಹಣವನ್ನು ನಗದೀಕರಿಸಿಕೊಳ್ಳಲಾಗಿದೆ. ಕಂಪನಿ ಹೇಳಿಕೆ ಪ್ರಕಾರ ಸೇವಾ ತೆರಿಗೆ ಇಲಾಖೆಗೆ ಮನವಿ ಸಲ್ಲಿಸಬೇಕಾಗಿರುತ್ತದೆ. ಈ ಮೇಲಿನ ನಗದು ಹಣವನ್ನು ಶಾಸನಬದ್ಧ ಅಧಿಕಾರಿಗಳೊಂದಿಗಿರುವ ಠೇವಣಿ ಎಂದು ಲೆಕ್ಕಚಾರ ಮಾಡಲಾಗಿದೆ. ಲೆಕ್ಕಪತ್ರಗಳ ಪುಸ್ತಿಕೆಯಲ್ಲಿ ಸೂಕ್ತ ನಿಬಂಧನೆ ಮಾಡಲಾಗಿದೆ. ಆದ್ದರಿಂದ ಸದರಿ ಮೊತ್ತವನ್ನು ಅನಿಶ್ಚಿತ ಹೊಣೆಗಾರಿಕೆಯಲ್ಲಿ ಬಹಿರಂಗಪಡಿಸುವ ಅವಶ್ಯಕತೆ ಇರುವುದಿಲ್ಲ. ಬಿ) ರೂ.35.97 ಕೋಟಿಯ ಕಂಪನಿ ವಿರುದ್ಧದ ದಾವೆಯನ್ನು ಸಾಲ ಎಂದು ಸ್ವೀಕರಿಸಿರುವುದಿಲ್ಲ. ಈ ಅಂಶವನ್ನು ಲೆಕ್ಕಪತ್ರಗಳ ಟಿಪ್ಪಣಿ ಸಂಖ್ಯೆ: 30ರಲ್ಲಿ ಬಹಿರಂಗಪಡಿಸಿರುವುದಿಲ್ಲ.(ಅನಿಶ್ಚಿತ ಹೊಣೆಗಾರಿಕೆಗಳು) 31–03–2019 ರ ದಿನದಂದು.	ಪ್ರಮಾದವಶಾತ್, ಸದರಿ ಮೊತ್ತವನ್ನು 31–03–2019 ರ ದಿನದಂದು ಅನಿಶ್ಚಿತ ಹೊಣೆಗಾರಿಕೆಗಳಲ್ಲಿ ಒಳಪಡಿಸಲಾಗಿರುತ್ತದೆ. ಆದ್ದರಿಂದ ಕಂಪನಿಯ ಕಾರ್ಯ ಫಲಿತಾಂಶಗಳಲ್ಲಿ ಪ್ರಭಾವ ಬೀರಿರುವುದಿಲ್ಲ. ವಾರ್ಷಿಕ ವರದಿಯನ್ನು ಮುದ್ರಿಸುವ ವೇಳೆಯಲ್ಲಿ ಕೈತಪ್ಪನ್ನು ಸರಿಪಡಿಸಲಾಗುವುದು.
16	ಕಂಪನಿಯು ದಿ:20–06–2016 ರಿಂದ ದಿನಾಂಕ: 30–09–2018 ವರೆಗಿನ ಅವಧಿಗೆ ಕೆ.ಎಸ್.ಐ.ಎಸ್.ಎಫ್. ರವರು ಕೆ.ಆರ್.ಎಸ್. ನಲ್ಲಿ ನೀಡಿದ ಭದ್ರತಾ ಸೇವೆ ನಿರ್ವಹಿಸಿದ್ದಕ್ಕಾಗಿ ರೂ.7.50 ಕೋಟಿಗಳ (ಕಳೆದ ವರ್ಷ ರೂ.5.47 ಕೋಟಿ) ಹಕ್ಕನ್ನು ಪಡೆದಿರುತ್ತದೆ. ಕಂಪನಿಯು 6 ತಿಂಗಳು ಅಂದರೆ, ದಿನಾಂಕ:01–10–2018 ರಿಂದ 31–03–2019ರವರೆಗೆ ಲೆಕ್ಕಪತ್ರದಲ್ಲಿ ಇದನ್ನು ಹೊಣೆಗಾರಿಕೆಯಾಗಿ ನೀಡಿರುವುದಿಲ್ಲ. ಹೀಗಾಗಿ ಹೊಣೆಗಾರಿಕೆಯು ಕಡಿಮೆಯಾಗಿರುತ್ತದೆ.	ಕಂಪನಿಯು ಕೆ.ಎಸ್.ಐ.ಎಸ್.ಎಫ್. ರವರು ನೀಡಿದ ಭದ್ರತಾ ಸೇವಾ ಶುಲ್ಕದ ಮೇಲೆ ವಿಭಜನೆ ತೆಗೆದುಕೊಳ್ಳಬೇಕಿರುತ್ತದೆ.
17	ಎ) ಲೆಕ್ಕಪರಿಶೋಧಕರು ಮೈಸೂರಿನ ಕೆ.ಆರ್.ಎಸ್. ಅಣೆಕಟ್ಟನ್ನು ಪರಿಶೋಧನೆಗಾಗಿ ಭೇಟಿ ನೀಡಿದಾಗ, ಕಂಪನಿಯು ಪ್ರವೇಶ ಶುಲ್ಕ ಹಾಗೂ ಇತರೆ ಶುಲ್ಕಗಳನ್ನು ಸಂಗ್ರಹಿಸಿದ್ದು, ಈ ಶುಲ್ಕಗಳಿಗೆ ದಿನಾಂಕ 01–07–2017 ರಿಂದ ಜಾರಿಗೆ ಬಂದ ಜಿ.ಎಸ್.ಟಿ.ಯು ಅನ್ವಯಿಸಿದರೂ ಅಳವಡಿಸಿಕೊಂಡಿರುವುದಿಲ್ಲ. ನಮ್ಮ ವಿಚಾರಣೆಯಲ್ಲಿ ಇಂತಹ ಯಾವುದೇ ಶುಲ್ಕಗಳನ್ನು ಸಂಗ್ರಹಿಸಿರುವುದಿಲ್ಲ. ಅದಾಗ್ಯೂ, ವರ್ಷದಲ್ಲಿ ಜಿಎಸ್‌ಟಿ ನಿಬಂಧನೆ ರೂ.2,40,68,244.11 ಗಳನ್ನು ದಿ: 01–07–2017 ರಿಂದ 31–03–2019ರವರೆಗೆ ಲೆಕ್ಕಪತ್ರಗಳ ಪುಸ್ತಿಕೆಯಲ್ಲಿ ದಾಖಲಿಸಲಾಗಿದೆ. ಅಣೆಕಟ್ಟು ಸಮೀಕ್ಷೆಗೆ ಸಂಬಂಧಿಸದ ಜಿಎಸ್‌ಟಿ ಹೊಣೆಗಾರಿಕೆ ಮತ್ತು ಜೆ.ಎಲ್.ಆರ್.ನ ಬಾಡಿಗೆ ರಶೀದಿಗಳ ವಿವರಗಳನ್ನು ಒದಗಿಸಿರುವುದಿಲ್ಲ. ಇದು 31–03–2019ರ ದಿನದಂದು ಪಾವತಿಗೆ ಒಳಪಟ್ಟಿರುವುದಿಲ್ಲ. ಬಿ) ಈ ಮೇಲೆ ತಿಳಿಸಿರುವ ಜಿಎಸ್‌ಟಿ ಹೊಣೆಗಾರಿಕೆಯನ್ನು ಪ್ರತ್ಯೇಕವಾಗಿ ಸಂಗ್ರಹಿಸಿರುವುದಿಲ್ಲ ಎನ್ನುವುದನ್ನು ಗಮನಿಸಬಹುದಾಗಿದೆ. ಆದ್ದರಿಂದ ಮೇಲಿನ ನಿಬಂಧನೆಯನ್ನು ಆದಾಯ ಖಾತೆಯಿಂದ ಹಿಂದಿನ ವರ್ಷವನ್ನು (01–07–2017 ರಿಂದ 31–03–2018ವರೆಗೆ) ಸೇರಿದಂತೆ ವ್ಯಯ ಮಾಡಿ ರಚಿಸಲಾಗಿದೆ. ಹಿಂದಿನ ವರ್ಷದ ಮೊತ್ತವನ್ನು ಖಚಿತಪಡಿಸಲು ಸಾಧ್ಯವಿರುವುದಿಲ್ಲ.	ಅಣೆಕಟ್ಟಿನ ಭೇಟಿ ನೀಡಿದ ಶುಲ್ಕವು ಜಿಎಸ್‌ಟಿಯನ್ನು ಅಳವಡಿಸುವ ಮುನ್ನ ನಿಗಧಿಪಡಿಸಲಾಗಿರುತ್ತದೆ. ಹೀಗಾಗಿ ಶುಲ್ಕದ ಸಂಗ್ರಹಣೆಯಲ್ಲಿ ಜಿಎಸ್‌ಟಿ ಹಣವನ್ನು ಪ್ರತ್ಯೇಕವಾಗಿ ತೋರಿಸಿರುವುದಿಲ್ಲ. ಅಧಿಕಾರಿಗಳಿಗೆ ಅನ್ವಯವಾಗುವ ಜಿಎಸ್‌ಟಿಯನ್ನು ರವಾನಿಸಲು ಕ್ರಮಕೈಗೊಳ್ಳಲು ಪ್ರಾರಂಭಿಸಲಾಗಿದೆ.
18	ಕಂಪನಿಯ ಜಂಗಲ್ ಲಾಡ್ಜ್ಸ್ ಖಾತೆಯನ್ನು ಪರಿಶೀಲಿಸಿದಾಗ ದಿನಾಂಕ: 31–03–2019 ಗೆ ಬರಬೇಕಾದ ಬಾಕಿ ರೂ. 2.46 ಕೋಟಿಗಳಾಗಿರುತ್ತದೆ (ಕಳೆದ ವರ್ಷ ರೂ.1.90 ಕೋಟಿಗಳು). ವರ್ಷದಲ್ಲಿ ಕಂಪನಿಯು ರೂ.56.66 ಲಕ್ಷಗಳ (ಕಳೆದ ವರ್ಷ ರೂ.1.97 ಕೋಟಿ) ಹೆಚ್ಚುವರಿ ಸಾಲವನ್ನು ಪಡೆದಿದ್ದು, ಅದರ ವಿವರಗಳನ್ನು ಒದಗಿಸಿರುವುದಿಲ್ಲ. ಕಳೆದ ವರ್ಷದ ರೂ.7.00 ಲಕ್ಷಗಳನ್ನು ಕಡಿಮೆಗೊಳಿಸುವಿಕೆಯು ಪ್ರಸ್ತುತ ವರ್ಷದಲ್ಲಿಯೂ ಮುಂದುವರೆದಿರುತ್ತದೆ.	ಜಂಗಲ್ ಲಾಡ್ಜ್ಸ್ ಖಾತೆಯನ್ನು ಸರಿಪಡಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು.

19	ವಿದ್ಯುತ್ ವೆಚ್ಚಗಳ ಬಾಕಿ ಪಾವತಿಯು 6 ತಿಂಗಳಿಗಿಂತ ಹೆಚ್ಚಾಗಿದ್ದು, ಸದರಿ ಅಂಶವನ್ನು ಲೆಕ್ಕಪತ್ರದ ಪುಸ್ತಿಕೆಯಲ್ಲಿ ಒದಗಿಸಿರುವುದಿಲ್ಲ. ಹೀಗಾಗಿ ವೆಚ್ಚಗಳು ಕಡಿಮೆ ಇದ್ದು ಮತ್ತು ಹೊಣೆಗಾರಿಕೆಗಳು ಕಡಿಮೆಯಾಗಿರುತ್ತದೆ. ಒಟ್ಟಾರೆಯಾಗಿ, ಬಾಕಿ ಪಾವತಿಯನ್ನು ಖಚಿತಪಡಿಸಲು ಸಾಧ್ಯವಿರುವುದಿಲ್ಲ.	ವಿದ್ಯುತ್ ವೆಚ್ಚಗಳ ಮೇಲಿನ ಬಾಕಿ ಇರುವ ಹೊಣೆಗಾರಿಕೆಯನ್ನು ಖಚಿತಪಡಿಸುವ ಮಟ್ಟಿಗೆ ಒದಗಿಸಲಾಗಿರುತ್ತದೆ.
20	ಕಂಪನಿಯು (ಕಾರ್ಯಪಾಲಕ ಇಂಜಿನಿಯರ್, ರಾಮನಗರ ವಿಭಾಗ) ಹಿಂದಿನ ವರ್ಷದಲ್ಲಿ (ಉಲ್ಲೇಖ ಸಂಖ್ಯೆ:37953/2001) ರೂ.82.43 ಲಕ್ಷಗಳನ್ನು ಕೃಪಾಲಿನಿ ಅರಸ್, ಮೈಸೂರು ರವರಿಂದ ವಸೂಲಿ ಮಾಡಲು ನ್ಯಾಯಾಲಯದ ಆದೇಶವನ್ನು ಪಡೆದಿರುತ್ತದೆ. ವಸೂಲಿ ಮಾಡಬೇಕಾದ ಮೊತ್ತವನ್ನು ಲೆಕ್ಕಪತ್ರಗಳ ಪುಸ್ತಿಕೆಯಲ್ಲಿ ದಾಖಲಿಸಿರುವುದಿಲ್ಲ. ಹೀಗಾಗಿ, ಅಪ್ರಸ್ತುತ ಸ್ವತ್ತುಗಳು ಕಡಿಮೆಯಾಗಿರುತ್ತದೆ.	ವಸೂಲಾತಿ ವಿಧಾನವನ್ನು ವಿಮರ್ಶಿಸಲಾಗುವುದು ಮತ್ತು ಅಗತ್ಯ ಕ್ರಮಕೈಗೊಳ್ಳಲಾಗುವುದು.
21	ಕಂಪನಿ ಕಾಯ್ದೆ 2013ರ ಪರಿಚ್ಛೇದ 128(1) ರಡಿ ಲೆಕ್ಕಪತ್ರಗಳ ಪುಸ್ತಿಕೆಗಳನ್ನು ಸಂಚಯದ ಆಧಾರದ ಮೇಲೆ ಮತ್ತು ದ್ವಿನಮೂದು ವ್ಯವಸ್ಥೆ ಅನುಸಾರ ನಿರ್ವಹಣೆ ಮಾಡಬೇಕಾಗಿದ್ದು, ಇಲ್ಲವಿದ್ದಲ್ಲಿ ಪುಸ್ತಿಕೆಗಳ ನಿರ್ವಹಣೆ ಮಾಡಿರುವುದಿಲ್ಲ ಎಂದು ಪರಿಗಣಿಸಲಾಗಿದೆ. ಮಾಹಿತಿ ಮತ್ತು ಗಮನಾರ್ಹ ಲೆಕ್ಕಪತ್ರ ಕಾರ್ಯ ನೀತಿ ಟಿಪ್ಪಣಿ ಸಂಖ್ಯೆ:2.1 ರ ಹೇಳಿಕೆಯಂತೆ ಹಣಕಾಸಿನ ಲೆಕ್ಕಪತ್ರಗಳನ್ನು ಐ.ಎನ್.ಡಿ.ಎ.ಎಸ್. ಅಡಿ ಐತಿಹಾಸಿಕ ವೆಚ್ಚ ಸಂಪ್ರದಾಯದ ಅನುಸಾರ ತಯಾರಿಸಲಾಗಿದೆ. ಆದರೆ ಕಂಪನಿಯು ವ್ಯವಹಾರಿಕವಾಗಿ ವಿದ್ಯುತ್ ವೆಚ್ಚಗಳಗಳ ಪಾವತಿ, ಕೆ.ಎಸ್.ಐ.ಎಸ್.ಎಫ್.ಗೆ ಪಾವತಿಸುವ ಮೊತ್ತಗಳು ನಗದು ಆಧಾರದ ಮೇಲೆ ಗುರುತಿಸಲಾಗಿದ್ದು, ಇದು ಕಂಪನಿ ಕಾಯ್ದೆ 2013 ಪರಿಚ್ಛೇದ 128(1) ರಡಿ ಸಂಚಯ ಆಧಾರದ ಲೆಕ್ಕಾಚಾರದ ವಿರುದ್ಧವಾಗಿರುತ್ತದೆ.	ಮಾಹಿತಿ ಮತ್ತು ಗಮನಾರ್ಹ ಲೆಕ್ಕಪತ್ರ ಕಾರ್ಯ ನೀತಿ ಟಿಪ್ಪಣಿ ಸಂಖ್ಯೆ:2.1 ರಲ್ಲಿಲೆಕ್ಕಪತ್ರಗಳನ್ನು ತಯಾರಿಸುವ ವಿಧಾನವನ್ನು ನಿಖರವಾಗಿ ಹೇಳಿರುತ್ತದೆ.
22	ಕರ್ನಾಟಕ ಗ್ರಾಮೀಣ ಮೂಲಭೂತ ಸೌಕರ್ಯ ಅಭಿವೃದ್ಧಿ ನಿಯಮಿತ (ಕೆ.ಆರ್.ಐ.ಡಿ.ಎಲ್) ಮತ್ತು ನಿರ್ಮಿತಿ ಕೇಂದ್ರದಿಂದ ನಿರ್ವಹಿಸಲ್ಪಟ್ಟ ಕೆಲಸಗಳ ಉಸ್ತುವಾರಿ/ಅಳತೆ ಮಾಡುವ ವ್ಯವಸ್ಥೆಯು ಕಂಪನಿಯಲ್ಲಿರುವುದಿಲ್ಲ. ವೆಚ್ಚಗಳನ್ನು ಏಜನ್ಸಿ ಸಲ್ಲಿಸಿದ ಬಳಕೆ ಪ್ರಮಾಣಪತ್ರದ ಆಧಾರದ ಮೇಲೆ ಯಾವುದೇ ಗಣನೀಯ ದಾಖಲೆಗಳು ಅಂದರೆ, ಅಮೂರ್ತ ಅಳತೆ ಪುಸ್ತಕಗಳು, ಆರ್.ಎ.ಬಿಲ್‌ಗಳ ಪ್ರತಿಗಳು, ಕೆಲಸಗಳ ನಿರ್ವಹಣೆಗೆ ಸಂಬಂಧಿಸಿದ ಪೂರ್ಣಗೊಂಡ ಪ್ರಮಾಣಪತ್ರ ಇತ್ಯಾದಿಗಳನ್ನು ಕಾಯ್ದಿರಿಸಲಾಗಿದೆ. ಕಂಪನಿಯು ಇಂತಹ ಕೆಲಸಗಳನ್ನು ಏಜನ್ಸಿ ಮುಖೇನ ನಿರ್ವಹಣೆಗೆ ಬಲವಾದ ವಿಧಾನಗಳನ್ನು ಕೈಗೊಳ್ಳಬೇಕು.	ಗಮನಿಸಿದೆ.
23	ಲೆಕ್ಕ ಪರಿಸರ ಮತ್ತು ತಂತ್ರಾಂಶ	
	ಎ) ಹಣಕಾಸಿನ ಲೆಕ್ಕಾಚಾರವನ್ನು ಟ್ಯಾಲಿ–ಅಕೌಂಟಿಂಗ್ ತಂತ್ರಾಂಶ– ಬಹುಬಳಕೆದಾರರ – ಬಹು ಸ್ಥಳ–ಇ. ಆರ್.ಪಿ.9 ವರ್ಷನ್ ಗಳ ಮುಖೇನ ತಯಾರಿಸಲಾಗಿದೆ. ಏಕ ಪ್ರಯೋಗಿಕ ಸಮತೋಲನವು ಮಾಹಿತಿಯನ್ನು ದಾಖಲಿಸಿದೆ ಎಂದು ಗೋಚರಿಸುತ್ತೆ ಆದಾಗ್ಯೂ ಕ್ರೋಡಿಕರಿಸಿದ ಪ್ರಯೋಗಿಕ ಸಮತೋಲನದಲ್ಲಿ ಕೆಲವು ಮುದ್ರಣ ದೋಷಗಳಿದ್ದು, ಅದರಿಂದ ಸಾಮನ್ಯ ಕಡತದಲ್ಲಿನ ಬಾಕಿಯು ಎರಡು ಬಾರಿ ಮುದ್ರಣಗೊಳ್ಳುತ್ತಿದೆ (ನಕಲು ದಾಖಲೆಗಳು). ಆದರೆ, ಈ ಮೇಲಿನವುಗಳ ಒಟ್ಟುಗೊಳಿಸುವಾಗ ಒಂದೇ ಲೆಕ್ಕದಲ್ಲಿ ಪರಿಗಣಿಸಲಾಗುತ್ತಿದೆ. ಈ ಪರಿಸ್ಥಿತಿಯನ್ನು ತುರ್ತಾಗಿ ಸರಿಪಡಿಸಬೇಕಿರುತ್ತದೆ.	ಗಮನಿಸಿದೆ.

	ಬಿ)ವಲಯ ಲೆಕ್ಕಪತ್ರ ಕೇಂದ್ರಗಳ ಅಸಮರ್ಪಕ ಲೆಕ್ಕಾಚಾರ ಜ್ಞಾನದ ಜೊತೆಗೆ ಪರಿಶೀಲನೆ ಮತ್ತು ನಿಯಂತ್ರಣಗಳ ಅನುಪಸ್ಥಿತಿ, ಆಧಾರಿತ ದಾಖಲೆಗಳ ಜೊತೆಗೆ ಹಣಕಾಸಿನ ದಾಖಲೆಗಳ ಅನರ್ಹ ರೀತ್ಯಾ ಊರ್ಜಿತಗೊಂಡಿರುವುದಿಲ್ಲ ಮತ್ತು ಮೇಲ್ವಿಚಾರಣೆ ಇಲ್ಲದ ಲೆಕ್ಕಾಚಾರವು ಹೊರಗುತ್ತಿಗೆಯವರಿಂದ ನಿರ್ವಹಿಸಲ್ಪಟ್ಟಿದೆ. ಆದ್ದರಿಂದ ಲೆಕ್ಕಪತ್ರಗಳ ತಪ್ಪು ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ. ಇದು ಲೆಕ್ಕಪತ್ರಗಳ ನ್ಯಾಯೋಚಿತ ಪ್ರಸ್ತುತಿಯ ಮೇಲೆ ಪ್ರಭಾವ ಬೀರುತ್ತದೆ.	ಗಮನಿಸಿದೆ.
	ಸಿ) ಎಲ್ಲ ವ್ಯವಹಾರಗಳ ಆಧಾರಿತ ದಾಖಲೆಗಳು / ಸಾಕ್ಷಿ ವಿಕೇಂದ್ರೀಕೃತ ರಚನೆಯಲ್ಲಿ ವಿಭಾಗ ಮತ್ತು ಉಪ ವಿಭಾಗಗಳಲ್ಲಿ ಲಭ್ಯವಿರುತ್ತದೆ. ಆದ್ದರಿಂದ ಇಂತಹ ಆಧಾರಿತ ದಾಖಲೆಗಳ ಪರಿಶೀಲನೆ ನಮ್ಮ ವ್ಯಾಪ್ತಿಗೆ ನಿರ್ಬಂಧಿತವಾಗಿತ್ತು.	ಗಮನಿಸಿದೆ.
24	ಎಸ್.ಸಿ.ಪಿ., ಎಸ್.ಡಿ.ಪಿ ಮತ್ತು ಎಸ್.ಟಿ.ಪಿ. ಕಾರ್ಯಗಳು ಟಿಪ್ಪಣಿ ಸಂಖ್ಯೆ: 14 ಗಮನಿಸಿ – ಇತರೆ ಪ್ರಸ್ತುತ ಸ್ವತ್ತುಗಳು – ಗುತ್ತಿಗೆದಾರರಿಗೆ ನೀಡಿದ ಮುಂಗಡ	ಅವಲೋಕನೆಯ ವಿಮರ್ಷೆಯ ನಂತರ ಅಗತ್ಯಕ್ರಮ ಕೈಗೊಳ್ಳಲಾಗುವುದು.
25	ಆಂತರಿಕ ಲೆಕ್ಕಪರಿಶೋಧನೆ ನಮಗೆ 2018–19ನೇ ಸಾಲಿನ ಆಂತರಿಕ ಲೆಕ್ಕಪರಿಶೋಧನೆ ವರದಿಗಳು ಲಭ್ಯವಾಗಿರುವುದಿಲ್ಲ.	2018–19ನೇ ಸಾಲಿನ ಆಂತರಿಕ ಲೆಕ್ಕಪರಿಶೋಧನೆ ವರದಿಗಳು ಪರಿಶೀಲನೆಗೆ ಲಭ್ಯವಿರುತ್ತದೆ.
26	ಶಾಸನಬದ್ಧ ಅನುಪಾಲನೆಗಳು ಅನನುಪಾಲನೆಗಳು, ಅಸಂಗತತೆಗಳು ಮತ್ತು ಕೊರತೆಗಳನ್ನು ಶಾಸನಬದ್ಧ ಅನುಪಾಲನೆಗಳಲ್ಲಿ ಸಾಮಾನ್ಯವಾಗಿ ಗಮಿನಿಸಲಾಗಿದೆ.	ಗಮನಿಸಿದೆ.
27	ಬ್ಯಾಂಕಿಂಗ್ ಮತ್ತು ಖಜಾನೆ	ಅವಲೋಕನೆಯ ವಿಮರ್ಷೆಯ ನಂತರ ಅಗತ್ಯಕ್ರಮ ಕೈಗೊಳ್ಳಲಾಗುವುದು.
28	ನೋಂದಾಯಿತ ಕಛೇರಿ, ಮೈಸೂರು ಮತ್ತು ಕಾರ್ಪೊರೇಟ್ ಕಛೇರಿ, ಬೆಂಗಳೂರು ನಲ್ಲಿ ಉಂಟಾದ ಅಡಳಿತಾತ್ಮಕ ಮತ್ತು ಸಾಮಾನ್ಯ ಹೆಚ್ಚುವರಿ ವೆಚ್ಚ ರೂ.4.99 ಕೋಟಿ (ಕಳೆದ ವರ್ಷ ರೂ.9.12 ಕೋಟಿ) ಪ್ರಗತಿಯಲ್ಲಿರುವ ಮುಖ್ಯ ಕಾಮಗಾರಿಯ ವೆಚ್ಚದಲ್ಲಿ ಒಳಗೊಂಡಿರುತ್ತದೆ. ಹೀಗಾಗಿ ಪ್ರಗತಿಯಲ್ಲಿರುವ ಮುಖ್ಯ ಕಾಮಗಾರಿ, ಲಾಭ ಅಧಿಕವಾಗಿದ್ದು, ವೆಚ್ಚಗಳು ಕಡಿಮೆಯಾಗಿರುತ್ತದೆ.	ಟಿಪ್ಪಣಿ ಸಂಖ್ಯೆ: 2.03 ಗಮನಿಸಿ– ಕಂಪನಿಯು ಲೆಕ್ಕಪತ್ರದಲ್ಲಿ ಯೋಜನೆಗಳ ಬಂಡವಾಳೀಕರಣಕ್ಕೆ ಪೂರ್ಣಗೊಂಡ ವಿಧಾನವನ್ನು ಬಳಸಿಕೊಳ್ಳುವುದನ್ನು ಲೆಕ್ಕಪತ್ರ ಕಾರ್ಯನೀತಿಯಲ್ಲಿ ನಿಖರವಾಗಿ ತಿಳಿಸಿರುತ್ತದೆ.
29	ಟಿಪ್ಪಣಿ ಸಂಖ್ಯೆ: 26 ಗಮನಿಸಿ – ಸರ್ಕಾರದಿಂದ ಪಡೆದ ನಿರ್ವಹಣಾ ಅನುದಾನದಲ್ಲಿ ರೂ.60.00 ಲಕ್ಷಗಳು ಮೀನುಗಾರಿಕೆ ಇಲಾಖೆಯಿಂದ ಸ್ವೀಕೃತವಾಗಿರುತ್ತದೆ. ನಮ್ಮ ಅನಿಸಿಕೆಯ ಪ್ರಕಾರ, ಸದರಿ ಮೊತ್ತದ ನಿಖರತೆ ಹಾಗೂ ದೃಢೀಕರಣ ಬಾಕಿ ಇದ್ದು, ಇದನ್ನು ಹೊಣೆಗಾರಿಕೆ ಎಂದು ಲೆಕ್ಕಿಸಬೇಕಾಗಿರುತ್ತದೆ. ಆದಾಗ್ಯೂ ಆ ಮಟ್ಟಕ್ಕೆ ನಿರ್ವಹಣಾ ಅನುದಾನಗಳನ್ನು ಹೆಚ್ಚುವರಿಯಾಗಿ ಮತ್ತು ಹೊಣೆಗಾರಿಕೆಯನ್ನು ಕಡಿಮೆಗೊಳಿಸಲಾಗಿದೆ.	ಗಮನಿಸಿದೆ.

ಸಹಿ/–
ವ್ಯವಸ್ಥಾಪಕ ನಿರ್ದೇಶಕರು

ಸ್ಥಳ : ಬೆಂಗಳೂರು
ದಿನಾಂಕ: 30–12–2019

31ನೇ ಮಾರ್ಚ್ 2019ಕ್ಕೆ ಕೊನೆಗೊಂಡ ವರ್ಷಕ್ಕೆ ಕಾವೇರಿ ನೀರಾವರಿ ನಿಗಮ ನಿಯಮಿತ, ಮೈಸೂರು ಇವರ ಲೆಕ್ಕಪತ್ರಗಳ ಮೇಲೆ ಕಂಪನಿ ಕಾಯ್ದೆ 2013, ಪರಿಚ್ಛೇದ 143(6) (b)ರ ಅಡಿ ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾ ಮಹಾಲೇಖಪಾಲರ ಟೀಕೆಗಳು.

ಕಂಪನಿ ಕಾಯ್ದೆ 2013 ರ ಅನುಬಂಧದಂತೆ 31ನೇ ಮಾರ್ಚ್ 2019ರ ವರ್ಷಕ್ಕೆ ಕಾವೇರಿ ನೀರಾವರಿ ನಿಗಮ ನಿಯಮಿತ, ಬೆಂಗಳೂರು ಸಂಸ್ಥೆಯ ಹಣಕಾಸು ಪಟ್ಟಿಗಳನ್ನು ತಯಾರಿಸುವುದು ಈ ಸಂಸ್ಥೆಯ ಆಡಳಿತ ಮಂಡಳಿಯ ಕರ್ತವ್ಯವಾಗಿರುತ್ತದೆ. ಕಂಪನಿ ಕಾಯ್ದೆ 2013ರ ಪರಿಚ್ಛೇದ 139(5) ರ ಅನ್ವಯ ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾ ಲೆಕ್ಕಪರಿಶೋಧಕರು ನಿಗಮದ ಶಾಸನಬದ್ಧ ಲೆಕ್ಕಪರಿಶೋಧಕರನ್ನು ನೇಮಕ ಮಾಡಿದ್ದು, ಸ್ವತಂತ್ರವಾಗಿ ಲೆಕ್ಕಪರಿಶೋಧನಾ ಕಾರ್ಯವನ್ನು ಪರಿಚ್ಛೇದ 143 (10) ರ ಕಾಯ್ದೆಯನ್ವಯ ನಿರ್ವಹಿಸಿ ಇನ್‌ಸ್ಟಿಟ್ಯೂಟ್ ಆಫ್ ಚಾರ್ಟರ್ಡ್ ಅಕೌಂಟೆಂಟ್ಸ್ ಸಂಸ್ಥೆಯು ಅನುಮೋದಿಸಿರುವ ಲೇಖಾ ಕಾರ್ಯನೀತಿಗಳ ಅನುಸಾರ ವರದಿ ಮಾಡಿರುವುದಕ್ಕೆ ಸನ್ನದು ಲೆಕ್ಕಪರಿಶೋಧಕರು ಜವಾಬ್ದಾರರಾಗಿದ್ದು, ಈ ವಿಚಾರವನ್ನು ಸನ್ನದು ಲೆಕ್ಕಪರಿಶೋಧಕರು ತಮ್ಮ ವರದಿ 04.12.2019ಕ್ಕೆ ಪರಿಷ್ಕೃತ ವರದಿ ದಿನಾಂಕ : 26–12–2019ರಲ್ಲಿ ತಿಳಿಸಿರುತ್ತಾರೆ.

ನಾನು ಭಾರತದ ನಿಯಂತ್ರಕರು ಮತ್ತು ಮಹಾ ಲೆಕ್ಕಪರಿಶೋಧಕರ ಪರವಾಗಿ ಪರಿಚ್ಛೇಧ 143(6)(ಎ) ಅನುಸಾರ ಕಾವೇರಿ ನೀರಾವರಿ ನಿಗಮ ನಿಯಮಿತ, ಬೆಂಗಳೂರು ಇವರ ಮಾರ್ಚ್ 31, 2019ಕ್ಕೆ ಅಂತ್ಯಗೊಂಡ ಸಂಸ್ಥೆಯ ಆಡಿಟ್‌ನ್ನು ಸ್ವತಂತ್ರವಾಗಿ ನಿರ್ವಹಿಸಿದ್ದು, ಸನ್ನದು ಲೆಕ್ಕಪರಿಶೋಧಕರ ಕಾರ್ಯಟಿಪ್ಪಣಿಗಳ ಮೇಲೆ ಅವಲಂಭಿಸದೆ ಅವರ ಪೂರ್ವಭಾವಿ ಟೀಕೆಗಳು, ಸಂಸ್ಥೆಯ ಸಿಬ್ಬಂದಿ ಮತ್ತು ದಾಖಲೆಗಳಿಂದ ಕೆಲವು ಆಯ್ದ ಭಾಗಗಳಿಗೆ ಮಾತ್ರ ಸೀಮಿತಗೊಳಿಸಲಾಗಿದೆ.

ನಾನು ಮಾಡಿದ ಪೂರಕ ಲೆಕ್ಕಪರಿಶೋಧನಾ ಸಮಯದಲ್ಲಿ ಪ್ರಮುಖವಾದ ಲೆಕ್ಕಪರಿಶೋಧನಾ ವೀಕ್ಷಣೆಗಳನ್ವಯ, ಪರಿಚ್ಛೇಧ 143(6)(ಬಿ)ರಡಿ ಲೆಕ್ಕ ಪರಿಶೋಧನೆಯಲ್ಲಿ ವರದಿ ಮಾಡಲು ನನಗೆ ಯಾವುದೇ ಗಮನಾರ್ಹವಾದ ಟೀಕೆಗಳಾಗಲಿ ಅಥವಾ ಪೂರಕ ಟೀಕೆಗಳಾಗಲಿ ಕಂಡುಬಂದಿರುವುದಿಲ್ಲ.

ಭಾರತದ ನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ಪರವಾಗಿ

ಸಹಿ/–
(ಅನುಪ್ ಫ್ರಾನ್ಸಿಸ್ ಡಂಗ್‌ಡಂಗ್)
ಪ್ರಧಾನ ಮಹಾಲೇಖಪಾಲರು
(ಆರ್ಥಿಕ ಮತ್ತು ರಾಜಸ್ವ ಲೆಕ್ಕ ಪರಿಶೋಧನೆ)
ಕರ್ನಾಟಕ, ಬೆಂಗಳೂರು.

ಸ್ಥಳ : ಬೆಂಗಳೂರು
ದಿನಾಂಕ : 30–12–2019

ಆರ್.ಸಿ. ವೆಂಕಟೇಶ್‌ರಾವ್
ಬಿ.ಕಾಂ., ಎಫ್.ಸಿ.ಎಸ್.ಎಎಲ್.ಎಲ್.ಬಿ.,
ಕಂಪನಿ ಕಾರ್ಯದರ್ಶಿ, ಪ್ರಾಕ್ಟೀಸಿಂಗ್
ಪ್ರಮಾಣ ಪತ್ರ ಸಂಖ್ಯೆ: 2733.

ನ್ಯೂ ನಂ.20 (ಹಳೆಯ ನಂ.35), ಮಲ್ಲಿಕಾರ್ಜುನ ಟೆಂಪಲ್ ಸ್ಟ್ರೀಟ್,
ಬೆಂಗಳೂರು ಚಾಪ್ಟರ್ ಆಫ್ ಕಾಸ್ಟ್, ಅಕೌಂಟೆಂಟ್ಸ್ ಎದುರು,
ಬಸವನಗುಡಿ, ಬೆಂಗಳೂರು – 560 004.
Ph : 26616554 / 9845065943
E-mail : rcvenkateshrao@yahoo.co.in /rcvrao01@rediffmail.com

ನಂ: ಆರ್.ಸಿ.ವಿ/ಎಫ್–54/2018–19

ನಿರ್ದೇಶಕರ ಮಂಡಳಿಯ ವರದಿಯ ಅನುಬಂಧ
ನಮೂನೆ ಸಂಖ್ಯೆ: ಎಂ.ಆರ್.–3

ಕಾರ್ಯದರ್ಶಿಯ ಪರಿಶೋಧಕ ವರದಿ

31ನೇ ಮಾರ್ಚ್ 2019ರ ಆರ್ಥಿಕ ವರ್ಷಾಂತ್ಯಕ್ಕೆ ಕಂಪನಿ ಕಾಯ್ದೆ 2013 ಸೆಕ್ಷನ್ 204(1) ಮತ್ತು ಕಂಪನಿಗಳ ನಿಯಮ–9 (ಆಡಳಿತಾತ್ಮಕ ಸಿಬ್ಬಂದಿ ನೇಮಕಾತಿ ಮತ್ತು ಸಂಭಾವನೆ) ನಿಯಮಗಳು, 2014)

ಇವರಿಗೆ,
ಸದಸ್ಯರು,
ಕಾವೇರಿ ನೀರಾವರಿ ನಿಗಮ ನಿಯಮಿತ,
ಮೈಸೂರು–570 020.

ನಾನು ಕಾರ್ಯದರ್ಶಿಯ ಪರಿಶೋಧನೆಯನ್ನು ಕೈಗೊಂಡಿದ್ದೇನೆ, ಕಾವೇರಿ ನೀರಾವರಿ ನಿಗಮ ನಿಯಮಿತವು ಅನ್ವಯವಾಗುವ ಶಾಸನ ಬದ್ಧ ನಿಬಂಧನೆಗಳ ಅನುಸರಣಾ ವರದಿ ಮತ್ತುಉತ್ತಮ ಸಾಂಸ್ಥಿಕ ಆಚರಣೆಗಳನ್ನು ಅಭ್ಯಾಸ / ರೂಢಿ ಮಾಡಿಕೊಂಡಿದೆ. ಕಾರ್ಯದರ್ಶೀಯ ಲೆಕ್ಕ ಪರಿಶೋಧನೆಯನ್ನು ಭಾರತದ ಕಂಪನಿ ಕಾರ್ಯದರ್ಶಿಗಳ ಸಂಸ್ಥೆಯಿಂದ ನೀಡಿರುವ ನಿರ್ದೇಶನ ಮತ್ತು ಸೂಚನೆಗಳ ಪ್ರಕಾರ ಕೈಗೊಂಡಿರುತ್ತೇನೆ. (ಶಾಸನಬದ್ಧ ಸಂಸ್ಥೆ ಕಂಪನಿ ಕಾರ್ಯದರ್ಶಿಗಳ ಕಾಯಿದೆ 1980ರ ಅನ್ವಯ ಸ್ಥಾಪಿಸಲ್ಪಟ್ಟಿದೆ), ನಮಗೆ ಕಾರ್ಪೋರೇಟ್ ಮೌಲ್ಯಮಾಪನ ಒಂದು ಸಮಂಜಸವಾದ ಆಧಾರವನ್ನು ಒದಗಿಸಿದ ರೀತಿಯಲ್ಲಿ ಶಾಸನಬದ್ಧ ಅನುಸರಣಾ ವರದಿ ಮತ್ತು ನಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಲಾಗಿದೆ.

ನಮ್ಮ ಪರಿಶೀಲನೆಯಲ್ಲಿ ನಿಗಮದ ಪುಸ್ತಕಗಳು ಪತ್ರಿಕೆಗಳು ನಡವಳಿ, ಮಿನ್ಯೂಟ್ ಪುಸ್ತಕ, ನಮೂನೆಗಳು, ಸಲ್ಲಿಸಿದ ಆದಾಯದ ವಿವರಗಳು ಮತ್ತು ಇತರೆ ದಾಖಲೆಗಳನ್ನು ನಿಗಮವು ನಿರ್ವಹಿಸಿರುತ್ತದೆ. ಮತ್ತು ಕಲಂ 49ರ ಅನ್ವಯ ಒಪ್ಪಂದಗಳ ಪಟ್ಟಿ ಮತ್ತು ನಿಗಮವು ನೀಡಿದ ಮಾಹಿತಿ, ನಿಗಮದ ಅಧಿಕಾರಿಗಳು ಮತ್ತು ಪ್ರತಿನಿಧಿಗಳು ಕಾರ್ಯದರ್ಶೀಯ ಲೆಕ್ಕಪರಿಶೋಧನೆ ಕೈಗೊಳ್ಳುವಾಗ, ನಾವು ಈಗ ವರದಿಮಾಡುವುದೇನೆಂದರೆ, ನಮ್ಮ ಅಭಿಪ್ರಾಯ ಮತ್ತು ನಮ್ಮ ಉತ್ತಮ ಮಾಹಿತಿ, ತಿಳುವಳಿಕೆ ಮತ್ತು ನಂಬಿಕೆಯ ಅನುಸಾರ, ವಿವರಣೆಗಳನ್ನು ನಮಗೆ ನೀಡಿದ ರೀತಿ ನಿಗಮದ ಆರ್ಥಿಕ ವರ್ಷ 31–03–2019ಕ್ಕೆ ಲೆಕ್ಕ ಪರಿಶೋಧನೆಯನ್ನು ಅನ್ವಯಿಸುವ ಶಾಸನಬದ್ಧ ನಿಬಂಧನೆಗಳ ಅನುಸಾರ ಪಟ್ಟಿಮಾಡಿದೆ. ನಿಗಮವು ಉತ್ತಮ ಆಡಳಿತ ಮಂಡಳಿಯ ನಡವಳಿಗಳು ಅನುಸರಣಾ ವರದಿ ಮತ್ತು ನಿರ್ವಹಿಸುವ ರೀತಿ ಮತ್ತು ವಿಷಯಗಳನ್ನು ಕುರಿತು ಈ ಮೂಲಕ ವರದಿ ಮಾಡಲಾಗುತ್ತದೆ.

ನಾನು ಪುಸ್ತಕಗಳನ್ನು, ಪತ್ರಿಕೆಗಳನ್ನು, ನಡವಳಿ ಪುಸ್ತಕವನ್ನು ನಮೂನೆಗಳು ಮತ್ತು ಆದಾಯ ತೆರಿಗೆ ಪಾವತಿ ದಾಖಲಾತಿಗಳನ್ನು ಮತ್ತು ನಿಗಮವು ನಿರ್ವಹಿಸಿದ ಇತರೆ ದಾಖಲೆಗಳನ್ನು ಪರಿಶೀಲಿಸಿರುತ್ತೇನೆ. ಕಾವೇರಿ ನೀರಾವರಿ ನಿಗಮ ನಿಯಮಿತವು ಆರ್ಥಿಕ ವರ್ಷ 31–03–2019ರ ಅಂತ್ಯಕ್ಕೆ ಅನ್ವಯಿಸುವ ನಿಯಮಾವಳಿಗಳೆಂದರೆ,

1. ಕಂಪನಿ ಅಧಿನಿಯಮ 2013 ಮತ್ತುಅದರಲ್ಲಿ ರೂಪಿಸಿರುವ ನಿಯಮಾವಳಿಗಳು.
2. ಸೆಕ್ಯೂರಿಟಿಸ್ ಕಾಂಟ್ರಾಕ್ಟ್ಸ್ (ರೆಗ್ಯುಲೇಷನ್) ಆಕ್ಟ್ಅಧಿನಿಯಮ 1956 ಮತ್ತು ಅದರಡಿಯಲ್ಲಿನ ನಿಯಮಗಳು.
3. ಡಿಪಾಸಿಟರೀಸ್ ಆಕ್ಟ್ 1996 (ಠೇವಣಿಗಳ ಅಧಿನಿಯಮ 1996) ಮತ್ತು ಅದರಡಿಯಲ್ಲಿನ ನಿಯಮಗಳೂ.
4. ಸೆಕ್ಯೂರಿಟೀಸ್ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾ ಆಕ್ಟ್ 1922ರ ನಿಯಮಗಳು ಕಂಪನಿಗೆ ಅನ್ವಯಿಸುವಂತೆ.
   a) ಸೆಕ್ಯೂರಿಟೀಸ್ ಎಕ್ಸ್‌ಚೇಂಜ್ ಅಂಡ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾ (ಷೇರುಗಳ ಸ್ವಾಧೀನ ಪಡೆಯುವಿಕೆ ಮತ್ತು ಷೇರುಗಳನ್ನು ತೆಗೆದುಕೊಳ್ಳುವಿಕೆ) ನಿಯಮಾವಳಿಗಳು 2011;
   b) ಸೆಕ್ಯೂರೀಟೀಸ್ ಅಂಡ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾ (ಪ್ರಾಹಿಬಿಷನ್ ಆಫ್ ಇನ್ ಸೈಡರ್ ಟ್ರೇಡಿಂಗ್) ನಿಯಮಾವಳಿಗಳು 1992

c) ಸೆಕ್ಯೂರೀಟೀಸ್ ಅಂಡ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾ (ನೋಂದಣಾಧಿಕಾರಿ ವಿತರಣೆ ಮತ್ತು ಷೇರುವರ್ಗಾವಣೆ ಪ್ರತಿನಿಧಿಗಳು) ನಿಯಮಾವಳಿ 1993. ನೋಂದಣಾಧಿಕಾರಿ ಮತ್ತು ಷೇರು ವರ್ಗಾವಣೆ ಪ್ರತಿನಿಧಿಗಳು ಷೇರುಗಳ ನೋಂದಣಿ ಮತ್ತು ಸಂಬಂಧಿತ ಸೇವೆಗಳನ್ನುಒದಗಿಸುತ್ತಾರೆ.

d) ಕಂಪನಿಯ ಅದರದೇ ಆದ ಪ್ರತ್ಯೇಕ ವೆಬ್‌ಸೈಟ್ ಇರುವುದಿಲ್ಲ. ಜಲ ಸಂಪನ್ಮೂಲ ಇಲಾಖೆ, ಕರ್ನಾಟಕ ಸರ್ಕಾರ ಅಡಿ ಮಾಹಿತಿಯನ್ನು ಕಂಪನಿಯು ತನ್ನ ಆರ್ಥಿಕ ಮಾಹಿತಿಗಳನ್ನು ಕಂಪನಿಯ ವೆಬ್ ಸೈಟ್‌ನಲ್ಲಿ ಅಳವಡಿಸಬೇಕಾಗಿರುತ್ತದೆ.

ನಾನು ಅನುಸರಣಾ ವರದಿಯನ್ನು ಅನ್ವಯಿಸುವ ಕಲಂನೊಂದಿಗೆ ಪರಿಶೀಲಿಸಿರುತ್ತೇನೆ.

i) ಕಂಪನಿಯು ಬಿ.ಜಿ.ಎಸ್.ಇ. ಫೈನಾನ್‌ಷಿಯಲ್ ಲಿಮಿಟೆಡ್ ಅನ್ನು ನೋಂದಣಾಧಿಕಾರಿಗಳು ಮತ್ತು ಷೇರು ವರ್ಗಾಯಿಸುವ ಪ್ರತಿನಿಧಿಗಳಾಗಿ ನೇಮಿಸುತ್ತದೆ. ನಿಗದಿತ ಪಾವತಿಸಬಹುದಾದ ಭದ್ರತಾ ಪರಿವರ್ತಿಸಲಾಗದ ತೆರಿಗೆಯುಕ್ತ ಬಾಂಡ್‌ಗಳ ಶ್ರೇಣಿ–II (ಡಿಬೆಂಚರ್‌ನ ರೀತಿಯಲ್ಲಿ) ಇನ್ನು ಮುಂದೆ ಸಾಲದ ಬಾಂಡ್‌ಗಳೆಂದು ಕರೆಯಲಾಗುತ್ತದೆ. ಕಂಪನಿಯು ಪಟ್ಟಿ ಮಾಡುವ ಒಪ್ಪಂದವನ್ನು ಬಾಂಬೆ ಸ್ಟಾಕ್‌ಎಕ್ಸ್‌ಚೇಂಜ್ ಲಿಮಿಟೆಡ್‌ನೊಂದಿಗೆ ಮಾಡಿಕೊಂಡಿದೆ.

ii) ಮಾಹಿತಿ ಹಕ್ಕು ಅಧಿನಿಯಮದ ಅನುಸರಣಾ ವರದಿ.
ಕಂಪನಿಯ ಸಾಲದ ಬಾಂಡ್‌ಗಳನ್ನು ಪಟ್ಟಿ ಮಾಡಿದೆ ಮತ್ತು ವ್ಯವಹರಣೆಗಾಗಿ SEBI / ಸೆಬಿಯಿಂದ ಅನುಮೋದನೆ ಪಡೆದಿದೆ. ಪರಿಶೀಲನಾ ಅವಧಿಯಲ್ಲಿ ನಿಗಮವು ಕಾಯ್ದೆ ನಿಯಮಾವಳಿ ನಿರ್ದೇಶನಗಳಿಗೆ ಅನುಸರಣೆಯನ್ನು ಸಲ್ಲಿಸಿದೆ.

iii) ಕಂಪನಿಯು ಅರ್ಧವಾರ್ಷಿಕ ಜಾಹೀರಾತು ಮತ್ತು ಕೆನರಾ ಬ್ಯಾಂಕ್ ಟ್ರಸ್ಟಿಯಾಗಿ ಅದರ ಮೂಲಕ ಸೆಬಿಗೆ (SEBI) ರಿಟರ್ನ್ಸ್‌ಗಳನ್ನು ಸಲ್ಲಿಸಿದೆ.

ನಾನು ಮುಂದುವರೆದು ವರದಿ ಮಾಡುವುದೇನೆಂದರೆ,

1. ನಿಗಮದ ನಿರ್ದೇಶಕ ಮಂಡಳಿಯು ಅಸ್ತಿತ್ವದಲ್ಲಿತ್ತು ಮತ್ತು ನಿರ್ದೇಶಕ ಮಂಡಳಿಯ ಬದಲಾವಣೆಗಳು ನಿಯಮಾನುಸಾರ ಕಾಯಿದೆ ಅನ್ವಯ ಕೈಗೊಳ್ಳಲಾಗಿರುತ್ತದೆ.

2. ನಿರ್ದೇಶಕ ಮಂಡಳಿ ಸಭೆಗೆ ಸೂಚನಾ ಪತ್ರಗಳನ್ನು ಸಕಾಲದಲ್ಲಿ ನೀಡಲಾಗಿತ್ತು. ಕಾರ್ಯಸೂಚಿ ಮತ್ತು ಕಾರ್ಯಸೂಚಿಗೆ ಟಿಪ್ಪಣಿಗಳೊಂದಿಗೆ ಸಲ್ಲಿಸಲಾಗಿತ್ತು. ಕಾರ್ಯಸೂಚಿಯ ಬಗ್ಗೆ ಮಾಹಿತಿ, ವಿವರಣೆ ಪಡೆಯಲು ಉತ್ತಮ ವ್ಯವಸ್ಥೆಯಿರುತ್ತದೆ. ಇದರಿಂದ ಅರ್ಥಪೂರ್ಣವಾಗಿ ಸಭೆಯಲ್ಲಿ ಭಾಗವಹಿಸುವಂತಾಗುತ್ತದೆ.

ನಾನು ಈ ಕೆಳಕಂಡ ಅಂಶಗಳನ್ನು ಪರಿಶೀಲಿಸಿರುವುದಿಲ್ಲ.

ಅನ್ವಯಿಸುವ ಆರ್ಥಿಕ ಕಾನೂನುಗಳು, ನೇರ ಮತ್ತು ಪರೋಕ್ಷ ತೆರಿಗೆ ಕಾನೂನುಗಳು, ಅದರಿಂದ ಅವುಗಳನ್ನು ಶಾಸನಬದ್ಧ ಹಣಕಾಸು ಲೆಕ್ಕಪರಿಶೋಧನೆ ಮತ್ತು ವೃತ್ತಿಪರರಿಂದ ಪರಿಶೀಲಿಸಬೇಕು.

ನಾನು ಮುಂದುವರೆದು ವರದಿ ಮಾಡುವುದೇನೆಂದರೆ, ಅಲ್ಲಿ ಸಾಕಷ್ಟು ಉತ್ತಮ ವ್ಯವಸ್ಥೆ ಮತ್ತು ಕಾರ್ಯ ನೀತಿಗಳು ಕಂಪನಿಯಲ್ಲಿದ್ದು, ಆರಂಭಿಸಬಹುದಾದ ಗಾತ್ರ ಮತ್ತು ಕಾರ್ಯಾಚರಣೆಯನ್ನೊಂದಿಗೆ ಕಂಪನಿಯು ಮೇಲ್ವಿಚಾರಣೆ ಮತ್ತು ಅನುಸರಣೆಯನ್ನು ಅನ್ವಯಿಸುವ ಕಾನೂನು, ನಿಯಮಗಳು, ನಿರ್ದೇಶನಗಳ ಮೂಲಕ ಮಾಡುತ್ತಿದೆ.

ಸಭೆಯ ನಡವಳಿ ಪುಸ್ತಕದಲ್ಲಿ ದಾಖಲಿಸಿದೆ ಮತ್ತು ಅಧ್ಯಕ್ಷರಿಂದ (ಚೇರ್‌ಮನ್‌ರಿಂದ) ಸಹಿ ಮಾಡಿದೆ ಮಂಡಳಿಯ ನಿರ್ಣಯಗಳು ಏಕಾಭಿಪ್ರಾಯವಾಗಿದೆ ಹಾಗೂ ಯಾವುದೇ ವ್ಯತಿರಿಕ್ತ ಅಭಿಪ್ರಾಯಗಳು ದಾಖಲಾಗಿರುವುದಿಲ್ಲ.

ನಾನು ಮುಂದುವರೆದು ವರದಿ ಮಾಡುವುದೇನೆಂದರೆ,

ಲೆಕ್ಕಪರಿಶೋಧನಾ ಅವಧಿಯಲ್ಲಿ ಕಂಪನಿಯು, ಕಂಪನಿ ನೋಂದಣಾಧಿಕಾರಿಗಳಿಂದ ವಾರ್ಷಿಕ ಸಾಮಾನ್ಯ ಸಭೆಯನ್ನು ಆರ್ಥಿಕ ವರ್ಷ 30ನೇ ಡಿಸೆಂಬರ್ 2019ರ ಒಳಗಾಗಿ ನಡೆಸಲು ಅನುಮೋದನೆಯನ್ನು ಎಸ್.ಆರ್.ಎನ್. ಆರ್ 14301584 ರಡಿ ಪಡೆದಿರುತ್ತದೆ.

ಕಂಪನಿಯು ಲಾಭ ಮತ್ತು ನಷ್ಟದ ತಃಖ್ತೆಯನ್ನು ಸಿದ್ಧಪಡಿಸಿರುತ್ತದೆ ಹಾಗೂ IND-AS ಅನ್ನು ಅಳವಡಿಸಿಕೊಂಡಿರುತ್ತದೆ.

ಸಹಿ/–
ಆರ್. ಸಿ. ವೆಂಕಟೇಶ್ ರಾವ್
ಬಿ.ಕಾಂ., ಎಫ್.ಸಿ.ಎಸ್.ಎಎಲ್.ಎಲ್.ಬಿ.,
ಕಂಪನಿ ಕಾರ್ಯದರ್ಶಿ, ಪ್ರಾಕ್ಟೀಸಿಂಗ್
ಪ್ರಮಾಣ ಪತ್ರ ಸಂಖ್ಯೆ: 2733.

ಸ್ಥಳ: ಬೆಂಗಳೂರು
ದಿನಾಂಕ : 24–12–2019

ಅನುಬಂಧ–ಎ

ನಮೂನೆ ಸಂ.ಎಂ.ಜಿ.ಟಿ.9

ವಾರ್ಷಿಕ ಸಲ್ಲಿಕೆಗಳ ಉಧೃತಭಾಗ ಆರ್ಥಿಕ ವರ್ಷಾಂತ್ಯ 31ನೇ ಮಾರ್ಚ್ 2019

ಕಂಪನಿ ಕಾಯ್ದೆ 2013 ರ ಪರಿಚ್ಛೇದ 92(3) ಮತ್ತು ನಿಯಮ 12(1) ರ ಕಂಪನಿ ನಿಯಮಗಳು 2014ರ (ಆಡಳಿತ ಮತ್ತು ನಿರ್ವಹಣೆ)

1. ನೊಂದಣಿ ಮತ್ತು ಇತರೆ ವಿವರಗಳು:

i.	ಸಿಐಎನ್ ನಂ.	U45205KA2003SGC032044
ii.	ನೊಂದಣಿ ದಿನಾಂಕ	04/06/2003
iii.	ಕಂಪನಿಯ ಹೆಸರು	ಕಾವೇರಿ ನೀರಾವರಿ ನಿಗಮ ನಿಯಮಿತ
iv.	ಕಂಪನಿಯ ಉಪವಿಭಾಗ/ವರ್ಗ	ಕರ್ನಾಟಕ ಸರ್ಕಾರದ ಕಂಪನಿಯ ಷೇರುಗಳು
v.	ನೊಂದಾಯಿತ ಕಛೇರಿ ಹಾಗು ವಿಳಾಸ	ಕಾವೇರಿ ಭವನ ಕಾಂಪ್ಲೇಕ್ಸ್ 4ನೇ ಹಂತ, ಗೋಕುಲಂ, ಮಂಜುನಾಥಪುರ, ಮೈಸೂರು - 570 020.
vi.	ಉದ್ಯಮ ಕಂಪನಿ	ಅಲ್ಲ
vii.	ರಿಜಿಸ್ಟ್ರಾರ್ ರವರ ಹೆಸರು ವಿಳಾಸ, ವಿವರ ಮತ್ತು ಯಾವುದೇ ಮಧ್ಯವರ್ತಿಗಳ ವಿವರ	ಅನ್ವಯಿಸುವುದಿಲ್ಲ

2. ಕಂಪನಿಯ ಪ್ರಧಾನ ವ್ಯವಹಾರ/ ಚಟುವಟಿಕೆಗಳು

ಕಂಪನಿಯ ಎಲ್ಲಾ ವಹಿವಾಟು ಕೊಡುಗೆ ಶೇ 10 ರಷ್ಟು ಅಥವಾ ಅದಕ್ಕಿಂತ ಹೆಚ್ಚು ವ್ಯಾಪಾರ ಚಟುವಟಿಕೆಗಳನ್ನು ಹೊಂದಿದೆ.

ಕ್ರ. ಸಂ	ಹೆಸರು ಮತ್ತು ಮುಖ್ಯ ಉತ್ಪನ್ನ / ಸೇವೆಗಳ ವಿವರ	ಎನ್.ಐ.ಸಿ. ಸಂಕೇತ ಸೇವೆ/ಉತ್ಪನ್ನ	ಶೇ. ಕಂಪನಿಯ ಒಟ್ಟು ವಹಿವಾಟು
1	ನೀರಾವರಿ ಚಟುವಟಿಕೆಗಳು	A4	100

3. ಹಿಡುವಳಿ, ಅಂಗಸಂಸ್ಥೆ ಮತ್ತು ಅಸೋಸಿಯೇಟ್ ಕಂಪನಿಗಳ ವಿವರ

ಕ್ರ.ಸಂ	ಹೆಸರು ಮತ್ತು ಕಂಪನಿ ವಿಳಾಸ	ಸಿಐಎನ್/ ಜಿಎಲ್ಎನ್	ಹಿಡುವಳಿ / ಅಂಗಸಂಸ್ಥೆ / ಅಸೋಸಿಯೇಟ್	ಶೇಕಡವಾರು ಹೊಂದಿದ ಷೇರ್‌ಗಳು	ಅನ್ವಯಿಸುವ ನಿಯಮ
1.	ಅನ್ವಯಿಸುವುದಿಲ್ಲ				

4. ಷೇರುಗಳ ಮಾದರಿ (ಈಕ್ವಿಟಿ ಷೇರು ಬಂಡವಾಳದ ಭಾಗದಲ್ಲಿ ಶೇಕಡವಾರು ಒಟ್ಟು ಈಕ್ವಿಟಿ)

ಷೇರುಗಳ ವರ್ಗಾವಾರು

ಷೇರುದಾರರು ವರ್ಗಗಳು	ಆರಂಭದಲ್ಲಿ ಷೇರುಗಳ ಸಂಖ್ಯೆ				ಕೊನೆಗೊಂಡ ಷೇರುಗಳ ಸಂಖ್ಯೆ			% ವರ್ಷದಲ್ಲಿ ಬದಲಾವಣೆ	
	ಡಿಮ್ಯಾಟ್	ಭೌತಿಕ	ಒಟ್ಟು	% ಒಟ್ಟು ಷೇರುಗಳು	ಡಿಮ್ಯಾಟ್	ಭೌತಿಕ	ಒಟ್ಟು	% ಒಟ್ಟು ಷೇರುಗಳು	
A. ಪ್ರವರ್ತಕರು									
1) ಭಾರತೀಯ									
a) ವ್ಯಕ್ತಿ/ಹೆಚ್‌ಯುಎಫ್	-	500	500	0.01	-	500	500	0.01	-
b) ಕೇಂದ್ರ ಸರ್ಕಾರ	-	-	-	-	-	-	-	-	-
c) ರಾಜ್ಯ ಸರ್ಕಾರ	-	87138345	87138345	99.99	-	87138345	87138345	99.99	-
d) ಇತರೆ ನಿಗಮ	-	-	-	-	-	-	-	-	-
e) ಬ್ಯಾಂಕ್/ ಹಣಕಾಸು	-	-	-	-	-	-	-	-	-
ಸಂಸ್ಥೆ	-	-	-	-	-	-	-	-	-
f) ಇನ್ನಿತರೆ	-	-	-	-	-	-	-	-	-
ಉಪ ಮೊತ್ತ (A)(1):-		**87138345**	**87138345**	**100**		**87138345**	**87138345**	**100**	**-**
2) ವಿದೇಶಿ	-								
g) ಎನ್‌ಆರ್‌ಐ – ವ್ಯಕ್ತಿ									
ಹೊರತುಪಡಿಸಿ	-	-	-	-	-	-	-	-	-
h) ಇತರೆ-									
ವ್ಯಕ್ತಿಗಳು	-	-	-	-	-	-	-	-	-
i) ಇತರೆ ನಿಗಮ	-	-	-	-	-	-	-	-	-
j) ಬ್ಯಾಂಕ್/ ಹಣಕಾಸು									
ಸಂಸ್ಥೆ	-	-	-	-	-	-	-	-	-
k) ಇನ್ನಿತರೆ....	-	-	-	-	-	-	-	-	-
ಉಪ ಮೊತ್ತ (A)(2):-	-	-	-	-	-	-	-	-	-
B. ಸಾರ್ವಜನಿಕ									
ಷೇರು									
1. ಸಂಸ್ಥೆಗಳು									
a) ಮ್ಯೂಚಯಲ್									
ಫಂಡ್	-	-	-	-	-	-	-	-	-
b) ಬ್ಯಾಂಕ್/									
ಹಣಕಾಸು ಸಂಸ್ಥೆ	-	-	-	-	-	-	-	-	-
c) ಕೇಂದ್ರ ಸರ್ಕಾರ	-	-	-	-	-	-	-	-	-
d) ರಾಜ್ಯ ಸರ್ಕಾರ	-	-	-	-	-	-	-	-	-
e) ಉದ್ದಿಮೆ ಬಂಡವಾಳ ನಿದಿ	-	-	-	-	-	-	-	-	-
f) ವಿಮಾ ಕಂಪನಿ	-	-	-	-	-	-	-	-	-
g) ಎಫ್‌ಐಐಎಸ್	-	-	-	-	-	-	-	-	-
h) ವಿದೇಶಿ ಉದ್ದಿಮೆ									
ಬಂಡವಾಳ ನಿಧಿ	-	-	-	-	-	-	-	-	-
I) ಇತರೆ (ನಿರ್ಧಿಷ್ಟಪಡಿಸಿ)	-	-	-	-	-	-	-	-	
ಉಪ ಮೊತ್ತ (B)(1)	-	-	-	-	-	-	-	-	-

2. ಇತರೆ ಸಂಸ್ಥೆಗಳಲ್ಲದ									
a) ಇತರೆ ನಿಗಮ (i) ಭಾರತೀಯ (ii) ವಿದೇಶಿ	-	-	-	-	-	-	-	-	-
b) ವ್ಯಕ್ತಿಗಳು ರೂ.1 ಲಕ್ಷಕ್ಕೆ ಒಳಪಟ್ಟು ಷೇರು ಬಂಡವಾಳ ಹೊಂದಿರುವ ವ್ಯಕ್ತಿಗಳು (ii) ವ್ಯಕ್ತಿಗಳು ರೂ.1 ಲಕ್ಷಕ್ಕೆ ಒಳಪಟ್ಟು ಷೇರು ಬಂಡವಾಳ ಹೊಂದಿರುವ ವ್ಯಕ್ತಿಗಳು	-	-	-	-	-	-	-	-	-
c) ಇತರೆ (ನಿರ್ಧಿಷ್ಟಪಡಿಸಿ)	-	-	-	-	-	-	-	-	-
ಉಪ ಮೊತ್ತ (B)(2)	-	-	-	-	-	-	-	-	-
ಉಪ ಒಟ್ಟು									
C. ಜಿಡಿಆರ್‌ಎಸ್ & ಎಡಿಆರ್‌ಎಸ್ ರವರ ಸುಪರ್ದಿಯಲ್ಲಿರುವ ಷೇರುಗಳ	-	-	-	-	-	-	-	-	-
ಒಟ್ಟು ಮೊತ್ತ (A+B+C)		**87138345**	**87138345**	**100**		**87138345**	**87138345**	**100**	–

ii ಷೇರು ಪ್ರವರ್ತಕರ

ಕ್ರ. ಸಂ	ಷೇರುದಾರರ ಹೆಸರು	ವರ್ಷದ ಆರಂಭಿಕ ಷೇರುಗಳು			ವರ್ಷದ ಅಂತ್ಯದ ಷೇರುಗಳು			
		ಷೇರುಗಳ ಸಂಖ್ಯೆ	ಕಂಪನಿಯ ಶೇ.ವಾರು ಷೇರುಗಳು	ಶೇ.ವಾರು ಷೇರುಗಳು ಅಡಮಾನ/ಒಟ್ಟು ಎನ್‌ಕಂಬರ್ಡ್ ಷೇರುಗಳು	ಷೇರುಗಳ ಸಂಖ್ಯೆ	ಕಂಪನಿಯ ಶೇ.ವಾರು ಷೇರುಗಳು	ಶೇ.ವಾರು ಷೇರುಗಳು ಅಡಮಾನ/ಒಟ್ಟು ಎನ್‌ಕಂಬರ್ಡ್ ಷೇರುಗಳು	ಶೇ.ವಾರು ಷೇರುಗಳ ಬದಲಾವಣೆ
1.	ಯಾವುದೂ ಇಲ್ಲ							

iii ಷೇರು ಪ್ರವರ್ತಕರ ಬದಲಾವಣೆ (ಬದಲಾವಣೆ ಇದ್ದಲ್ಲಿ ತಿಳಿಸಿ)

ಕ್ರ.ಸಂ		ವರ್ಷದ ಆರಂಭಿಕ ಷೇರುಗಳು		ಪ್ರಸಕ್ತ ವರ್ಷದ ಒಟ್ಟು ಷೇರುಗಳು	
		ಷೇರುಗಳ ಸಂಖ್ಯೆ	ಕಂಪನಿಯ ಶೇ.ವಾರು ಷೇರುಗಳು	ಷೇರುಗಳ ಸಂಖ್ಯೆ	ಕಂಪನಿಯಶೇ. ವಾರ ಷೇರುಗಳು
	ವರ್ಷದ ಆರಂಭದಲ್ಲಿ ----	–	–	–	–
	ಪ್ರಸಕ್ತ ವರ್ಷದಲ್ಲಿ ಷೇರು ಪ್ರವರ್ತಕರ ಏರಿಕೆ/ಇಳಿಕೆಯನ್ನು ದಿನಾಂಕವಾರು ಸೂಚಿಸುವುದು. ಏರಿಕೆ/ಇಳಿಕೆ ಕಾರಣಗಳು (ಉದಾ:ಹಂಚಕೆಯಲ್ಲಿ/ ವರ್ಗಾವಣೆಯಲ್ಲಿ/ಬೋನಸ್/ ಈಕ್ವಿಟಿ ಶ್ರಮ)		ಯಾವುದೂ ಇಲ್ಲ		
	ವರ್ಷಾಂತ್ಯದಲ್ಲಿ----	–	–	–	–

iv ಮೊದಲ 10 ಷೇರುದಾರರ ಷೇರುದಾರಿಕೆಯ ಮಾದರಿ (ನಿರ್ದೇಶಕರು, ಪ್ರವರ್ತಕರು ಹಾಗೂ ಜಿಡಿಆರ್ & ಎಡಿಆರ್ ರವರುಗಳನ್ನು ಹೊರತುಪಡಿಸಿ)

ಕ್ರ.ಸಂ		ವರ್ಷದ ಆರಂಭಿಕ ಷೇರುಗಳು		ಪ್ರಸಕ್ತ ವರ್ಷದ ಒಟ್ಟು ಷೇರುಗಳು	
	ಪ್ರತಿ ಮೊದಲ 10 ಷೇರುದಾರರು	ಷೇರುಗಳ ಸಂಖ್ಯೆ	ಕಂಪನಿಯ ಶೇ. ವಾರು ಷೇರುಗಳು	ಷೇರುಗಳ ಸಂಖ್ಯೆ	ಕಂಪನಿಯ ಶೇ.ವಾರು ಷೇರುಗಳು
	ವರ್ಷದ ಆರಂಭದಲ್ಲಿ	87138345	100	87138345	100
	ಪ್ರಸಕ್ತ ವರ್ಷದ ಷೇರು ಪ್ರವರ್ತಕರ ಏರಿಕೆ/ಇಳಿಯು ದಿನಾಂಕವಾರು ಸೂಚಿಸುವುದು (ಉದಾ:ಹಂಚಕೆಯಲ್ಲಿ/ವರ್ಗಾವಣೆಯಲ್ಲಿ/ ಬೋನಸ್/ಈಕ್ವಿಟಿ ಶ್ರಮ				
	ವರ್ಷದ ಅಂತ್ಯಕ್ಕೆ (ಪ್ರತ್ಯೇಕಿಸಿದ ದಿನಾಂಕದಿಂದ ಒಂದು ವೇಳೆ ಪ್ರಸಕ್ತ ವರ್ಷದಲ್ಲಿ ಪ್ರತ್ಯೇಕಿಸಿದ್ದರೆ)	87138345	100	87138345	100

v ನಿರ್ದೇಶಕರು ಮತ್ತು ಮುಖ್ಯ ಆಡಳಿತ ಸಿಬ್ಬಂದಿಷೇರು ಪಾಲುದಾರಿಕೆ:

ಕ್ರ. ಸಂ			ವರ್ಷದ ಆರಂಭಿಕ ಷೇರುಗಳು		
	ಪ್ರತಿ ನಿರ್ದೇಶಕರ ಮತ್ತು ಮುಖ್ಯ ಆಡಳಿತ ಸಿಬ್ಬಂದಿ	ಷೇರುಗಳ ಸಂಖ್ಯೆ	ಕಂಪನಿಯ ಶೇ.ವಾರು ಷೇರುಗಳು	ಷೇರುಗಳ ಸಂಖ್ಯೆ	ಕಂಪನಿಯ ಶೇ. ವಾರು ಷೇರುಗಳು
	ವರ್ಷದ ಆರಂಭದಲ್ಲಿ	**500**	**0.01**	**500**	**0.01**
	ಪ್ರಸಕ್ತ ವರ್ಷದ ಷೇರು ಪ್ರವರ್ತಕರ ಏರಿಕೆ/ಇಳಿಯು ದಿನಾಂಕವಾರು ಸೂಚಿಸುವುದು(ಉದಾ:ಹಂಚಿಕೆಯಲ್ಲಿ/ ವರ್ಗಾವಣೆಯಲ್ಲಿ/ಬೋನಸ್/ಇತ್ಯಾದಿ				
	ವರ್ಷಾಂತ್ಯಕ್ಕೆ	**500**	**0.01**	**500**	**0.01**

vi. ಸಾಲದ ಮೊತ್ತ:

ಕಂಪನಿಯು ಮಹೋನ್ನತ / ಸಂಚಿತ ಬಡ್ಡಿಯ ಬಾಕಿ ಪಾವತಿ

	ಸುರಕ್ಷಿತ ಸಾಲದ ಠೇವಣಿ ಹೊರತು ಪಡಿಸಿ	ಸುರಕ್ಷಿತವಲ್ಲದ ಸಾಲದ	ಠೇವಣಿ	ಒಟ್ಟು ಸಾಲ
ಆರ್ಥಿಕ ವರ್ಷದ ಪ್ರಾರಂಭದಲ್ಲಿರುವ ಸಾಲ				
i) ಅಸಲು ಮೊತ್ತ			-	
ii) ಪಾವತಿಸದೇ ಇರುವ ಬಾಕಿ ಬಡ್ಡಿ				
iii) ಬಡ್ಡಿ ಶೇಖರಣೆ ಹೊರತು ಪಡಿಸಿ				
ಒಟ್ಟು (i + ii + iii)			-	
ಆರ್ಥಿಕ ವರ್ಷದಲ್ಲಿ ಸಾಲದ ಬದಲಾವಣೆ				
– ಹೆಚ್ಚುವರಿ				
– ಕಡಿತಗೊಳಿಸು				
ನಿವ್ವಳ ಬದಲಾವಣೆ				
ಆರ್ಥಿಕ ವರ್ಷದ ಅಂತ್ಯಕ್ಕೆ ಸಾಲ				
i) ಅಸಲು ಮೊತ್ತ	22147624381	60505627276	-	82653251657
ii) ಪಾವತಿಸದೇ ಇರುವ ಬಾಕಿ ಬಡ್ಡಿ				
iii) ಬಡ್ಡಿ ಶೇಖರಣೆ ಹೊರತು ಪಡಿಸಿ				
ಒಟ್ಟು (i+ii+iii)	**22147624381**	**60505627276**	**-**	**82653251657**

6. **ನಿರ್ದೇಶಕರು ಮತ್ತು ಮುಖ್ಯ ಆಡಳಿತ ಸಿಬ್ಬಂದಿ ಸಂಭಾವನೆ:**

A. ವ್ಯವಸ್ಥಾಪಕ ನಿರ್ದೇಶಕರು, ಪೂರ್ಣಕಾಲಿಕ ನಿರ್ದೇಶಕರು/ವ್ಯವಸ್ಥಾಪಕರ ಸಂಭಾವನೆ: ಇಲ್ಲ

B. ಇತರ ನಿರ್ದೇಶಕರ ಸಂಭಾವನೆ: ಇಲ್ಲ

C. ವ್ಯವಸ್ಥಾಪಕ ನಿರ್ದೇಶಕರು/ವ್ಯವಸ್ಥಾಪಕರು/ಡಬ್ಲ್ಯೂಟಿಡಿ ರವರನ್ನು ಹೊರತು ಪಡಿಸಿ ಇತರೆ ಮುಖ್ಯ ಆಡಳಿತ ಸಿಬ್ಬಂದಿ ಸಂಭಾವನೆ ಕಂಪನಿ ಕಾಯ್ದೆ 2013 ರ ಸೆಕ್ಷನ್ 203 ಕಂಪನಿಗೆ ಅನ್ವಯಿಸುವುದಿಲ್ಲ

7. **ದಂಡ, ಚಕ್ರಬಡ್ಡಿ, ಶಿಕ್ಷೆ ಮತ್ತು ಅಪರಾಧ:**

ಕಂಪನಿಯು ಆರ್ಥಿಕ ವರ್ಷದಲ್ಲಿ ಯಾವುದೇ ದಂಡ, ಚಕ್ರಬಡ್ಡಿ, ಶಿಕ್ಷೆಗೆ ಒಳಪಟ್ಟಿರುವುದಿಲ್ಲ.

ಮೇ॥ ಕಿಚ್ಚಾ & ಪ್ರಭು ಕೇಸವನ್
(ಮೊದಲು ಕಿಚ್ಚಾ & ಕಂ.)
ಚಾರ್ಟರ್ಡ್ ಅಕೌಂಟೆಂಟ್ಸ್

6–ಎಫ್.ಎಫ್, 1ನೇ ಮಹಡಿ, 'ಗೋಲ್ಡನ್ ಎನ್‌ಕ್ಲೇವ್'
184, ಪೂನಾಮಲ್ಲೆ ಹೈ ರೋಡ್, (ಟೈಲರ್ಸ್ ರೋಡ್ ಸಿಗ್ನಲ್ ಎದುರು) ಚೆನ್ನೈ –600 010.ಇಂಡಿಯಾ.
ಫೋನ್ :91–44–26611252, 42859843
ಇ–ಮೇಲ್ : knpchennai@gmail.com / kpkclients@yahoo.co.in
ವೆಬ್ : www.cakpk.com

ಸ್ವತಂತ್ರ ಲೆಕ್ಕಪರಿಶೋಧಕರ ವರದಿ

ಗೆ,

ಕಾವೇರಿ ನೀರಾವರಿ ನಿಗಮ ನಿಯಮಿತದ ಸದಸ್ಯರುಗಳಿಗೆ

ಭಾರತೀಯ ಸ್ವತಂತ್ರ ಲೆಕ್ಕಪತ್ರ ಪರಿಶೋಧನೆ ಪ್ರಮಾಣೀಕರಣ ಹಣಕಾಸು ತಃಖ್ತೆಗಳ ಕುರಿತ ವರದಿ

ಅರ್ಹತಾ ಅಭಿಪ್ರಾಯ

ನಾವು 'ಕಾವೇರಿ ನೀರಾವರಿ ನಿಗಮ ನಿಯಮಿತ'ದ ("ಕಂಪನಿ") ಹಣಕಾಸು ತಃಖ್ತೆಗಳನ್ನು ಭಾರತೀಯ ಲೆಕ್ಕಪತ್ರ ಪ್ರಮಾಣೀಕರಣದ ಜೊತೆ ಲೆಕ್ಕಪರಿಶೋಧನೆಗೆ ಒಳಪಡಿಸಿದ್ದು, ಅದು ಮಾರ್ಚ್ 31, 2019 ರಂತೆ ಸಮತೋಲನ ಪಟ್ಟಿ, ಲಾಭ–ನಷ್ಟ ತಃಖ್ತೆ (ಇತರೆ ಸಮಗ್ರ ಆದಾಯ ಸೇರಿದಂತೆ), ನಗದು ಪ್ರವಹನಪಟ್ಟಿ ಆ ವರ್ಷಾಂತ್ಯದ ವೇಳೆಗೆ ಇಕ್ವಿಟಿಗಳಲ್ಲಾದ ಬದಲಾವಣೆ ಮತ್ತು ಮಹತ್ವದ ಲೆಕ್ಕಪತ್ರಗಳ ನೀತಿಗಳ ಸಾರಾಂಶ ಮತ್ತು ಇತರೆ ವಿವರಣಾತ್ಮಕ ಮಾಹಿತಿಯನ್ನು (ಇನ್ನು ಮುಂದೆ ಭಾರತೀಯ ಲೆಕ್ಕಪತ್ರ ಪ್ರಮಾಣೀಕರಣ ಹಣಕಾಸು ತಃಖ್ತೆಗಳು ಎಂದು ಉಲ್ಲೇಖಿಸಲಾಗುವ) ಒಳಗೊಂಡಿರುತ್ತದೆ.

ಮಾರ್ಚ್ 31, 2019 ರ ಅಂತ್ಯಕ್ಕೆ ಕಂಪನಿಯ ಲೆಕ್ಕಪತ್ರಗಳ ಲೆಕ್ಕಪರಿಶೋಧನೆ ಪೂರ್ಣಗೊಂಡ ನಂತರ ದಿನಾಂಕ:04–12–2019 ರಂದು ನಾವು ಲೆಕ್ಕಪರಿಶೋಧನೆ ವರದಿಯನ್ನು ನೀಡಿರುತ್ತೇವೆ. ಈ ವರದಿಯು ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾಲೇಖಪಾಲರ ಲೆಕ್ಕಪರಿಶೋಧನೆಗೆ ಒಳಪಟ್ಟಿದ್ದು, ಅವರ ಅವಲೋಕನಗಳ ಆಧಾರದ ಮೇಲೆ ಪರಿಷ್ಕೃತಗೊಂಡಿರುತ್ತದೆ. ಆದ್ದರಿಂದ ಈ ಹಿಂದಿನ ವರದಿ ದಿನಾಂಕ : 04–12–2019 ಅನ್ನು ವಿಲೆ/ರದ್ದು ಪಡಿಸಲಾಗಿದ್ದು, ಪರಿಷ್ಕೃತ ವರದಿಯನ್ನು ಪರಿಗಣಿಸುವಂತೆ ತಿಳಿಸಿರುತ್ತದೆ.

ನಮ್ಮ ಅಭಿಪ್ರಾಯದಲ್ಲಿ ಮತ್ತು ನಮ್ಮ ಉತ್ತಮ ಮಾಹಿತಿಯಂತೆ ಹಾಗೂ ನಮಗೆ ನೀಡಿದ ವಿವರಣೆಗಳ ಅನುಸಾರ,ಅರ್ಹತಾ ಅಭಿಪ್ರಾಯದ ಆಧಾರವು ಈ ಕೆಳಗಿನ ಪ್ಯಾರದಂತೆ, ಈ ಮೇಲೆ ತಿಳಿಸಿದ ಐ.ಎನ್.ಡಿ.–ಎ.ಎಸ್. ಲೆಕ್ಕಪತ್ರಗಳು ಕಾಯ್ದೆ ಅನುಸಾರ ಅಗತ್ಯ ಮಾಹಿತಿಯನ್ನು ನೀಡಿ, ಸಾಮಾನ್ಯವಾಗಿ ಭಾರತದಲ್ಲಿ ಸಮ್ಮತಿಸಿರುವ ಲೆಕ್ಕಪತ್ರಗಳ ತತ್ವಗಳು ದಿನಾಂಕ:31–03–2019 ರ ದಿನದಂದು ಕಂಪನಿಯ ವ್ಯವಹಾರಗಳ ಸ್ಥಿತಿಹಾಗೂ ಅದರ ಲಾಭ (ಇತರ ಸಮಗ್ರಆದಾಯ ಒಳಪಟ್ಟು), ನಗದು ಪ್ರವಹನ ಮತ್ತು ಆ ಸಾಲಿನ ಅಂತ್ಯಕ್ಕೆ ಇಕ್ವಿಟಿ ಬದಲಾವಣೆಗಳ ನೈಜ ಮತ್ತು ನ್ಯಾಯೋಚಿತ ವೀಕ್ಷಣೆ ನೀಡುತ್ತದೆ.

ಅರ್ಹತಾ ಅಭಿಪ್ರಾಯಗಳಿಗೆ ಆಧಾರ

1. ಹಣಕಾಸಿನ ವರದಿಯ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣಗಳು 'ಅನುಬಂಧ–ಎ' ರಲ್ಲಿ ವಿವರಿಸಿದಂತೆ, ನಿಯಂತ್ರಣಗಳ ಕೊರತೆಗಳನ್ನು ಗಮನಿಸಲಾಗಿದ್ದು, ಇದು ಹಣಕಾಸಿನ ಲೆಕ್ಕಪತ್ರಗಳ ನ್ಯಾಯೋಚಿತ ಪ್ರಸ್ತುತಿಯಲ್ಲಿ ಮಹತ್ವದ ಪ್ರಭಾವವನ್ನು ಬೀರಬಹುದಾಗಿದೆ. ಅದಾಗ್ಯೂ, ಇದರ ಪ್ರಭಾವವನ್ನು ಖಚಿತಪಡಿಸಲು ಸಾಧ್ಯವಿರುವುದಿಲ್ಲ.
2. ಕಂಪನಿ ತಯಾರಿಸಿದ ಭಾರತೀಯ ಲೆಕ್ಕಪತ್ರಗಳ ಪ್ರಮಾಣೀಕರಣ ಹಣಕಾಸು ತಃಖ್ತೆಗಳು, ಕಾಯ್ದೆಯ ಅನುಚ್ಛೇದ 133 ರಡಿಯಲ್ಲಿ ಹೇಳಲಾದ ಭಾರತೀಯ ಲೆಕ್ಕಪತ್ರ ಪ್ರಮಾಣೀಕರಣ ಮತ್ತು ಅದಕ್ಕೆ ಸಂಬಂಧಿಸಿದ ನಿಯಮಗಳ ಅನುಸಾರವಾಗಿಲ್ಲ. ಈ ವಿಚಾರದಲ್ಲಿ ಕೆಳಗಿನ ಅಸಂಗತೆಗಳನ್ನು ಗಮನಿಸಬಹುದಾಗಿದೆ.
   - ಎ) ಐ.ಎನ್.ಡಿ.ಎ.ಎಸ್. 105 "ಮಾರಾಟ ಮತ್ತು ಸ್ಥಗಿತಗೊಂಡ ಕಾರ್ಯಾಚರಣೆಗಳ ಸಂಬಂಧಿತ ಪ್ರಸಕ್ತ ಆಸ್ತಿಗಳು" – ಚಿರಾಸ್ತಿ, ಯಂತ್ರೋಪಕರಣಗಳು ಜೀವಿತಾವಧಿ ಮುಗಿದಿದ್ದು, ವಿಲೇವಾರಿ ಮಾಡಬೇಕಾಗಿದ್ದು, ಇವುಗಳನ್ನು ಪ್ರಸ್ತುತಪಡಿಸುವಿಕೆ, ವಿಂಗಡಣೆ ಮತ್ತು ಬಹಿರಂಗಪಡಿಸಿರುವುದಿಲ್ಲ. (ಟಿಪ್ಪಣಿ ಸಂಖ್ಯೆ:2.3 ಪ್ಯಾರ 6 ಗಮನಿಸಿ)
   - ಬಿ) ಐ.ಎನ್.ಡಿ.ಎ.ಎಸ್. 107 "ಹಣಕಾಸಿನ ದಸ್ತಾವೇಜುಗಳು : ಬಹಿರಂಗಪಡಿಸುವುದು" – ಹಣಕಾಸಿನ ಸಾಧನೆಗಳ ವಿಂಗಡಣೆಯ ಬಹಿರಂಗಪಡಿಸುವಿಕೆಗಳು ಅಗತ್ಯಗಳ ಪ್ರಕಾರ ಅನುಸರಣೆಯಾಗಿರುವುದಿಲ್ಲ.(ಟಿಪ್ಪಣಿ ಸಂಖ್ಯೆ:2.7ಸಿ ಗಮನಿಸಿ)
   - ಸಿ) ಐ.ಎನ್.ಡಿ.ಎ.ಎಸ್. 109 "ಹಣಕಾಸಿನ ದಸ್ತಾವೇಜುಗಳು" – ಗುರುತಿಸುವಿಕೆ, ಮಾಪನ ಮತ್ತು ಹಣಕಾಸಿನ ಸಾಧನಗಳ ತೊಡೆದುಹಾಕುವಿಕೆಯು ಅಗತ್ಯಗಳ ಪ್ರಕಾರ ಅನುಸರಣೆಯಾಗಿರುವುದಿಲ್ಲ.(ಟಿಪ್ಪಣಿ ಸಂಖ್ಯೆ:2.7ಸಿ, 2.14 ಗಮನಿಸಿ)
   - ಡಿ) ಐ.ಎನ್.ಡಿ.ಎ.ಎಸ್. 113 "ನೈಜ ಮೌಲ್ಯ ಮಾಪನ" – ಸ್ವತ್ತುಗಳ ಹಾಗೂ ಹೊಣೆಗಾರಿಕೆಗಳ ನೈಜ ಮೌಲ್ಯ ಮಾಪನ ಹಾಗೂ ಇವುಗಳ ಬಹಿರಂಗಪಡಿಸುವಿಕೆ ಅಗತ್ಯಗಳ ಪ್ರಕಾರ ಅನುಸರಣೆಯಾಗಿರುವುದಿಲ್ಲ.

ಇ) ಐ.ಎನ್.ಡಿ.ಎ.ಎಸ್. 12 "ಆದಾಯ ತೆರಿಗೆ" – ಮುಂದೂಡಲ್ಪಟ್ಟ ತೆರಿಗೆಯನ್ನು ಒಳಗೊಂಡ ಆದಾಯ ತೆರಿಗೆಯ ಗುರುತಿಸುವಿಕೆ ಮತ್ತು ಬಹಿರಂಗಪಡಿಸುವಿಕೆ ತಯಾರಿಸಿದ್ದು, ಇದು ಅಗತ್ಯಗಳ ಪ್ರಕಾರ ಅನುಸರಣೆಯಾಗಿರುವುದಿಲ್ಲ.(ಟಿಪ್ಪಣಿ ಸಂಖ್ಯೆ:2.13 ಗಮನಿಸಿ)

ಎಫ್) ಐ.ಎನ್.ಡಿ.ಎ.ಎಸ್. 16 "ಚರಾಸ್ತಿ ಹಾಗೂ ಯಂತ್ರೋಪಕರಣಗಳು" ಅಗತ್ಯಗಳ ಪ್ರಕಾರ ಅನುಸರಣೆಯಲ್ಲಿರುವುದಿಲ್ಲ. ಅವುಗಳಲ್ಲಿ ಕೆಳಕಂಡವುಗಳು ಸೇರಿವೆ;

1. ವೆಚ್ಚ, ಮಾಪನ ಹಾಗೂ ತರುವಾಯದ ವೆಚ್ಚದ ಗುರುತಿಸುವಿಕೆ
2. ಬಂಡವಾಳೀಕರಣ ಮತ್ತು ಸವಕಳಿ ಲೆಕ್ಕಾಚಾರ

ಜಿ) ಐ.ಎನ್.ಡಿ.ಎ.ಎಸ್. 20 "ಸರ್ಕಾರದ ಧನಸಹಾಯಕ್ಕಾಗಿ ಲೆಕ್ಕಪರಿಶೋಧನೆ ಮತ್ತು ಸರ್ಕಾರದ ಸಹಾಯದ ಪ್ರಕಟಣೆ" – ಸರ್ಕಾರದ ಸಹಾಯದ ಬಹಿರಂಗಪಡಿಸುವಿಕೆ ಮಾಡಿರುವುದು ಅಗತ್ಯಗಳ ಪ್ರಕಾರ ಅನುಸರಣೆಯಾಗಿರುವುದಿಲ್ಲ. (ಟಿಪ್ಪಣಿ ಸಂಖ್ಯೆ:2.8, 2.11.ಸಿ ಗಮನಿಸಿ)

ಹೆಚ್) ಐ.ಎನ್.ಡಿ.ಎ.ಎಸ್. 23 "ಎರವಲು ವೆಚ್ಚಗಳು" ಅನುಸರಣೆಯಲ್ಲಿರುವುದಿಲ್ಲ. ಅವುಗಳಲ್ಲಿ ಕೆಳಕಂಡವುಗಳು ಸೇರಿವೆ;(ಟಿಪ್ಪಣಿ ಸಂಖ್ಯೆ:2.11 ಗಮನಿಸಿ)

1. ಗುರುತಿಸುವಿಕೆ, ವೆಚ್ಚದ ಮಾಪನ, ಬಂಡವಾಳೀಕರಣಕ್ಕೆ ಅರ್ಹಗೊಂಡ ಸ್ವತ್ತುಗಳು

ಐ) ಐ.ಎನ್.ಡಿ.ಎ.ಎಸ್. 24 "ಸಂಬಂಧಿತ ವ್ಯಕ್ತಿಗಳೊಂದಿಗೆ ಮಾಡಿದ ವ್ಯವಹಾರಗಳ ಬಹಿರಂಗಪಡಿಸುವಿಕೆ" – ಬಹಿರಂಗ ಪಡಿಸುವಿಕೆಗಳು ಅಗತ್ಯಗಳ ಪ್ರಕಾರ ಅನುಸರಣೆಯಾಗಿರುವುದಿಲ್ಲ.

ಜೆ) ಐ.ಎನ್.ಡಿ.ಎ.ಎಸ್. 32 "ಹಣಕಾಸಿನ ಸಾಧನೆಗಳ ಪ್ರಸ್ತುತಿ" – ಹಣಕಾಸಿನ ಸಾಧನೆಗಳ ಪ್ರಸ್ತುತಿಯನ್ನು ಅಗತ್ಯಗಳ ಪ್ರಕಾರ ಅನುಸರಣೆಯಾಗಿರುವುದಿಲ್ಲ. (ಟಿಪ್ಪಣಿ ಸಂಖ್ಯೆ: 2.7 ಸಿ ಗಮನಿಸಿ)

ಕೆ) ಐ.ಎನ್.ಡಿ.ಎ.ಎಸ್. 33 "ಪ್ರತಿ ಷೇರಿನ ಗಳಿಕೆ" – ಪ್ರತಿ ಷೇರಿನ ಗಳಿಕೆಯ ಪ್ರಸ್ತುತಿ ಮತ್ತು ಬಹಿಂಗಪಡಿಸುವಿಕೆ ಅಗತ್ಯಗಳ ಪ್ರಕಾರ ಅನುಸರಣೆಯಾಗಿರುವುದಿಲ್ಲ. (ಟಿಪ್ಪಣಿ ಸಂಖ್ಯೆ: 2.21 ಗಮನಿಸಿ)

ಎಲ್) ಐ.ಎನ್.ಡಿ.ಎ.ಎಸ್. 36 "ಆಸ್ತಿಯ ಮೌಲ್ಯ ತಗ್ಗಿಸುವಿಕೆ" – ಗುರುತುಪಡಿಸುವಿಕೆ ಮತ್ತು ಬಹಿರಂಗಪಡಿಸುವಿಕೆಯು ಅಗತ್ಯಗಳ ಪ್ರಕಾರ ಅನುಸರಣೆಯಾಗಿರುವುದಿಲ್ಲ.(ಟಿಪ್ಪಣಿ ಸಂಖ್ಯೆ: 2.14 ಮತ್ತು 4ಈ ಗಮನಿಸಿ)

ಎಂ) ಐ.ಎನ್.ಡಿ.ಎ.ಎಸ್. 37 "ಹವಣಿಕೆಗಳು, ಅನಿಶ್ಚಿತ ಹೊಣೆಗಾರಿಕೆಗಳು ಮತ್ತು ಅನಿಶ್ಚಿತ ಸ್ವತ್ತುಗಳು – ಕೆಲವು ವೆಚ್ಚಗಳ ಹವಣಿಕೆಗಳ ಗುರುತಿಸುವಿಕೆ, ಅನಿಶ್ಚಿತ ಹೊಣೆಗಾರಿಕೆಗಳು ಮತ್ತು ಬದ್ಧತೆಗಳನ್ನು ನೀಡಿರುವುದಿಲ್ಲ ಹಾಗೂ ಅಗತ್ಯಗಳ ಅನುಸಾರ ಬಹಿರಂಗಪಡಿಸಿರುವುದಿಲ್ಲ.(ಟಿಪ್ಪಣಿ ಸಂಖ್ಯೆ: 2.15 ಮತ್ತು 30 ಗಮನಿಸಿ)

ಎನ್) ಐ.ಎನ್.ಡಿ.ಎ.ಎಸ್. 40 "ಹೂಡಿಕೆ ಆಸ್ತಿ" – ಗುರುತಿಸುವಿಕೆ, ಮಾಪನ ಮತ್ತು ಹೂಡಿಕೆ ಆಸ್ತಿಯ ಬಹಿರಂಗಪಡಿಸುವಿಕೆ ಅಗತ್ಯಗಳ ಪ್ರಕಾರ ಅನುಸರಣೆಯಾಗಿರುವುದಿಲ್ಲ.

ಭಾರತೀಯ ಲೆಕ್ಕಪತ್ರಗಳ ಪ್ರಮಾಣೀಕರಣ ಹಣಕಾಸು ತಃಖ್ತೆಗಳ ಮೇಲೆ ಮೇಲಿನ ವಿಚಾರಗಳ ಪರಿಣಾಮದ ಖಚಿತತೆಯನ್ನು ಹೇಳಲಾಗುವುದಿಲ್ಲ.

3. ಲಾಭ ಮತ್ತು ನಷ್ಟದ ತಖ್ತೆಯು ಕಂಪನಿ ಕಾಯ್ದೆ 2013 –ಷೆಡ್ಯೂಲ್‌ಖಖಖ ವಿಭಾಗ ಖಖ ಮತ್ತು 'ಐ.ಎನ್.ಡಿ.ಎ.ಎಸ್.' ಅಗತ್ಯಗಳಿಗೆ ಅನುಗುಣವಾಗಿಇರುವುದಿಲ್ಲ ಮತ್ತು ಹಣಕಾಸು ವರದಿಯ ಸಿದ್ಧತೆ ಮತ್ತು ಮಂಡನೆಯ ಚೌಕಟ್ಟು ಸಹ ಐ.ಸಿ.ಎ.ಐ. ನಿಗದಿಪಡಿಸಿರುವ ಭಾರತೀಯ ಲೆಕ್ಕಪತ್ರ ಮಾನದಂಡಗಳಿಗೆ ಅನುಸಾರವಾಗಿರುವುದಿಲ್ಲ. ಲಾಭ ಮತ್ತು ನಷ್ಟದ ವರ್ಗೀಕರಣದ ಪರಿಗಣನೆ, ವೆಚ್ಚಗಳು, ಆದಾಯ ತೆರಿಗೆ ಉದ್ದೇಶಕ್ಕಾಗಿ ಕಂಪನಿಯಿಂದ ಪ್ರತ್ಯೇಕ ಜಮಾ ಖರ್ಚು ತಃಖ್ತೆ ಮುಂತಾದ ವಿಷಯಗಳಲ್ಲಿ ಕಂಪನಿಯು ಅನುಸರಣೆ ಹೊಂದಿರುವುದಿಲ್ಲ; ಅವುಗಳು ಹೀಗಿವೆ;

i. ಖರ್ಚು ಮತ್ತು ಆದಾಯದ ಗುರುತಿಸುವಿಕೆ ಮತ್ತು ಬೇರ್ಪಡಿಸುವಿಕೆ.

ii. ಖರ್ಚುಗಳು, ನಿವ್ವಳ ಬ್ಯಾಂಕ್ ಬಡ್ಡಿ ಮತ್ತು ಸರ್ಕಾರದಿಂದ ಬರುವ ನಿರ್ವಹಣಾ ವೆಚ್ಚಗಳು – ರೂ.23,471.30 ಲಕ್ಷಗಳು ಸಿಡಬ್ಲ್ಯೂ ಐ.ಪಿ.ಗೆ ಸಂದಾಯ ಮಾಡಲಾಗಿದೆ. ಅವರು ಖರ್ಚಿನ ಅಂಶಗಳನ್ನು ಪೂರ್ಣಗೊಳಿಸದಿದ್ದರೂ ಗುರುತಿಸುವಿಕೆ ಮತ್ತು ಅಳತೆಗೆ ಬೇಕಾದ ಮಾನದಂಡಗಳನ್ನು ಪೂರ್ಣಗೊಳಿಸದಿದ್ದರೂ, ಭಾರತೀಯ ಲೆಕ್ಕಪತ್ರಗಳ ಪ್ರಮಾಣೀಕರಣ 16 ರ ಪ್ರಕಾರ ಮತ್ತು ಸಾಮಾನ್ಯವಾಗಿ ಒಪ್ಪಿಕೊಳ್ಳಲಾದ ಹಣಕಾಸು ಅಭ್ಯಾಸಗಳ ಪ್ರಕಾರ ಹಣ ಸಂದಾಯವಾಗುತ್ತದೆ. (ಟಿಪ್ಪಣಿ ಸಂಖ್ಯೆ: 2.1, 2.4, 2.17 & 4ಹೆಚ್ ಗಮನಿಸಿ)

iii. ಆದಾಯ ತೆರಿಗೆಯ ಉದ್ದೇಶಕ್ಕಾಗಿ, ಪರಿಷ್ಕೃತ ಆದಾಯವನ್ನು ಫೈಲ್ ಮಾಡಲು ಕಂಪನಿಯು ಪ್ರತ್ಯೇಕವಾದ ಲಾಭ ಮತ್ತು ನಷ್ಟದ ತಃಖ್ತೆಯನ್ನು ತಯಾರಿಸುತ್ತದೆ (ಟಿಪ್ಪಣಿ ಸಂಖ್ಯೆ: 2.13 ಮತ್ತು ಪ್ಯಾರಾ 4 ಗಮನಿಸಿ). ಈ ಲಾಭ ಮತ್ತು ನಷ್ಟದ ತಃಖ್ತೆಯ ಅನುಪಸ್ಥಿತಿಯಲ್ಲಿ ಆದಾಯ ತೆರಿಗೆಯ ನಿಬಂಧನೆಗಳ ಸಮರ್ಪಕತೆಯನ್ನು ಅಳೆಯಲು ಸಾಧ್ಯವಿರುವುದಿಲ್ಲ.

4. ಭಾರತೀಯ ಲೆಕ್ಕಪತ್ರಗಳ ಪ್ರಮಾಣೀಕರಣ ಹಣಕಾಸು ತಃಖ್ತೆಗಳ ಕ್ರಮವಾದ ಅಂಶಗಳು – ಉಪಕ್ರಮವಾದ ಅಂಶಗಳು ಮತ್ತು ಇತರೆ ಅಗತ್ಯ ಪ್ರಕಟಣೆಗಳು (ಟಿಪ್ಪಣಿಗಳೂ ಸಹ ಹೆಚ್ಚಿನ ಮಾಹಿತಿಯನ್ನು ಒದಗಿಸುತ್ತವೆ) ಈ ಕೆಳಗಿನವುಗಳನ್ನು ಒಂಗೊಂಡಂತೆ ವರ್ಗೀಕರಣ, ಉಪ ವರ್ಗೀಕರಣಗಳಿಗೆ ಸಂಬಂಧಪಟ್ಟಂತೆ ಭಾರತೀಯ ಲೆಕ್ಕಪತ್ರಗಳ ಪ್ರಮಾಣೀಕರಣಕ್ಕಾಗಿ ಕಂಪನಿ ಕಾಯ್ದೆ 2013 – ಅನುಚ್ಛೇದ –II, ಪರಿಚ್ಛೇದ –III ರ ಅಗತ್ಯಾಂಶಗಳು ಪೂರ್ಣವಾಗಿ ಅನುಸರಣೆಯಾಗಿರುವುದಿಲ್ಲ.

a) ಭದ್ರತಾ ಠೇವಣಿಗಳು, ಮುಂಗಡ ಹಣ ಠೇವಣಿಗಳು, ಕಾರ್ಯಾಧಾರಿತ ಠೇವಣಿಗಳು, ಒಪ್ಪಂದ ಪಾವತಿಗೆ ಹೊಣೆಗಾರಿಕೆಗಳು, ಸರಬರಾಜು ಮತ್ತು ವೆಚ್ಚಗಳು ಚಾಲ್ತಿ ಮತ್ತು ಚಾಲ್ತಿಯಲ್ಲಿಲ್ಲದವುಗಳೆಂದು ವರ್ಗೀಕರಿಸಿಲ್ಲ.(ಟಿಪ್ಪಣಿ ಸಂಖ್ಯೆ: 7 ಗಮನಿಸಿ)

b) ಭಾರತೀಯ ಲೆಕ್ಕಪತ್ರಗಳ ಪ್ರಮಾಣೀಕರಣ ವಿಭಾಗ –II ಅನುಸೂಚಿ–III ಯು ಯಾವುದೇ ಕ್ರಮವಾದ ಅಂಶವನ್ನು ಒಪ್ಪಿಗೆ ಎಂದು ಗುರುತಿಸಿಲ್ಲ.(ಟಿಪ್ಪಣಿ ಸಂಖ್ಯೆ: 19 ಗಮನಿಸಿ)

5. ಚಿರಾಸ್ತಿ, ಘಟಕ ಮತ್ತು ಉಪಕರಣಗಳು, ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿ ಹಾಗೂ ಸವಕಳಿಯ ಬಗ್ಗೆ.

ಎ) ಕಂಪನಿಯು ಚಿರಾಸ್ತಿ ಮತ್ತು ಘಟಕ ಮತ್ತು ಉಪಕರಣಗಳ ಬಂಡವಾಳೀಕರಣದ ಕೆಲಸವನ್ನು ಪೂರ್ಣಗೊಳಿಸಬೇಕಿರುತ್ತದೆ ಹಾಗೂ ಭೌತಿಕವಾಗಿ ಪೂರ್ಣಗೊಂಡ ಯೋಜನೆಗಳು/ ಸ್ವತ್ತುಗಳು ಅನುಭೋಗಕ್ಕೆ ಯೋಗ್ಯವಾಗಿದ್ದು, ಇವುಗಳ ಸವಳೀಕರಣಕ್ಕೆ ಹವಣಿಕೆಯನ್ನು ಮಾಡಿರುವುದಿಲ್ಲ ಆದ ಕಾರಣ ಚಿರಾಸ್ತಿ, ಯಂತ್ರೋಪಕರಣಗಳು ಅಧಿಕ ಮೌಲ್ಯಯುತವಾಗಿದ್ದು ಹಾಗೂ ಸವಕಳಿ ವೆಚ್ಚವು ಕಡಿಮೆಯಾಗಿರುತ್ತದೆ.

ಬಿ) ಲೆಕ್ಕಪರಿಶೋಧನೆ, ಅಂತಿಮಗೊಳಿಸುವಿಕೆಯ ಹೊಂದಾಣಿಕೆ ಗುರುತಿಸುವಿಕೆ, ದಸ್ತಾವೇಜು, ಭೌತಿಕ ನಿಯಂತ್ರಣ ಮತ್ತು ಚಿರಾಸ್ತಿ, ಯಂತ್ರೋಪಕರಣಗಳು, ಒಡೆತನ, ವೆಚ್ಚದ ಹಂಚಿಕೆ ಪ್ರಸ್ತುತ ಬಂಡವಾಳೀಕರಣದಲ್ಲಿ ಕೆಲವು ಅನಿಶ್ಚತೆಗಳು ಕಂಡುಬಂದಿರುತ್ತದೆ.

ಸಿ) ಸರ್ಕಾರದಿಂದ ವರ್ಗಾವಣೆಗೊಂಡ ಸ್ವತ್ತುಗಳ ಜೀವಿತಾವಧಿಯನ್ನು ಬಂಡವಾಳೀಕರಣ ಸಮಯದಲ್ಲಿ ಹೊಸದಾಗಿರುವಂತೆ ಪರಿಗಣಿಸಲಾಗಿದೆ.ಆದ ಕಾರಣ ಚಿರಾಸ್ತಿ, ಯಂತ್ರೋಪಕರಣಗಳು ಅಧಿಕ ಮೌಲ್ಯಯುತವಾಗಿದ್ದು ಹಾಗೂ ಸವಕಳಿ ವೆಚ್ಚವು ಕಡಿಮೆಯಾಗಿರುತ್ತದೆ.(ಟಿಪ್ಪಣಿ ಸಂಖ್ಯೆ: 2.4 ಗಮನಿಸಿ)

ಭಾರತೀಯ ಲೆಕ್ಕಪತ್ರಗಳ ಪ್ರಮಾಣೀಕರಣ ಹಣಕಾಸು ತಃಖ್ತೆಗಳ ಮೇಲೆ ಮೇಲಿನ ವಿಚಾರಗಳ ಪರಿಣಾಮದ ಖಚಿತತೆಯನ್ನು ಹೇಳಲಾಗುವುದಿಲ್ಲ.

6. ದಾಖಲೆಗಳು ಮತ್ತು ಬೆಳವಣಿಗೆಗಳು, ಠೇವಣಿಗಳು, ಸ್ವೀಕೃತಿಗಳು ಮತ್ತು ಪ್ರಸ್ತುತ ಹೊಣೆಗಾರಿಕೆಗಳು ಮೊದಲಾದವುಗಳು ಖಾತೆಗಳ ಪುಸ್ತಕದೊಂದಿಗೆ ಲೋಕೋಪಯೋಗಿ ನಿಯಮಾನುಸಾರ ತಾಳೆಯಾಗುವುದಿಲ್ಲ. ಪ್ರಸ್ತುತ ಮಾಹಿತಿ ಇಲ್ಲದೆ ಇರುವುದರಿಂದ, ನಾವು ಹಣಕಾಸು ತಃಖ್ತೆಗಳ ಮೇಲೆ ಅವುಗಳ ಪ್ರಭಾವದ ಬಗ್ಗೆ ಖಚಿತವಾಗಿ ಹೇಳಲು ಕಷ್ಟ. ನಮ್ಮ ಕಳೆದ ವರ್ಷದ ವರದಿಯೂ ಇದೇ ಅಭಿಪ್ರಾಯ ವ್ಯಕ್ತಪಡಿಸಿತ್ತು.

7. ಕಂಪನಿಯ ವಿರುದ್ಧದ ವಿವಾದಿತ ಹಕ್ಕುಗಳ ಅನಿಷ್ಟಿತ ಭಾದ್ಯತೆಗಳು ದೃಢವಾಗಿಲ್ಲ ಮತ್ತು ಸಂಪೂರ್ಣವಾಗಿ ಬಹಿರಂಗವಾಗಿಲ್ಲ. ಪ್ರಸ್ತುತ ಮಾಹಿತಿ ಇಲ್ಲದೆ ಇರುವುದರಿಂದ, ನಾವು ಭಾರತೀಯ ಲೆಕ್ಕಪತ್ರಗಳ ಪ್ರಮಾಣೀಕರಣ ಹಣಕಾಸು ತಃಖ್ತೆಗಳ ಮೇಲೆ ಅವುಗಳ ಪ್ರಭಾವದ ಬಗ್ಗೆ ಖಚಿತವಾಗಿ ಹೇಳಲು ಕಷ್ಟ. ನಮ್ಮ ಕಳೆದ ವರ್ಷದ ವರದಿಯೂ ಇದೇ ಅಭಿಪ್ರಾಯ ವ್ಯಕ್ತಪಡಿಸಿತ್ತು. (ಟಿಪ್ಪಣಿ ಸಂಖ್ಯೆ: 30 ಗಮನಿಸಿ)

8. ಆಯಾ ಅವಧಿಯ ಬಿಲ್ಲುಗಳನ್ನು, ಹಳೆ ಬಿಲ್ಲುಗಳನ್ನು ಸಹ ಲೆಕ್ಕಹಾಕಿರುವುದಿಲ್ಲ ಹಾಗೂ ಸರಿಯಾದ ಅನುಮೋದನೆ ಪಡೆಯದೆ ಬಿಲ್ಲುಗಳನ್ನು ಹೆಚ್ಚಿಗೆ ಪ್ರಮಾಣದ ಕೆಲಸಕ್ಕೆ ಲೆಕ್ಕಹಾಕಿರುವುದು ಹೀಗೆ ಕೆಲವು ಅನಿಶ್ಚಿತತೆಗಳು ಲೆಕ್ಕಪರಿಶೋಧನೆಯಲ್ಲಿ ಕಂಡುಬಂದಿರುತ್ತವೆ. ಅದಾಗ್ಯೂ ಲೆಕ್ಕಪತ್ರಗಳ ಮೇಲೆ ಐ.ಎನ್.ಡಿ.ಎ.ಎಸ್.ನ ಪರಿಣಾಮವನ್ನು ಖಚಿತಪಡಿಸುವುದು ಸಾಧ್ಯವಿರುವುದಿಲ್ಲ. ನಮ್ಮ ಕಳೆದ ವರ್ಷದ ವರದಿಯಲ್ಲೂ ಯಥಾ ಪ್ರಕಾರದ ಅಂಶವನ್ನು ಹೊಂದಿರುತ್ತದೆ.(ಟಿಪ್ಪಣಿ ಸಂಖ್ಯೆ: 2.18 ಗಮನಿಸಿ)

9. ಹೆಚ್ಚುವರಿ, ಠೇವಣಿ, ಸ್ವೀಕಾರಾರ್ಹವಾದ ಗುತ್ತಿಗೆದಾರರು, ಪ್ರಸ್ತುತ ಹೊಣೆಗಾರಿಕೆಗಳು ವ್ಯಾಪಾರಿ ಠೇವಣಿ ಮತ್ತು ಸ್ಥಿರ ಠೇವಣಿಗಳು, ದೃಢೀಕರಣ, ಸಮನ್ವಯ ಮತ್ತು ಪರಿಣಾಮಕಾರಿ ಹೊಂದಾಣಿಕೆಗಳು ಆದರೂ ಭಾರತೀಯ ಲೆಕ್ಕಪತ್ರಗಳ ಪ್ರಮಾಣೀಕರಣ ಹಣಕಾಸು ತಃಖ್ತೆಗಳ ಮೇಲೆ ಅವುಗಳ ಪರಿಣಾಮವನ್ನು ಹೇಳಲಾಗದು.(ಟಿಪ್ಪಣಿ ಸಂಖ್ಯೆ: 2.22 ಗಮನಿಸಿ)

10. ಒಪ್ಪಂದದಂತೆ ಸರಿಯಾದ ಸಮಯಕ್ಕೆ ಯೋಜನೆ ಜಾರಿಗೊಳಿಸದೆ ಇದ್ದರೆ, ತಡವಾಗಿ ಜಾರಿಗೊಳಿಸುವುದಕ್ಕೆ ದಂಡ ವಿಧಿಸಿಲ್ಲ. ಇದೇ ವೇಳೆ ಇತರೆ ಆದಾಯ, ಲಾಭ, ತೆರಿಗೆಗೆ ಇರುವ ಸಾಧ್ಯತೆ ಮತ್ತು ಚಾಲ್ತಿಯಲ್ಲಿ ಇಲ್ಲದ ಸ್ವತ್ತುಗಳು – ಸಿ.ಡಬ್ಲ್ಯೂ.ಐ.ಪಿ.ಗಳನ್ನು ತೋರಿಸಲಾಯಿತು. ಚಾಲ್ತಿ ಸ್ವತ್ತುಗಳ ಬಗ್ಗೆ ಬೆಳಕು ಚೆಲ್ಲಲಿಲ್ಲ. ಆದರೂ ಭಾರತೀಯ ಲೆಕ್ಕಪತ್ರಗಳ ಪ್ರಮಾಣೀಕರಣ ಹಣಕಾಸು ತಃಖ್ತೆಗಳ ಮೇಲೆ ಅವುಗಳ ಪರಿಣಾಮವನ್ನು ಹೇಳಲಾಗದು.

11. ವಿವಿಧ ಬಗೆಯ ಆದಾಯ ಸಂಗ್ರಹಣ – ನೀರಿನ ಬಿಲ್, ಬಾಡಿಗೆ, ವಿದ್ಯುತ್ ಬಿಲ್, ವಾಹನ ನಿಲುಗಡೆ, ಮಳಿಗೆಗಳಲ್ಲಿ ಪ್ರವೇಶ ಶುಲ್ಕಗಳನ್ನು ಕೇಳಲಿಲ್ಲ, ಸಮಯಕ್ಕೆ ಸರಿಯಾಗಿ ಸಂಗ್ರಹಿಸಲಿಲ್ಲ. ಇದೇ ವೇಳೆ ಇತರೆ ಆದಾಯ, ಲಾಭ, ತೆರಿಗೆಗೆ ಇರುವ ಅವಕಾಶ ಮತ್ತು ಚಾಲ್ತಿ ಸ್ವತ್ತುಗಳನ್ನು ನಿರ್ಲಕ್ಷಿಸಲಾಯಿತು. ಆದರೂ ಭಾರತೀಯ ಲೆಕ್ಕಪತ್ರಗಳ ಪ್ರಮಾಣೀಕರಣ ಹಣಕಾಸು ತಃಖ್ತೆಗಳ ಮೇಲೆ ಅವುಗಳ ಪರಿಣಾಮವನ್ನು ಹೇಳಲಾಗದು.

12. ತಡವಾದ/ವಲ್ಲದ ಕೆಲವು ಅನಿವಾರ್ಯ ಸ್ಥಿರ ಅಗತ್ಯತೆಗಳಿಗೆ, ಅಂದರೆ, ಕೆಲಸದ ಬಿಲ್‌ಗಳು, ಪೂರೈಕೆ ಬಿಲ್‌ಗಳು, ಮುಖ್ಯ ಕಛೇರಿಯಲ್ಲಾದ ಖರ್ಚು ಮತ್ತು ರಾಜಿಯಾದ/ಕೈಬಿಟ್ಟ ಪ್ರಕರಣಗಳು ಮೊದಲಾದವುಗಳಲ್ಲಿನ ಹೊಣೆಗಾರಿಕೆ, ದಂಡ, ಬಡ್ಡಿ ಮೊದಲಾದ ಬಾಕಿಯನ್ನು ಕಂಪನಿ ಒದಗಿಸಿಲ್ಲ. ಈ ವೇಳೆ ಲಾಭಕ್ಕೆ ಹೆಚ್ಚಿನ ಮಹತ್ವ ನೀಡಿ ಇತರೆ ಪ್ರಸ್ತುತ ಹೊಣೆಗಾರಿಕೆಗಳನ್ನು ಮರೆಮಾಚಲಾಯಿತು. ಆದರೂ ಭಾರತೀಯ ಲೆಕ್ಕಪತ್ರಗಳ ಪ್ರಮಾಣೀಕರಣ ಹಣಕಾಸು ತಃಖ್ತೆಗಳ ಅವುಗಳ ಪರಿಣಾಮವನ್ನು ಹೇಳಲಾಗದು.

13. i) ನಿಧಿಗಳ ಬಳಕೆಖಾತೆ ಪುಸ್ತಕಗಳ ಪ್ರಕಾರ ನಿಧಿಗಳ ಬಳಕೆ (ಎರಡು ಕೆಲಸ ಮತ್ತು ಸ್ಥಾಪನೆ) ಬಂಡವಾಳ ಪ್ರಗತಿ ವರದಿ (ವಿಭಾಗಗಳಲ್ಲಿ) ಮತ್ತು ಬಳಕೆ ಪ್ರಮಾಣ ಪತ್ರದ ಸಾರಾಂಶದ ಜೊತೆಗೆ ಪೂರ್ಣವಾಗಿ ಹೊಂದಾಣಿಕೆಯಾಗುತ್ತಿರುವುದಿಲ್ಲ. ಇಂತಹ ಹೊಂದಾಣಿಕೆಯ ಅನುಪಸ್ಥಿತಿಯಲ್ಲಿ ಲೆಕ್ಕಪತ್ರಗಳ ಮೇಲೆ ಐ.ಎನ್.ಡಿ.ಎ.ಎಸ್.ನ ಪರಿಣಾಮವನ್ನು ಖಚಿತಪಡಿಸುವುದು ಸಾಧ್ಯವಿರುವುದಿಲ್ಲ.

i) ಭೂಸ್ವಾಧೀನ

ನಿಯಂತ್ರಣದ ಅನುಪಸ್ಥಿತಿ, ಒಟ್ಟು ಅಸಮರ್ಪಕ ಸಮನ್ವಯ, ಸಾರವಿಲ್ಲದ ದಾಖಲಾತಿಗಳು, ವಿಭಾಗಗಳಿಗೆ ಜಾಗದ ವರ್ಗಾವಣೆಗಳ ಅನುಚಿತ ಲೆಕ್ಕಾಚಾರ, ಹೊಂದಾಣಿಕೆಯಾಗದ ಸಾಲದ ಬಾಕಿ, ವಿಶೇಷ ಭೂಸ್ವಾಧೀನಾಧಿಕಾರಿಗಳ ಪುಸ್ತಿಕೆಗಳೊಂದಿಗೆ ಹೊಂದಾಣಿಕೆಯಾಗಿರುವುದಿಲ್ಲ ಎಂಬ ಅಂಶಗಳನ್ನು ಹಣಕಾಸಿನ ನಮೂದುಗಳು ಭೂಸ್ವಾಧೀನಕ್ಕೆ ಸಂಬಂಧಿಸಿದಂತೆ ಗಮನಿಸಲಾಯಿತು.

14. **ಎ)** ಕಂಪನಿಯು, ಕರ್ನಾಟಕ ಸರ್ಕಾರದಿಂದ ರೂ.1,34,156/– ಲಕ್ಷಗಳನ್ನು (ಕಳೆದ ವರ್ಷ ರೂ.1.97.141/– ಲಕ್ಷಗಳು) ಇಕ್ವೀಟಿ ಹಣವಾಗಿಪಡೆದಿರುತ್ತದೆ. ಹಾಗೂ ಇದನ್ನು ಷೇರು ಅರ್ಜಿಗಳ ಬಾಕಿ ಹಣ ಹಂಚಿಕೆಯಲ್ಲಿ ಬಹಿರಂಗಪಡಿಸಿರುತ್ತದೆ. ಅದಾಗ್ಯೂ ಕಂಪನಿ ಕಾಯ್ದೆ 2013 ಮತ್ತು ಇದರ ಉಪಬಂಧಗಳನ್ನು ಅನುಸರಿಸುತ್ತಿಲ್ಲ ಹಾಗೂ ಈ ಹಣವನ್ನು ಗೊತ್ತುಪಡಿಸಿದ ಬ್ಯಾಂಕ್ ಖಾತೆಯಲ್ಲಿ ನಿರ್ವಹಿಸಲಾಗಿಲ್ಲ. (ಟಿಪ್ಪಣಿ ಸಂಖ್ಯೆ: 15(2) ಗಮನಿಸಿ).

ಬಿ) ಕಂಪನಿ ಕಾಯ್ದೆ 2013 ರ ಪರಿಚ್ಛೇದ 46(2) ರಡಿ ಷೇರು ಅರ್ಜಿಗಳ ಹಣವನ್ನು ಸ್ವೀಕೃತ ದಿನಾಂಕದಿಂದ 60 ದಿನಗಳೊಳಗೆ ಹಂಚಿಕೆ ಮಾಡಬೇಕಾಗಿದೆ.ಈ ಅಗತ್ಯವು ಅನುಸರಣೆಯಲ್ಲಿರುವುದಿಲ್ಲ.

15. **ಎ)** 2017–18ನೇ ಸಾಲಿನಲ್ಲಿ ಕಂಪನಿಯು ಸೇವಾ ತೆರಿಗೆ ಇಲಾಖೆಯಿಂದ ಬೇಡಿಕೆ ಸೂಚನೆ ರೂ.3.73 ಕೋಟಿಗಳಿಗೆ ಸ್ವೀಕರಿಸಿರುತ್ತದೆ. ತದನಂತರ ಸೇವಾ ತೆರಿಗೆ ಇಲಾಖೆಯು ಬ್ಯಾಂಕ್ ಖಾತೆಯನ್ನು ವಶಪಡಿಸಿಕೊಂಡು ರೂ.2.00 ಕೋಟಿ ಹಣವನ್ನು ನಗದೀಕರಿಸಿಕೊಳ್ಳಲಾಗಿದೆ. ಕಂಪನಿ ಹೇಳಿಕೆ ಪ್ರಕಾರ ಸೇವಾ ತೆರಿಗೆ ಇಲಾಖೆಗೆ ಮನವಿ ಸಲ್ಲಿಸಬೇಕಾಗಿರುತ್ತದೆ. ಈ ಮೇಲಿನ ನಗದು ಹಣವನ್ನು ಶಾಸನಬದ್ಧ ಅಧಿಕಾರಿಗಳೊಂದಿಗಿರುವ ಠೇವಣಿ ಎಂದು ಲೆಕ್ಕಚಾರ ಮಾಡಲಾಗಿದೆ. ಲೆಕ್ಕಪತ್ರಗಳ ಪುಸ್ತಿಕೆಯಲ್ಲಿ ಸೂಕ್ತ ನಿಬಂಧನೆ ಮಾಡಲಾಗಿದೆ. ಆದ್ದರಿಂದ ಸದರಿ ಮೊತ್ತವನ್ನು ಅನಿಶ್ಚಿತ ಹೊಣೆಗಾರಿಕೆಯಲ್ಲಿ ಬಹಿರಂಗಪಡಿಸುವ ಅವಶ್ಯಕತೆ ಇರುವುದಿಲ್ಲ.

ಬಿ) ರೂ.35.97 ಕೋಟಿಯ ಕಂಪನಿ ವಿರುದ್ಧದ ದಾವೆಯನ್ನು ಸಾಲ ಎಂದು ಸ್ವೀಕರಿಸಿರುವುದಿಲ್ಲ. ಈ ಅಂಶವನ್ನು ಲೆಕ್ಕಪತ್ರಗಳ ಟಿಪ್ಪಣಿ ಸಂಖ್ಯೆ: 30ರಲ್ಲಿ ಬಹಿರಂಗಪಡಿಸಿರುವುದಿಲ್ಲ.(ಅನಿಶ್ಚಿತ ಹೊಣೆಗಾರಿಕೆಗಳು) 31–03–2019 ರ ದಿನದಂದು.

16. ಕಂಪನಿಯು ದಿನಾಂಕ:20–06–2016 ರಿಂದ ದಿನಾಂಕ: 30–09–2018 ವರೆಗಿನ ಅವಧಿಗೆ ಕೆ.ಎಸ್.ಐ.ಎಸ್.ಎಫ್. ರವರು ಕೆ.ಆರ್.ಎಸ್. ನಲ್ಲಿ ನೀಡಿದ ಭದ್ರತಾ ಸೇವೆ ನಿರ್ವಹಿಸಿದ್ದಕ್ಕಾಗಿ ರೂ.7.50 ಕೋಟಿಗಳ (ಕಳೆದ ವರ್ಷ ರೂ.5.47 ಕೋಟಿ) ಹಕ್ಕನ್ನು ಪಡೆದಿರುತ್ತದೆ. ಕಂಪನಿಯು 6 ತಿಂಗಳು ಅಂದರೆ, ದಿನಾಂಕ:01–10–2018 ರಿಂದ 31–03–2019ರವರೆಗೆ ಲೆಕ್ಕಪತ್ರದಲ್ಲಿ ಇದನ್ನು ಹೊಣೆಗಾರಿಕೆಯಾಗಿ ನೀಡಿರುವುದಿಲ್ಲ. ಹೀಗಾಗಿ ಹೊಣೆಗಾರಿಕೆಯು ಕಡಿಮೆಯಾಗಿರುತ್ತದೆ.

17. **ಎ)** ಲೆಕ್ಕಪರಿಶೋಧಕರು ಮೈಸೂರಿನ ಕೆ.ಆರ್.ಎಸ್. ಅಣೆಕಟ್ಟನ್ನು ಪರಿಶೋಧನೆಗಾಗಿ ಭೇಟಿ ನೀಡಿದಾಗ, ಕಂಪನಿಯು ಪ್ರವೇಶ ಶುಲ್ಕ ಹಾಗೂ ಇತರೆ ಶುಲ್ಕಗಳನ್ನು ಸಂಗ್ರಹಿಸಿದ್ದು, ಈ ಶುಲ್ಕಗಳಿಗೆ ದಿನಾಂಕ: 01–07–2017 ರಿಂದ ಜಾರಿಗೆ ಬಂದ ಜಿ.ಎಸ್.ಟಿ.ಯು ಅನ್ವಯಿಸಿದರೂ ಅಳವಡಿಸಿಕೊಂಡಿರುವುದಿಲ್ಲ. ನಮ್ಮ ವಿಚಾರಣೆಯಲ್ಲಿ ಇಂತಹ ಯಾವುದೇ ಶುಲ್ಕಗಳನ್ನು ಸಂಗ್ರಹಿಸಿರುವುದಿಲ್ಲ. ಅದಾಗ್ಯೂ, ವರ್ಷದಲ್ಲಿ ಜಿಎಸ್‌ಟಿ ನಿಬಂಧನೆ ರೂ.2,40,68,244.11 ಗಳನ್ನು ದಿನಾಂಕ: 01–07–2017 ರಿಂದ 31–03–2019ರವರೆಗೆ ಲೆಕ್ಕಪತ್ರಗಳ ಪುಸ್ತಿಕೆಯಲ್ಲಿ ದಾಖಲಿಸಲಾಗಿದೆ. ಅಣೆಕಟ್ಟು ಸಮೀಕ್ಷೆಗೆ ಸಂಬಂಧಿಸದ ಜಿಎಸ್‌ಟಿ ಹೊಣೆಗಾರಿಕೆ ಮತ್ತು ಜೆ.ಎಲ್.ಆರ್.ನ ಬಾಡಿಗೆ ರಶೀದಿಗಳ ವಿವರಗಳನ್ನು ಒದಗಿಸಿರುವುದಿಲ್ಲ. ಇದು 31–03–2019ರ ದಿನದಂದು ಪಾವತಿಗೆ ಒಳಪಟ್ಟಿರುವುದಿಲ್ಲ.

ಬಿ) ಈ ಮೇಲೆ ತಿಳಿಸಿರುವ ಜಿಎಸ್‌ಟಿ ಹೊಣೆಗಾರಿಕೆಯನ್ನು ಪ್ರತ್ಯೇಕವಾಗಿ ಸಂಗ್ರಹಿಸಿರುವುದಿಲ್ಲ ಎನ್ನುವುದನ್ನು ಗಮನಿಸಬಹುದಾಗಿದೆ. ಆದ್ದರಿಂದ ಮೇಲಿನ ನಿಬಂಧನೆಯನ್ನು ಆದಾಯ ಖಾತೆಯಿಂದ ಹಿಂದಿನ ವರ್ಷವನ್ನು (01–07–2017 ರಿಂದ 31–03–2018ವರೆಗೆ) ಸೇರಿದಂತೆ ವ್ಯಯ ಮಾಡಿ ರಚಿಸಲಾಗಿದೆ. ಹಿಂದಿನ ವರ್ಷದ ಮೊತ್ತವನ್ನು ಖಚಿತಪಡಿಸಲು ಸಾಧ್ಯವಿರುವುದಿಲ್ಲ.

18. ಕಂಪನಿಯ ಜಂಗಲ್ ಲಾಡ್ಜ್ಸ್ ಖಾತೆಯನ್ನು ಪರಿಶೀಲಿಸಿದಾಗ ದಿನಾಂಕ: 31–03–2019 ಗೆ ಬರಬೇಕಾದ ಬಾಕಿ ರೂ. 2.46 ಕೋಟಿಗಳಾಗಿರುತ್ತದೆ (ಕಳೆದ ವರ್ಷ ರೂ.1.90 ಕೋಟಿಗಳು). ವರ್ಷದಲ್ಲಿ ಕಂಪನಿಯು ರೂ.56.66 ಲಕ್ಷಗಳ (ಕಳೆದ ವರ್ಷ ರೂ.1.97 ಕೋಟಿ) ಹೆಚ್ಚುವರಿ ಸಾಲವನ್ನು ಪಡೆದಿದ್ದು, ಅದರ ವಿವರಗಳನ್ನು ಒದಗಿಸಿರುವುದಿಲ್ಲ. ಕಳೆದ ವರ್ಷದ ರೂ.7.00 ಲಕ್ಷಗಳನ್ನು ಕಡಿಮೆಗೊಳಿಸುವಿಕೆಯು ಪ್ರಸ್ತತ ವರ್ಷದಲ್ಲಿಯೂ ಮುಂದುವರೆದಿರುತ್ತದೆ.

19. ವಿದ್ಯುತ್ ವೆಚ್ಚಗಳ ಬಾಕಿ ಪಾವತಿಯು 6 ತಿಂಗಳಿಗಿಂತ ಹೆಚ್ಚಾಗಿದ್ದು, ಸದರಿ ಅಂಶವನ್ನು ಲೆಕ್ಕಪತ್ರದ ಪುಸ್ತಿಕೆಯಲ್ಲಿ ಒದಗಿಸಿರುವುದಿಲ್ಲ. ಹೀಗಾಗಿ ವೆಚ್ಚಗಳು ಕಡಿಮೆ ಇದ್ದು ಮತ್ತು ಹೊಣೆಗಾರಿಕೆಗಳು ಕಡಿಮೆಯಾಗಿರುತ್ತದೆ. ಒಟ್ಟಾರೆಯಾಗಿ, ಬಾಕಿ ಪಾವತಿಯನ್ನು ಖಚಿತಪಡಿಸಲು ಸಾಧ್ಯವಿರುವುದಿಲ್ಲ.

20. ಕಂಪನಿಯು (ಕಾರ್ಯಪಾಲಕ ಇಂಜಿನಿಯರ್, ರಾಮನಗರ ವಿಭಾಗ) ಹಿಂದಿನ ವರ್ಷದಲ್ಲಿ (ಉಲ್ಲೇಖ ಸಂಖ್ಯೆ:37953/2001) ರೂ.82.43 ಲಕ್ಷಗಳನ್ನು ಕೃಪಾಲಿನಿ ಅರಸ್, ಮೈಸೂರು ರವರಿಂದ ವಸೂಲಿ ಮಾಡಲು ನ್ಯಾಯಾಲಯದ ಆದೇಶವನ್ನು ಪಡೆದಿರುತ್ತದೆ. ವಸೂಲಿ ಮಾಡಬೇಕಾದ ಮೊತ್ತವನ್ನು ಲೆಕ್ಕಪತ್ರಗಳ ಪುಸ್ತಿಕೆಯಲ್ಲಿ ದಾಖಲಿಸಿರುವುದಿಲ್ಲ. ಹೀಗಾಗಿ, ಅಪ್ರಸ್ತುತ ಸ್ವತ್ತುಗಳು ಕಡಿಮೆಯಾಗಿರುತ್ತದೆ.

21. ಕಂಪನಿ ಕಾಯ್ದೆ 2013ರ ಪರಿಚ್ಛೇದ 128(1) ರಡಿ ಲೆಕ್ಕಪತ್ರಗಳ ಪುಸ್ತಿಕೆಗಳನ್ನು ಸಂಚಯದ ಆಧಾರದ ಮೇಲೆ ಮತ್ತು ದ್ವಿನಮೂದು ವ್ಯವಸ್ಥೆ ಅನುಸಾರ ನಿರ್ವಹಣೆ ಮಾಡಬೇಕಾಗಿದ್ದು, ಇಲ್ಲವಿದ್ದಲ್ಲಿ ಪುಸ್ತಿಕೆಗಳ ನಿರ್ವಹಣೆ ಮಾಡಿರುವುದಿಲ್ಲ ಎಂದು ಪರಿಗಣಿಸಲಾಗಿದೆ. ಮಾಹಿತಿ ಮತ್ತು ಗಮನಾರ್ಹ ಲೆಕ್ಕಪತ್ರ ಕಾರ್ಯ ನೀತಿ ಟಿಪ್ಪಣಿ ಸಂಖ್ಯೆ:2.1 ರ ಹೇಳಿಕೆಯಂತೆ ಹಣಕಾಸಿನ ಲೆಕ್ಕಪತ್ರಗಳನ್ನು ಐ.ಎನ್.ಡಿ.ಎ.ಎಸ್. ಅಡಿ ಐತಿಹಾಸಿಕ ವೆಚ್ಚ ಸಂಪ್ರದಾಯದ ಅನುಸಾರ ತಯಾರಿಸಲಾಗಿದೆ. ಆದರೆ ಕಂಪನಿಯು ವ್ಯವಹಾರಿಕವಾಗಿ ವಿದ್ಯುತ್ ವೆಚ್ಚಗಳಗಳ ಪಾವತಿ, ಕೆ.ಎಸ್.ಐ.ಎಸ್.ಎಫ್.ಗೆ ಪಾವತಿಸುವ ಮೊತ್ತಗಳು ನಗದು ಆಧಾರದ ಮೇಲೆ ಗುರುತಿಸಲಾಗಿದ್ದು, ಇದು ಕಂಪನಿ ಕಾಯ್ದೆ 2013 ಪರಿಚ್ಛೇದ 128(1) ರಡಿ ಸಂಚಯ ಆಧಾರದ ಲೆಕ್ಕಾಚಾರದ ವಿರುದ್ಧವಾಗಿರುತ್ತದೆ.

22. ಕರ್ನಾಟಕ ಗ್ರಾಮೀಣ ಮೂಲಭೂತ ಸೌಕರ್ಯ ಅಭಿವೃದ್ಧಿ ನಿಯಮಿತ (ಕೆ.ಆರ್.ಐ.ಡಿ.ಎಲ್) ಮತ್ತು ನಿರ್ಮಿತಿ ಕೇಂದ್ರದಿಂದ ನಿರ್ವಹಿಸಲ್ಪಟ್ಟ ಕೆಲಸಗಳ ಉಸ್ತುವಾರಿ/ಅಳತೆ ಮಾಡುವ ವ್ಯವಸ್ಥೆಯು ಕಂಪನಿಯಲ್ಲಿರುವುದಿಲ್ಲ. ವೆಚ್ಚಗಳನ್ನು ಏಜನ್ಸಿ ಸಲ್ಲಿಸಿದ ಬಳಕೆ ಪ್ರಮಾಣಪತ್ರದ ಆಧಾರದ ಮೇಲೆ ಯಾವುದೇ ಗಣನೀಯ ದಾಖಲೆಗಳು ಅಂದರೆ, ಅಮೂರ್ತ ಅಳತೆ ಪುಸ್ತಕಗಳು, ಆರ್.ಎ.ಬಿಲ್‌ಗಳ ಪ್ರತಿಗಳು, ಕೆಲಸಗಳ ನಿರ್ವಹಣೆಗೆ ಸಂಬಂಧಿಸಿದ ಪೂರ್ಣಗೊಂಡ ಪ್ರಮಾಣಪತ್ರ ಇತ್ಯಾದಿಗಳನ್ನು ಕಾಯ್ದಿರಿಸಲಾಗಿದೆ. ಕಂಪನಿಯು ಇಂತಹ ಕೆಲಸಗಳನ್ನು ಏಜನ್ಸಿ ಮುಖೇನ ನಿರ್ವಹಣೆಗೆ ಬಲವಾದ ವಿಧಾನಗಳನ್ನು ಕೈಗೊಳ್ಳಬೇಕು.

23. ಲೆಕ್ಕ ಪರಿಸರ ಮತ್ತು ತಂತ್ರಾಂಶ

ಎ) ಹಣಕಾಸಿನ ಲೆಕ್ಕಾಚಾರವನ್ನು ಟ್ಯಾಲಿ–ಅಕೌಂಟಿಂಗ್ ತಂತ್ರಾಂಶ– ಬಹುಬಳಕೆದಾರರ – ಬಹು ಸ್ಥಳ–ಇ.ಆರ್.ಪಿ.9 ವರ್ಷನ್‌ಗಳ ಮುಖೇನ ತಯಾರಿಸಲಾಗಿದೆ. ಏಕ ಪ್ರಯೋಗಿಕ ಸಮತೋಲನವು ಮಾಹಿತಿಯನ್ನು ದಾಖಲಿಸಿದೆ ಎಂದು ಗೋಚರಿಸುತ್ತೆ ಆದಾಗ್ಯೂ ಕ್ರೋಡಿಕರಿಸಿದ ಪ್ರಯೋಗಿಕ ಸಮತೋಲನದಲ್ಲಿ ಕೆಲವು ಮುದ್ರಣ ದೋಷಗಳಿದ್ದು, ಅದರಿಂದ ಸಾಮನ್ಯ ಕಡತದಲ್ಲಿನ ಬಾಕಿಯು ಎರಡು ಬಾರಿ ಮುದ್ರಣಗೊಳ್ಳುತ್ತಿದೆ (ನಕಲು ದಾಖಲೆಗಳು). ಆದರೆ, ಈ ಮೇಲಿನವುಗಳ ಒಟ್ಟುಗೊಳಿಸುವಾಗ ಒಂದೇ ಲೆಕ್ಕದಲ್ಲಿ ಪರಿಗಣಿಸಲಾಗುತ್ತಿದೆ.ಈ ಪರಿಸ್ಥಿತಿಯನ್ನು ತುರ್ತಾಗಿ ಸರಿಪಡಿಸಬೇಕಿರುತ್ತದೆ.

ಬಿ) ವಲಯ ಲೆಕ್ಕಪತ್ರ ಕೇಂದ್ರಗಳ ಅಸಮರ್ಪಕ ಲೆಕ್ಕಾಚಾರ ಜ್ಞಾನದ ಜೊತೆಗೆ ಪರಿಶೀಲನೆ ಮತ್ತು ನಿಯಂತ್ರಣಗಳ ಅನುಪಸ್ಥಿತಿ, ಆಧಾರಿತ ದಾಖಲೆಗಳ ಜೊತೆಗೆ ಹಣಕಾಸಿನ ದಾಖಲೆಗಳ ಅನರ್ಹ ರೀತ್ಯಾ ಊರ್ಜಿತಗೊಂಡಿರುವುದಿಲ್ಲ ಮತ್ತು ಮೇಲ್ವಿಚಾರಣೆ ಇಲ್ಲದ ಲೆಕ್ಕಾಚಾರವು ಹೊರಗುತ್ತಿಗೆಯವರಿಂದ ನಿರ್ವಹಿಸಲ್ಪಟ್ಟಿದೆ.ಆದ್ದರಿಂದ ಲೆಕ್ಕಪತ್ರಗಳ ತಪ್ಪು ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ. ಇದು ಲೆಕ್ಕಪತ್ರಗಳ ನ್ಯಾಯೋಚಿತ ಪ್ರಸ್ತುತಿಯ ಮೇಲೆ ಪ್ರಭಾವ ಬೀರುತ್ತದೆ.

ಸಿ) ಎಲ್ಲ ವ್ಯವಹಾರಗಳ ಆಧಾರಿತ ದಾಖಲೆಗಳು / ಸಾಕ್ಷಿ ವಿಕೇಂದ್ರೀಕೃತ ರಚನೆಯಲ್ಲಿ ವಿಭಾಗ ಮತ್ತು ಉಪ ವಿಭಾಗಗಳಲ್ಲಿ ಲಭ್ಯವಿರುತ್ತದೆ. ಆದ್ದರಿಂದ ಇಂತಹ ಆಧಾರಿತ ದಾಖಲೆಗಳ ಪರಿಶೀಲನೆ ನಮ್ಮ ವ್ಯಾಪ್ತಿಗೆ ನಿರ್ಬಂಧಿತವಾಗಿತ್ತು.

24. ಎಸ್.ಸಿ.ಪಿ., ಎಸ್.ಡಿ.ಪಿ ಮತ್ತು ಎಸ್.ಟಿ.ಪಿ. ಕಾರ್ಯಗಳು

ಟಿಪ್ಪಣಿ ಸಂಖ್ಯೆ: 14 ಗಮನಿಸಿ – ಇತರೆ ಪ್ರಸ್ತುತ ಸ್ವತ್ತುಗಳು – ಗುತ್ತಿಗೆದಾರರಿಗೆ ನೀಡಿದ ಮುಂಗಡ ಎಸ್.ಸಿ.ಪಿ., ಎಸ್.ಡಿ.ಪಿ. ಮತ್ತು ಎಸ್.ಟಿ.ಪಿ. ಕಾರ್ಯಗಳಿಗೆ ಸಂಬಂಧಿಸಿದಂತೆ ಗುತ್ತಿಗೆದಾರರ ಬಿಲ್ಲುಗಳ ಲೆಕ್ಕಾಚಾರದಲ್ಲಿ ಕೆಲವು ಪಾರಂಪರಿಕ ಕೊರತೆಗಳು ಕಂಡುಬಂದಿರುತ್ತದೆ ಹಾಗೂ ಅದರ ಅನುಗುಣವಾಗಿ ವಿಭಾಗಗಳಿಗೆ ಮಾಡಿದ ಹಣ ಬಿಡುಗಡೆ, ಇದರ ಫಲಿತಾಂಶವಾಗಿ ಈ ಮೇಲಿನ ಮುಂಗಡ ಖಾತೆಯಲ್ಲಿ ಮಹತ್ವದ ಸಾಲದ ಬಾಕಿಗಳಿರುತ್ತವೆ. ವಿವರಗಳು ಕೆಳಕಂಡಂತಿವೆ;

ಕ್ರ. ಸಂ.	ವಲಯ	ವಿಭಾಗ	ಸಾಲದ ಬಾಕಿ: ರೂ.
1	ಗೊರೂರು	ಹೆಚ್.ಆರ್.ಬಿ.ಸಿ. – ಹೊಳೆನರಸೀಪುರ	2,22,31,477
2		ಹೆಚ್.ಆರ್.ಬಿ.ಸಿ. – ಪಾಂಡವಪುರ	23,03,110
3		ಹೆಚ್.ಆರ್.ಬಿ.ಸಿ. – ಚನ್ನರಾಯಪಟ್ಟಣ	115,26,76,083
4		ವೈ.ಪಿ.ಡಿ. – ಬೇಲೂರು	4,39,590
5		ಹೆಚ್.ಆರ್.ಬಿ.ಸಿ. – ನೆಲಮಂಗಳ	93,28,713
6	ತುಮಕೂರು	ತುಮಕೂರು	60,91,804
		ಒಟ್ಟು	**119,30,70,777**

II. ಮೈಸೂರು ವಲಯದಲ್ಲಿ, ಮುಂಗಡ ಖಾತೆಯಲ್ಲಿ ಸ್ವೀಕೃತವಾದ ಮೊತ್ತಗಳ ಮಟ್ಟಕ್ಕೆ ಬಿಲ್ಲುಗಳನ್ನು ಗಣನೆಗೆ ತೆಗೆದುಕೊಳ್ಳಲಾಗಿರುತ್ತದೆ ಮತ್ತು ವರ್ಷಾಂತ್ಯಕ್ಕೆ ಬಾಕಿ ಉಳಿದಿರುವುದಿಲ್ಲ. ಇದರಿಂದಾಗಿ ಲೆಕ್ಕಪತ್ರಗಳ ನ್ಯಾಯೋಚಿತ ಪ್ರಸ್ತುತಿಯ ಮೇಲೆ ಪ್ರಭಾವ ಬೀರುತ್ತದೆ.

III. ತದನಂತರ, ಎಸ್.ಸಿ.ಪಿ ಮತ್ತು ಟಿ.ಎಸ್.ಪಿ. ಕಾರ್ಯಗಳಿಗೆ ಸರ್ಕಾರದ ಬಳಕೆಯಾಗದ ಅನುದಾನ ಟಿಪ್ಪಣಿ ಸಂಖ್ಯೆ:21 ರಲ್ಲಿ ಬಹಿರಂಗಪಡಿಸಿದಂತೆ ರೂ.1354,70,61,883/–ಗಳು ಕಡಿಮೆಯಾಗಿರುತ್ತದೆ.

IV. ಎಸ್.ಸಿ.ಪಿ., ಎಸ್.ಡಿ.ಪಿ. ಮತ್ತು ಎಸ್.ಟಿ.ಪಿ.ಸಾಲದಾತರು ಗುತ್ತಿಗೆದಾರರ ಆಧಾರದ ಮೇಲೆ ಪರಿಗಣಿಸಲಾಗಿರುವುದಿಲ್ಲ. ಇದನ್ನು ವಿಭಾಗ / ಕಾರ್ಯದ ಆಧಾರದ ಮೇಲೆ ಪರಿಗಣಿಸಲಾಗಿರುತ್ತದೆ.ಆದ್ದರಿಂದ ಪ್ರತ್ಯೇಕ ಗುತ್ತಿಗೆದಾರ ಬಾಕಿ ಖಚಿತವಾಗಿರುವುದಿಲ್ಲ ಮತ್ತು ಬಾಕಿಯ ದೃಢೀಕರಣ ಸಾಧ್ಯವಿರುವುದಿಲ್ಲ. ಮುಂದುವರೆದು, ಗುತ್ತಿಗೆದಾರರ ಹೆಸರಿನ ಅನುಪಸ್ಥಿತಿಯಲ್ಲಿ ಟಿ.ಡಿ.ಎಸ್. ಕಡಿತ ಖಚಿತಪಡಿಸಲು ಸಾಧ್ಯವಿರುವುದಿಲ್ಲ.

25. ಆಂತರಿಕ ಲೆಕ್ಕಪರಿಶೋಧನೆ

ನಮಗೆ 2018–19ನೇ ಸಾಲಿನ ಆಂತರಿಕ ಲೆಕ್ಕಪರಿಶೋಧನೆ ವರದಿಗಳು ಲಭ್ಯವಾಗಿರುವುದಿಲ್ಲ.

26. ಶಾಸನಬದ್ಧ ಅನುಪಾಲನೆಗಳು

ಅನನುಪಾಲನೆಗಳು, ಅಸಂಗತತೆಗಳು ಮತ್ತು ಕೊರತೆಗಳನ್ನು ಶಾಸನಬದ್ಧ ಅನುಪಾಲನೆಗಳಲ್ಲಿ ಸಾಮಾನ್ಯವಾಗಿ ಗಮಿನಿಸಲಾಗಿದೆ ಹಾಗೂ ಕೆಳಗಿನಂತೆ ನಿರ್ದಿಷ್ಟವಾಗಿ ಕಂಡುಬಂದಿದೆ:

- ಆದಾಯ ತೆರಿಗೆ ಕಾಯ್ದೆ, 1961 ರ ಪರಿಚ್ಛೇದ 194 ಸಿ ರಡಿ ವಿಭಾಗಗಳಲ್ಲಿ ಭದ್ರತೆ ಮತ್ತು ಗುತ್ತಿಗೆ / ಸಾಮಾನ್ಯ ಸಿಬ್ಬಂದಿಯ ಪಾವತಿಯ ಮೇಲಿನ ಟಿ.ಡಿ.ಎಸ್. ಕಡಿತ.
- ಸರಕು ಮತ್ತು ಸೇವೆ ತೆರಿಗೆ ಕಾಯ್ದೆ
  - * ಅಕ್ಟೋಬರ್ 2018 ರಲ್ಲಿ ವಿಳಂಬವಾದ ನೋಂದಣಿ (ಪಿ.ಎ.ಎನ್. ಆಧಾರಿತ)

* ಜಿ.ಎಸ್.ಟಿ.ಗೆ ಸಂಬಂಧಿಸಿದಂತೆ ಟಿ.ಎ.ಎನ್. ಆಧಾರಿತ ವಿಳಂಬವಾದ ನೋಂದಣಿ (ವಿಭಾಗಗಳಿಗೆ) – ಟಿ.ಡಿ.ಎಸ್ ಉದ್ದೇಶಕ್ಕಾಗಿ. ಕೆಲವು ವಿಭಾಗಗಳ ನೋಂದಣಿಯು ಇನ್ನೂ ಪೂರ್ಣಗೊಂಡಿರುವುದಿಲ್ಲ.
* ಇನ್‌ಪುಟ್ ಕ್ರೆಡಿಟ್ ಅನ್ನು ಬಳಕೆ ಮಾಡಿರುವುದಿಲ್ಲ – ವ್ಯವಹಾರ ಮತ್ತು ಬಂಡವಾಳಗಳೆರಡರ ಇನ್‌ಪುಟ್ ಲೆಕ್ಕಾಚಾರ ಮತ್ತು ಆರ್.ಸಿ.ಎಂ. ರವಾನೆ, ಅನ್ವಯವಾಗುವಲ್ಲಿ.
* ಪಾವತಿಸದ ಬಾಕಿ – ವಯಸ್ಸು ವಿಶ್ಲೇಷಣೆ
* ವಿಳಂಬದ ಪಾವತಿಗಳನ್ನು ಗಮನಿಸಲಾಯಿತು.
* ಗುತ್ತಿಗೆದಾರರ ಟಿ.ಡಿ.ಎಸ್.ನ ನೇರ ಮರುಪಾವತಿಯನ್ನು ಕಡಿತಗೊಳಿಸಬಾರದಿತ್ತು.

- ಹೊಣೆಗಾರಿಕೆಯ ದೃಢೀಕರಣ / ಶಾಸನಬದ್ಧ ಬಾಕಿಗಳ ಪಾವತಿಗೆ ಸಂಬಂಧಿಸದಂತೆದಾಖಲಾತಿ ಮತ್ತು ನಿಯಂತ್ರಣಗಳ ಅಸಮರ್ಪಕತೆ ಕಂಡುಬಂದಿರುತ್ತದೆ.
- ಸರ್ಕಾರದ ಆದೇಶ ಸಂಖ್ಯೆ :ಈ ಆ(Spl) 219 PEN 2012 ದಿನಾಂಕ: 30–01–2014 ರ ಅನನುಪಾಲನೆ ಫಲಿತಾಂಶವಾಗಿ ದಿನಾಂಕ:01–04–2006 ರಿಂದ 31–03–2019ರವರೆಗೆ ಅನಿಬಂಧಿತ ಹೊಸ ಪಿಂಚಣಿ ಯೋಜನೆಯಡಿ ಉದ್ಯೋಗಿಗಳಿಗೆ ಉದ್ಯೋಗದಾತರ ಕೊಡುಗೆ. ಸಂಬಂಧಿತ ಮಾಹಿತಿಯ ಅನುಪಸ್ಥಿತಿಯಲ್ಲಿ ಹಣಕಾಸಿನ ಲೆಕ್ಕಪತ್ರಗಳ ಮೇಲಿನ ಪ್ರಭಾವವನ್ನು ಖಚಿತಪಡಿಸಲು ಸಾಧ್ಯವಿರುವುದಿಲ್ಲ.

27. ಬ್ಯಾಂಕಿಂಗ್ ಮತ್ತು ಖಜಾನೆ

ಎ. ಹಣದ ಸಾಗಣೆಯು ದಿನಾಂಕ: 31–03–2019 ದಿನದಂದುಗುತ್ತಿದ್ದು, ಮುಂದಿನ ಕ್ರೆಡಿಟ್ ದಿನಾಂಕಗಳನ್ನು ಬ್ಯಾಂಕ್‌ಗಳಿಗೆ ಒದಗಿಸಲಾಗಿರುವುದರಿಂದ ಎಲ್ಲ 3 ವಲಯಗಳಲ್ಲಿ ಮೊತ್ತ ರೂ.26,95,25,856/–ಗಳ ಪೂರ್ಣವಾಗಿ ಹೊಂದಾಣಿಕೆಯಾಗಿರುತ್ತದೆ. ಹೊಂದಾಣಿಕೆಯ ನಂತರವೂ ಸಾಧ್ಯವಿರುವ ರೈಟ್–ಆಫ್‌ಗಳ ಪ್ರಭಾವವನ್ನು ಖಚಿತಪಡಿಸಲು ಸಾಧ್ಯವಿರುವುದಿಲ್ಲ.

ಬಿ. ಠವಣಿಗಳು/ಅವಧಿತ ಠೇವಣಿಗಳು, ಕೊರತೆಗಳಿಗೆ ಸಂಬಂಧಿಸಿದಂತೆ ಉದಾಹರಣೆಗಳನ್ನು ಗಮನಿಸಲಾಗಿದ್ದು, ಬ್ಯಾಂಕುಗಳ ದೃಢೀಕರಣದ ಅನುಪಸ್ಥಿತಿ ಸ್ಥಿರ ಠೇವಣಿಗಳ ರಶೀದಿಗಳ ಹಾಗೂ ಒಟ್ಟಾರೆ, ಟಿ.ಡಿ.ಎಸ್.ಗೆ ಸಂಬಂಧಿಸಿದಂತೆಸರಿಯಾದ ಒಟ್ಟು ಬ್ಯಾಂಕ್ ಸಾಲ.

ಸಿ. ಬ್ಯಾಂಕ್ ಖಾತರಿಗಳ ಹಿಡಿಯುವಿಕೆ, ನಿರ್ವಹಣೆ ಮತ್ತು ಉಸ್ತುವಾರಿ ವಿಭಾಗಗಳಲ್ಲಿ ಮಾಡಲಾಗುತ್ತಿದೆ.ಕೇಂದ್ರಿತ ಉಸ್ತುವಾರಿ ವ್ಯವಸ್ಥೆಯ ಅನುಪಸ್ಥಿತಿಯಲ್ಲಿ ಬ್ಯಾಂಕ್ ಖಾತರಿಯ ಅಸಮರ್ಪಕ ಸಮಯೋಚಿತ ನವೀಕರಣ ಹಾಗೂ ಮರುಮೌಲ್ಯಮಾಪನಗಳ ಮೇಲೆ ನಮ್ಮ ಅನಿಸಿಕೆಗಳನ್ನು ತಿಳಿಸಲು ಸಾಧ್ಯವಿರುವುದಿಲ್ಲ.

ಡಿ. ವಿಭಾಗಗಳ ಮರುದೃಢೀಕರಣ ಮತ್ತು ಸ್ಪಷ್ಟೀಕರಣಗಳ ಬಾಕಿ, ಬ್ಯಾಂಕ್ ಹೊಂದಾಣಿಕೆ ಪ್ರಕಟಣೆಗಳು ಈ ಕೆಳಕಂಡವುಗಳನ್ನು ಒಳಪಟ್ಟಿರುತ್ತದೆ.

ಬ್ಯಾಂಕ್‌ನಿಂದ ಚೆಕ್‌ಗಳನ್ನು ನೀಡಲಾಗಿದ್ದು, ಆದರೆ ಪಾವತಿಯಾಗಿರುವುದಿಲ್ಲ : ರೂ.2,07,55,596/–

ಬ್ಯಾಂಕ್‌ನಿಂದ ಚೆಕ್‌ಗಳನ್ನು ಜಮೆಯಾಗಿದ್ದು, ಆದರೆ, ಮೊತ್ತವು ಠೇವಣಿಯಾಗಿರುವುದಿಲ್ಲ. ರೂ.14,48,067/–

ಇ. ಬ್ಯಾಂಕ್ ಬಾಕಿ ಟಿಪ್ಪಣಿ ಸಂಖ್ಯೆ: 11 ರಲ್ಲಿ ಹೇಳಿದಂತೆ,ರೂ.13,03,97,843/–ಗಳ ಕ್ರೆಡಿಟ್ ಬಾಕಿ 6 ಬ್ಯಾಂಕ್ ಖಾತೆ (ಉಳಿತಾಯ ಬ್ಯಾಂಕ್ ಖಾತೆ)ಗಳ ನೆಟ್ಟಿಂಗ್–ಆಫ್ ಆದ ನಂತರ ಲೆಕ್ಕಾಚಾರ ಪುಸ್ತಿಕೆಗಳ ಅನುಸಾರ ಮೂಲತಃ ಚೆಕ್‌ಗಳ ವಿತರಣೆಯಿಂದಾಗಿದ್ದು, ಅನುಮತಿಸಿದ ಮಿತಿಗಿಂತ ಹೆಚ್ಚಾಗಿ/ಲಭ್ಯವಿರುವ ಪುಸ್ತಿಕೆಯ ಬಾಕಿ.

ಎಫ್.ಟಿಪ್ಪಣಿ ಸಂಖ್ಯೆ: 11ಎ – ವಿಂಗಡಣೆಯ ವಿವರಗಳನ್ನು (12 ತಿಂಗಳ ಮೇಲ್ಪಟ್ಟ ಪರಿಪಕ್ವತೆ) ನಮಗೆ ಒದಗಿಸಿರುವುದಿಲ್ಲ.

28. ನೋಂದಾಯಿತ ಕಛೇರಿ, ಮೈಸೂರು ಮತ್ತು ಕಾರ್ಪೊರೇಟ್ ಕಛೇರಿ, ಬೆಂಗಳೂರು ನಲ್ಲಿ ಉಂಟಾದ ಅಡಳಿತಾತ್ಮಕ ಮತ್ತು ಸಾಮಾನ್ಯ ಹೆಚ್ಚುವರಿ ವೆಚ್ಚ ರೂ.4.99 ಕೋಟಿ (ಕಳೆದ ವರ್ಷ ರೂ.9.12 ಕೋಟಿ) ಪ್ರಗತಿಯಲ್ಲಿರುವ ಮುಖ್ಯ ಕಾಮಗಾರಿಯ ವೆಚ್ಚದಲ್ಲಿ ಒಳಗೊಂಡಿರುತ್ತದೆ. ಹೀಗಾಗಿ ಪ್ರಗತಿಯಲ್ಲಿರುವ ಮುಖ್ಯ ಕಾಮಗಾರಿ, ಲಾಭ ಅಧಿಕವಾಗಿದ್ದು, ವೆಚ್ಚಗಳು ಕಡಿಮೆಯಾಗಿರುತ್ತದೆ.

29. ಟಿಪ್ಪಣಿ ಸಂಖ್ಯೆ: 26 ಗಮನಿಸಿ – ಸರ್ಕಾರದಿಂದ ಪಡೆದ ನಿರ್ವಹಣಾ ಅನುದಾನದಲ್ಲಿ ರೂ.60.00 ಲಕ್ಷಗಳು ಮೀನುಗಾರಿಕೆ ಇಲಾಖೆಯಿಂದ ಸ್ವೀಕೃತವಾಗಿರುತ್ತದೆ. ನಮ್ಮ ಅನಿಸಿಕೆಯ ಪ್ರಕಾರ, ಸದರಿ ಮೊತ್ತದ ನಿಖರತೆ ಹಾಗೂ ದೃಢೀಕರಣ ಬಾಕಿ ಇದ್ದು, ಇದನ್ನು ಹೊಣೆಗಾರಿಕೆ ಎಂದು ಲೆಕ್ಕಿಸಬೇಕಾಗಿರುತ್ತದೆ. ಆದಾಗ್ಯೂ ಆ ಮಟ್ಟಕ್ಕೆ ನಿರ್ವಹಣಾ ಅನುದಾನಗಳನ್ನು ಹೆಚ್ಚುವರಿಯಾಗಿ ಮತ್ತು ಹೊಣೆಗಾರಿಕೆಯನ್ನು ಕಡಿಮೆಗೊಳಿಸಲಾಗಿದೆ.

ವಿಷಯಗಳ ಒತ್ತು

ನಮ್ಮ ಅಭಿಪ್ರಾಯವನ್ನು ಮಾರ್ಪಡಿಸದೆ, ಉಲ್ಲೇಖವನ್ನು ಭಾರತೀಯ ಲೆಕ್ಕಪತ್ರಗಳ ಪ್ರಮಾಣೀಕರಣ ಹಣಕಾಸು ತಃಖ್ತೆಯ ಸೂಚನೆಗಳಿಂದ ಆಹ್ವಾನಿಸಲಾಗಿದೆ.ಅದು ಈ ಕೆಳಕಂಡಂತಿದೆ;

1) ಬಾಕಿ ಇರುವ ಭೂ ಸ್ವಾಧೀನ ಅವಾರ್ಡ್, ಒಪ್ಪಿಗೆ ಡಿಕ್ರಿ ಮತ್ತು ನಿರ್ದಿಷ್ಟ ಭೂಮಿ ಖರೀದಿ ಕೊಂಡುಕೊಳ್ಳುವಿಕೆ/ ಸ್ವಾಧೀನಕ್ಕೆ ತೆಗೆದುಕೊಳ್ಳುವುದರಲ್ಲಿ ಮತ್ತು ಕಂದಾಯ ದಾಖಲೆಗಳಲ್ಲಿ ರೂಪಾಂತರದ ಕೆಲಸಗಳಲ್ಲಿ ಸಾಮರಸ್ಯ ಸಾಧಿಸುವುದು ಮೊದಲಾದವುಗಳು. ಕಂಪನಿಯು ಇತರೆ ಯಾವುದೇ ಸಂಬಂಧಿತ ಕಟ್ಟುಪಾಡುಗಳನ್ನು ಗುರುತಿಸಿಲ್ಲ. (ಗಮನಿಸಿ ಟಿಪ್ಪಣಿ 4.ಸಿ &4ಡಿ ಕೂಡ)

2) ಸ್ವತ್ತು, ಘಟಕ ಮತ್ತು ಉಪಕರಣ ಹಾಗೂ ಪ್ರಗತಿಯಲ್ಲಿರುವ ಭೂ ಸ್ವಾಧೀನದಂತಹ ಮುಖ್ಯ ಕೆಲಸದಲ್ಲಿ ಕೆಲವು ಕೆಲಸಗಳನ್ನು ಗುತ್ತಿಗೆದಾರರು ನಡೆಸುತ್ತಾರೆ. (ಗಮನಿಸಿ ಟಿಪ್ಪಣಿ 4.ಬಿ & 4.ಸಿ ಕೂಡ)

3) ಈ ಕೆಳಗಿನವುಗಳನ್ನು ಚಾಲ್ತಿಯಲ್ಲದ ಸ್ವತ್ತು ಎಂದು ತೋರಿಸಲಾಗಿದೆ – ಮುಂದುವರಿದ ಬಂಡವಾಳ ತೀರ್ಮಾನವಾಗದ ಹೊಂದಾಣಿಕೆಗಳು/ಬಿಲ್‌ಗಳನ್ನು ಒಪ್ಪಿಸುವ ಬಗ್ಗೆ ವೆಚ್ಚದ ಬಂಡವಾಳೀಕರಣ/ಬಳಕೆ ಪ್ರಮಾಣಪತ್ರ (ಗಮನಿಸಿ ಟಿಪ್ಪಣಿ 8 ಕೂಡ).

ಎ) ಲೋಕೋಪಯೋಗಿ/ಭಾರತೀಯ ರೈಲ್ವೆ/ರಾಷ್ಟ್ರೀಯ ಹೆದ್ದಾರಿ ರೂ.381.32 ಲಕ್ಷ (ಕಳೆದ ವರ್ಷ ರೂ.381.32 ಲಕ್ಷ)

ಬಿ) ಕೆ.ಐ.ಎ.ಡಿ.ಬಿ. ಇಲಾಖೆಗೆ ರೂ.339.88 ಲಕ್ಷ ಬಾಕಿ (ಕಳೆದ ವರ್ಷ ರೂ.339.88 ಲಕ್ಷ)

ಸಿ) ಎನ್.ಆರ್.ಎಸ್.ಗೆ ಮುಂಗಡವಾಗಿ ರೂ.227.07 ಲಕ್ಷ (ಕಳೆದ ವರ್ಷ ರೂ.227.07 ಲಕ್ಷ)

ಡಿ) ಭೂ ಒತ್ತುವರಿ ಅಧಿಕಾರಿಗಳೊಂದಿಗೆ ಮುಂಗಡವಾಗಿ ರೂ.1572.03 ಲಕ್ಷ (ಕಳೆದ ವರ್ಷ ರೂ.1112.11 ಲಕ್ಷ)

ಇ) ಕಿಯೋನಿಕ್ಸ್ ಗೆ ರೂ.14.97 ಲಕ್ಷ ಬಾಕಿ (ಕಳೆದ ವರ್ಷ ರೂ.14.97 ಲಕ್ಷ)

4) ತಲಕಾವೇರಿ ಭಾಗಮಂಡಲ ಅಭಿವೃದ್ಧಿ ಪ್ರಾಧಿಕಾರದಲ್ಲಿ ಉಂಟಾದ ರೂ.1602.03 ಲಕ್ಷ (ಕಳೆದ ವರ್ಷ ರೂ.1602.03 ಲಕ್ಷ) ವೆಚ್ಚವನ್ನು ಚಾಲ್ತಿಯಲ್ಲದ ಸ್ವತ್ತು – ಇತರೆ ಚಾಲ್ತಿಯಲ್ಲದ ಸ್ವತ್ತು – ಇತರೆ ಮುಂದುವರಿದ ಬಂಡವಾಳ ತೀರ್ಮಾನವಾಗದ ಹೊಂದಾಣಿಕೆಗಳು ಎಂದು ತೋರಿಸಲಾಗಿದೆ. ಯೋಜನೆಗಳನ್ನು ಪೂರ್ಣಗೊಳಿಸಲಾಗಿದೆ ಮತ್ತು ಜಿಲ್ಲಾಧಿಕಾರಿಗಳಿಗೆ ಹಸ್ತಾಂತರಿಸಲಾಗಿದೆ.(ಗಮನಿಸಿ ಟಿಪ್ಪಣಿ 8.ಬಿ.ಐ. ಕೂಡ).

5) ಈ ಕೆಳಕಂಡ ಖಾತೆಗಳ ಮುಂದುವರೆದಂತಹ ಡೆಬಿಟ್ ಬಾಕಿಗಳು (ಆರಂಭಿಕ ಬಾಕಿ) ಅಸಮಂಜಸವಾಗಿ ಉಳಿದಿರುತ್ತದೆ,

ಕ್ರ. ಸಂ.	ಲೆಕ್ಕ ಶೀರ್ಷಿಕೆ	ಮೊತ್ತ ರೂ.
1.	ರಾಜ್ಯ ಮಾರಾಟ ತೆರಿಗೆ – ಟೆಂಡರ್ ಪುಸ್ತಿಕೆ – ಯಡಿಯೂರು	150
2.	ರಾಜ್ಯ ಮಾರಾಟ ತೆರಿಗೆ – ಅಣೆಕಟ್ಟು ವಿಭಾಗ	30,82,603
	ರಾಜ್ಯ ಮಾರಾಟ ತೆರಿಗೆ – ಹೊಳೆ ನರಸೀಪುರ	44,945
	ಒಟ್ಟು	**31,27,698**

ಈ ಮೇಲಿನ ಹಂತಕ್ಕೆ ಟಿಪ್ಪಣಿ ಸಂಖ್ಯೆ : 21 – ಇತರೆ ಪ್ರಸ್ತುತ ಹೊಣೆಗಾರಿಕೆಗಳನ್ನು ಕಡಿಮೆಗೊಳಿಸಲಾಗಿದೆ.

ಮುಖ್ಯ ಆಡಿಟ್ ವಿಷಯಗಳು

ಅರ್ಹತಾ ಅಭಿಪ್ರಾಯದ ಆಧಾರದ ಪ್ಯಾರಾ/ಕಂಡಿಕೆಯಲ್ಲಿ ತಿಳಿಸಿದ ವಿಷಯಗಳನ್ನು ಹೊರತುಪಡಿಸಿ ಬೇರೆ ಯಾವ ಮುಖ್ಯ ಆಡಿಟ್ ವಿಷಯಗಳು ನಮ್ಮ ವರದಿಯಲ್ಲಿ ತಿಳಿಸಲು ಬಾಕಿ ಇರುವುದಿಲ್ಲ ಎಂದು ದೃಢೀಕರಿಸಿದ್ದೇವೆ.

ಇತರೆ ವಿಷಯಗಳು

ನಮ್ಮ ಅಭಿಪ್ರಾಯವನ್ನು ಬದಲಿಸದೇ ಕೆಳಗಿನ ಅವಲೋಕನಗಳಿಗೆ ಉಲ್ಲೇಖಕ್ಕಾಗಿ ಆಹ್ವಾನಿಸಲಾಗಿದೆ.

1) ಅಧಿಕಾರಿ ಮತ್ತು ಸಿಬ್ಬಂದಿಯ ನಿಯೋಜನೆಗೆ ಸಂಬಂಧಪಟ್ಟ ಷರತ್ತುಗಳು ಹಾಗೂ ನಿಬಂಧನೆಗಳಿಗೆ ಸರ್ಕಾರದ ಆದೇಶಕ್ಕಾಗಿ ಕಾಯಲಾಗುತ್ತಿದೆ.

2) ವಿಭಾಗಗಳಿಗೆ ಭೇಟಿ ನೀಡಿದ ನಂತರ ಉದ್ಭವಿಸಿದ ನಮ್ಮ ಅವಲೋಕನಗಳು :

ಎ. ಕಾರ್ಯ ಬಿಲ್ (ಆರ್.ಎ. ಬಿಲ್) ಅನ್ನು ಬಂಡವಾಳ ಕೆಲಸಗಳಡಿ ಲೆಕ್ಕಾಚಾರ ಮಾಡುವ ಬದಲು ತಪ್ಪಾಗಿ ಆದಾಯ ವೆಚ್ಚದಡಿ (ಒ & ಎಂ), ಎಸ್.ಸಿ.ಪಿ./ಟಿ.ಎಸ್.ಪಿ., ಲೆಕ್ಕಿಸಲಾಗಿರುತ್ತದೆ.

ಬಿ. ಪ್ರಗತಿಯಲ್ಲಿರುವ ಬಿಲ್ಲಿನಲ್ಲಿ ಶಾಸನಬದ್ಧ ಕಡಿತಗಳನ್ನು ಸೂಕ್ತವಾಗಿ ಮಾಡಿರುವುದಿಲ್ಲ.

ಸಿ. ಮುಂಗಡ ಚಲಾವಣೆಯನ್ನು ಅನ್ವಯಸುವಂತೆ ಪ್ರತಿ ಬಿಲ್ಲಿನಲ್ಲಿ ಕಡಿತಗೊಳಿಸಿರುವುದಿಲ್ಲ. ಇದನ್ನು ತಾತ್ಕಾಲಿಕ ಆಧಾರದ ಮೇಲೆ ಮಾಡಲಾಗುತ್ತಿದೆ.

ಡಿ. ಗುತ್ತಿಗೆದಾರರ ಮುಂಗಡ ಪಾವತಿಗಳನ್ನು ಮಾಡಲಾಗುತ್ತಿದೆ.

ಇ. ಕುಶಾಲನಗರ ವಿಭಾಗದಲ್ಲಿ ನಿಖರತೆ ಮತ್ತು ಹೊಂದಾಣಿಕೆ ಬಾಕಿ ಹಾಗೂ ಬಾಕಿ ಇರುವ ಹೊಣೆಗಾರಿಕೆಗಳನ್ನು ಲೆಕ್ಕಾಚಾರ ಮಾಡಿರುವುದಿಲ್ಲ.

ಎಫ್.ಕೆಲಸಗಳ ನಿಬಂಧನೆ/ಆದಾಯದ ಬಿಲ್ಲುಗಳ ಲೆಕ್ಕಾಚಾರ ಸರಿಯಾಗಿ ಮಾಡಿರುವುದಿಲ್ಲ.

3) ಕರ್ನಾಟಕ ಸರ್ಕಾರದ ಸ್ವೀಕೃತಗಳು :

ಟಿಪ್ಪಣಿ ಸಂಖ್ಯೆ :7 ಕರ್ನಾಟಕ ಸರ್ಕಾರದ ಸ್ವೀಕೃತ ಮೊತ್ತವು ಈ ಕೆಳಕಂಡಂತೆ ಒಳಗೊಂಡಿರುತ್ತದೆ.

ಕ್ರ. ಸಂ.	ಶೀರ್ಷಿಕೆ	ಮೊತ್ತ ರೂ.
1.	ಗುತ್ತಿಗೆದಾರರ ಭದ್ರತಾ ಠೇವಣಿಯು ಕಂಪನಿಯಿಂದ ಒಪ್ಪಂದವಾಗಿರುತ್ತದೆ.– ನಿಗಮದ ಆರಂಭಕ್ಕೂ ಮುನ್ನ	20,29,00,498
2.	ರಜೆ ವೇತನ ನಿವೃತ್ತ	30,41,10,858
3.	ಟ್ಯಾಂಕುಗಳ ಪುನಃಶ್ಚೇತನ	6,80,20,737
	ಒಟ್ಟು	**57,50,32,093**

ಕಂಪನಿಯು ಕರ್ನಾಟಕ ಸರ್ಕಾರದಿಂದ ಪಡೆದ ಸ್ವೀಕೃತಿಯನ್ನು ಖರ್ಚು ಮಾಡುವ ಅಭ್ಯಾಸವನ್ನು ಮುಂದುವರೆಸುತ್ತಿದೆ. ಸಾಂಪ್ರದಾಯಿಕ ಸಂವಹನ ಹಾಗೂ ಕರ್ನಾಟಕ ಸರ್ಕಾರದೊಂದಿಗೆ ಮೊತ್ತದ ಕೈಗೂಡಿಸಿಕೊಳ್ಳುವಿಕೆಯನ್ನು ಅನುಸರಿಸಿ ಪ್ರಾರಂಭಿಸಬೇಕಾಗಿದೆ.

4) **ಆದಾಯ ತೆರಿಗೆಯ ರಿಟರ್ನ್ : ಕಂದಾಯ ವರ್ಷ : 2019–2020**

ಆದಾಯ ತೆರಿಗೆ ಕಾಯ್ದೆ 1961 ಪರಿಚ್ಛೇದ 139(1)ರಡಿ ನಿರ್ವಹಣೆ ವ್ಯವಸ್ಥೆ ದೃಢೀಕರಿಸಿದ ನಿಬಂಧಿತ ಲೆಕ್ಕಪತ್ರಗಳ ಮೂಲ ರಿಟರ್ನ್ ಫೈಲ್ ಮಾಡಲಾಗಿದೆ. ಪರಿಷ್ಕೃತ ರಿಟರ್ನ್ ಅನ್ನು ಪರಿಶೋಧಿತ ಲೆಕ್ಕಪತ್ರಗಳ ಅನುಸಾರ ಫೈಲ್ ಮಾಡಬೇಕಾಗಿದೆ.

5) **ವಿಮೆ :**

ಕಂಪನಿಯು ವಿಮೆಯನ್ನು ವಾಹನಗಳಿಗೆ ಮಾತ್ರ ಸೀಮಿತಗೊಳಿಸಿರುತ್ತದೆ. ಉಳಿಕೆ ಸ್ವತ್ತುಗಳ ವಿಮೆಯನ್ನು ಮಾಡಿಸಿರುವುದಿಲ್ಲ.

6) **ಜಿ.ಎಸ್.ಟಿ – ಸರಕು ಮತ್ತು ಸೇವಾ ತೆರಿಗೆ**

ನಿರ್ವಹಣೆ ವ್ಯವಸ್ಥೆಯ ಹೇಳಿಕೆ ಅನುಸಾರ ಜಿ.ಎಸ್.ಟಿ. ಜಾರಿಗೊಳಿಸಿದ ದಿನಾಂಕ: 01–07–2017 ರಿಂದ ಗುತ್ತಿಗೆದಾರರಿಗೆ ಯಾವುದೇ ಹೆಚ್ಚುವರಿ ಹೊಣೆಗಾರಿಕೆಯನ್ನು ಪಾವತಿಸುವಂತಿರುವುದಿಲ್ಲ.

ನಿರ್ವಹಣೆ ವ್ಯವಸ್ಥೆಯ ಜವಾಬ್ದಾರಿಗಳು ಮತ್ತು ಸ್ವತಂತ್ರ ಭಾರತೀಯ ಐ.ಎನ್.ಡಿ.–ಎ.ಎಸ್. ಹಣಕಾಸಿನ ಲೆಕ್ಕಪತ್ರಗಳ ಆಡಳಿತದ ಆರೋಪ ಹೊತ್ತವರು

ಕಾಯ್ದೆಯ ಅನುಚ್ಛೇದ 134(5)ರನ್ವಯ ಕಂಪನಿಯ ನಿರ್ದೇಶಕರ ಮಂಡಳಿಯು ಹಣಕಾಸಿನ ಲೆಕ್ಕಪತ್ರಗಳ ನಿಜವಾದ ಹಾಗೂ ನ್ಯಾಯೋಚಿತನೋಟವು ಹಣಕಾಸಿನ ಸ್ಥಾನ, ಹಣಕಾಸಿನ ಕಾರ್ಯಕ್ಷಮತೆ, ಒಟ್ಟು ಕ್ರೋಢೀಕೃತ ಆದಾಯ, ಇಕ್ವಿಟಿಯ ಬದಲಾವಣೆ ಹಾಗೂ ಕಂಪನಿಯ ನಗದು ಪ್ರವಹನ ಸಾಮಾನ್ಯವಾಗಿ ಭಾರತದಲ್ಲಿ ಅಂಗೀಕರಿಸಿದ ಲೆಕ್ಕಪತ್ರಗಳ ನಿಯಮಗಳು ಹಾಗೂ ಐ.ಎನ್.ಡಿ.–ಎ.ಎಸ್ ಮಾನದಂಡಗಳು ಕಾಯ್ದೆಯ ಪರಿಚ್ಛೇದ 133 ರ ಜೊತೆ ಕಂಪನಿಗಳ (ಭಾರತ ಲೆಕ್ಕಪತ್ರಗಳ ಮಾನದಂಡಗಳು) ನಿಯಮಗಳು 2015 ಪರಿಷ್ಕೃತವಾದಂತೆ ತಯಾರಿಕೆಯ ಜವಾಬ್ದಾರರಾಗಿರುತ್ತಾರೆ. ಈ ಜವಾಬ್ದಾರಿಯು, ಕಾಯ್ದೆಯ ಅನುಸಾರವಾಗಿ ಸಮರ್ಪಕವಾದ ಲೆಕ್ಕಪತ್ರಗಳ ದಾಖಲೆಗಳ ನಿರ್ವಹಣೆ ಕಂಪನಿಯ ಸ್ವತ್ತುಗಳನ್ನು ಕಾಪಾಡಿಕೊಳ್ಳುವುದು ಮತ್ತು ವಂಚನೆಗಳನ್ನು ತಡೆಗಟ್ಟುವ ಹಾಗೂ ಪತ್ತೆ ಮಾಡಲು ಹಾಗೂ ಇತರೆ ಅಕ್ರಮಗಳು, ಸೂಕ್ತವಾದ ಲೆಕ್ಕಪತ್ರಗಳ ನಿಯಮಗಳ ಆಯ್ಕೆ ಮತ್ತು ಅನ್ವಯಿಸುವಿಕೆ, ಸಮಂಜಸ ಹಾಗೂ ವಿವೇಚಿತವಾದ ತೀರ್ಮಾನ ಹಾಗೂ ಅಂದಾಜುಗಳನ್ನು ಮಾಡುವುದು, ಸಮರ್ಪಕ ಆಂತರಿಕ ಹಣಕಾಸಿನ ನಿಯಂತ್ರಣಗಳ ವಿನ್ಯಾಸ, ಅನುಷ್ಠಾನ ಹಾಗೂ ಅದರ ನಿರ್ವಹಣೆ ಇವುಗಳ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದು, ಲೆಕ್ಕಪತ್ರಗಳ ದಾಖಲೆಗಳ ನಿಖರತೆ ಹಾಗೂ ಪೂರ್ಣತೆಯನ್ನು ಖಚಿತಪಡಿಸುವುದು ಹಾಗೂ ಇವುಗಳ ತಯಾರಿಕೆ ಮತ್ತು ನೈಜವಾದ ಹಾಗೂ ನ್ಯಾಯೋಚಿತ ನೋಟ ನೀಡುವ ಮತ್ತು ಭೌತಿಕ ತಪ್ಪು ಹೇಳಿಕೆಯು ವಂಚನೆ ಹಾಗೂ ತಪ್ಪುಗಳಿಂದ ಮುಕ್ತವಾಗಿರುವ ಹಣಕಾಸಿನ ಪ್ರಸ್ತುತಿ ಇದನ್ನು ಸಹ ಒಳಗೊಂಡಿರುತ್ತದೆ.

ಸ್ವತಂತ್ರ ಭಾರತೀಯ ಐ.ಎನ್.ಡಿ.–ಎ.ಎಸ್ ಹಣಕಾಸಿನ ಲೆಕ್ಕಪತ್ರಗಳ ತಯಾರಿಕೆಯಲ್ಲಿ ನಿರ್ವಹಣೆ ವ್ಯವಸ್ಥೆಯು ಕಂಪನಿ ಕಾಳಜಿಯ ಮುಂದುವರೆಯುವಿಕೆಯ ಕಾರ್ಯಕ್ಷಮತೆ, ಬಹಿರಂಗಪಡಿಸುವಿಕೆ ಕಾಳಜಿಯ ಮುಂದುವರೆಯುವಿಕೆಗೆ ಸಂಬಂಧಿಸಿದ ವಿಷಯಗಳು ಮತ್ತು ಕಾಳಜಿಯ ಮುಂದುವರೆಯುವಿಕೆಯ ಆಧಾರದ ಮೇಲೆ ಲೆಕ್ಕಾಚಾರದ ಬಳಕೆ ನಿರ್ವಹಣೆ ವ್ಯವಸ್ಥೆಯನ್ನು ಹೊರತುಪಡಿಸಿ ಕಂಪನಿಯನ್ನು ಮುಚ್ಚಿಹಾಕಲು ಅಥವಾ ಕಾರ್ಯಾಚರಣೆಯನ್ನು ತಡೆಹಿಡಿಯುವುದು ಅಥವಾ ಯಾವುದೇ ವಾಸ್ತವಿಕ ಪರ್ಯಾಯವಿಲ್ಲದೆ ಮಾಡುವುದು ನಿರ್ವಹಣೆ ವ್ಯವಸ್ಥೆಯ ಜವಾಬ್ದಾರಿಯಾಗಿರುತ್ತದೆ.

ನಿರ್ದೇಶಕರ ಮಂಡಳಿಯು ಕಂಪನಿಯ ಹಣಕಾಸಿನ ವರದಿ ಪ್ರಕ್ರಿಯೆಯ ಉಸ್ತುವಾರಿಯನ್ನು ವಹಿಸಲು ಜವಾಬ್ದಾರರಾಗಿರುತ್ತದೆ.

ಸ್ವತಂತ್ರ ಭಾರತೀಯ ಐ.ಎನ್.ಡಿ.–ಎ.ಎಸ್ ಹಣಕಾಸಿನ ಲೆಕ್ಕಪತ್ರಗಳ ಪರಿಶೋಧನೆಗೆ ಲೆಕ್ಕಪರಿಶೋಧಕರ ಜವಾಬ್ದಾರಿಗಳು

ನಮ್ಮ ಉದ್ದೇಶವು ಹಣಕಾಸಿನ ಲೆಕ್ಕಪತ್ರಗಳು ಪೂರ್ಣವಾಗಿ ಮತ್ತು ಭೌತಿಕ ತಪ್ಪು ಹೇಳಿಕೆಯು ವಂಚನೆ ಹಾಗೂ ತಪ್ಪುಗಳಿಂದ ಮುಕ್ತವಾಗಿರುವ ಸಮಂಜಸವಾದ ಭರವಸೆಪಡೆಯುವುದು ಹಾಗೂ ಇವುಗಳನ್ನು ಒಳಗೊಂಡವರದಿಯನ್ನು ನೀಡುವುದು –ನಮ್ಮ ಅಭಿಪ್ರಾಯ, ಸಮಂಜಸ ಭರವಸೆ ಉನ್ನತ ಮಟ್ಟದ ಭರವಸೆ ಇರುತ್ತದೆ ಆದರೆ, ಎಸ್.ಎ.ಗಳ ಅನುಸಾರ ನಡೆಸಿದ ಲೆಕ್ಕಪರಿಶೋಧನೆ ಭೌತಿಕ ತಪ್ಪು ಹೇಳಿಕೆ ಇದ್ದಲ್ಲಿ ಅದನ್ನು ಪತ್ತೆಹಚ್ಚುವುದನ್ನು ಖಾತರಿಪಡಿಸುವುದಿಲ್ಲ. ತಪ್ಪು ಹೇಳಿಕೆಗಳು ವಂಚನೆ ಅಥವಾ ತಪ್ಪಿನಿಂದ ಉದ್ಭವವಾಗಬಹುದು ಹಾಗೂ

ಸ್ವತಂತ್ರವಾಗಿ ಅಥವಾ ಕ್ರೋಢೀಕೃತವಾಗಿ ಹಣಕಾಸಿನ ಲೆಕ್ಕಪತ್ರಗಳ ಆಧಾರದ ಮೇರೆಗೆ ಬಳಕೆದಾರರ ಆರ್ಥಿಕ ನಿರ್ಣಯಗಳ ಮೇಲೆ ಪ್ರಭಾವ ಬೀರಿದರೆ ಇವುಗಳನ್ನು ಭೌತಿಕವೆಂದು ಪರಿಗಣಿಸಲಾಗುವುದು.

ನಾವು ಕೂಡಾ ಲೆಕ್ಕಪರಿಶೋಧನೆಯ ಭಾಗವಾಗಿ ಎಸ್.ಎ.ಎಸ್ ಅನುಸಾರ ನಾವು ವೃತ್ತಿಪರ ನಿರ್ಣಯ ನೀಡಿದ್ದೇವೆ ಹಾಗೂ ವೃತ್ತಿಪರ ಸಂದೇಹವನ್ನು ಲೆಕ್ಕಪರಿಶೋಧನೆಯ ಪೂರ್ಣಾವಧಿಯಲ್ಲಿ ಕಾಪಾಡಿಕೊಂಡಿದ್ದೇವೆ.

ಎ. ಹಣಕಾಸಿನ ಲೆಕ್ಕಪತ್ರಗಳ ಭೌತಿಕ ತಪ್ಪು ಹೇಳಿಕೆಯ ಅಪಾಯದ ಗುರುತಿಸುವಿಕೆ ಹಾಗೂ ನಿರ್ಣಯಿಸುವಿಕೆ ವಂಚನೆ ಅಥವಾ ತಪ್ಪಿನಿಂದ ಉದ್ಭವಾಗಿರಬಹುದು, ಲೆಕ್ಕಪರಿಶೋಧನೆ ವಿಧಾನಗಳ ನಿರ್ವಹಣೆ ಮತ್ತುವಿನ್ಯಾಸಗಳಿಗೆ ಸ್ಪಂದಿಸಿದ ಅಪಾಯಗಳು ಮತ್ತು ನಮ್ಮ ಅಭಿಪ್ರಾಯಕ್ಕೆ ಆಧಾರವಾಗುವ ಸಾಕಷ್ಟು ಮತ್ತು ಸೂಕ್ತವಾದ ಲೆಕ್ಕಪರಿಶೋಧನೆ ಸಾಕ್ಷಿಯನ್ನು ಪಡೆಯುವುದು. ವಂಚನೆಯಿಂದಾದ ಭೌತಿಕ ತಪ್ಪು ಹೇಳಿಕೆಯ ಗುರುತಿಸಲಾಗದ ಅಪಾಯವು ತಪಪ್ಪಿನಿಂದ ಗುರುತಿಸಲಾಗದ ಅಪಾಯವು ಹೆಚ್ಚು ಪರಿಣಾಮಕಾರಿಯಾಗಿರುತ್ತದೆ.ಏಕೆಂದರೆ, ವಂಚನೆಯು ಸಂಯೋಜನೆ, ಖೋಟಾ, ಉದ್ದೇಶಪೂರ್ವಕ ಮಾಡಿದ ಲೋಪಗಳು, ತಪ್ಪು ನಿರೂಪಣೆ ಅಥವಾ ಆಂತರಿಕ ನಿಯಂತ್ರಣದ ಅತಿಕ್ರಮಣೆಗಳನ್ನು ಒಳಗೊಂಡಿರಬಹುದು.

ಬಿ. ಲೆಕ್ಕಪರಿಶೋಧನೆಗೆ ಸಂಬಂಧಿಸಿದಂತೆ, ಲೆಕ್ಕಪರಿಶೋಧನೆಯ ವಿಧಾನಗಳ ವಿನ್ಯಾಸ ಸೂಕ್ತವಾದ ಸಂದರ್ಭಗಳಲ್ಲಿ ಆಂತರಿಕ ನಿಯಂತ್ರಣದ ಬಗ್ಗೆ ತಿಳುವಳಿಕೆಯನ್ನು ಪಡೆಯುವುದು. ಕಾಯ್ದೆಯ ಅನುಚ್ಛೇದ 143(3)(i)ರನ್ವಯ ಕಂಪನಿಯು ಸಮರ್ಪಕ ಆಂತರಿಕ ಹಣಕಾಸಿನ ನಿಯಂತ್ರಣಗಳ ವ್ಯವಸ್ಥೆಯು ಅಳವಡಿಸಿಕೊಂಡಿದೆಯೇ ಹಾಗೂ ನಿಯಂತ್ರಣಗಳ ಕಾರ್ಯಾಚರಣೆಯ ಪರಿಣಾಮಗಳ ಅಭಿಪ್ರಾಯವನ್ನು ವ್ಯಕ್ತಪಡಿಸುವ ಜವಾಬ್ದಾರಿಯು ನಮ್ಮದಾಗಿರುತ್ತದೆ.

ಸಿ. ಬಳಕೆಯಾಗುವ ಲೆಕ್ಕಪತ್ರಗಳ ನಿಯಮಗಳ ಸೂಕ್ತತೆ ಮತ್ತು ಲೆಕ್ಕಾಚಾರದ ಅಂದಾಜು ಹಾಗೂ ನಿರ್ವಹಣೆ ವ್ಯವಸ್ಥೆಗೆ ಸಂಬಂಧಿಸಿದ ಬಹಿರಂಗಪಡಿಸುವಿಕೆಯ ಮೌಲ್ಯಮಾಪನ.

ಡಿ. ಲೆಕ್ಕಪರಿಶೋಧನೆಯ ಕಾಳಜಿಯ ಆಧಾರವನ್ನು ನಿರ್ವಹಣೆಯ ಸೂಕ್ತತೆಯ ಮೇಲೆ ತೀರ್ಮಾನಿಸಿ ಹಾಗೂ ಪಡೆದ ಲೆಕ್ಕಪತ್ರಗಳ ಸಾಕ್ಷ್ಯಾಧಾರದ ಮೇಲೆ ಘಟನೆಗಳು ಹಾಗೂ ಷರತ್ತುಗಳಿಗೆ ಸಂಬಂಧಿಸಿದಂತೆ ವಸ್ತು ಅನಿಶ್ಚಿತತೆಯು ಅಸ್ತಿತ್ವದಲ್ಲಿದೆಯೇ, ಅದು ಕಂಪನಿಯ ಸಾಮರ್ಥ್ಯದ ಮೇಲೆ ಮುಂದುವರೆಯುವ ಸಾಮರ್ಥ್ಯದ ಮೇಲೆ ಗಮನಾರ್ಹ ಅನುಮಾನಗಳನ್ನು ಉಂಟುಮಾಡಬಹುದು. ಯಾವುದೇ ಭೌತಿಕ ಅನಿಶ್ಚಿತತೆ ಇರುವಂತೆ ನಾವು ತೀರ್ಮಾನಿಸಿದ್ದಲ್ಲಿ ಲೆಕ್ಕಪರಿಶೋಧಕರ ವರದಿಯಲ್ಲಿ ಸಂಬಂಧಿತ ಹಣಕಾಸಿನ ಲೆಕ್ಕಪತ್ರಗಳಲ್ಲಿ ಬಹಿರಂಗಪಡಿಸುವುದರ ಕಡೆಗೆ ಗಮನ ಸೆಳೆಯಬೇಕಾಗಿರುತ್ತದೆ ಅಥವಾ ಈ ಬಹಿರಂಗಪಡಿಸುವಿಕೆ ಅಸಮರ್ಪಕವಿದ್ದಲ್ಲಿ ನಮ್ಮ ಅಭಿಪ್ರಾಯವನ್ನು ಪರಿಷ್ಕರಿಸಬೇಕಿರುತ್ತದೆ. ನಮ್ಮ ತೀರ್ಮಾನಗಳು ಲೆಕ್ಕಪರಿಶೋಧನಾ ವರದಿ ಪಡೆದ ದಿನಾಂಕದವರೆಗೆ ಲೆಕ್ಕಪರಿಶೋಧನೆ ಸಾಕ್ಷಿಯ ಆಧಾರದ ಮೇಲೆ ನಿರ್ಧರಿತವಾಗಿರುತ್ತದೆ. ಅದಾಗ್ಯೂ, ಭವಿಷ್ಯದ ಘಟನೆಗಳು ಅಥವಾ ಪರಿಸ್ಥಿತಿಗಳು ಕಂಪನಿಯ ಮುಂದುವರೆಯುವಿಕೆಯನ್ನು ತಡೆಯಲು ಕಾರಣವಾಗಬಹುದು.

ಇ. ಒಟ್ಟಾರೆಯಾಗಿ, ಹಣಕಾಸಿನ ಲೆಕ್ಕಪತ್ರಗಳ ಪ್ರಸ್ತುತಿ, ರಚನೆ ಮತ್ತು ವಿಷಯಗಳನ್ನು ಒಳಗೊಂಡಂತೆ ಬಹಿರಂಗಪಡಿಸುವಿಕೆ ಮತ್ತು ಹಣಕಾಸಿನ ಲೆಕ್ಕಪತ್ರಗಳು ಆಧಾರಿತ ವ್ಯವಹಾರಗಳನ್ನು ಮತ್ತು ಘಟನೆಗಳನ್ನು ನ್ಯಾಯೋಚಿತವಾಗಿ ಪ್ರಸ್ತುತಿಪಡಿಸುತ್ತಿದೆಯೇ ಅಥವಾ ಇಲ್ಲವೇ.

ನಮ್ಮ ಲೆಕ್ಕಪರಿಶೋಧನೆ ಸಮಯದಲ್ಲಿ ನಾವು ಗುರುತಿಸುವ ಆಂತರಿಕ ನಿಯಂತ್ರಣದಲ್ಲಿನ ಯಾವುದೇ ಗಮನಾರ್ಹ ನ್ಯೂನ್ಯತೆಗಳನ್ನು ಒಳಗೊಂಡಂತೆ ಲೆಕ್ಕಪರಿಶೋಧನೆಯ ಯೋಜಿತ ವ್ಯಾಪ್ತಿ ಮತ್ತು ಸಮಯಹಾಗೂ ಮಹತ್ವದ ಲೆಕ್ಕಪರಿಶೋಧನೆಯ ಆವಿಷ್ಕಾರಗಳಿಗೆ ಸಂಬಂಧಿಸಿದಂತೆ ನಾವು ಆಡಳಿತದ ಆರೋಪ ಹೊಂದಿದವರೊಂದಿಗೆ ಸಂವಹನ ನಡೆಸುತ್ತೇವೆ.

ಆಡಳಿತದ ಆರೋಪ ಹೊತ್ತಿರುವವರಿಗೆ ನಾವು ಸ್ವತಂತ್ರ್ಯಕ್ಕೆ ಸಂಬಂಧಿಸಿದ ನೈತಿಕ ಅವಶ್ಯಕತೆಗಳನ್ನು ಅನುಸರಿಸಿದ್ದೇವೆ ಮತ್ತು ನಮ್ಮ ಸ್ವತಂತ್ರ್ಯದ ಬಗ್ಗೆ ಸಮಂಜಸವಾಗಿ ಭಾವಿಸಬಹುದಾದ ಎಲ್ಲ ಸಂಬಂಧಗಳು ಹಾಗೂ ಇತರೆ ವಿಷಯಗಳನ್ನು ಅವರೊಂದಿಗೆ ಸಂವಹನ ಮಾಡಲು ಹಾಗೂ ಅನ್ವಯವಾಗುವ ಸಂಬಂಧಿತ ಸುರಕ್ಷೆಗಳನ್ನು ತಿಳಿಸುತ್ತೇವೆ.

ಇತರೆ ಕಾನೂನು ಮತ್ತು ನಿಯಂತ್ರಣ ಅಗತ್ಯಗಳ ಕುರಿತು ವರದಿ

1) ಕಂಪನಿ ಕಾಯ್ದೆ 2013, ಅನುಚ್ಛೇದ 143 ರ ಪರಿಚ್ಛೇದ(11)ರ ಸಂಬಂಧದಲ್ಲಿ ಭಾರತದ ಕೇಂದ್ರ ಸರ್ಕಾರವು ಹೊರಡಿಸಿರುವ 2016ರ ಕಂಪನಿಗಳ (ಲೆಕ್ಕಪರಿಶೋಧಕರ ವರದಿ) ಆದೇಶದ ('ಆದೇಶ')ಪ್ರಕಾರ ಆದೇಶದ ಪ್ಯಾರಾಗ್ರಾಫ್ 3 ಹಾಗೂ 4 ರಲ್ಲಿ ಸೂಚಿಸಿರುವ ವಿಷಯಗಳ ಮೇಲೆ ನಾವು ಅನುಬಂಧ–1 ರಲ್ಲಿ ಅನ್ವಯಿಸುವ ಮಟ್ಟಿಗೆ ಹೇಳಿಕೆಯನ್ನು ನೀಡುತ್ತಿದ್ದೇವೆ.
2) ಕಾಯ್ದೆಯ ಅನುಚ್ಛೇದ 143(5)ರಂತೆ ನಾವು ಅನುಬಂಧ–2 ರಲ್ಲಿ ವರದಿಯನ್ನು ನೀಡಿರುತ್ತೇವೆ. ಈ ವರದಿಯು ಭಾರತೀಯ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕ ಪರಿಶೋಧಕರು ನೀಡಿರುವಂತಹ ನಿರ್ದೇಶನಗಳು ಹಾಗೂ ಕಂಪನಿಯ ಹೆಚ್ಚುವರಿ ನಿರ್ದಿಷ್ಟ ನಿರ್ದೇಶನಗಳು ಕಂಪನಿಯ ದಾಖಲಾತಿಗಳು ಹಾಗೂ ಇತರೆ ಮಾಹಿತಿ ಮತ್ತು ಸಮಜಾಯಿಷಿಗಳ ಆಧಾರದ ಮೇಲೆ ಒಳಗೊಂಡಿರುತ್ತದೆ.
3) ಕಾಯ್ದೆಯ ಅನುಚ್ಛೇದ 143(3) ರಂತೆ ನಮ್ಮ ವರದಿ ಹೇಳುವುದೇನೆಂದರೆ,

ಎ) ಮೇಲಿನ ಅರ್ಹತಾ ಅಭಿಪ್ರಾಯದ ಪ್ಯಾರಾಗ್ರಾಫ್ ಆಧಾರದ ಮೇಲೆ ವಿವರಿಸಿದ ವಿಷಯದ ಪರಿಣಾಮಗಳು/ಸಂಭಾವ್ಯ ಪರಿಣಾಮಗಳ ಹೊರತ್ತಾಗಿ ಎಲ್ಲ ಮಾಹಿತಿಯನ್ನು ಲೆಕ್ಕಪರಿಶೋಧನೆಯ ಉದ್ದೇಶಗಳಿಗೆ ಅಗತ್ಯವಿರುವ ಮಟ್ಟಿಗೆ ಕೋರಿದ್ದೇವೆ ಮತ್ತು ಪಡೆದಿದ್ದೇವೆ ಹಾಗೂ ನಮ್ಮ ಅತ್ಯತ್ತಮ ಜ್ಞಾನದಂತೆ ಹಾಗೂ ನಂಬಿಕೆಯಂತೆ ಇವು ಸತ್ಯವಾಗಿವೆ.

ಬಿ) ಮೇಲಿನ ಅರ್ಹತಾ ಅಭಿಪ್ರಾಯದ ಕಂಡಿಕೆಯಲ್ಲಿ ವಿವರಿಸಿರುವ ವಿಷಯದ ಪರಿಣಾಮಗಳು/ಸಂಭಾವ್ಯ ಪರಿಣಾಮಗಳ ಹೊರತಾಗಿ ನಮ್ಮ ಅಭಿಪ್ರಾಯದಲ್ಲಿ ಕಾನೂನಿಗೆ ಅಗತ್ಯವಾದಂತೆ ಲೆಕ್ಕಪತ್ರಗಳ ಸೂಕ್ತ ಪುಸ್ತಕಗಳನ್ನು ಕಂಪನಿಯು ಇದುವರೆವಿಗೂ ಇಟ್ಟುಕೊಂಡಿರುವುದು, ಆ ಪುಸ್ತಕಗಳ ತಪಾಸಣೆಯಿಂದ ಕಂಡುಬಂದಿರುತ್ತದೆ.

ಸಿ) ಸಮತೋಲನಾ ಪಟ್ಟಿ, ಲಾಭ–ನಷ್ಟಗಳ ತಃಖ್ತೆ (ಇತರೆ ಕ್ರೋಢೀಕರಿಸಿದ ಆದಾಯವನ್ನು ಒಳಗೊಂಡು), ಇಕ್ವಿಟಿಯಲ್ಲಿನ ಬದಲಾವಣೆಗಳು ಮತ್ತು ನಗದು ಹರಿವುಗಳ ತಃಖ್ತೆಗಳು ಈ ವರದಿಯಿಂದ ನಿರ್ವಹಿಸಲಾದ ಲೆಕ್ಕಪತ್ರ ಪುಸ್ತಕಗಳಲ್ಲಿ ಇರುವಂತೆಯೇ ಇವೆ.

ಡಿ) ಮೇಲಿನ ಅರ್ಹತಾ ಅಭಿಪ್ರಾಯದ ಕಂಡಿಕೆಯಲ್ಲಿ ವಿವರಿಸಿರುವ ವಿಷಯದ ಪರಿಣಾಮಗಳು/ಸಂಭಾವ್ಯ ಪರಿಣಾಮಗಳ ಹೊರತಾಗಿ ನಮ್ಮ ಅಭಿಪ್ರಾಯದಲ್ಲಿ ಮೇಲ್ಕಂಡ ಹಣಕಾಸಿನ ಲೆಕ್ಕಪತ್ರಗಳು ಈ ವರದಿಯಿಂದ ನಿರ್ವಹಿಸಲಾದ ಕಂಪನಿಯ (ಭಾರತೀಯ ಲೆಕ್ಕಪತ್ರ ಮಾನದಂಡಗಳು) ನಿಯಮಗಳು 2015 ಪರಿಷ್ಕೃತವಾದಂತೆ ಅದರೊಂದಿಗೆ ಕಾಯ್ದೆಯ ಪರಿಚ್ಛೇದ 133, ಭಾರತೀಯ ಲೆಕ್ಕಪತ್ರ ಮಾನದಂಡದಲ್ಲಿರುವಂತೆಯೇ ಇವೆ.

ಇ) ಕಂಪನಿಯು ಒಂದು ಸರ್ಕಾರದ ಸಂಸ್ಥೆಯಾಗಿದ್ದು, ನಿರ್ದೇಶಕರ ಅನರ್ಹತೆಗೆ ಸಂಬಂಧಿಸಿದಂತೆ, ಅಧಿಸೂಚನೆ ಸಂಖ್ಯೆ:ಜಿ.ಎಸ್.ಆರ್. 463(ಇ), ದಿನಾಂಕ 5ನೇ ಜೂನ್ 2015 ಕಾಯ್ದೆಯ ಅನುಚ್ಛೇದ 164(2)ರ ನಿಬಂಧನೆಗಳ ಅನುಸಾರ ಅನ್ವಯಿಸುವುದಿಲ್ಲ.

ಎಫ್) ಕಂಪನಿಯ ಆಂತರಿಕ ಹಣಕಾಸು ನಿಯಂತ್ರಣಗಳ ಮೇಲಣ ಹಣಕಾಸು ವರದಿ ಮಾಡುವಿಕೆ ಹಾಗೂ ಅಂತಹ ನಿಯಂತ್ರಣಗಳ ಕಾರ್ಯಾಚರಣೆಯ ಪರಿಣಾಮಕ್ಕೆ ಹಾಗೂ ಅಂತಹ ನಿಯಂತ್ರಣಗಳ ಕಾರ್ಯಾಚರಣೆಯ ಪರಿಣಾಮಕ್ಕೆ ಸಂಬಂಧಿಸಿ ಈ ವರದಿಗೆ ಪ್ರತ್ಯೇಕವಾಗಿರುವ ವರದಿ 'ಅನುಬಂಧ – ಎ' ಅನ್ನು ನೋಡಿ;

ಜಿ) ಭಾರತ ಸರ್ಕಾರದ ಸಾಂಸ್ಥಿಕ ವ್ಯವಹಾರಗಳ ಸಚಿವಾಲಯ ಹೊರಡಿಸಿದ ಅಧಿಸೂಚನೆ ಸಂಖ್ಯೆ:ಜಿ.ಎಸ್.ಆರ್. 463(ಇ), ದಿನಾಂಕ 5ನೇ ಜೂನ್ 2015 ರ ಪ್ರಕಾರ ಕಾಯ್ದೆಯ ಪರಿಚ್ಛೇದ 197 ಸರ್ಕಾರಿ ಕಂಪನಿಗಳಿಗೆ ಅನ್ವಯಿಸುವುದಿಲ್ಲ. ಅದರನ್ವಯ, ಕಾಯ್ದೆಯ ಪರಿಚ್ಛೇದ 197(16) ರ ನಿಬಂಧನೆಗಳ ಅನುಪಾಲನಾ ವರದಿಯು ಅನ್ವಯಿಸುವುದಿಲ್ಲ.

ಹೆಚ್) ಕಂನಿಗಳ ನಿಯಮ, 2014ರ ನಿಯಮ–11ಕ್ಕೆ ಅನುಸಾರವಾಗಿ ಲೆಕ್ಕಪರಿಶೋಧಕರ ವರದಿಯಲ್ಲಿ ಒಳಗೊಳ್ಳಬೇಕಾದ ಬೇರೆ ವಿಷಯಗಳಿಗೆ ಸಂಬಂಧಿಸಿ, ನಮ್ಮ ಅಭಿಪ್ರಾಯದಲ್ಲಿ ಮತ್ತು ನಮಗೆ ದೊರೆತಿರುವ ಅತ್ಯುತ್ತಮ ಮಾಹಿತಿಯ ಅನುಸಾರವಾಗಿ ಮತ್ತು ನಮಗೆ ನೀಡಿರುವ ವಿವರಗಳ ಅನುಸಾರ;

I. ಕಂಪನಿಯು ತನ್ನ ಹಣಕಾಸು ತಃಖ್ತೆಗಳಲ್ಲಿ ಭಾರತೀಯ ಲೆಕ್ಕಪತ್ರ ಮಾನಕ ಹಣಕಾಸು ಸ್ಥಿತಿಯ ಮೇಲೆ ಬಾಕಿ ಇರುವ ಮೊಕದ್ದಮೆಗಳ ಪರಿಣಾಮವನ್ನು ಬಹಿರಂಗಪಡಿಸಿಲ್ಲ.

II. ಮೇಲಿನ ಅರ್ಹತಾ ಅಭಿಪ್ರಾಯದ ಕಂಡಿಕೆಯಲ್ಲಿ ವಿವರಿಸಿರುವ ವಿಷಯದ ಪರಿಣಾಮಗಳು/ಸಂಭಾವ್ಯ ಪರಿಣಾಮಗಳ ಹೊರತಾಗಿ, ಕಂಪನಿಯು ಭೌತಿಕ ನಿರೀಕ್ಷಿತ ನಷ್ಟಗಳಿಗೆ ಕಾಯ್ದೆಯಂತೆಅಥವಾ ಲೆಕ್ಕಪತ್ರ ಮಾನದಂಡಗಳ ಅನುಸಾರ ನಿಬಂಧನೆ ಮಾಡಿರುತ್ತದೆ. ಮುಂದುವರೆದಂತೆ, ಕಂಪನಿಯು ಸ್ವತಂತ್ರ ಭಾರತೀಯ ಹಣಕಾಸಿನ ಲೆಕ್ಕಪತ್ರಗಳಲ್ಲಿ ತಿಳಿಸಿರುವಂತೆಯಾವುದೇ ಡೆರಿವೇಷನ್ ಒಪ್ಪಂದದಲ್ಲಿ ಭಾಗವಹಿಸಿರುವುದಿಲ್ಲ.(ಗಮನಿಸಿ: ಟಿಪ್ಪಣಿ ಸಂಖ್ಯೆ 31)

III. ಲೆಕ್ಕಪತ್ರಗಳ ಪುಸ್ತಿಕೆಗಳ ಪ್ರಕಾರ ಮತ್ತು ನಮಗೆ ನೀಡಿದ ಮಾಹಿತಿ ಹಾಗೂ ವಿವರಣೆಗಳ ಅನುಸಾರ ಕಂಪನಿಯಿಂದ ಹೂಡಿಕೆದಾರ ಶಿಕ್ಷಣ ಮತ್ತು ಸಂರಕ್ಷಣಾ ನಿಧಿಗೆ ಯಾವುದೇ ಮೊತ್ತದ ವರ್ಗಾವಣೆ ಅಗತ್ಯವಿರುವುದಿಲ್ಲ. ಆದ್ದರಿಂದ, ಶಿಕ್ಷಣ ಮತ್ತು ಸಂರಕ್ಷಣಾ ನಿಧಿಗೆ ಮೊತ್ತದ ವರ್ಗಾವಣೆಯ ವಿಳಂಬದ ಬಗ್ಗೆ ಟೀಕೆ ಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ.

ಕಿಚ್ಚಾ & ಪ್ರಭು ಕೇಸವನ್, ಪರವಾಗಿ
ಚಾರ್ಟರ್ಡ್ ಅಕೌಂಟೆಂಟ್ಸ್
ಎಫ್.ಆರ್.ಎನ್.:050108ಎಸ್

ದಿನಾಂಕ : 26–12–2019
ಸ್ಥಳ : ಚೆನ್ನೈ

ಸಹಿ/–
ಶೃತಿ ಲೋಹಿಯ
ಪಾಲುದಾರರು
ಎಂ.ನಂ:228486
ಯುಡಿಐಎನ್ : 19228486ಎಎಎಐಆರ್1374

ಸ್ವತಂತ್ರ ಲೆಕ್ಕಪರಿಶೋಧಕರ ವರದಿಗೆ ಅನುಬಂಧ ಎ

(31 ಮಾರ್ಚ್, 2019ಕ್ಕೆ ಅಂತ್ಯಗೊಂಡ ವರ್ಷಕ್ಕೆ ಕಾವೇರಿ ನೀರಾವರಿ ನಿಗಮ ನಿಯಮಿತದ ಖಾತೆಗಳ ನಮ್ಮ ವರದಿಯಲ್ಲಿ ಉಲ್ಲೇಖದಂತೆ)

I. ಸ್ಥಿರ ಸ್ವತ್ತುಗಳಿಗೆ ಸಂಬಂಧಿಸಿದಂತೆ

ಎ) ಕಂಪನಿಯು ಪೂರಕ ಸ್ವತ್ತುಗಳ ಸಂಬಂಧದಲ್ಲಿ (ಮುಖ್ಯ ಕಛೇರಿಯಲ್ಲಿನ ಭೂಮಿ ಮತ್ತು ನಿಶ್ಚಿತ ಸ್ವತ್ತುಗಳನ್ನು ಹೊರತುಪಡಿಸಿ) ಪೂರ್ಣ ವಿವರಗಳನ್ನು ಪ್ರದರ್ಶಿಸುವ ಸೂಕ್ತ ದಾಖಲೆಗಳನ್ನು ನಿರ್ವಹಿಸಿಕೊಂಡು ಬಂದಿದ್ದು, ನಿಶ್ಚಿತ ಸ್ವತ್ತುಗಳ ಪ್ರಮಾಣಾತ್ಮಕ ವಿವರಗಳು ಮತ್ತು ಸನ್ನಿವೇಶಗಳನ್ನು ಇದು ಒಳಗೊಂಡಿದೆ.

ಬಿ) ನಮಗೆ ವಿವರಿಸಿರುವಂತೆ, ಕಂಪನಿಯು ವರ್ಷದಲ್ಲಿ ಚಾಲ್ತಿಯಲ್ಲಿರುವ ಸ್ವತ್ತುಗಳ ಭೌತಿಕ ಪರಿಶೀಲನೆಯನ್ನು ಕೈಗೊಂಡಿರುವುದಿಲ್ಲ. ಆದ್ದರಿಂದ ವ್ಯತ್ಯಾಸಗಳ ಕುರಿತು ವರದಿ ಮಾಡುವುದು ಹಾಗೂ ಲೆಕ್ಕಪತ್ರಗಳ ಪುಸ್ತಿಕೆಗಳಲ್ಲಿ ಸ್ವತ್ತುಗಳಿಗೆ ಸಂಬಂಧಿಸಿದಂತೆ ಹೊಂದಾಣಿಕೆ ಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ.

ಮುಂದುವರೆದಂತೆ, ನಮಗೆ ವಿವರಿಸಿದಂತೆ ಕಂಪನಿಯು ನಿರ್ಮಾಣಕ್ಕೆ ಸಂಬಂಧಿಸಿದಂತೆ ರಸ್ತೆಗಳು, ಸೇತುವೆಗಳು, ಕಲ್ವರ್ಟ್‌ಗಳು, ಅಣೆಕಟ್ಟುಗಳು & ಬ್ಯಾರೇಜ್‌ಗಳು, ಡಿಸ್ಟ್ರಿಬ್ಯೂಟರಿಸ್ & ಲ್ಯಾಟರಲ್ಸ್, ನಾಲೆಗಳು & ಶಾಖೆಗಳು ಹಾಗೂ ಕಟ್ಟಡ & ಕಾಲೋನಿಗಳ ಭೌತಿಕ ಪರಿಶೀಲನೆಯನ್ನು ಕೈಗೊಂಡಿರುವುದಿಲ್ಲ. ಆದ್ದರಿಂದ ವ್ಯತ್ಯಾಸಗಳ ಕುರಿತು ವರದಿ ಮಾಡುವುದು ಹಾಗೂ ಲೆಕ್ಕಪತ್ರಗಳ ಪುಸ್ತಿಕೆಗಳಲ್ಲಿ ಸ್ವತ್ತುಗಳಿಗೆ ಸಂಬಂಧಿಸಿದಂತೆ ಹೊಂದಾಣಿಕೆ ಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ.

ಕಂಪನಿಗೆ ದಾಖಲೆಗಳ ಪುಸ್ತಿಕಯೊಂದಿಗೆ ಸ್ವತ್ತುಗಳ ಪರಿಶೀಲನೆ ಮತ್ತು ತುಲನೆಗಾಗಿ ಸೂಕ್ತವಾದ ವ್ಯವಸ್ಥೆಯನ್ನು ರೂಪಿಸುವ ಅಗತ್ಯವಿರುತ್ತದೆ.

ಸಿ) ನಮ್ಮ ಅಭಿಪ್ರಾಯದಲ್ಲಿ ಹಾಗೂ ಲೆಕ್ಕಪರಿಶೋಧನೆ ಸಂದರ್ಭದಲ್ಲಿ ನಮಗೆ ನೀಡಲಾಗಿರುವ ಮಾಹಿತಿ ಮತ್ತು ವಿವರಣೆಗಳ ಅನುಸಾರ ಸ್ಥಿರ ಸ್ವತ್ತುಗಳ ಕರಾರುಗಳು ಹಲವಾರು ಸಂದರ್ಭಗಳಲ್ಲಿ ಕಂಪನಿಯ ಹೆಸರಿನಲ್ಲಿರುವುದಿಲ್ಲ.

II. ದಾಸ್ತಾನುಗಳಿಗೆ ಸಂಬಂಧಿಸಿದಂತೆ

ನಮ್ಮ ಅಭಿಪ್ರಾಯದಲ್ಲಿ ಹಾಗೂ ಲೆಕ್ಕಪರಿಶೋಧನೆ ಸಂದರ್ಭದಲ್ಲಿ ನಮಗೆ ನೀಡಲಾಗಿರುವ ಮಾಹಿತಿ ಮತ್ತು ವಿವರಣೆಗಳ ಅನುಸಾರ ಆಡಳಿತವು ಇನ್ವೆಂಟರಿಗಳ ಭೌತಿಕ ಪರಿಶೀಲನೆಯನ್ನು ಸಕಾರಣವಾದ ಅಂತರಗಳಲ್ಲಿ ನಡೆಸಿದ್ದು, ಭೌತಿಕ ಪರಿಶೀಲನೆಯಲ್ಲಿ ಗಮನಿಸಲಾದ ಲೋಪ–ದೋಷಗಳನ್ನು ಆಡಳಿತವು ಸೂಕ್ತವಾಗಿ ನಿರ್ವಹಿಸಿದೆ.

III. ಸಾಲಗಳು ಮತ್ತು ಮುಂಗಡಗಳು

ನಮಗೆ ನೀಡಿರುವ ಮಾಹಿತಿ ಹಾಗೂ ವಿವರಣೆಗಳ ಅನುಸಾರ,ಕಂಪನಿ ಕಾಯ್ದೆ 2013 ಪರಿಚ್ಛೇದ 189 ರನ್ವಯ ನಿರ್ವಹಿಸಿರುವ ರಿಜಿಸ್ಟರ್ ಪ್ರಕಾರ ಕಂಪನಿಯು ಯಾವುದೇ ಭದ್ರತಾ ಅಥವಾ ಅಭದ್ರತಾ ಸಾಲಗಳನ್ನು ಇತರೆ ಕಂಪನಿಗಳಿಗೆ, ಸಂಸ್ಥೆಗಳಿಗೆ ಸೀಮಿತ ಹೊಣೆಗಾರಿಕೆ ಪಾಲುದಾರಿಕೆಗಳು ಅಥವಾ ಇತರೆ ಪಕ್ಷಗಳಿಗೆ ನೀಡಿರುವುದಿಲ್ಲ. ಅದರಂತೆ, ಆದೇಶದಲ್ಲಿ ಹೇಳಿದಂತೆ, ಷರತ್ತು 3(iii)(ಎ),3(iii)(ಬಿ) &3(iii)(ಸಿ)ರ ನಿಬಂಧನೆಗಳು ಕಂಪನಿಗೆ ಅನ್ವಯಿಸುವುದಿಲ್ಲ.

IV. ಸಾಲಗಳು, ಹೂಡಿಕೆಗಳು, ಮತ್ತು ಖಾತರಿಗಳು

ನಮಗೆ ನೀಡಿರುವ ಮಾಹಿತಿಗಳ ಅನುಸಾರ, ಕಂಪನಿ ಕಾಯ್ದೆ 2013 ಪರಿಚ್ಛೇದ 185 & 186 ರ ಸಂಸ್ಥೆಗಳ ಒಳಗೊಂಡಂತೆ, ಕಂಪನಿಯು ಯಾವುದೇ ಸಾಲ ಅಥವಾ ಹೂಡಿಕೆ ಅಥವಾ ಯಾವುದೇ ಖಾತರಿ ಅಥವಾ ಭದ್ರತೆ ನೀಡಿರುವುದಿಲ್ಲ.ಅದರಂತೆ, ಆದೇಶದಲ್ಲಿ ಹೇಳಿದಂತೆ, ಷರತ್ತು 3(IV) ರ ನಿಬಂಧನೆಗಳು ಕಂಪನಿಗೆ ಅನ್ವಯಿಸುವುದಿಲ್ಲ.

V. ನಮಗೆ ನೀಡಿರುವ ಮಾಹಿತಿ ಹಾಗೂ ವಿವರಣೆಗಳ ಅನುಸಾರ, ಕಂಪನಿ ಕಾಯ್ದೆ 2013 ಪರಿಚ್ಛೇದ 73 ರಿಂದ 76 ಹಾಗೂ ರಚಿಸಲಾದ ನಿಯಮಗಳು ಮತ್ತು ಅವುಗಳ ಸೂಚಿತ ವ್ಯಾಪ್ತಿಯ ಅನ್ವಯಕಂಪನಿಯು ಯಾವುದೇ ಠೇವಣಿಗಳನ್ನು ಸಾರ್ವಜನಿಕರಿಂದಪಡೆದಿರುವುದಿಲ್ಲ. ಆದ್ದರಿಂದ ಆದೇಶದಲ್ಲಿ ಹೇಳಿದಂತೆ, ಷರತ್ತು 3(v) ರ ನಿಬಂಧನೆಗಳು ಕಂಪನಿಗೆ ಅನ್ವಯಿಸುವುದಿಲ್ಲ.

VI. ನಮಗೆ ನೀಡಿರುವ ಮಾಹಿತಿ ಹಾಗೂ ವಿವರಣೆಗಳ ಅನುಸಾರ, ಕಂಪನಿ ಕಾಯ್ದೆ 2013 ಪರಿಚ್ಛೇದ 148(1) ಮತ್ತು ಕಂಪನಿಗಳ (ವೆಚ್ಚ ದಾಖಲೆಗಳು & ಲೆಕ್ಕಪರಿಶೋಧನೆ) ನಿಯಮಗಳು 2014 ರನ್ವಯ ಕೇಂದ್ರ ಸರ್ಕಾರವು ವೆಚ್ಚ ದಾಖಲೆಗಳ ನಿರ್ವಹಣೆಯನ್ನು ಸೂಚಿಸಿರುವುದಿಲ್ಲ.

VII. ಶಾಸನಬದ್ಧ ಬಾಕಿಗಳ ವಿಷಯದಲ್ಲಿ

ಎ) ನಮ್ಮ ಅಭಿಪ್ರಾಯದಲ್ಲಿ ಹಾಗೂ ಲೆಕ್ಕಪರಿಶೋಧನೆ ಸಂದರ್ಭದಲ್ಲಿ ನಮಗೆ ನೀಡಲಾಗಿರುವ ಮಾಹಿತಿ ಮತ್ತು ವಿವರಣೆಗಳ ಅನುಸಾರ ಯಾವುದೇ ವ್ಯಾಜ್ಯದ ಸಂಬಂಧದಲ್ಲಿ ಸೂಕ್ತ ಪ್ರಾಧಿಕಾರಗಳಿಗೆ ಠೇವಣಿ ಮಾಡಿರುವ ಆದಾಯ ತೆರಿಗೆ, ಕಸ್ಟಮ್ಸ್ ಸುಂಕ, ಮೌಲ್ಯವರ್ಧಿತ ತೆರಿಗೆ ಮತ್ತು ಜಿ.ಎಸ್.ಟಿ. ತೆರಿಗೆಯ ವಸ್ತುಶಃ ಬಾಕಿಗಳಿರುವುದಿಲ್ಲ.

ನಮ್ಮ ಲೆಕ್ಕಪರಿಶೋಧನೆ ವರದಿಯ ಪ್ಯಾರಾ 26 ರಲ್ಲಿ ವಿವರಿಸಿದಂತೆ, ಶಾಸನಬದ್ಧ ಬಾಕಿಗಳ ಸಮಯೋಚಿತ ಗುರುತಿಸುವಿಕೆಯನ್ನು ಖಚಿತಪಡಿಸಲು ಅಸಮರ್ಪಕತೆ ಇರುವುದರಿಂದ 6 ತಿಂಗಳಿಗಿಂತ ಅಧಿಕವಾಗಿರುವ ವಾದವಿಲ್ಲದ ಉಳಿಕೆ ಮೊತ್ತವನ್ನು ನಮ್ಮಿಂದ ಖಚಿತಪಡಿಸಲು ಸಾಧ್ಯವಿರುವುದಿಲ್ಲ.

ಮುಂದುವರೆದಂತೆ,

ಬಿ) ನಮಗೆ ವಿವರಿಸಿದಂತೆ, ನೌಕಕರ ವಿಮಾ ಕಾಯ್ದೆಯ ನಿಬಂಧನೆಗಳು ಕಂಪನಿಗೆ ಅನ್ವಯಿಸುವುದಿಲ್ಲ ಹಾಗೂ ಆಸ್ತಿ ತೆರಿಗೆಗೆ ಸಂಬಂಧಿಸಿದಂತೆ, ಸಂಬಂಧಪಟ್ಟ ಅಧಿಕಾರಿಗಳಿಂದ ಯಾವುದೇ ಬೇಡಿಕೆ ಇರುವುದಿಲ್ಲ.

ಸಿ) ನಮಗೆ ನೀಡಿರುವ ಮಾಹಿತಿ ಹಾಗೂ ವಿವರಣೆಗಳ ಅನುಸಾರ, ವರ್ಷಾಂತ್ಯಕ್ಕೆವಿವಾದದನ್ವಯ ಠೇವಣಿ ಮಾಡಲಾಗದ ಭವಿಷ್ಯನಿಧಿ, ಆದಾಯ ತೆರಿಗೆ, ಮಾರಾಟ ತೆರಿಗೆ, ಸಂಪತ್ತು ತೆರಿಗೆ, ಸೇವಾ ತೆರಿಗೆ, ರಾಯಲ್ಟಿ, ವೃತ್ತಿಪರ ತೆರಿಗೆ, ಜಿ.ಎಸ್.ಟಿ., ಮತ್ತು ಇತರೆ ಶಾಸನಬದ್ಧಬಾಕಿ/ಬೇಡಿಕೆಗಳು ಇರುವುದಿಲ್ಲ.

VIII. ಲೆಕ್ಕಪುಸ್ತಿಕೆಗಳ ಪರೀಕ್ಷೆ ಮತ್ತು ನಮಗೆ ನೀಡಿರುವ ಮಾಹಿತಿ ಹಾಗೂ ವಿವರಣೆಗಳ ಅನುಸಾರ, ಕಂಪನಿಯು ಸಾಲದ ಮರುಪಾವತಿಯಲ್ಲಿ ಅಥವಾ ಹಣಕಾಸಿನ ಸಂಸ್ಥೆಗಳು/ಬ್ಯಾಂಕ್‌ಗಳು/ಡಿಬೆಂಚರ್‌ಗಳ ಪಾವತಿಯಲ್ಲಿ ಬಾಕಿ ಉಳಿಸಿರುವುದಾಗಲಿ ಕಂಡುಬಂದಿರುವುದಿಲ್ಲ.

IX. ನಮಗೆ ನೀಡಿರುವ ಮಾಹಿತಿ ಹಾಗೂ ವಿವರಣೆಗಳ ಅನುಸಾರ, ಕಂಪನಿಯು ಆರಂಭಿಕ ಸಾರ್ವಜನಿಕ ಷೇರು ಬಿಡುಗಡೆ ಅಥವಾ ಮುಂದುವರೆದ ಸಾರ್ವಜನಿಕ ಷೇರು ಬಿಡುಗಡೆ(ಸಾಲ ಸಾಧನಗಳು ಸೇರಿದಂತೆ)ಹಣವನ್ನು ಸಂಗ್ರಹಿಸಿರುವುದಿಲ್ಲ.ಬ್ಯಾಂಕುಗಳಿಂದ ಪಡೆದ ಅವಧಿ ಸಾಲಗಳಿಗೆ ಸಂಬಂಧಿಸಿದಂತೆ, ಈಕ್ವಿಟಿ, ಸಾಲದ ನಿಧಿ, ಬಡ್ಡಿ ಆದಾಯ, ಅನುದಾನ ಹಾಗೂ ಇತರೆ ಆದಾಯಗಳಿಗೆ ಮುಂಗಡವನ್ನು ಒಳಗೊಂಡಿರುವ ಬ್ಯಾಂಕ್ ಖಾತೆಯಿಂದ ಯೋಜನೆಗೆ ಪಾವತಿ ಇರುವುದರಿಂದ ಸಾಲ ಪಡೆದ ಮೊತ್ತಗಳ ನಿಧಿಗಳ ನಿಖರವಾದ ಮೊತ್ತದ ಗುರುತಿಸುವಿಕೆ ಹಾಗೂ ಅದರ ಉದ್ದೇಶಕ್ಕಾಗಿ ಗುರುತಿಸಲು ಕಷ್ಟಸಾಧ್ಯವಾಗಿರುತ್ತದೆ. ನಮಗೆ ನೀಡಿರುವ ಮಾಹಿತಿ ಹಾಗೂ ವಿವರಣೆಗಳ ಅನುಸಾರ ಮತ್ತು ನಗದು ಪ್ರವಹನ ಪಟ್ಟಿಯ ಅನುಸಾರ ಕಂಪನಿಯು ಅವಧಿ ಸಾಲಗಳನ್ನು ಪಡೆದಿರುವ ಉದ್ದೇಶಕ್ಕೆ ಅಳವಡಿಸಿಕೊಂಡಿರುತ್ತದೆ.

X. ನಮ್ಮ ಲೆಕ್ಕಪರಿಶೋಧನೆ ಹಾಗೂ ಕಂಪನಿಯ ದಾಖಲೆಗಳು, ಭಾರತದಲ್ಲಿ ಸಾಮಾನ್ಯವಾಗಿ ಅಂಗೀಕರಿಸಲ್ಪಟ್ಟ ಲೆಕ್ಕಪರಿಶೋಧಕ ರೂಢಿಗತ ಅನುಸಾರವಾಗಿ ನಡೆಸಲಾದ ಲೆಕ್ಕಪರಿಶೋಧನೆ ಮತ್ತು ನಮಗೆ ನೀಡಿರುವ ಮಾಹಿತಿ ಹಾಗೂ ವಿವರಣೆಗಳ ಅನುಸಾರ, ವರ್ಷದ ಅವಧಿಯಲ್ಲಿ ಕಂಪನಿಯು ಯಾವುದೇ ವಂಚನೆಯನ್ನು ಎಸಗಿಲ್ಲ ಮತ್ತು ಕಂಪನಿ ಅಥವಾ ಕಂಪನಿಯ ಅಧಿಕಾರಿಗಳು ಅಥವಾ ಉದ್ಯೋಗಿಗಳು ಕಂಪನಿಗೆ ವಂಚನೆ ಮಾಡಿರುವುದು ಗಮನಕ್ಕೆ ಬಂದಿಲ್ಲ ಅಥವಾ ವರದಿಯಾಗಿಲ್ಲ.

XI. ಕಂಪನಿಯು ಸರ್ಕಾರದ ಕಂಪನಿಯಾಗಿದ್ದು, ಕಂಪನಿ ಕಾಯ್ದೆ 2013 ಪರಿಚ್ಛೇದ 197 ವ್ಯವಸ್ಥಾಪಕ ಸಂಭಾವನೆಯ ನಿಬಂಧನೆಗಳು ಸಾಂಸ್ಥಿಕ ವ್ಯವಹಾರಗಳ ಸಚಿವಾಲಯ (ಎಂ.ಸಿ.ಎ.) ದಿನಾಂಕ:05–06–2015 ರಂದು ಹೊರಡಿಸಿದ ಅಧಿಸೂಚನೆ ಸಂಖ್ಯೆ:ಜಿಎಸ್‌ಆರ್ 463(ಈ) ಅನ್ವಯಿಸುವುದಿಲ್ಲ.

XII. ಕಂಪನಿಯು ನಿಧಿ ಕಂಪನಿಯಾಗಿಲ್ಲದಿರುವುದರಿಂದ ಆದೇಶದಲ್ಲಿ ಹೇಳಿದಂತೆ, ಷರತ್ತು 3(xii) ರ ನಿಬಂಧನೆಗಳು ಕಂಪನಿಗೆ ಅನ್ವಯಿಸುವುದಿಲ್ಲ.

XIII. ನಮಗೆ ನೀಡಲಾಗಿರುವ ಮಾಹಿತಿ ಮತ್ತು ವಿವರಣೆಗಳ ಅನುಸಾರ, ಕಂಪನಿ ಕಾಯ್ದೆ 2013 ಪರಿಚ್ಛೇದ 177 ಮತ್ತು 188 ರನ್ವಯ ಕಂಪನಿಯು ನಿಬಂಧನೆಗಳನ್ನು ಪಾಲಿಸಿರುತ್ತದೆ.ಸಂಬಂಧಿತ ಪಕ್ಷದೊಂದಿಗೆ ಎಲ್ಲ ವಹಿವಾಟು ಮತ್ತು ಅದರ ವಿವರಣೆಗಳನ್ನು ಪ್ರಮಾಣಿತ ಲೆಕ್ಕಪತ್ರಗಳ ನಿಯಮಗಳನುಸಾರ ಬಹಿರಂಗಪಡಿಸಲಾಗಿದೆ.

XIV. ನಮ್ಮ ಅಭಿಪ್ರಾಯದಲ್ಲಿ ಹಾಗೂ ನಮಗೆ ನೀಡಲಾಗಿರುವ ಮಾಹಿತಿ ಮತ್ತು ವಿವರಣೆಗಳ ಅನುಸಾರ, ಪರಿಶೀಲಿತ ವರ್ಷದಲ್ಲಿ ಕಂಪನಿಯು ಷೇರುಗಳಖಾಸಗೀ ವಿತರಣೆಯನ್ನು 60 ದಿನಗಳಶಾಸನಬದ್ಧ ಅವಧಿಯನ್ನು ಮೀರಿ ವಿತರಣೆಯಲ್ಲಿ ವಿಳಂಬ, ಪ್ರತ್ಯೇಕ ಬ್ಯಾಂಕ್ ಖಾತೆಯನ್ನು ತೆರೆದಿರುವುದು ಹಾಗೂ ವಿಳಂಬವಾದ ಹಂಚಿಕೆಗೆ ಆಸಕ್ತಿಯನ್ನು ಒದಗಿಸದಿರುವುದು ಹೊರತುಪಡಿಸಲಾಗಿರುತ್ತದೆ.

XV. ನಮ್ಮ ಅಭಿಪ್ರಾಯದಲ್ಲಿ ಹಾಗೂ ನಮಗೆ ನೀಡಲಾಗಿರುವ ಮಾಹಿತಿ ಮತ್ತು ವಿವರಣೆಗಳ ಅನುಸಾರ,ಕಂಪನಿಯು ನಿರ್ದೇಶಕರ/ನಿರ್ದೇಶಕರಿಗೆ ಸಂಬಂಧಿಸಿದ ವ್ಯಕ್ತಿಗಳ ಜೊತೆ ಯಾವುದೇ ರೀತಿಯ ನಗದೇತರ ವಹಿವಾಟನ್ನು ಮಾಡಿರುವುದಿಲ್ಲ. ಆದ್ದರಿಂದ ಕಂಪನಿ ಕಾಯ್ದೆ 2013 ಪರಿಚ್ಛೇದ 192 ರ ನಿಬಂಧನೆಗಳ ಅನುಪಾಲನಾ ವರದಿಯು ಉದ್ಭವಿಸುವುದಿಲ್ಲ.

XVI. ಕಂಪನಿಯು 1934ರ ರಿಜರ್ವ್ ಬ್ಯಾಂಕ್ ಆಫ್ ಇಂಡಿಯಾ ಕಾಯ್ದೆಯ ಅನುಚ್ಛೇದ 45–ಐಎ ರನ್ವಯ ವ್ಯಾಖ್ಯಾನಿಸಿದಂತೆ ನೋಂದಾಯಿಸುವ ಅಗತ್ಯವಿರುವುದಿಲ್ಲ. ಅದರನ್ವಯ, ಆದೇಶದಲ್ಲಿ ಹೇಳಿದಂತೆ, ಷರತ್ತು 3(xvi) ರ ನಿಬಂಧನೆಗಳು ಕಂಪನಿಗೆ ಅನ್ವಯಿಸುವುದಿಲ್ಲ.

ಕಿಚ್ಚಾ & ಪ್ರಭು ಕೇಸವನ್, ಪರವಾಗಿ
ಚಾರ್ಟರ್ಡ್ ಅಕೌಂಟೆಂಟ್ಸ್
ಎಫ್.ಆರ್.ಎನ್.:050108ಎಸ್

ದಿನಾಂಕ : 26–12–2019
ಸ್ಥಳ : ಚೆನ್ನೈ

ಸಹಿ/–
ಶೃತಿ ಲೋಹಿಯ
ಪಾಲುದಾರರು
ಎಂ.ನಂ:228486
ಯುಡಿಐಎನ್ : 19228486ಎಎಎಐಆರ್1374

ಕಾವೇರಿ ನೀರಾವರಿ ನಿಗಮದ ಸ್ವತಂತ್ರ ಲೆಕ್ಕಪರಿಶೋಧನಾ ವರದಿಗೆ "ಅನುಬಂಧ–2"

ಮಾರ್ಚ್ –31, 2019ಕ್ಕೆ ಕಾವೇರಿ ನೀರಾವರಿ ನಿಗಮ(ಕಂಪನಿಯ)ದ ಸದಸ್ಯರುಗಳಿಗೆ ಭಾರತೀಯ ಲೆಕ್ಕಪತ್ರಗಳ ಪ್ರಮಾಣೀಕರಣ ಹಣಕಾಸಿನ ತಃಖ್ತೆ ಮೇಲೆ ನೀಡಿದ ನಮ್ಮ ವರದಿ.

ಎ. ಕಂಪನಿಗಳ ಕಾಯ್ದೆ 2013 ರ ಅನುಚ್ಛೇದ 143, ಪರಿಚ್ಛೇದ 5 ಅಡಿಯಲ್ಲಿ ಹೊರಡಿಸಿದ ನಿರ್ದೇಶನಗಳು

ಕ್ರ. ಸಂ.	ನಿರ್ದೇಶನಗಳು	ಲೆಕ್ಕಪರಿಶೋಧಕರ ಉತ್ತರ
1	ಕಂಪನಿಯು ತನ್ನ ಎಲ್ಲ ಲೆಕ್ಕಾಚಾರವನ್ನು ಮಾಹಿತಿ ತಂತ್ರಜ್ಞಾನ (ಐ.ಟಿ.) ವ್ಯವಸ್ಥೆ ಅಳವಡಿಸುವ ವ್ಯವಸ್ಥೆ ಇಟ್ಟುಕೊಂಡಿದೆಯೇ?	I. ಕಂಪನಿಯು ವಲಯವಾರು ಲೆಕ್ಕಾಚಾರದ ಸ್ಥಾಪನೆ ಹೊಂದಿರುತ್ತದೆ. ಇದರ ನಿರ್ವಹಣೆ ಹೊರಗುತ್ತಿಗೆಗೆ ನೀಡಲಾಗಿರುತ್ತದೆ. ಈಗಾಗಲೇ ಇದರ ಬಗ್ಗೆ ನಮ್ಮ ಅನಿಸಿಕೆಗಳನ್ನು ವರದಿಯಲ್ಲಿ ವ್ಯಕ್ತಪಡಿಸಿದ್ದು, ಸುಧಾರಣಾ ವ್ಯಾಪ್ತಿ ನಿಯಂತ್ರಣಗಳು ವರ್ಧಿತ ವೀಕ್ಷಣೆ ಮತ್ತು ಊರ್ಜಿತಗೊಳಿಸುವಿಕೆ ಹಾಗೂ ನಿಕಟ ಮೇಲ್ವಿಚಾರಣೆ ಬಗ್ಗೆ ವರದಿಯಲ್ಲಿ ತಿಳಿಸಿರುತ್ತೇವೆ. II. ಹಣಕಾಸಿನ ಪುಸ್ತಿಕೆಗಳು ವಿಭಾಗಗಳಲ್ಲಿ ನಿರ್ವಹಿಸಿದ ಕೈಪಿಡಿ ಪುಸ್ತಕ ಗಳೊಂದಿಗೆ ಹೊಂದಿಕೆಯಾಗುವುದಿಲ್ಲ. III. ಕಂಪನಿಯು ಆವರ್ತಕ ವಿಮರ್ಶಕ ಸಭೆಯೊಂದಿಗೆ ಉತ್ತಮವಾದ ತಂತ್ರಾಂಶವನ್ನು ಬಳಕೆ ಮಾಡಲು ಸಲಹೆ ನೀಡಲಾಗಿದೆ.
2	ಹೌದಾಗಿದ್ದಲ್ಲಿ, ಮಾಹಿತಿ ತಂತ್ರಜ್ಞಾನ (ಐ.ಟಿ.) ವ್ಯವಸ್ಥೆಯನ್ನು ಹೊರತುಪಡಿಸಿ ಮಾಡಿದ ಲೆಕ್ಕಾಚಾರದ ವ್ಯವಹಾರಗಳ ಸಮಗ್ರತೆಯನ್ನು ಹಾಗೂ ಹಣಕಾಸಿನ ಪ್ರಭಾವವನ್ನು ತಿಳಿಸಿ.	ಮಾಹಿತಿ ನೀಡಿದಂತೆ, ಕಂಪನಿಯು ಸಾಲಗಾರನಿಂದ ಪಡೆದ ಸಾಲದ ಮರುಪಾವತಿಯ ಅಸಮರ್ಥತೆಯಿಂದಾಗಿ ಯಾವುದೇ ಪ್ರಸ್ತುತ ಸಾಲ ಅಥವಾ ಸಾಲದ ಮನ್ನಾ/ಸಾಲದ ಬಡ್ಡಿ ಇತ್ಯಾದಿಗಳ ಪುನರ್‌ರಚನೆಯಾಗಿರುವುದಿಲ್ಲ. ಕರ್ನಾಟಕ ಸರ್ಕಾರದಿಂದ ಪಡೆದ ನಿಧಿಯಿಂದ ಸಾಲದ ಮರುಪಾವತಿ ಮತ್ತು ಬಡ್ಡಿ ಪಾವತಿ ಮಾಡಲಾಗುತ್ತಿದೆ.
3	ಕೇಂದ್ರ/ರಾಜ್ಯ ಏಜನ್ಸಿಗಳಿಂದ ಸ್ವೀಕೃತವಾದ ಮೊತ್ತ/ನಿರ್ದಿಷ್ಟ ಯೋಜನೆಗಳ ಸ್ವೀಕೃತಿಗಳನ್ನು ಸರಿಯಾಗಿ ಲೆಕ್ಕಾಚಾರ ಮಾಡಲಾಗಿದೆಯೇ/ ಷರತ್ತುಗಳು ಮತ್ತು ನಿಬಂಧನೆಗಳನ್ವಯ ಬಳಕೆಯಾಗಿದೆಯೇ? ವಿಚಲಿತ ಸಂದರ್ಭಗಳನ್ನು ಪಟ್ಟಿ ಮಾಡಿ.	ಕಂಪನಿಯ ಹೇಳಿಕೆಯ ಪ್ರಕಾರ ಮತ್ತು ಲಭ್ಯವಿರುವ ದಾಖಲೆಗಳ ಪರೀಕ್ಷೆಯ ಅನುಸಾರ ರಾಜ್ಯದಿಂದ ಸ್ವೀಕೃತವಾದ ಮೊತ್ತ ನಿರ್ದಿಷ್ಟ ಯೋಜನೆಗಳಿಗೆ ಬಳಸಿ ಷರತ್ತುಗಳು ಮತ್ತು ನಿಬಂಧನೆಗಳನ್ವಯ ಸರಿಯಾಗಿ ಲೆಕ್ಕಾಚಾರ ಮಾಡಲಾಗಿದೆ ಹಾಗೂ ಯಾವುದೇ ವಿಚಲಿತ ಸಂದರ್ಭಗಳು ಅವಲೋಕಿಸಿರುವುದಿಲ್ಲ. ಆದಾಗ್ಯೂ, ಎಲ್ಲ ಅನುದಾನಗಳ ಸ್ವೀಕೃತಿಗೆ ಗೊತ್ತುಪಡಿಸಿದ ಬ್ಯಾಂಕ್ ಖಾತೆಗಳ ನಿರ್ವಹಣೆ ಮಾಡಿರುವುದಿಲ್ಲ. ಅನುದಾನದ ಒಂದು ಘಟಕದಿಂದ ಇನ್ನೊಂದಕ್ಕೆ ಹಣದ ಬಳಕೆ ಇದೆಯೇ ಎಂದು ಖಚಿತಪಡಿಸಲು ಸಾಧ್ಯವಿರುವುದಿಲ್ಲ.

ಬಿ. ಕಂಪನಿಯ ಹೆಚ್ಚುವರಿ ನಿರ್ದಿಷ್ಟ ನಿರ್ದೇಶನಗಳು :

ಕ್ರ. ಸಂ.	ನಿರ್ದೇಶನಗಳು	ಲೆಕ್ಕಪರಿಶೋಧಕರ ಉತ್ತರ
ಎ)	ಕಂಪನಿಯು ತನ್ನ ಖಾಲಿ ಜಾಗವನ್ನು ಅತಿಕ್ರಮಗೊಳ್ಳುವುದರಿಂದ ಕಾಪಾಡಿಕೊಳ್ಳಲು ಅಗತ್ಯ ಕ್ರಮವನ್ನು ಕೈಗೊಂಡಿದೆಯೇ? ಕಂಪನಿಯ ಖಾಲಿ ಜಾಗವು ಅತಿಕ್ರಮಣಕ್ಕೆ ಒಳಗಾಗಿದೆಯೇ? ಖಾಲಿ ಜಾಗವು ದಾವೆಯಲ್ಲಿರುತ್ತದೆಯೇ, ಬಳಕೆಯಲ್ಲಿರುವುದಿಲ್ಲವೇ ಅಥವಾ ಹೆಚ್ಚುವರಿ ಎಂದು ಘೋಷಿಸಿದೆಯೇ? ವಿವರಗಳನ್ನು ನೀಡಬಹುದಾಗಿದೆ.	I. ಕಂಪನಿಯ ಬಳಿ ಯಾವುದೇ ವ್ಯರ್ಥ/ನಿರುಪಯೋಗಿ ಜಾಗ ಇರುವುದಿಲ್ಲ ಎಂದು ನಮಗೆ ತಿಳಿಸಲಾಗಿದೆ.ಕಂಪನಿಯ ಯಾವುದೇ ಖಾಲಿ ಜಾಗವು ಅತಿಕ್ರಮಣಕ್ಕೆ ಒಳಗಾಗಿರುವುದಿಲ್ಲ ಅಥವಾ ಖಾಲಿ ಜಾಗವು ದಾವೆಯಲ್ಲಿರುವುದಿಲ್ಲ ಅಥವಾ ಹೆಚ್ಚುವರಿ ಎಂದು ಘೋಷಿಸಲಾಗಿರುವುದಿಲ್ಲ. II. ನಿರ್ವಹಣೆ ವ್ಯವಸ್ಥೆಯಿಂದ ಒದಗಿಸಲ್ಪಟ್ಟ ಮಾಹಿತಿಯ ಆಧಾರದ ಮೇಲೆ ನಾವು ಅವಲಂಬಿಸಿದ್ದೇವೆ.

ಬಿ)	ಕರಾರು ಪತ್ರದಲ್ಲಿರುವಂತೆ ಕಾಮಗಾರಿಗಳ ನಿರ್ವಹಣೆಗೆ ಮೇಲ್ವಿಚಾರಣೆಯ ವ್ಯವಸ್ಥೆಯು ಅಸ್ತಿತ್ವದಲ್ಲಿರುತ್ತದೆಯೇ ಮತ್ತು ವೆಚ್ಚಗಳ ಏರಿಕೆಯ ಪರಿಣಾಮ. ಬ್ಯಾಂಕ್ ಖಾತರಿಗಳನ್ನು ಅವಧಿಯೊಳಗೆ ಪರಿಷ್ಕರಿಸಲಾಗಿದೆಯೇ?	I. ಕಾರ್ಯಗಳನ್ನು ಕೈಗೊಳ್ಳುವ ಮೇಲ್ವಿಚಾರಣೆಗಾಗಿ ವ್ಯವಸ್ಥೆ ಇರುತ್ತದೆ. ಕಂಪನಿಯಟೆಂಡರ್ ಒಪ್ಪಂದದಲ್ಲಿ ನಿಗದಿತ ಮೈಲುಗಲ್ಲು ಎಲ್ಲ ಕಾರ್ಯಗಳಿಗೆ ಸಂಬಂಧಿಸಿದಂತೆ ಇದು ಪ್ರಾರಂಭ, ನಿರ್ವಹಣೆಯ ಕಾರ್ಯಕ್ರಮ, ಪ್ರಗತಿಯ ವಿಮರ್ಶೆ, ವಿಳಂಬಕ್ಕೆ ದಂಡ ಇತ್ಯಾದಿಗಳೊಂದಿಗೆ ವ್ಯವಹರಿಸುತ್ತದೆ. II. ಯಾವುದೇ ಅಡಚಣೆಗಳನ್ನು ಪರಿಹರಿಸಲು ಟೆಂಡರ್ ಒಪ್ಪಂದದಲ್ಲಿ ನಿಗದಿಪಡಿಸಿದಂತೆ ಸಂಬಂಧಪಟ್ಟ ಅಧಿಕಾರಿಗಳು ಪ್ರಗತಿಯನ್ನು ಪರಿಶೀಲಿಸುತ್ತಾರೆ ಮತ್ತು ಒಪ್ಪಂದದ ಅವಧಿಯನ್ನು ವಿಸ್ತರಿಸುವುದು, ವಿಳಂಬಕ್ಕೆ ದಂಡ ವಿಧಿಸುವುದು, ಒಪ್ಪಂದವನ್ನು ಮುಕ್ತಾಯಗೊಳಿಸುವುದು ಇತ್ಯಾದಿ ಒಪ್ಪಂದದ ಷರತ್ತುಗಳ ಪ್ರಕಾರ ಅಪೇಕ್ಷಿತ ಪ್ರಗತಿಯನ್ನು ಸಾಧಿಸಲು ಪರಿಹಾರ ಕ್ರಮಗಳನ್ನು ಕೈಗೊಳ್ಳುತ್ತಾರೆ. III. ಬೆಲೆ ಏರಿಕೆ ಪ್ರಭಾವದ ಬಗ್ಗೆ ಪ್ರಗತಿಯಲ್ಲಿರುವ ಕಾರ್ಯಗಳಲ್ಲಿ ಬೆಲೆ ಏರಿಕೆ ಷರತ್ತು ಒಪ್ಪಂದಗಳನ್ವಯ ನಿರ್ಮಿತವಾಗಿರುತ್ತದೆ. ಕಾರ್ಯ ನೆರವೇರಿಸುವ ವೇಳೆಯಲ್ಲಿ ವಿಳಂಬವಾದರೆ, ಯೋಜನಾ ಅಧಿಕಾರಿಗಳಿಂದ ವಿಳಂಬದ ಕುರಿತು ಸರಿಯಾದ ವಿಮರ್ಶೆ ನಡೆಸಿ, ದಂಡ ಸಹಿತ ಅಥವಾ ದಂಡ ರಹಿತ ವಿಸ್ತರಣೆಗೆ ನಿರ್ಧಾರ ಕೈಗೊಳ್ಳುತ್ತಾರೆ. IV. ಬ್ಯಾಂಕ್ ಖಾತರಿಗಳ ಹಿಡಿಯುವಿಕೆ, ನಿರ್ವಹಣೆ ಮತ್ತು ಉಸ್ತುವಾರಿ ವಿಭಾಗಗಳಲ್ಲಿ ಮಾಡಲಾಗುತ್ತಿದೆ. ಕೇಂದ್ರಿತ ಉಸ್ತುವಾರಿ ವ್ಯವಸ್ಥೆಯ ಅನುಪಸ್ಥಿತಿಯಲ್ಲಿ ಬ್ಯಾಂಕ್ ಖಾತರಿಯ ಅಸಮರ್ಪಕ ಸಮಯೋಚಿತ ನವೀಕರಣ ಹಾಗೂ ಮರುಮೌಲ್ಯಮಾಪನಗಳ ಮೇಲೆ ನಮ್ಮ ಅನಿಸಿಕೆಗಳನ್ನು ತಿಳಿಸಲು ಸಾಧ್ಯವಿರುವುದಿಲ್ಲ.
ಸಿ)	ಕೈಬಿಟ್ಟ ಯೋಜನೆಗಳ ಮೇಲೆ ಉಂಟಾದ ವಚ್ಚವನ್ನು ಪರಿಮಾಣಿಸಬಹುದಾಗಿದೆ ಮತ್ತು ವಾಸ್ತವಿಕವಾಗಿ ಕೈಬಿಡಲಾದ ಹಣವನ್ನು ತಿಳಿಸಬಹುದಾಗಿದೆ.	ನಮಗೆ ನೀಡಿದ ಮಾಹಿತಿಯ ಪ್ರಕಾರ ಯಾವುದೇ ಯೋಜನೆಯನ್ನು ಕೈಬಿಡಲಾಗಿರುವುದಿಲ್ಲ.
ಡಿ)	ರಾಜ್ಯ ಸರ್ಕಾರದಡಿ ಪುನರ್ ವಸತಿ ಹಾಗೂ ಪುನರ್ ಸ್ಥಾಪನೆ ನೀತಿ ಕಾಯ್ದೆಯಡಿ ಪರಿಹಾರ ಮತ್ತು ಭೂಸ್ವಾಧೀನದ ಪಾವತಿ ವ್ಯವಸ್ಥೆಯ ವಿಂಗಡಣೆಗಳನ್ನು ವಿವರಿಸಿ. ಭೂ ವಿವಾದಗಳ ಪ್ರಕರಣಗಳನ್ನು ವಿವರಿಸಿ.	I. ನಿರ್ವಹಣೆ ವ್ಯವಸ್ಥೆ ನೀಡಿದ ಮಾಹಿತಿಯ ಪ್ರಕಾರ ಭೂಸ್ವಾಧೀನ ಪ್ರಕರಣಗಳಿಗೆ ಪಾವತಿ, ಎಸ್.ಎಲ್.ಎ.ಒ. ಅವರಿಂದ ಮಾಡಲಾಗುತ್ತಿದೆ. ಇದು ರಾಜ್ಯ ಸರ್ಕಾರದ ನೀತಿಯ ಅನುಸಾರವಿರುತ್ತದೆ. II. ಸಾಮಾನ್ಯವಾಗಿ, ಪರಿಹಾರ ಹೆಚ್ಚಳ ದಾವೆಗಳು ಭೂ ವಿವಾದದ ಕಾರಣಗಳಾಗಿರುತ್ತವೆ. III. ಭೂ ವಿವಾದದ ಪ್ರಕರಣಗಳ ವಿವರಣೆಗಳನ್ನು ನಿರ್ವಹಣೆ ವ್ಯವಸ್ಥೆಯಿಂದ ಪ್ರಮಾಣೀಕರಿಸಲಾಗಿರುವುದಿಲ್ಲ.

ಇ)	ಸಾಲ/ಅನುದಾನ/ಸಹಾಯಧನಗಳ ಪರಿಣಾಮಕಾರಿ ಬಳಕೆಯ ವ್ಯವಸ್ಥೆಯನ್ನು ಪರಿಶೀಲಿಸಿ. ನಿಧಿಗಳ ಬಳಕೆಯಲ್ಲಿ ವಿಂಗಡಣೆ ಇದ್ದ ಪ್ರಕರಣಗಳನ್ನು ಪಟ್ಟಿ ಮಾಡಿ.	I. ನಮ್ಮ ಪರೀಕ್ಷೆಯ ಪ್ರಕಾರ ಕಂಪನಿಯ ಬಳಿ ಪರಿಣಾಮಕಾರಿ ಅನುದಾನ/ಸಾಲಗಳ ಬಳಕೆಗೆ ಅಸಮರ್ಪಕ ವ್ಯವಸ್ಥೆ ಇರುತ್ತದೆ. ಕಂಪನಿಯು ವರ್ಷದಲ್ಲಿ ಯಾವುದೇ ಸಹಾಯಧನ ಪಡೆದುಕೊಂಡಿರುವುದಿಲ್ಲ. ಬಂಡವಾಳ ವೆಚ್ಚದ ಮೊತ್ತ, ಎಸ್.ಸಿ.ಪಿ. ಮತ್ತು ಟಿ.ಎಸ್.ಪಿ. ಕಾರ್ಯಗಳು ಹಾಗೂ ಅವಧಿ ಸಾಲದ ಮರುಪಾವತಿಗಳನ್ನು ಈಕ್ವಿಟಿಗೆ ಮುಂಗಡ ಎಂದು ಪರಿಗಣಿಸಲಾಗಿರುತ್ತದೆ. ತದನಂತರ, ಎಸ್.ಸಿ.ಪಿ. ಮತ್ತು ಟಿ.ಎಸ್.ಪಿ. ಕಾರ್ಯಗಳ ವೆಚ್ಚ ಕರ್ನಾಟಕ ಸರ್ಕಾರದ ಆದೇಶದನ್ವಯ ಆದಾಯ ಅನುದಾನವಾಗಿ ಪರಿವರ್ತಿಸಲ್ಪಟ್ಟಿರುತ್ತದೆ ಹಾಗೂ ಆದಾಯ ಅನುದಾನವೆಂದು ಲೆಕ್ಕಿಸಲಾಗಿರುತ್ತದೆ. ಅವಧಿ ಸಾಲಸ ಬಡ್ಡಿಯ ಕುರಿತು ಬಾಂಡ್ ಸಾಲ ಮತ್ತು ದುರಸ್ಥಿ ಕಾರ್ಯಗಳು ಇತ್ಯಾದಿಗೆ ಆದಾಯ ಅನುದಾನದಿಂದ ಒದಗಿಸಲಾಗಿರುತ್ತದೆ. II. ಮುಂದುವರೆದು, ಎಲ್ಲ ಅನುದಾನಗಳ ಸ್ವೀಕೃತಿಗೆ ಗೊತ್ತುಪಡಿಸಿದ ಬ್ಯಾಂಕ್ ಖಾತೆಗಳ ನಿರ್ವಹಣೆ ಮಾಡಿರುವುದಿಲ್ಲ. ಅನುದಾನದ ಒಂದು ಘಟಕದಿಂದ ಇನ್ನೊಂದಕ್ಕೆ ಹಣದ ಬಳಕೆ ಇದೆಯೇ ಎಂದು ಖಚಿತಪಡಿಸಲು ಸಾಧ್ಯವಿರುವುದಿಲ್ಲ.

ಸಿ. **ಹೆಚ್ಚುವರಿ ಉಪ ನಿರ್ದೇಶನಗಳು :**

ಕ್ರ. ಸಂ.	ನಿರ್ದೇಶನಗಳು	ಲೆಕ್ಕಪರಿಶೋಧಕರ ಉತ್ತರ
ಎಫ್)	ಎ.ಐ.ಬಿ.ಪಿ. ಯೋಜನೆಯಡಿ ಸ್ವೀಕರಿಸಿದ ನಿಧಿಯನ್ನು ಅದೇ ಯೋಜನೆಗೆ ಬಳಕೆಮಾಡಿಕೊಳ್ಳುವ ಬಗ್ಗೆ ಕಂಪನಿಯು ಮೇಲ್ವಿಚಾರಣಾ ವ್ಯವಸ್ಥೆಯನ್ನು ಹೊಂದಿದೆಯೇ ಅಥವಾ ಇಲ್ಲವೇ?	ಕಂಪನಿ ನಿರ್ವಹಿಸಿರುವ ಯೋಜನೆಗಳು ಎ.ಐ.ಬಿ.ಪಿ. ಯೋಜನೆಯಡಿ ಬರುವುದಿಲ್ಲ. ಆದ್ದರಿಂದ ಇದು ಅನ್ವಯಿಸುವುದಿಲ್ಲ.
ಜಿ)	ಎ.ಐ.ಬಿ.ಪಿ. ಯೋಜನೆಯಡಿ ಪಡೆದಿರುವಂತಹ ನಿಧಿ ಮತ್ತು ಆರ್ಥಿಕ ವರ್ಷದಲ್ಲಿ ಖರ್ಚು ಮಾಡಿದಂತಹ ಹಣವನ್ನು ಪರಿಶೀಲಿಸಬಹುದಾಗಿದೆ. ಈ ಹಣವನ್ನು ಇತರೆ ಯೋಜನೆಗಳಿಗೆ ಬಳಕೆಮಾಡಿಕೊಂಡಿದ್ದಲ್ಲಿ ವರದಿ ನೀಡುವುದು.	
ಹೆಚ್)	ಎ.ಐ.ಬಿ.ಪಿ. ಯೋಜನೆಗಳ ಬಗ್ಗೆ ಜಲಸಂಪನ್ಮೂಲ ಇಲಾಖೆ ನೀಡಿರುವಂತಹ ನಿರ್ದೇಶನಗಳನ್ನು ಕಂಪನಿಯು ಅನುಸರಿಸಿದೆಯೇ? ವ್ಯತ್ಯಾಸದ ನಿದರ್ಶನಗಳು ಕಂಡುಬಂದಲ್ಲಿ ತಿಳಿಸುವುದು.	

ಕಿಚ್ಚಾ & ಪ್ರಭು ಕೇಸವನ್, ಪರವಾಗಿ
ಚಾರ್ಟರ್ಡ್ ಅಕೌಂಟೆಂಟ್ಸ್
ಎಫ್.ಆರ್.ಎನ್.:050108ಎಸ್

ದಿನಾಂಕ : 26–12–2019
ಸ್ಥಳ : ಚೆನ್ನೈ

ಸಹಿ/–
ಶೃತಿ ಲೋಹಿಯ
ಪಾಲುದಾರರು
ಎಂ.ನಂ:228486
ಯುಡಿಐಎನ್ : 19228486ಎಎಎಐಆರ್1374

ಕಾವೇರಿ ನೀರಾವರಿ ನಿಗಮದ ಸ್ವತಂತ್ರ ಲೆಕ್ಕಪರಿಶೋಧನಾ ವರದಿಯ ಮೇಲೆ ಸ್ವತಂತ್ರ ಭಾರತೀಯ ಐ.ಎನ್.ಡಿ.ಎ.ಎಸ್. ಲೆಕ್ಕಪತ್ರ ಪ್ರಮಾಣೀಕರಣ ಹಣಕಾಸು ತಃಖ್ತೆ –"ಅನುಬಂಧ –ಎ"

2013ರ ಕಂಪನಿಗಳ ಕಾಯ್ದೆಯ ("ಕಾಯ್ದೆ") ಅನುಚ್ಛೇದ 143 ರ ಪರಿಚ್ಛೇದ 3 ರ ಷರತ್ತು 2(e) ಅಡಿ

ನಾವು ಕಾವೇರಿ ನೀರಾವರಿ ನಿಗಮ ನಿಯಮಿತದ ಹಣಕಾಸು ವರದಿಯ ಮೇಲಣ ಅಂತರಿಕ ಹಣಕಾಸು ನಿಯಂತ್ರಣಗಳ ಲೆಕ್ಕಪರಿಶೋಧನೆ ನಡೆಸಿದ್ದೇವೆ. ವರ್ಷ ಮುಕ್ತಾಯದ (ಕಂಪನಿ) ಮಾರ್ಚ್–31, 2019 ರ ದಿನಾಂಕಕ್ಕೆ ಕಂಪನಿಯ ಭಾರತೀಯ ಲೆಕ್ಕಪತ್ರ ಪ್ರಮಾಣೀಕರಣ ಹಣಕಾಸು ತಃಖ್ತೆಯ ಲೆಕ್ಕಪರಿಶೋಧನೆ.

ಆಂತರಿಕ ಹಣಕಾಸು ನಿಯಂತ್ರಣಗಳಿಗೆ ಕಂಪನಿ ಆಡಳಿತದ ಜವಾಬ್ದಾರಿ

ಆಂತರಿಕ ಹಣಕಾಸು ನಿಯಂತ್ರಣಗಳ ಲೆಕ್ಕಪರಿಶೋಧನೆಯ ಕುರಿತು ಭಾರತೀಯ ಚಾರ್ಟಡ್ ಅಕೌಂಟೆಂಟ್ಸ್ ಅಸೋಸಿಯೇಷನ್ (ಐ.ಸಿ.ಎ.ಐ) ನ ಮಾರ್ಗದರ್ಶಿ ಟಿಪ್ಪಣಿಯಲ್ಲಿ ಹೇಳಲಾದ ಕಂಪನಿ ಪ್ರಚುರಪಡಿಸಿರುವ ಹಣಕಾಸು ವರದಿ ಮಾಡುವಿಕೆ ಮಾನದಂಡ ಮೇಲೆ ಆಂತರಿಕ ನಿಯಂತ್ರಣವನ್ನು ಆಧರಿಸಿ ಆಂತರಿಕ ಹಣಕಾಸು ನಿಯಂತ್ರಗಳನ್ನು ಸ್ಥಾಪಿಸುವುದು ಹಾಗೂ ನಿರ್ವಹಿಸುವುದು ಕಂಪನಿಯ ಆಡಳಿತದ ಜವಾಬ್ದಾರಿಯಾಗಿದೆ. ಈ ಜವಾಬ್ದಾರಿಗಳಲ್ಲಿ ತನ್ನ ವ್ಯವಹಾರವನ್ನು ದಕ್ಷವಾಗಿ ಮತ್ತು ಕ್ರಮಬದ್ಧವಾಗಿ ನಡೆಸಲು, ಕಂಪನಿಯ ನೀತಿಗಳ ಪಾಲನೆ ಸೇರಿದಂತೆ 2013 ರ ಕಂಪನಿಗಳ ಕಾಯ್ದೆಯ ಅಡಿಯಲ್ಲಿ ಅಗತ್ಯವಿರುವಂತೆ ಆಂತರಿಕ ಹಣಕಾಸು ನಿಯಂತ್ರಣಗಳ ವಿನ್ಯಾಸ, ಅನುಷ್ಠಾನ ಮತ್ತು ಉಸ್ತುವಾರಿ ಕಂಪನಿಯ ಸ್ವತ್ತುಗಳನ್ನು ಸುರಕ್ಷಿತಗೊಳಿಸುವುದು, ವಂಚನೆಗಳು ಮತ್ತು ದೋಷಗಳ ಪತ್ತೆ ಹಾಗೂ ತಡೆ, ಲೆಕ್ಕಪತ್ರ ದಾಖಲೆಗಳ ನಿಖರತೆ ಹಾಗೂ ಪರಿಪೂರ್ಣತೆ, ವಿಶ್ವಾಸಾರ್ಹ ಹಣಕಾಸು ಮಾಹಿತಿಯ ಸಕಾಲಿಕ ಸಿದ್ಧಪಡಿಸುವಿಕೆ ಸೇರಿವೆ.

ಲೆಕ್ಕಪರಿಶೋಧಕರ ಜವಾಬ್ದಾರಿ

ನಮ್ಮ ಲೆಕ್ಕಪರಿಶೋಧನೆಯ ಆಧಾರದ ಮೇಲೆ ಹಣಕಾಸು ವರದಿ ಮಾಡುವಿಕೆಯ ಮೇಲೆ ಕಂಪನಿಯ ಆಂತರಿಕ ಹಣಕಾಸು ನಿಯಂತ್ರಣಗಳ ಕುರಿತು ನಮ್ಮ ಅಭಿಪ್ರಾಯವನ್ನು ನೀಡುವುದು ನಮ್ಮ ಜವಾಬ್ದಾರಿಯಾಗಿದೆ. ಐ.ಸಿ.ಎ.ಐ. ಹೊರಡಿಸಿರುವ ಹಾಗೂ 2013 ರ ಕಂಪನಿಗಳ ಕಾಯ್ದೆಯ ಅನುಚ್ಛೇದ 143(10) ರ ಅನುಸಾರ ಸೂಚಿತ ಎಂದು ಭಾವಿಸಲಾಗಿರುವ ಹಣಕಾಸು ವರದಿ ಮಾಡುವಿಕೆಯ ಮೇಲೆ ಆಂತರಿಕ ಹಣಕಾಸು ನಿಯಂತ್ರಣಗಳ ಮೇಲಣ ಮಾರ್ಗದರ್ಶಿ ಸೂಚನೆ (ಮಾರ್ಗದರ್ಶಿ ಸೂಚನೆ) ಹಾಗೂ ಲೆಕ್ಕಪರಿಶೋಧನೆಯ ಮೇಲಣ ಮಾನಕಗಳಿಗೆ ಅನುಸಾರವಾಗಿ, ಆಂತರಿಕ ಹಣಕಾಸು ನಿಯಂತ್ರಣಗಳ ಲೆಕ್ಕಪರಿಶೋಧನೆಗೆ ಅನ್ವಯಿಸುವ ಮಟ್ಟಕ್ಕೆ, ಆಂತರಿಕ ಹಣಕಾಸು ನಿಯಂತ್ರಣಗಳು ಮೇಲೆ ಅನ್ವಯಿಸುವ ಮತ್ತು ಭಾರತೀಯ ಚಾರ್ಟಡ್ ಅಕೌಂಟೆಂಟ್ಸ್ ಗಳ ಸಂಸ್ಥೆ ಹೊರಡಿಸಿರುವಂತೆ ನಾವು ಈ ಲೆಕ್ಕಪರಿಶೋಧನೆಯನ್ನು ಕೈಗೊಂಡಿದ್ದೇವೆ. ಆ ಮಾನಕಗಳು ಮತ್ತು ಮಾರ್ಗಸೂಚಿ ಟಿಪ್ಪಣಿಗೆ ನಾವು ನೈತಿಕ ಅಗತ್ಯಗಳನ್ನು ಪೂರೈಸುವುದು ಹಾಗೂ ಲೆಕ್ಕಪರಿಶೋಧನೆಗೆ ಯೋಜನೆ ರೂಪಿಸುವುದು ಹಾಗೂ ಹಣಕಾಸು ವರದಿ ಮಾಡುವಿಕೆಗೆ ಸೂಕ್ತ ಆಂತರಿಕ ನಿಯಂತ್ರಣಗಳಿವೆಯೇ ಎಂಬುದನ್ನು ಪಡೆಯಲು ಸಕಾರಣ ಖಾತರಿಯನ್ನು ಪಡೆಯುವುದಕ್ಕಾಗಿ ಯೋಜನೆಯನ್ನು ನೆರವೇರಿಸುವುದು ಹಾಗೂ ಅಂತಹ ನಿಯಂತ್ರಣಗಳನ್ನು ಎಲ್ಲ ವಸ್ತುಶಃ ದೃಷ್ಟಿಗಳಿಂದಲೂ ಪರಿಣಾಮಕಾರಿಯಾಗಿ ಕಾರ್ಯಾಚರಿಸಲಾಗಿದೆಯೇ ಎಂಬುದನ್ನು ನೋಡುವುದು ಅಗತ್ಯವಾಗುತ್ತದೆ.

ನಮ್ಮ ಲೆಕ್ಕಪರಿಶೋಧನೆಯಲ್ಲಿ, ಹಣಕಾಸು ವರದಿ ಮಾಡುವಿಕೆಯ ಮೇಲೆ ಆಂತರಿಕ ಹಣಕಾಸು ನಿಯಂತ್ರಣ ವ್ಯವಸ್ಥೆಗಳ ಹಾಗೂ ಅವುಗಳ ಕಾರ್ಯಾಚರಣೆಯ ದಕ್ಷತೆಯ ಮೇಲ್ಪಟ್ಟು ಲೆಕ್ಕಪರಿಶೋಧನೆಯ ಸಾಕ್ಷಿಯನ್ನು ಪಡೆಯುವುದಕ್ಕಾಗಿ ಲೆಕ್ಕಪರಿಶೋಧನೆ ನಡೆಸುವುದು ಒಳಗೊಂಡಿರುತ್ತದೆ. ಆಂತರಿಕ ಹಣಕಾಸು ನಿಯಂತ್ರಣಗಳ ನಮ್ಮ ಲೆಕ್ಕಪರಿಶೋಧನೆಯಲ್ಲಿ, ಹಣಕಾಸು ವರದಿ ಮಾಡುವಿಕೆಯ ಮೇಲೆ ಆಂತರಿಕ ಹಣಕಾಸು ನಿಯಂತ್ರಣಗಳನ್ನು ಅರ್ಥ ಮಾಡಿಕೊಳ್ಳುವುದು, ವಸ್ತುಶಃ ದೌರ್ಬಲ್ಯವಿರುವ ಅಪಾಯವನ್ನು ವಿಶ್ಲೇಷಿಸುವುದು ಹಾಗೂ ವಿಶ್ಲೇಷಿಸಿದ ಅಪಾಯದ ಆಧಾರದ ಮೇಲೆ ಆಂತರಿಕ ನಿಯಂತ್ರಣದ ವಿನ್ಯಾಸ ಮತ್ತು ಕಾರ್ಯಕಾರಿ ಪರಿಣಾಮವನ್ನು ಪರೀಕ್ಷಿಸುವುದು ಹಾಗೂ ಮೌಲ್ಯ ಮಾಪನ ಮಾಡುವುದು ಒಳಗೊಳ್ಳುವುದು.ಆಯ್ಕೆ ಮಾಡುವ ಕಾರ್ಯವಿಧಾನಗಳು ಲೆಕ್ಕಪರಿಶೋಧಕರ ತೀರ್ಪು, ವಂಚನೆ ಅಥವಾ ದೋಷದಿಂದ ಉಂಟಾಗುವುದನ್ನು ಒಳಗೊಂಡು ಹಣಕಾಸು ತಃಖ್ತೆಗಳ ವಸ್ತುಶಃ ದೋಷಪೂರಿತ ತಃಖ್ತೆ ಸೇರಿದಂತೆ ಅಪಾಯಗಳ ವಿಶ್ಲೇಷಣೆಯನ್ನು ಒಳಗೊಳ್ಳುತ್ತವೆ.

ಕಂಪನಿಯ ಹಣಕಾಸು ವರದಿ ಮಾಡುವಿಕೆಯ ಮೇಲಿನ ಹಣಕಾಸು ನಿಯಂತ್ರಗಳ ವ್ಯವಸ್ಥೆಯ ಬಗ್ಗೆ ನಮ್ಮ ಅರ್ಹತಾ ಲೆಕ್ಕಪರಿಶೋಧನೆಯ ಅಭಿಪ್ರಾಯಕ್ಕೆ ಆಧಾರವನ್ನು ಒದಗಿಸಲು ನಾವು ಒದಗಿಸಿರುವ ಲೆಕ್ಕಪರಿಶೋಧನೆ ಸಾಕ್ಷ್ಯವು ಸಮರ್ಪಕವಾಗಿದ್ದು, ಸೂಕ್ತವಾಗಿದೆ ಎಂದು ನಾವು ನಂಬುತ್ತೇವೆ.

ಹಣಕಾಸು ವರದಿ ಮಾಡುವಿಕೆಯ ಮೇಲೆ ಆಂತರಿಕ ಹಣಕಾಸು ನಿಯಂತ್ರಣಗಳ ಅರ್ಥ

2000- 8.85% ಆವರ್ತನೀಯ		
ಮರುಕಳಿಕೆಯ/ಆಧಾರ/ತೆರಿಗೆ/ಸೀರೀಸ್– II ಬಾಂಡ್‌ಗಳು	2,00,00,00,000	2,00,00,00,000
ಬ್ಯಾಂಕ್‌ಗಳ ಅವಧಿ ಸಾಲಗಳು	20,14,76,24,381	15,21,56,91,960
ಅಸುರಕ್ಷಿತ ಸಾಲಗಳು		
ಇತರೆ ಸಾಲ ಮತ್ತು ಮುಂಗಡಗಳು	60,50,56,27,276	60,50,56,27,276
	82,65,32,51,657	**77,72,13,19,236**

ಅವಧಿ ಪೂರ್ಣತೆಯ ಸಾಲಗಳು ಮತ್ತು ಬಾಂಡ್‌ಗಳು	ಮಾರ್ಚ್ 31, 2019 ರಲ್ಲಿದ್ದಂತೆ	ಮಾರ್ಚ್ 31, 2018 ರಲ್ಲಿದ್ದಂತೆ
5 ವರ್ಷದ ಅವಧಿಗೂ ಹೆಚ್ಚಿನ ಶ್ರೇಣಿ–II ಬಾಂಡ್‌ಗಳು	2,00,00,00,000	2,00,00,00,000
5 ವರ್ಷದ ಅವಧಿಗೂ ಹೆಚ್ಚಿನ ಆವರ್ತಕ ಸಾಲಗಳು	20,14,76,24,381	15,21,56,91,960

ಭದ್ರತೆಗಳ ಸ್ವರೂಪ:

1. ನಿರ್ದೇಶಕರಿಂದ ಖಾತರಿ ನೀಡಲ್ಪಟ್ಟ ಯಾವುದೇ ದೀರ್ಘಾವಧಿ ಸಾಲಗಳು ಇರುವುದಿಲ್ಲ.
2. ಸರಣಿ–2 ಬಾಂಡ್‌ಗಳು ಮತ್ತು ಬ್ಯಾಂಕ್‌ಗಳಿಂದ ಅವಧಿ ಸಾಲಗಳು ನಿಗಮದ ಆಸ್ತಿಗಳ ಸರಳ ಅಡಮಾನದ ಆಧಾರದಲ್ಲಿ ಭದ್ರತೆ ಪಡೆದಿದೆ ಮತ್ತು ಕರ್ನಾಟಕ ಸರ್ಕಾರದ ಖಾತರಿ ಹೊಂದಿರುತ್ತದೆ.

3. ಕಂಪನಿಯು ವಿಜಯಾ ಬ್ಯಾಂಕಿನಿಂದ

ಅ ರೂ.100.00 ಕೋಟಿ ಸಾಲವನ್ನು 2013–2014 ರಲ್ಲಿ 7 ವರ್ಷಗಳ ಅವಧಿ ಸಾಲವನ್ನು ಪಡೆದಿರುತ್ತದೆ. ಸಾಲ ಮರುಪಾವತಿಯನ್ನು 5 ವರ್ಷ 11 ತಿಂಗಳ ನಂತರ ವಾರ್ಷಿಕ 2 ಸಮಾನ ಕಂತುಗಳಲ್ಲಿ ಮರುಪಾವತಿಸಲಾಗುವುದು. ಸಾಲ ಮರುಪಾವತಿ ಪೂರ್ಣಗೊಳ್ಳುವವರೆಗೆ ಮಾಹೆಯಾನ ಬಾಕಿ ಮೊತ್ತದ ಮೇಲೆ ಶೇ.10.20% ರಷ್ಟು ವಾರ್ಷಿಕ ಬಡ್ಡಿಯನ್ನು ಪಾವತಿಸಲಾಗಿದೆ.

ಆ ರೂ.250.00 ಕೋಟಿ ಸಾಲವನ್ನು 2015–16 ರಲ್ಲಿ 7 ವರ್ಷಗಳ ಅವಧಿ ಸಾಲವನ್ನು ಪಡೆದುಕೊಂಡಿತು. 5 ವರ್ಷ 11 ತಿಂಗಳ ನಂತರ ವಾರ್ಷಿಕ 2 ಸಮಾನ ಕಂತುಗಳಲ್ಲಿ ಮರು ಪಾವತಿ ಮಾಡಬೇಕಾಗಿದೆ. ಸಾಲ ಮರುಪಾವತಿ ಪೂರ್ಣಗೊಳ್ಳುವವರೆಗೆ ಮಾಹೆಯಾನ ಬಾಕಿ ಮೊತ್ತದ ಮೇಲೆ ಶೇ.9.70 ರಂತೆ ಬಡ್ಡಿಯನ್ನು ಪಾವತಿಸಲಾಗುತ್ತದೆ.

ಇ ರೂ.500.00 ಕೋಟಿ ಸಾಲವನ್ನು 2018–19 ರಲ್ಲಿ 7 ವರ್ಷಗಳ ಅವಧಿ ಸಾಲವನ್ನು ಪಡೆದುಕೊಂಡಿತು. 5 ವರ್ಷ 11 ತಿಂಗಳ ನಂತರ ವಾರ್ಷಿಕ 2 ಸಮಾನ ಕಂತುಗಳಲ್ಲಿ ಮರು ಪಾವತಿ ಮಾಡಬೇಕಾಗಿದೆ. ಸಾಲ ಮರುಪಾವತಿ ಪೂರ್ಣಗೊಳ್ಳುವವರೆಗೆ ಮಾಹೆಯಾನ ಬಾಕಿ ಮೊತ್ತದ ಮೇಲೆ ಶೇ.8.35 ರಂತೆ ಬಡ್ಡಿಯನ್ನು ಪಾವತಿಸಲಾಗುತ್ತದೆ.

4 ಬ್ಯಾಂಕ್ ಆಫ್ ಇಂಡಿಯಾನಿಂದ ಸಾಲ

ಅ ಕಂಪನಿಯು ಬ್ಯಾಂಕ್ ಆಫ್ ಇಂಡಿಯಾನಿಂದ ರೂ.200.00 ಕೋಟಿಗಳನ್ನು 2014–2015 ರಲ್ಲಿ 7 ವರ್ಷಗಳ ಅವಧಿ ಸಾಲವಾಗಿ ಪಡೆದಿರುತ್ತದೆ. ಸಾಲ ಮರುಪಾವತಿಯನ್ನು 5 ವರ್ಷ 11 ತಿಂಗಳ ನಂತರ ವಾರ್ಷಿಕ 2 ಸಮಾನ ಕಂತುಗಳಲ್ಲಿ ಮರುಪಾವತಿಸಲಾಗುವುದು. ಸಾಲ ಮರುಪಾವತಿ ಪೂರ್ಣಗೊಳ್ಳುವವರೆಗೆ ಮಾಹೆಯಾನ ಬಾಕಿ ಮೊತ್ತದ ಮೇಲೆ ಶೇ.10.20% ರಷ್ಟು ಬಡ್ಡಿಯನ್ನು ಪಾವತಿಸಲಾಗಿದೆ.

ಆ ಕಂಪನಿಯು 2016–17 ರಲ್ಲಿ ರೂ.3350.00 ಕೋಟಿ 7 ವರ್ಷಗಳ ಅವಧಿ ಸಾಲವನ್ನು ಪಡೆದುಕೊಂಡಿತು. ಸಾಲ ಮರುಪಾವತಿಯನ್ನು 5 ವರ್ಷ 11 ತಿಂಗಳ ನಂತರ ವಾರ್ಷಿಕ 2 ಸಮಾನ ಕಂತುಗಳಲ್ಲಿ ಪಾವತಿಸಲಾಗುವುದು. ಸಾಲ ಮರುಪಾವತಿ ಪೂರ್ಣಗೊಳ್ಳುವವರೆಗೆ ಮಾಹೆಯಾನ ಬಾಕಿ ಮೊತ್ತದ ಮೇಲೆ ಶೇ.9.70 ರಂತೆ ಬಡ್ಡಿಯನ್ನು ಪಾವತಿಸಲಾಗುತ್ತದೆ.

5 ಸೀರೀಸ್–2 ಬಾಂಡ್‌ಗಳನ್ನು 2014–2015 ರಲ್ಲಿ ಹಂಚಿಕೆ ದಿನದಿಂದ 120 ತಿಂಗಳ ಅವಧಿಗೆ ನೀಡಿದ್ದು, 08 ವರ್ಷಗಳ ಕೊನೆಗೆ ಅವಧಿಗೆ ಇರಿಸಿ/ ಕರೆಯ ಆಯ್ಕೆಯಂತೆ ಇದನ್ನು 9ನೇ ಮತ್ತು 10ನೇ ವರ್ಷದ ಕೊನೆಯಲ್ಲಿ 02 ಸಮಾನ ಕಂತುಗಳಲ್ಲಿ ವಿಮೋಚನೆಗೊಳಿಸಬಹುದಾಗಿದೆ. ಶ್ರೇಣಿ–2 ರ ಬಾಂಡ್‌ಗಳು ವಾರ್ಷಿಕ ಶೇ.8.85 ದರದ ಬಡ್ಡಿಯನ್ನು ಹೊಂದಿದ್ದು, ಬಾಂಡುಗಳ ವಿಮೋಚನೆವರೆಗೂ ಪ್ರತಿವರ್ಷ ಪಾವತಿಯಾಗುತ್ತಿದೆ.

6 ಪ್ರಗತಿ ಕೃಷ್ಣ ಗ್ರಾಮೀಣ ಬ್ಯಾಂಕ್‌ನಿಂದ ಸಾಲ

ಅ ಕಂಪನಿಯು ಪ್ರಗತಿ ಕೃಷ್ಣ ಗ್ರಾಮೀಣ ಬ್ಯಾಂಕ್‌ನಿಂದ ರೂ.85.00 ಕೋಟಿ ಸಾಲವನ್ನು 2015–2016 ರಲ್ಲಿ 7 ವರ್ಷಗಳ ಅವಧಿ ಸಾಲವಾಗಿ ಪಡೆದಿರುತ್ತದೆ. ಸಾಲ ಮರುಪಾವತಿಯನ್ನು 5 ವರ್ಷ 11 ತಿಂಗಳ ನಂತರ ವಾರ್ಷಿಕ 2 ಸಮಾನ ಕಂತುಗಳಲ್ಲಿ ಮರುಪಾವತಿಸಲಾಗುವುದು. ಸಾಲ ಮರುಪಾವತಿ ಪೂರ್ಣಗೊಳ್ಳುವವರೆಗೆ ವಾರ್ಷಿಕ ಬಾಕಿ ಮೊತ್ತದ ಮೇಲೆ ಶೇ.9.70% ರಷ್ಟು ಬಡ್ಡಿಯನ್ನು ಪ್ರತಿ ತಿಂಗಳು ಪಾವತಿಸಲಾಗಿದೆ.

ಆ ಕಂಪನಿಯು 2016–17 ರಲ್ಲಿ ರೂ.65.00 ಕೋಟಿ ಸಾಲವನ್ನು 7 ವರ್ಷಗಳ ಅವಧಿ ಸಾಲವಾಗಿ ಪಡೆದುಕೊಂಡಿದ್ದು, 5 ವರ್ಷ 11 ತಿಂಗಳ ನಂತರ ವಾರ್ಷಿಕ 2 ಸಮಾನ ಕಂತುಗಳಲ್ಲಿ ಮರು ಪಾವತಿಸಲಾಗುವುದು. ಸಾಲ ಮರುಪಾವತಿ ಪೂರ್ಣಗೊಳ್ಳುವವರೆಗೆ ಬಾಕಿ ಮೊತ್ತದ ಮೇಲೆ ವಾರ್ಷಿಕ ಶೇ.9.70 ರಂತೆ ಬಡ್ಡಿಯನ್ನು ಪ್ರತಿ ತಿಂಗಳು ಪಾವತಿಸಲಾಗುತ್ತದೆ.

7 ಆಕ್ಸಿಸ್ ಬ್ಯಾಂಕಿನಿಂದ ಸಾಲ

ಅ ಆಕ್ಸಿಸ್ ಬ್ಯಾಂಕಿನಿಂದ 2017–18 ರಲ್ಲಿ ರೂ.500.00 ಕೋಟಿ ಮೊತ್ತದ ಅವಧಿ ಸಾಲವನ್ನು 7 ವರ್ಷಗಳ ಅವಧಿಗೆ ಪಡೆಯಲಾಗಿದೆ. ಇದನ್ನು 6 ಮತ್ತು 7 ವರ್ಷಗಳ ಕೊನೆಯಲ್ಲಿ 2 ಕಂತುಗಳಲ್ಲಿ ಮರು ಪಾವತಿಸಬೇಕು. ಈ ಸಾಲವು ವಾರ್ಷಿಕ ಶೇ.8 ರ ಬಡ್ಡಿಯನ್ನು ಹೊಂದಿದ್ದು, ಸಾಲ ತೀರುವವರೆಗೆ ಪ್ರತಿ ತಿಂಗಳು ಕೊಡಬೇಕಾಗಿದೆ.

8 ಪ್ರಸಕ್ತ ವರ್ಷದಲ್ಲಿ ಕಂಪನಿಯು ಸಾಲ ಮತ್ತು ಬಡ್ಡಿ ಪಾವತಿಸುವಲ್ಲಿ ಯಾವುದೇ ಸುಸ್ತಿದಾರರಾಗಿರುವುದಿಲ್ಲ

9 ನಿಗಮದ ಕೋರಿಕೆಯ ಮೇರೆಗೆ ಪ್ರಗತಿ ಕೃಷ್ಣ ಗ್ರಾಮೀಣ ಬ್ಯಾಂಕ್ ಹೊರತುಪಡಿಸಿ ಇತರೆ ಬ್ಯಾಂಕ್‌ಗಳು ಕಾಲಕಾಲಕ್ಕೆ ಅನ್ವಯಿಸಬಹುದಾದ MCLR ದರದ ಬಡ್ಡಿ ಪಾವತಿಗೆ ಒಪ್ಪಿರುತ್ತವೆ.

ಟಿಪ್ಪಣಿ 17
ದೀರ್ಘಾವಧಿ ನಿಬಂಧನೆಗಳು

ದೀರ್ಘಾವಧಿ ಅನುವುಗಳು		
ಅವಕಾಶ ಒದಗಿಸಿರುವುದು		
ಬೃಂದಾವನ ಉದ್ಯಾನದ ನಿರ್ವಹಣೆಗಾಗಿ ಅನುವು ಮಾಡಿರುವುದು	12,00,00,000	11,00,00,000
	12,00,00,000	**11,00,00,000**

ಟಿಪ್ಪಣಿ 18
ಇತರೆ ಚಾಲ್ತಿಯಲ್ಲದ ಹೊಣೆಗಾರಿಕೆಗಳು

ಇತರೆ ಠೇವಣಿಗಳು – ಭದ್ರತೆ ರಹಿತ	1,46,81,92,417	1,40,49,13,516
	1,46,81,92,417	**1,40,49,13,516**

ಟಿಪ್ಪಣಿ 19
ವ್ಯಾಪಾರ ಮತ್ತು ಇತರೆ ಸಂದಾಯಗಳು

ಒಪ್ಪಿಗೆಗಳು –ಭದ್ರತೆ ರಹಿತ	77,51,41,814	19,29,00,470
	77,51,41,814	**19,29,00,470**

ಟಿಪ್ಪಣಿ 20
ಇತರ ಚಾಲ್ತಿ ಆರ್ಥಿಕ ಹೊಣೆಗಾರಿಕೆಗಳು

ಸಂಚಿತ ಬಡ್ಡಿ – ಪಾವತಿಗೆ ಗಡವು ಇನ್ನು ಬಂದಿಲ್ಲ	13,27,50,000	13,27,50,000
ಬಂಡವಾಳ ಸಾಲಿಗರು ಮತ್ತು ಇತರೆ ಸಂದಾಯವಾಗಬೇಕಾದವು	3,80,07,31,572	5,37,84,46,365
ಸಿಬ್ಬಂದಿ ಸೌಲಭ್ಯಗಳಿಗಾಗಿ ಸಂದಾಯ ಮಾಡಬೇಕಾದವು.	4,89,760	18,07,486
	3,93,39,71,332	**5,51,30,03,851**

ಟಿಪ್ಪಣಿ 21
ಇತರ ಚಾಲ್ತಿ ಆರ್ಥಿಕ ಹೊಣೆಗಾರಿಕೆಗಳು

ಶಾಸನಬದ್ಧ ಬಾಕಿ ಸಂದಾಯಗಳು * (VAT, GST, Excise Duty, Provident Fund, Withholding Taxes, ಇತ್ಯಾದಿಗಳು ಒಳಗೊಂಡಿದೆ.)	21,81,07,257	4,23,40,049
ಎಸ್‌ಸಿಪಿ & ಟಿಎಸ್‌ಪಿ ಕಾಮಗಾರಿಗಳ ಉಪಯೋಗಿಸದ ಸರ್ಕಾರಿ ಅನುದಾನ	13,54,70,61,883	9,44,07,62,164
	13,76,51,69,140	**9,48,31,02,213**

* ಇನ್‌ವೆಸ್ಟ್‌ರ್ ಎಜುಕೇಷನ್ ಮತ್ತು ರಕ್ಷಣಾ ನಿಧಿಗೆ ನೀಡಬೇಕಾದ ಯಾವುದೇ ಮೊತ್ತ ಬಾಕಿ ಇರುವುದಿಲ್ಲ
* ಸೇವಾ ತೆರಿಗೆ ಇಲಾಖೆಯ ಬೇಡಿಕೆ ಸೂಚನೆಯಂತೆ ರೂ..3,73,50,000/– ಗನ್ನು ಒದಗಿಸಿದ್ದು, ಸದರಿ ಮೊತ್ತವು ಇಲಾಖೆಯ ಹೊಂದಾಣಿಕೆ/ಇತ್ಯರ್ಥಕೆ ಒಳಪಟ್ಟಿರುತ್ತವೆ.
* ರೂ.2,40,68,244/– ಮೊತ್ತದ ಶಾಸನಬದ್ಧ ಸಂದಾಯದ ಮೊಬಲಗು ಜಿ.ಎಸ್.ಟಿ ನಿಬಂಧನೆಯಂತೆ ಸಮನ್ವಯಕ್ಕೆ ಒಳಪಟ್ಟಿರುತ್ತದೆ. ಟಿಪ್ಪಣಿ 2.22(1) ರಲ್ಲಿ ಉಲ್ಲೇಖಿಸಲಾಗಿದೆ.

ಟಿಪ್ಪಣಿ 22

ಅಲ್ಪಕಾಲಿಕ ಅನುವುಗಳು	**ಮಾರ್ಚ್ ೩೧, ೨೦೧೯ ರಲ್ಲಿದ್ದಂತೆ**	**ಮಾರ್ಚ್ ೩೧, ೨೦೧೮ ರಲ್ಲಿದ್ದಂತೆ**
ಅಲ್ಪಕಾಲಿಕ ಅನುವುಗಳು		
ಸಿಬ್ಬಂದಿ ಸವಲತ್ತುಗಳಿಗೆ ಅನುವು	1,77,221	3,00,515
ಗ್ರ್ಯಾಚುಟಿ ಮತ್ತು ರಜೆ ಪರಿಹಾರ	9,00,34,243	6,87,34,775
ವೇತನ ಮತ್ತು ಇತರೆ ಸವಲತ್ತು		
ಇತರೆ ಅನುವುಗಳು:		
ಆಡಿಟ್ ಶುಲ್ಕ ಪಾವತಿ	26,65,949	15,86,663
ತೆರಿಗೆಗಾಗಿ ಅನುವು	4,03,01,567	11,40,70,826
ದಾಸ್ತಾನಿನ ಅನುವು	1,04,39,199	-
ಇತರೆ	40,567	-
	14,36,58,746	**18,46,92,779**

ಟಿಪ್ಪಣಿ 23

ಕಾವೇರಿ ನೀರಾವರಿ ನಿಗಮ ನಿಯಮಿತ

ಮಾರ್ಚ್ 31, 2019 ರ ಅಂತ್ಯದ ಆರ್ಥಿಕ ವಿವರಗಳ ಟಿಪ್ಪಣಿಯು ಮುಂದುವರೆದಿದೆ

ಸಿಬ್ಬಂದಿ ಕಲ್ಯಾಣ ವೆಚ್ಚ	ಮಾರ್ಚ್ 31, 2019 ರಲ್ಲಿದ್ದಂತೆ	ಮಾರ್ಚ್ 31, 2018 ರಲ್ಲಿದ್ದಂತೆ
ವೇತನ	1,13,53,00,315	93,97,50,851
ವ್ಯವಸ್ಥಾಪಕ ನಿರ್ದೇಶಕರ ಸಂಭಾವನೆ	11,45,400	11,77,688
ಸಿಬ್ಬಂದಿ ಕಲ್ಯಾಣ ವೆಚ್ಚಗಳು	12,56,494	8,06,739
ಉಪದಾನ	24,680	22,374
ರಜೆ ನಗದೀಕರಣ	3,26,12,599	3,11,08,980
ವೈದ್ಯಕೀಯ ವೆಚ್ಚ	75,96,811	69,53,213
ದಿನಗೂಲಿ ನೌಕರರ ವೇತನ	24,25,596	18,78,880
ಭವಿಷ್ಯ ನಿಧಿ	1,65,557	84,552
ಮರಣ ಪರಿಹಾರ ನಿಧಿ	60,000	60,000
	1,18,05,87,452	**98,18,43,277**

ಟಿಪ್ಪಣಿ 24

(ಮೊತ್ತ ರೂ.ಗಳಲ್ಲಿ)

ಆರ್ಥಿಕ ವೆಚ್ಚಗಳು	ಮಾರ್ಚ್ 31, 2019 ರಲ್ಲಿದ್ದಂತೆ	ಮಾರ್ಚ್ 31, 2018 ರಲ್ಲಿದ್ದಂತೆ
ಕರ್ನಾಟಕ ಸರ್ಕಾರದ ಖಾತರಿ ಕಮಿಷನ್	21,47,24,977	16,32,60,844
ಬ್ಯಾಂಕ್ ಸಾಲಗಳ ಮೇಲೆ ಬಡ್ಡಿ	1,34,98,66,673	98,86,65,334
ಸೀರಿಸ್– II ಬಾಂಡ್‌ಗಳ ಮೇಲಿನ ಬಡ್ಡಿ	17,70,00,000	17,69,99,999
	1,74,15,91,650	**1,32,89,26,177**

ಟಿಪ್ಪಣಿ 25

(ಮೊತ್ತ ರೂ.ಗಳಲ್ಲಿ)

ಇತರೆ ವೆಚ್ಚಗಳು	ಮಾರ್ಚ್ 31, 2019 ರಲ್ಲಿದ್ದಂತೆ	ಮಾರ್ಚ್ 31, 2018 ರಲ್ಲಿದ್ದಂತೆ
ಬಾಡಿಗೆ, ದರ & ತೆರಿಗೆ		
ಆಸ್ತಿ ತೆರಿಗೆ	2,49,315	6,65,258
ಬಾಡಿಗೆ ವಸತಿಯೇತರ	7,73,222	9,19,497
ಸೇವಾ ತೆರಿಗೆ & ಇತರೆ ವೆಚ್ಚಗಳು	3,73,97,763	8,97,298
ಶಾಸನಬದ್ಧ ಫೈಲಿಂಗ್ ಶುಲ್ಕ	4,36,201	4,79,653
ವಾಹನಗಳ ತೆರಿಗೆ ಮತ್ತು ಶುಲ್ಕ	26,79,067	19,79,289
ವಿದ್ಯುತ್	58,56,65,037	22,58,44,365
ನೀರಿನ ಶುಲ್ಕ	9,14,679	8,43,453
ಸ್ಥಳೀಯ ಓಡಾಟ ವೆಚ್ಚಗಳು	6,400	34,593
ಪ್ರಯಾಣ ಇತರೆ	97,05,341	1,17,12,994
ಜಾಹಿರಾತು ಇತರೆ	2,55,21,629	2,28,09,203
ಜಾಹಿರಾತು ಟೆಂಡರ್	3,47,30,064	2,77,24,463
ವಸ್ತು ಪ್ರದರ್ಶನ & ಮಳಿಗೆಗಳು	46,45,325	39,65,098
ಬ್ಯಾಂಕ್ ಮತ್ತು ಹಣಕಾಸು ವೆಚ್ಚಗಳು	1,84,983	4,64,957
ಪುಸ್ತಕ, ಪತ್ರಿಕೆ ಮತ್ತು ನಿಯತಕಾಲಿಕೆಗಳು	3,10,561	2,55,937
ನಿರ್ದೇಶಕರ ಸಭಾ ಭತ್ಯೆ ಮತ್ತು ಪ್ರಯಾಣ ಭತ್ಯೆಗಳು	7,63,735	16,90,225
ವಿಚಾರ ಸಂಕಿರಣ & ಅಭಿವೃದ್ಧಿ ಚಟುವಟಿಕೆಗಳ ವೆಚ್ಚಗಳು	34,300	3,000

ಕಾನೂನು ಶುಲ್ಕ	50,11,817	48,62,244
ಮಾನವ ಶಕ್ತಿ& ಹೊರಗುತ್ತಿಗೆ ವೆಚ್ಚ	17,90,66,093	4,02,84,028
ಸಭಾ ವೆಚ್ಚಗಳು	1,45,000	6,22,286
ಕಛೇರಿ ವೆಚ್ಚಗಳು	1,10,91,589	28,83,934
ಅಂಚೆ & ಕೊರಿಯರ್ ವೆಚ್ಚಗಳು	6,49,170	8,08,321
ಮುದ್ರಣ & ಲೇಖನ ಸಾಮಾಗ್ರಿಗಳು	1,25,14,290	1,58,56,698
ವೃತ್ತಿಪರ ಶುಲ್ಕ	28,87,852	15,97,011
ವಾಹನಗಳ ಸಾರಿಗೆ ವೆಚ್ಚ	3,96,81,315	3,97,75,717
ದೂರವಾಣಿ	35,63,067	39,70,475
ಸಮವಸ್ತ್ರ ವೆಚ್ಚ	16,27,352	19,26,562
ವಾಹನಗಳ ಬಾಡಿಗೆ ವೆಚ್ಚ	6,88,668	5,76,344
ಪ್ರಮಾಣೀಕರಣ ಶುಲ್ಕ	88,500	88,500
ಆಂತರಿಕ ಲೆಕ್ಕಶೋಧನೆ ವೆಚ್ಚ	7,18,856	5,78,200
ಶಾಸನಬದ್ಧ ಪರಿಶೋಧಕರ ಶುಲ್ಕ	12,39,000	6,96,200
ತೆರಿಗೆ ಲೆಕ್ಕಪರಿಶೋಧನಾ ಶುಲ್ಕ	2,06,500	1,00,243
ಸ್ವಂತಿಕೆಯಿಂದ ಮಾಡಿದ ವೆಚ್ಚ (Out of Pocket Expenses)	1,50,000	-
ದುರಸ್ತಿಗಳು		
ಕಟ್ಟಡಗಳು	4,34,68,337	3,65,95,700
ಕಾಲುವೆಗಳು	29,59,62,503	15,56,46,772
ಕಾಲೋನಿಗಳು	12,12,92,975	6,44,43,406
ಬೆಳೆ ಪರಿಹಾರಗಳು	54,39,313	1,19,63,912
ಅಣೆಕಟ್ಟು & ಮುಳುಗಡೆಗಳು	9,76,73,540	7,91,64,399
ಶಾಖಾನಾಲೆಗಳು	7,28,04,502	11,41,49,662
ಇಡಿಪಿ & ಇತರೆ ಸಲಕರಣೆಗಳು	51,23,690	46,42,992
ವಿದ್ಯುತ್ ಅಳವಡಿಕೆಗಳು	14,40,543	33,52,541
ಪಿಠೋಪಕರಣ & ಜೋಡಣೆಗಳು	61,512	2,26,518
ಏತ ನೀರಾವರಿ ಯೋಜನೆಗಳು	12,17,72,765	5,65,90,572
ಸಣ್ಣ ನೀರಾವರಿ ಕೆರೆಗಳು	6,85,57,571	6,22,65,653
ಇತರೆ ಸ್ವತ್ತುಗಳು	14,86,179	36,21,655
ರಸ್ತೆಗಳು, ಸೇತುವೆಗಳು & ನೆಲಗಾಲುವೆಗಳು	5,89,91,430	22,40,71,226
ವಾಹನಗಳು	1,18,70,891	1,07,09,779
ನೀರಿನ ನಿರ್ವಹಣೆ – ನೀರುಗಂಟಿ	11,49,03,792	7,14,43,134
	1,98,41,96,233	**1,31,38,03,966**

ಟಿಪ್ಪಣಿ 25.1

(ಮೊತ್ತ ರೂ.ಗಳಲ್ಲಿ)

ಲೆಕ್ಕಪರಿಶೋಧಕರಿಗೆ ಮಾಡಿದ ಪಾವತಿ	ಮಾರ್ಚ್ 31, 2019 ರಲ್ಲಿದ್ದಂತೆ	ಮಾರ್ಚ್ 31, 2018 ರಲ್ಲಿದ್ದಂತೆ
ಆಂತರಿಕ ಲೆಕ್ಕಪರಿಶೋಧಕೆ ರ ಶುಲ್ಕ	7,18,856	-
ಶಾಸನಬದ್ಧ ಲೆಕ್ಕಪರಿಶೋಧನಾ ಶುಲ್ಕ	12,39,000	6,96,200
ತೆರಿಗೆ ಲೆಕ್ಕಪರಿಶೋಧನಾ ಶುಲ್ಕ	2,06,500	1,00,243
	21,64,356	**7,96,443**

ಟಿಪ್ಪಣಿ 26

ಮೊತ್ತ ರೂ.ಗಳಲ್ಲಿ

ಸರ್ಕಾರದ ನಿರ್ವಹಣಾ ಅನುದಾನ	ಮಾರ್ಚ್ 31, 2019 ರಲ್ಲಿದ್ದಂತೆ	ಮಾರ್ಚ್ 31, 2018 ರಲ್ಲಿದ್ದಂತೆ
ನಿರ್ವಹಣಾ ಕಾರ್ಯಗಳಿಗೆ ಸರ್ಕಾರದ ಅನುದಾನ	61,97,00,000	61,96,00,000
ಖಾತರಿ ಕಮಿಷನ್‌ಗಾಗಿ ಸರ್ಕಾರದ ಅನುದಾನ	21,51,00,000	19,35,70,000
ಋಣ ಸೇವೆಗಳಿಗೆ ಸರ್ಕಾರದ ಅನುದಾನಗಳು	1,65,81,00,000	1,34,46,99,000
ಇತರೆ ಆದಾಯ	60,00,000	-
	2,49,89,00,000	**2,15,78,69,000**

ಟಿಪ್ಪಣಿ 27

ಮೊತ್ತ ರೂ.ಗಳಲ್ಲಿ

ಬ್ಯಾಂಕ್ ಠೇವಣಿಗಳ ಮೇಲೆ ಗಳಿಸಿದ ಬಡ್ಡಿ	ಮಾರ್ಚ್ 31, 2019 ರಲ್ಲಿದ್ದಂತೆ	ಮಾರ್ಚ್ 31, 2018 ರಲ್ಲಿದ್ದಂತೆ
ಬ್ಯಾಂಕ್ ಠೇವಣಿಗಳ ಮೇಲೆ ಸ್ವೀಕೃತ ಬಡ್ಡಿ	14,93,81,921	13,82,85,649
	14,93,81,921	**13,82,85,649**

ಟಿಪ್ಪಣಿ 28 – ಇತರೆ ಆದಾಯ

ಮೊತ್ತ ರೂ.ಗಳಲ್ಲಿ

ಕಾಮಗಾರಿ ಬಿಲ್ಲುಗಳ ಆದಾಯ	ಮಾರ್ಚ್ 31, 2019 ರಲ್ಲಿದ್ದಂತೆ	ಮಾರ್ಚ್ 31, 2018 ರಲ್ಲಿದ್ದಂತೆ
ಗುತ್ತಿಗೆದಾರರಿಂದ ಕಟಾವಣೆ – DRCA	3,82,78,152	6,07,92,299
ಗುತ್ತಿಗೆದಾರರಿಂದ ಕಟಾವಣೆ – ಬಾಡಿಗೆ ದರ	-	3,600
ಗುತ್ತಿಗೆದಾರರಿಂದ ಕಟಾವಣೆ – ಕಾರ್ಮಿಕ ಕಲ್ಯಾಣ ನಿಧಿ	20,28,701	17,03,128
	4,03,06,853	**6,24,99,027**

ಟಿಪ್ಪಣಿ 29

ಮೊತ್ತ ರೂ.ಗಳಲ್ಲಿ

ಇತರೆ ಆದಾಯ	ಮಾರ್ಚ್ 31, 2019 ರಲ್ಲಿದ್ದಂತೆ	ಮಾರ್ಚ್ 31, 2018 ರಲ್ಲಿದ್ದಂತೆ
ಆಸ್ತಿ/ದಾಸ್ತಾನು ಮಾರಾಟದ ಲಾಭ	45,843	62,856
ಅನುಪಯುಕ್ತ ಹವಣಿಕೆಗಳು – ಅನಗತ್ಯವಾದ ಸಾಮಗ್ರಿಗಳ ಮಾರಾಟ	5,54,324	70,797
ಟೆಂಡರ್ ಪುಸ್ತಕಗಳ ಮಾರಾಟ	1,80,724	10,68,358
ನಿರೀಕ್ಷಣಾ ಮಂದಿರದ ಬಾಡಿಗೆ	-	25,00,000
ವಿಚಾರ ಸಂಕೀರ್ಣ ಭರಿಸಿದ ವೆಚ್ಚ		
ಪಟ್ಟಣ/ನಗರಗಳಿಂದ ಸ್ವೀಕೃತಿ		
ಇತರೆ ವಿವಿಧ ಸ್ವೀಕೃತಿಗಳು	65,69,137	9,71,658
ನೀರಿನ ಸಂರಕ್ಷಣೆಗಾಗಿ ವಸೂಲಿ	28,60,892	9,79,520
ಬಾಡಿಗೆ	3,77,90,985	3,34,88,736
ಅಣೆಕಟ್ಟು ಸಂದರ್ಶನ & ವಾಹನ ಶುಲ್ಕ	5,14,10,844	8,00,93,278
ಆದಾಯ ತೆರಿಗೆಯಿಂದ ಬಂದ ಬಡ್ಡಿ	22,307	-
	9,94,35,056	11,92,35,203
ಇತರೆ ಆದಾಯ (28 & 29)	**13,97,41,909**	**18,17,34,230**

ಟಿಪ್ಪಣಿ 30

ಸಾದಿಲ್ವಾರು ಹೊಣೆಗಾರಿಕೆ:

ವಿವರ	ವರದಿಯ ವರ್ಷಾಂತ್ಯಕ್ಕೆ	ಹಿಂದಿನ ವರ್ಷದ ವರದಿಯ ವರ್ಷಾಂತ್ಯಕ್ಕೆ
ಸಾದಿಲ್ವಾರು ಹೊಣೆಗಾರಿಕೆಗಳು ಮತ್ತು ಬದ್ಧತೆಗಳು (ಒದಗಿಸದ ಮಟ್ಟಿಗೆ)		
ಸಾದಿಲ್ವಾರು ಹೊಣೆಗಾರಿಕೆಗಳು		
ಅ) ಕಂಪನಿಯು ಋಣ ಎಂದು ಪರಿಗಣಿಸದ ಕೋರಿಕೆಗಳು	–	34,60,73,000
ಅ) ಆದೇಶ ಸಂಖ್ಯೆ: MYS-EXCUS-000-COM-GVK-05-2017-18, dt. 22/03/2018 ರಲ್ಲಿ ಬೇಡಿಕೆಯಾದ ಸೇವಾ ತೆರಿಗೆ	3,72,63,406	3,72,63,406
(ಟಿಪ್ಪಣಿ: ಈ ಬೇಡಿಕೆಯ ವಿರುದ್ಧ ಮೇಲ್ಮನವಿ ಸಲ್ಲಿಸಲಾಗಿದೆ. ತೀರ್ಮಾನ ಬಾಕಿ ಇದೆ. ಇದ–ರಿಂದಾಗಿ ಲೆಕ್ಕಪುಸ್ತಕದಲ್ಲಿ ಇದಕ್ಕೆ ಅವಕಾಶವನ್ನು ಕಲ್ಪಿಸಲಾಗಿಲ್ಲ)		
ಬದ್ಧತೆಗಳು		
ಎ) ಬಂಡವಾಳ ಲೆಕ್ಕದಲ್ಲಿ ಅನುಷ್ಠಾನವಾಗದೆ ಇರುವ ಗುತ್ತಿಗೆಗಳ ಅಂದಾಜು ಮೊತ್ತ ಮತ್ತು ಇದಕ್ಕೆ ಅವಕಾಶ ಕಲ್ಪಿಸಿಲ್ಲ.	ಮೌಲ್ಯ ಗುರುತಿಸಲು ಸಾಧ್ಯವಾಗಿಲ್ಲ	ಮೌಲ್ಯ ಗುರುತಿಸಲು ಸಾಧ್ಯವಾಗಿಲ್ಲ
ಎ) ಕೆಳ ಕಾಣಿಸಿದ ಸಾಂದರ್ಭಿಕ ಹೊಣೆಗಳ ಆರ್ಥಿಕ ಮೌಲ್ಯವನ್ನು ಖಚಿತಪಡಿಸಿ ಕೊಳ್ಳಲಾಗಲ್ಲಿಲ್ಲ.		
– ಕಂಪನಿಯ ವಿರುದ್ಧದ ಗುತ್ತಿಗೆದಾರರ ಮತ್ತು ಇತರರ ವಿವಾದಾತ್ಮಕ ಬೇಡಿಕೆಗಳು–ಇವು ಭೂಸ್ವಾಧಿನಕ್ಕೆ ಸಂಬಂಧಿಸಿದ ದಾವೆ/ಪಂಚಾಯಿತಿ ವ್ಯವಹಾರಗಳನ್ನು ಒಳಗೊಂಡಿವೆ.	ಮೌಲ್ಯ ಗುರುತಿಸಲು ಸಾಧ್ಯವಾಗಿಲ್ಲ	ಮೌಲ್ಯ ಗುರುತಿಸಲು ಸಾಧ್ಯವಾಗಿಲ್ಲ
– ಕಂಪನಿಯ ವಿರುದ್ಧದ ವಿವಿಧ ಕಾರ್ಮಿಕ ಪ್ರಕರಣಗಳು ಪೂರೈಕೆದಾರರ ಇತರ ದಾವೆಗಳು, ಇತರ ಏಜೆನ್ಸಿಗಳ ದಾವೆ /ಪಂಚಾಯಿತಿ ವ್ಯವಹಾರಗಳು."		
– ಅಂದಾಜುಗಳ ಪರಿಷ್ಕರಣೆ/ದರ ಪಟ್ಟಿ ಏರಿಕೆಯ ವೆಚ್ಚಗಳು ಗುತ್ತಿಗೆದಾರರ ಕಾಲಾವಧಿ ವಿಸ್ತರಣೆ, ಭಾಗಶಃ		
– ಪರಿಶೀಲನೆಯಲ್ಲಿರುವ ವಿವಾದತ್ಮಕ ಕಾಮಗಾರಿ ಬಿಲ್ಲುಗಳು ಮತ್ತು ವಿವಾದಾತ್ಮಕ ಬಿಲ್ಲುಗಳು ಮುಂತಾದ ಹೊಣೆಗಳು		
– ಕಡಿತ ಮಾಡಿದ/ಕಡಿಮೆ ಕಡಿತ ಮಾಡಿದ ಆದಾಯ ತೆರಿಗೆ/ಮಾರಾಟ ತೆರಿಗೆ/ ರಾಜಧನ/ಸೇವಾ ತೆರಿಗೆ/ ಕಾರ್ಮಿಕ ವಿಮೆ/ಭವಿಷ್ಯ ನಿಧಿ ಮುಂತಾದ ಹೊಣೆಗಳು ಮತ್ತು ಕಡಿತ ಮಾಡಿದ ತೆರಿಗೆಗಳ/ ಸಂಗ್ರಹಿಸಿದ ತೆರಿಗೆಗಳ ಇರಸಾಲಿನಲ್ಲಿದಾದ ವಿಳಂಬದ ಹೊಣೆಗಳು		
– ಗುತ್ತಿಗೆದಾರರಿಂದ ನ್ಯಾಯಾಲಯ ನಿರ್ದೇಶನದಂತೆ ವಸೂಲು ಮಾಡದಿರುವ ರಾಜಧನದ ಹೊಣೆ		
– ಬಳಕೆಯಲ್ಲಿರುವ ವಾಹನಗಳಿಗೆ ಸಂಬಂಧಿಸಿದ ರಸ್ತೆ ತೆರಿಗೆ ಪಾವತಿ, ಸಾರಿಗೆ ಅಧಿಕಾರಿಗಳಿಂದ ಆದೇಶ, ಬಾಕಿ ಇರುವ ವಾಹನಗಳ ವಿಲೇವಾರಿ, ವಿನಾಯಿತಿ ಮುಂತಾದ ಹೊಣೆಗಳು		
– ವಲಯ ಮಟ್ಟದಲ್ಲಿ ಕಂಪನಿಯ ವಿರುದ್ಧ ಬಾಕಿ ಇರುವ ಹೊಣೆಗಳು		
– ಉಚ್ಚ ನ್ಯಾಯಾಲಯದ ಕೆಳಗಿನ ನ್ಯಾಯಾಲಯಗಳಲ್ಲಿ ಕಂಪನಿ ವಿರುದ್ಧದ ಪ್ರಕರಣಗಳ ಹೊಣೆ		
– ಹೈಕೋರ್ಟ್ ಮತ್ತು ಸುಪ್ರಿಂ ಕೋರ್ಟ್‌ನ ಪ್ರಕರಣಗಳ ನಿಗದಿತ ಮಟ್ಟಕ್ಕಿಂತ ಕೆಳಗಿನ ಮೊತ್ತದ ವಿವಾದಗಳ ಹೊಣೆ ರೂ.10.00 ಲಕ್ಷ ದಿನಾಂಕ 31.3.2019ರಂದು ಕಾಮಗಾರಿಗಳನ್ನು ಅನುಷ್ಠಾನಗೊಳಿಸಿ ಅಳತಿಸದ ಹಾಗೂ ಬಿಲ್ಲು ತಯಾರಿಸದ ಮೊತ್ತವನ್ನು ಲೆಕ್ಕಿಸಲಾಗಿರುವುದಿಲ್ಲ		

ಟಿಪ್ಪಣಿ 31

ಉತ್ಪನ್ನಗಳು ಇಲ್ಲ

ಟಿಪ್ಪಣಿ 32

ಪ್ರಸಕ್ತ ವರ್ಷದ ಬಹಿರಂಗಪಡಿಸುವಿಕೆಯನ್ನು ಅನುಸರಿಸಲು ಹಿಂದಿನ ವರ್ಷದ ಅಂಕಿ ಅಂಶಗಳನ್ನು ಮರುಸಂಗ್ರಹಿಸಲಾಗದೆ/ಮರುಸ್ಥಾಪಿಸಲಾಗಿದೆ.

31ನೇ 2019 ರಲ್ಲಿ ಇರುವಂತೆ ಕಾವೇರಿ ನೀರಾವರಿ ನಿಗಮದ ವಿವಿಧ ಯೋಜನೆಗಳ ಪ್ರಗತಿ ಸ್ಥಿತಿಗತಿ ವರದಿ

ಕಾವೇರಿ ನೀರಾವರಿ ನಿಗಮ ನಿಯಮಿತವನ್ನು ಕರ್ನಾಟಕದ ಕಾವೇರಿ ಜಲಾನಯನ ಯೋಜನೆಗಳನ್ನು ತೀವ್ರಗತಿಯಿಂದ ಅನುಷ್ಠಾನಗೊಳಿಸುವ ವಿಶೇಷ ಉದ್ದೇಶಕ್ಕಾಗಿ ಕರ್ನಾಟಕ ಸರ್ಕಾರದಿಂದ ಕಂಪನಿ ಆಕ್ಟ್ 1956 ಅಡಿಯಲ್ಲಿ ದಿನಾಂಕ: 03.06.2003 ರಂದು ಸ್ಥಾಪಿಸಲಾಗಿದೆ. ಕರ್ನಾಟಕದ ಒಟ್ಟು ಭೌಗೋಳಿಕ ಪ್ರದೇಶವಾದ 1,91,791 ಚ.ಕಿ.ಮೀ. ನಲ್ಲಿ ಕಾವೇರಿ ಜಲಾನಯನ ಭೌಗೋಳಿಕ ಪ್ರದೇಶವು 34,275 ಚ.ಕಿ.ಮೀ ಆಗಿದ್ದು, ಇದು ಕರ್ನಾಟಕ ಭೌಗೋಳಿಕ ಪ್ರದೇಶದ ಶೇಕಡ 17.99 ರಷ್ಟು ಇರುತ್ತದೆ. ಕಾವೇರಿ ಕಣಿವೆಯು ದಕ್ಷಿಣ ಕರ್ನಾಟಕದ 11 ಜಿಲ್ಲೆಗಳಲ್ಲಿ ವ್ಯಾಪಿಸಿದ್ದು, ಮುಖ್ಯ ನದಿಯಾದ ಕಾವೇರಿ ನದಿಯು ಕೊಡಗು ಜಿಲ್ಲೆಯ ತಲಕಾವೇರಿಯಲ್ಲಿ ಹುಟ್ಟಿ ಕರ್ನಾಟಕದಲ್ಲಿ 381 ಕಿ.ಮೀ ಹರಿದು ತಮಿಳುನಾಡು ಮೂಲಕ ಬಂಗಾಳಕೊಲ್ಲಿ ಸಮುದ್ರವನ್ನು ಸೇರುತ್ತದೆ. ಕಾವೇರಿ ನದಿಗೆ ಹಾರಂಗಿ (50 ಕಿ.ಮೀ.), ಹೇಮಾವತಿ (245 ಕಿ.ಮೀ), ಲಕ್ಷ್ಮಣ ತೀರ್ಥ (131 ಕಿ.ಮೀ.), ಕಬಿನಿ (230 ಕಿ.ಮೀ), ಶಿಂಷಾ (221 ಕಿ.ಮೀ), ಸುವರ್ಣಾವತಿ (88 ಕಿ.ಮೀ.), ಅರ್ಕಾವತಿ (161 ಕಿ.ಮೀ.) ಉಪ ನದಿಗಳು ಸೇರುತ್ತವೆ.

ಕಾವೇರಿ ಕಣಿವೆಯಲ್ಲಿ ಪ್ರಗತಿಯಲ್ಲಿರುವ ನೀರಾವರಿ ಯೋಜನೆಗಳು, ಏತ ನೀರಾವರಿ, ಸಣ್ಣ ನೀರಾವರಿ ಮತ್ತು ಕಾಡಾ ಕಾಮಗಾರಿಗಳು ಒಳಗೊಂಡಂತೆ ಪೂರ್ಣಗೊಳಿಸುವುದು ಕಾವೇರಿ ನೀರಾವರಿ ನಿಗಮದ ಮುಖ್ಯ ಉದ್ದೇಶಗಳಾಗಿವೆ.

ಮುಂದುವರೆದು, ಏತ ನೀರಾವರಿ, ಸಣ್ಣ ನೀರಾವರಿ ಮತ್ತು ಕಾಡಾ ಯೋಜನೆಗಳನ್ನು ಒಳಗೊಂಡಂತೆ ಎಲ್ಲಾ ನೀರಾವರಿ ಯೋಜನೆಗಳನ್ನು ನಿರ್ವಹಿಸುವ ಹಾಗೂ ಅಧುನೀಕರಣಗೊಳಿಸುವ ಉದ್ದೇಶವನ್ನು ಕೂಡ ಹೊಂದಿರುತ್ತದೆ.

ಕಾವೇರಿ ನೀರಾವರಿ ನಿಗಮ ನಿಯಮಿತದ ವ್ಯಾಪ್ತಿಯಲ್ಲಿ (1) ನೀರಾವರಿ (ದ) ವಲಯ, ಮೈಸೂರು (2) ಹೇಮಾವತಿ ಯೋಜನಾ ವಲಯ, ಗೊರೂರು, ಹಾಗೂ (3) ಹೇಮಾವತಿ ನಾಲಾ ವಲಯ, ತುಮಕೂರು ಕಾರ್ಯ ನಿರ್ವಹಿಸುತ್ತಿವೆ.

ನೀರಾವರಿ (ದ) ವಲಯ, ಮೈಸೂರು

ಈ ವಲಯದಡಿಯ ಡಿ.ಡಿ.ಅರಸ್ ನಾಲೆ, ಕಬಿನಿ ಯೋಜನೆ, ಹಾರಂಗಿ ಯೋಜನೆ, ತಾರಕ ಯೋಜನೆ,ಅರ್ಕಾವತಿ ಯೋಜನೆ, ಚಿಕ್ಕಿಹೊಳೆ ಯೋಜನೆ, ಉಡುತೊರೆಹಳ್ಳ ಯೋಜನೆ, ಇಗ್ಗಲೂರು ಬ್ಯಾರೇಜ್ ಯೋಜನೆ, ಮಂಚನಬೆಲೆ ಯೋಜನೆ, ಕೃಷ್ಣರಾಜಸಾಗರ ಆಧುನೀಕರಣ, ಬನ್ನಹಳ್ಳಿಹುಂಡಿ ಏತ ನೀರಾವರಿ ಯೋಜನೆ, ನಂಜಾಪುರ ಏತ ನೀರಾವರಿ ಯೋಜನೆಗಳು ಭೌತಿಕವಾಗಿ ಪೂರ್ಣಗೊಂಡಿವೆ. ಸದರಿ ಯೋಜನೆಗಳ ವಿವರಗಳು ಈ ಕೆಳಗಿನಂತಿವೆ.

ಡಿ. ದೇವರಾಜ ಅರಸ್ ನಾಲೆ

ಈ ಯೋಜನೆಯು ಕೃಷ್ಣರಾಜಸಾಗರದ ಬಲದಂಡೆಯಿಂದ 126ಕಿ.ಮೀ ಉದ್ದದ ನಾಲೆ ನಿರ್ಮಿಸುವುದನ್ನು ಒಳಗೊಂಡಿದೆ. ಈ ಯೋಜನೆಯ ಮೂಲ ಅಂದಾಜು ರೂ. 18.50 ಕೋಟಿಗಳಾಗಿದ್ದು, ಇದಕ್ಕೆ ಸರ್ಕಾರದಿಂದ ಆದೇಶ ಸಂ. ಪಿ.ಡಬ್ಲ್ಯು.ಡಿ/145/ಎಂ.ಕೆ.

ಎಸ್/77 ದಿ: 23.04.1979 ರಲ್ಲಿ ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿದೆ. ಕಾಮಗಾರಿಯನ್ನು 1979 ರಲ್ಲಿ ಪ್ರಾರಂಭಿಸಲಾಗಿದೆ. ಯೋಜನೆಯ ಪರಿಷ್ಕೃತ ಅಂದಾಜು ಮೊತ್ತ ರೂ.58.10 ಕೋಟಿಗಳಿಗೆ ಸರ್ಕಾರದ ಆದೇಶ ಸಂ. ಪಿ.ಡಬ್ಲ್ಯು.ಡಿ/145/ಎಂ.ಎಂ.ಆರ್/86, ದಿ: 08.08.1988 ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

ಈ ಯೋಜನೆ ಅಡಿಯಲ್ಲಿ 80,000 ಎಕರೆ (32375 ಹೆ.) (ಬೆಳೆ ವಿವರ ಖಾರೀಫ್ ಅರೆಖುಷ್ಕಿ 80,000 ಎಕರೆ ಮತ್ತು ರಬಿ ಅರೆಖುಷ್ಕಿ 59,500 ಎಕರೆ ಒಟ್ಟು 139500 ಎಕರೆ) ಯೋಜಿತ ಅಚ್ಚುಕಟ್ಟು ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲು ಯೋಜಿಸಲಾಗಿದೆ. ಇದರಿಂದ ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ತಾಲ್ಲೂಕು ಮತ್ತು ಮೈಸೂರು ಜಿಲ್ಲೆಯ ನಂಜನಗೂಡು, ಟಿ.ನರಸೀಪುರ ಮತ್ತು ಹೆಚ್.ಡಿ ಕೋಟೆ ತಾಲ್ಲೂಕುಗಳು ನೀರಾವರಿ ಸೌಲಭ್ಯ ಪಡೆಯುತ್ತಿವೆ.

ಈ ಯೋಜನೆ ಅಡಿಯಲ್ಲಿ ಒಟ್ಟು 126 ಕಿಮೀ ಉದ್ದದ ಮುಖ್ಯ ನಾಲೆಯ ಕಾಮಗಾರಿಗಳು ಹಾಗೂ ವಿತರಣಾ ನಾಲೆಗಳ ಕಾಮಗಾರಿಗಳು ಪೂರ್ಣಗೊಂಡಿವೆ. ಮುಂದುವರೆದು, ಮುಖ್ಯ ಹಾಗೂ ಉಪನಾಲೆಗಳ ಲೈನಿಂಗ್ ಕಾಮಗಾರಿಗಳು ಪೂರ್ಣಗೊಂಡಿವೆ. ಮುಖ್ಯ ನಾಲೆ ಹಾಗೂ ಉಪನಾಲೆಗಳ ವ್ಯಾಪ್ತಿಯಲ್ಲಿ ಬರುವ ಒಟ್ಟಾರೆ 249 ಅಡ್ಡಮೋರಿ ಕಾಮಗಾರಿಗಳು ಪೂರ್ಣಗೊಂಡಿವೆ. ಪ್ರಾಯೋಗಿಕವಾಗಿ ನಾಲೆಯ ಕೊನೆಯವರೆಗೆ ನೀರನ್ನು ಹರಿಸಲಾಗಿದೆ. ಈ ಯೋಜನೆಯು ಭೌತಿಕವಾಗಿ ಪೂರ್ಣಗೊಂಡಿದೆ.

ಯೋಜಿತ 80000 ಎಕರೆ (32375ಹೆ) ಅಚ್ಚುಕಟ್ಟು ಪ್ರದೇಶದ ಎದುರಾಗಿ ಈ ಯೋಜನೆಯ ಪ್ರಾರಂಭದಿಂದ ಮಾರ್ಚ್ 2018ರ ಅಂತ್ಯದವರೆಗೆ 78432 ಎಕರೆ (31741 ಹೆ.) ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲಾಗಿದೆ. ಉಳಿದ 1568 ಎಕರೆ (634 ಹೆ) ಅಚ್ಚುಕಟ್ಟು ಪ್ರದೇಶವು ನಗರೀಕರಣ, ಕೈಗಾರಿಕಾ ಅಭಿವೃದ್ಧಿ ಹಾಗೂ ಎತ್ತರದ ಪ್ರದೇಶಗಳಿಂದ ಕೂಡಿರುವುದರಿಂದ ನೀರಾವರಿ ಸೌಲಭ್ಯ ಕಲ್ಪಿಸಲು ಸಾಧ್ಯವಾಗಿರುವುದಿಲ್ಲ.

ಈ ಯೋಜನೆಗೆ 2018–19ನೇ ಸಾಲಿಗೆ ರೂ. 8.39 ಕೋಟಿ ಅನುದಾನ ಒದಗಿಸಲಾಗಿದ್ದು, ಮಾರ್ಚ್–2019 ರ ಅಂತ್ಯದವರೆಗೆ ರೂ. 19.52 ಕೋಟಿ ವೆಚ್ಚ ಮಾಡಲಾಗಿದೆ.ಈ ಯೋಜನೆಯ ಪ್ರಾರಂಭದಿಂದ ಮಾರ್ಚ್–2019 ಅಂತ್ಯದವರೆಗೆ ಮಾಡಲಾದ ಕ್ರೋಢಿಕೃತ ವೆಚ್ಚ ರೂ. 682.50 ಕೋಟಿಗಳಾಗಿರುತ್ತದೆ.

ಕಬಿನಿ ಜಲಾಶಯ ಯೋಜನೆ

ಕಬಿನಿ ಜಲಾಶಯವನ್ನು ಮೈಸೂರು ಜಿಲ್ಲೆ ಹೆಗ್ಗಡದೇವನಕೋಟೆ ತಾಲ್ಲೂಕಿನ ಬೀಚನಹಳ್ಳಿ ಸಮೀಪದಲ್ಲಿ ಕಬಿನಿ ನದಿಗೆ ಅಡ್ಡಲಾಗಿ ನಿರ್ಮಿಸಲಾಗಿದೆ. ಈ ಯೋಜನೆಯ ಮೂಲ ಅಂದಾಜು ರೂ.3.20 ಕೋಟಿಗಳಾಗಿದ್ದು, ಇದಕ್ಕೆ ಸರ್ಕಾರಿ ಆದೇಶ ಸಂ. ಪಿ.ಡಬ್ಲ್ಯು.ಡಿ/1/ಕೆ.ಆರ್.ಸಿ./57 ದಿ: 02.02.1959 ರಲ್ಲಿ ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿದೆ. ಕಾಮಗಾರಿಯನ್ನು 1960 ರಲ್ಲಿ ಪ್ರಾರಂಭಿಸಲಾಗಿದೆ. ಯೋಜನೆಯ ಪರಿಷ್ಕೃತ ಅಂದಾಜು ಮೊತ್ತ ರೂ.390.00 ಕೋಟಿಗಳಿಗೆ ಸರ್ಕಾರದ ಆದೇಶ ಸಂ. ಪಿ.ಡಬ್ಲ್ಯು.ಡಿ/22/ಎಂ.ಎಂ.ಆರ್/86 ದಿ: 24.02.1986 ರಲ್ಲಿ ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿದೆ.

ಈ ಯೋಜನೆಯ ಪುನರ್ ಪರಿಷ್ಕೃತ ಯೋಜನಾ ವರದಿಯಲ್ಲಿ ಸೇರಿರುವ ಹರಿ ನೀರಾವರಿ ಹಾಗೂ ಏತ ನೀರಾವರಿ ಘಟಕಗಳನ್ನು ಒಳಗೊಂಡಿದ್ದು, 59.65 ಟಿಎಂಸಿ ನೀರನ್ನು ಉಪಯೋಗಿಸಲು ಉದ್ದೇಶಿಸಿದೆ. ಇದರಲ್ಲಿ ಹರಿ ನೀರಾವರಿಯ 32.350 ಟಿಎಂಸಿ ನೀರು ಹಾಗೂ ಏತ ನೀರಾವರಿಯ 27.300 ಟಿಎಂಸಿ ನೀರು ಒಳಗೊಂಡಿರುತ್ತದೆ. ಹರಿ ನೀರಾವರಿಯಿಂದ 32.35 ಟಿಎಂಸಿ ನೀರನ್ನು ಉಪಯೋಗಿಸಿ 110000 ಎಕರೆ (44516 ಹೆ) ಹಾಗೂ ಏತ ನೀರಾವರಿಯಿಂದ 27.30 ಟಿಎಂಸಿ ನೀರನ್ನು ಉಪಯೋಗಿಸಿ 123347 ಎಕರೆ (49918 ಹೆ) ಪ್ರದೇಶಕ್ಕೆ ಅಂದರೆ ಒಟ್ಟಾರೆ 59.65 ಟಿಎಂಸಿ ನೀರನ್ನು ಉಪಯೋಗಿಸಿ 233347 ಎಕರೆ (94434 ಹೆ) ಯೋಜಿತ ಅಚ್ಚುಕಟ್ಟು ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲು ಉದ್ದೇಶಿಸಲಾಗಿದೆ. ಈ ಯೋಜನೆಯಿಂದ ಮೈಸೂರು ಜಿಲ್ಲೆಯ ಹೆಚ್.ಡಿ.ಕೋಟೆ, ನಂಜನಗೂಡು ಮತ್ತು ಟಿ.ನರಸೀಪುರ ಹಾಗೂ ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ, ಚಾಮರಾಜನಗರ, ಯಳಂದೂರು ಮತ್ತು ಕೊಳ್ಳೇಗಾಲ ತಾಲ್ಲೂಕುಗಳು ನೀರಾವರಿ ಸೌಲಭ್ಯ ಪಡೆಯಲಿವೆ.

ಹರಿ ನೀರಾವರಿ: ಅಣೆಕಟ್ಟು ಮತ್ತು ಪೂರಕ ಕಾಮಗಾರಿಗಳು ಪೂರ್ಣಗೊಂಡಿವೆ.ಈ ಯೋಜನೆ ಅಡಿ ಎಡದಂಡೆ ನಾಲೆ ಮತ್ತು ಬಲದಂಡೆ ನಾಲೆಗಳು ಇವೆ.

ಎಡದಂಡೆ ನಾಲೆಯ ಪೂರ್ಣ ಉದ್ದವಾದ 26 ಕಿ.ಮೀ.ಗಳ ಮಣ್ಣು ಅಗೆತ ಮತ್ತು ಅಡ್ಡಮೋರಿ ಕಾಮಗಾರಿಗಳು ಪೂರ್ಣಗೊಂಡಿದ್ದು, ಲೈನಿಂಗ್ ಕಾಮಗಾರಿ ಪೂರ್ಣಗೊಂಡಿವೆ.

ಬಲದಂಡೆ ನಾಲೆಯ ಪೂರ್ಣ ಉದ್ದವಾದ 202 ಕಿ.ಮೀ.ಗಳ ಮಣ್ಣು ಅಗೆತ ಮತ್ತು ಅಡ್ಡಮೋರಿ ಕಾಮಗಾರಿಗಳು ಪೂರ್ಣಗೊಂಡಿವೆ. ಬಲದಂಡೆ ನಾಲೆಯ ಸರ: 0.00 ರಿಂದ 100.00 ಕಿ.ಮೀ. ವರೆಗಿನ ಸಿ.ಸಿ ಲೈನಿಂಗ್ ಕಾಮಗಾರಿಗಳು ಪೂರ್ಣಗೊಂಡಿದ್ದು, ಸರ: 100.00 ರಿಂದ 130.00 ಕಿ.ಮೀ ರವರೆಗಿನ ಸಿ.ಸಿ ಲೈನಿಂಗ್ ಕಾಮಗಾರಿಗಳು ಮತ್ತು ಸರಪಳಿ ಸರ: 130.00 ರಿಂದ 140.00 ಕಿ.ಮೀ ವರೆಗಿನ ಸಿ.ಸಿ ಲೈನಿಂಗ್ ಕಾಮಗಾರಿಗಳು ಭೌತಿಕವಾಗಿ ಪೂರ್ಣಗೊಂಡಿರುತ್ತವೆ.

ಯೋಜಿತ 110000 ಎಕರೆ (44516 ಹೆ) ಅಚ್ಚುಕಟ್ಟು ಪ್ರದೇಶದ ಎದುರಾಗಿ ಈ ಯೋಜನೆಯ ಪ್ರಾರಂಭದಿಂದ ಮಾರ್ಚ್ 2018 ರ ಅಂತ್ಯದವರೆಗೆ 109273 ಎಕರೆ (44222 ಹೆ.) ಪ್ರದೇಶಕ್ಕೆ ಹರಿ ನೀರಾವರಿ ಯೋಜನೆ ಅಡಿ ನೀರಾವರಿ ಸೌಲಭ್ಯ ಕಲ್ಪಿಸಲಾಗಿದೆ. ಉಳಿದ 727 ಎಕರೆ (294 ಹೆ) ಅಚ್ಚುಕಟ್ಟು ಪ್ರದೇಶವು ಗ್ರಾಮದ ಪರಿಮಿತಿ ಹಾಗೂ ಎತ್ತರದ ಪ್ರದೇಶಗಳಿಂದ ಕೂಡಿರುವುದರಿಂದ ಈ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲು ಸಾಧ್ಯವಾಗಿರುವುದಿಲ್ಲ.

ಏತ ನೀರಾವರಿ: ಕಾವೇರಿ ನ್ಯಾಯಾಧೀಕರಣದ ಅಂತಿಮ ತೀರ್ಪಿನಲ್ಲಿ ಕಬಿನಿ 2 ನೇ ಹಂತದ ಏತ ನೀರಾವರಿ ಯೋಜನೆಗೆ ನೀರಿನ ಹಂಚಿಕೆ ಇಲ್ಲದ ಕಾರಣ ಏತ ನೀರಾವರಿ ಯೋಜನೆಯನ್ನು ಕೈಗೆತ್ತಿಕೊಂಡಿಲ್ಲ.

ಈ ಯೋಜನೆಗೆ 2018–19 ನೇ ಸಾಲಿಗೆ ರೂ. 22.98 ಕೋಟಿ ಅನುದಾನ ಒದಗಿಸಲಾಗಿದ್ದು, ಮಾರ್ಚ್–2019 ರ ಅಂತ್ಯದವರೆಗೆ ರೂ. 19.03 ಕೋಟಿ ವೆಚ್ಚ ಮಾಡಲಾಗಿದೆ. ಈ ಯೋಜನೆಯ ಪ್ರಾರಂಭದಿಂದ ಮಾರ್ಚ್–2019 ಅಂತ್ಯದವರೆಗೆ ಮಾಡಲಾದ ಕ್ರೋಢಿಕೃತ ವೆಚ್ಚ ರೂ. 1044.26 ಕೋಟಿಗಳಾಗಿರುತ್ತದೆ.

ಹಾರಂಗಿ ಯೋಜನೆ

ಹಾರಂಗಿ ಜಲಾಶಯವನ್ನು ಕೊಡಗು ಜಿಲ್ಲೆ ಸೋಮವಾರಪೇಟೆ ತಾಲ್ಲೂಕಿನ ಹುಲುಗುಂದ ಬಳಿ ಕಾವೇರಿಯ ಉಪನದಿಯಾದ ಹಾರಂಗಿ ನದಿಗೆ ಅಡ್ಡಲಾಗಿ ನಿರ್ಮಿಸಲಾಗಿದೆ. ಈ ಯೋಜನೆಯ ಮೂಲ ಅಂದಾಜು ರೂ.11.00 ಕೋಟಿಗಳಾಗಿದ್ದು, ಇದಕ್ಕೆ ಸರ್ಕಾರಿ ಆದೇಶ ಸಂ. ಪಿ.ಡಬ್ಲ್ಯು.ಡಿ/02/ ಜಿ.ಹೆಚ್.ಕೆ/63, ದಿ: 14.11.1969 ರಲ್ಲಿ ಆಡಳಿತಾತ್ಮಕ ಅನುಮೋದನೆ ದೊರೆತಿರುತ್ತದೆ. ಪರಿಷ್ಕೃತ ಅಂದಾಜು ಮೊತ್ತ

ರೂ. 545.00 ಕೋಟಿಗಳಾಗಿದ್ದು, ಸರ್ಕಾರಿ ಆದೇಶ ಸಂ. ಪಿ.ಡಬ್ಲ್ಯು.ಡಿ/ 14/ಎಂ.ಎಂ.ಹೆಚ್/2007, ದಿ: 30.07.2007 ರಲ್ಲಿ ಆಡಳಿತಾತ್ಮಕ ಅನುಮೋದನೆ ದೊರೆತಿರುತ್ತದೆ.

ಈ ಯೋಜನೆಯು ಹರಿ ನೀರಾವರಿ ಹಾಗೂ ಏತ ನೀರಾವರಿ ಘಟಕಗಳನ್ನು ಒಳಗೊಂಡಿದೆ.ಈ ಯೋಜನೆ ಅಡಿಯಲ್ಲಿ 18.00 ಟಿಎಂಸಿ ನೀರನ್ನು ಉಪಯೋಗಿಸಲು ಉದ್ದೇಶಿಸಿದ್ದು, ಇದರಲ್ಲಿ ಹರಿ ನೀರಾವರಿಯ 11.38 ಟಿಎಂಸಿ ಹಾಗೂ ಏತ ನೀರಾವರಿಯ 6.62 ಟಿಎಂಸಿ ನೀರು ಒಳಗೊಂಡಿರುತ್ತದೆ. ಈ ಯೋಜನೆಯಿಂದ ಕಲ್ಪಿಸಲಾಗುವ ಅಚ್ಚುಕಟ್ಟು ವಿವರಗಳು ಈ ಕೆಳಗಿನಂತಿವೆ:

ಕ್ರ.ಸಂ	ನಾಲೆಗಳು	ನಾಲೆಯ ಉದ್ದ (ಕಿ.ಮೀ.ನಲ್ಲಿ)	ಯೋಜಿತ ಅಚ್ಚುಕಟ್ಟು ಎಕರೆಗಳಲ್ಲಿ (ಹೆ.)
ಹರಿನೀರಾವರಿ	1. ಎಡದಂಡೆ ನಾಲೆ	153.00	29472 (11927)
	2. ಬಲದಂಡೆ ನಾಲೆ	138.50	71323 (28863)
	3. ಸಣ್ಣ ನೀರಾವರಿ ಕೆರೆಗಳು	–	2600 (1053)
ಏತ ನೀರಾವರಿ	1. ಸೋಮವಾರಪೇಟೆ	10.00	1500 (607)
	2. ಪಿರಿಯಾಪಟ್ಟಣ	50.00	30000 12141)
		ಒಟ್ಟು	**134895 (54591)**

ಈ ಯೋಜನೆ ಅಡಿಯಲ್ಲಿ ಮೈಸೂರು ಜಿಲ್ಲೆಯ ಹುಣಸೂರು, ಕೆ.ಆರ್.ನಗರ ಮತ್ತು ಪಿರಿಯಾಪಟ್ಟಣ ಹಾಗೂ ಹಾಸನ ಜಿಲ್ಲೆಯ ಅರಕಲಗೂಡು ಹಾಗೂ ಕೊಡಗು ಜಿಲ್ಲೆಯ ಸೋಮವಾರಪೇಟೆ ತಾಲ್ಲೂಕುಗಳು ನೀರಾವರಿ ಸೌಲಭ್ಯ ಪಡೆಯಲಿವೆ.

ಹರಿ ನೀರಾವರಿ: ಅಣೆಕಟ್ಟು ಮತ್ತು ಪೂರಕ ಕಾಮಗಾರಿಗಳು ಪೂರ್ಣಗೊಂಡಿವೆ. ಎಡದಂಡೆ ನಾಲೆಯ ಪೂರ್ಣ ಉದ್ದವಾದ 153 ಕಿ.ಮೀ.ಗಳ ಹಾಗೂ ಬಲದಂಡೆ ನಾಲೆಯ ಪೂರ್ಣ ಉದ್ದವಾದ 138.50 ಕಿ.ಮೀ.ಗಳ ಕಾಮಗಾರಿಗಳು ಪೂರ್ಣಗೊಂಡಿವೆ.

ಹಾರಂಗಿ ಎಡದಂಡೆ ನಾಲೆಯ ಸರ: 14.740 ಕಿ.ಮೀ ನಿಂದ 27.000 ಕಿ.ಮೀ ವರೆಗಿನ 12.26 ಕಿ.ಮೀ ಉದ್ದ ಲೈನಿಂಗ್ ಕಾಮಗಾರಿಗಳನ್ನು ಕೈಗೊಳ್ಳಲಾಗಿದ್ದು, ಈ ಪೈಕಿ 11.36ಕಿ.ಮೀ ಉದ್ದ ಲೈನಿಂಗ್ ಕಾಮಗಾರಿಯನ್ನು ಪೂರ್ಣಗೊಳಿಸಲಾಗಿದೆ. ಉಳಿದ 0.90 ಕಿ.ಮೀ ಉದ್ದ ಲೈನಿಂಗ್ ಕಾಮಗಾರಿ ಪ್ರಗತಿಯಲ್ಲಿದೆ.

ಹಾರಂಗಿ ಎಡದಂಡೆ ನಾಲೆಯ 20 ಸಂಖ್ಯೆ ವಿತರಣಾ ನಾಲೆಗಳ 41.145 ಕಿ.ಮೀ ಉದ್ದದ ಲೈನಿಂಗ್ ಕಾಮಗಾರಿಗಳನ್ನು 6 ಪ್ಯಾಕೇಜ್‌ಗಳಲ್ಲಿ ಕೈಗೊಂಡಿದ್ದು, ಪೂರ್ಣಗೊಳಿಸಲಾಗಿದೆ.

ಹಾರಂಗಿ ಬಲದಂಡೆ ನಾಲೆಯ ಸರ: 0.00 ಕಿ.ಮೀ ನಿಂದ 25.00 ಕಿ.ಮೀ ವರೆಗಿನ 20.60 ಕಿ.ಮೀ ಉದ್ದ ಲೈನಿಂಗ್ ಕಾಮಗಾರಿಗಳನ್ನು ಕೈಗೊಳ್ಳಲಾಗಿದ್ದು, ಕಾಮಗಾರಿಯನ್ನು ಭೌತಿಕವಾಗಿ ಪೂರ್ಣಗೊಳಿಸಲಾಗಿದೆ.

ಏತ ನೀರಾವರಿ ಯೋಜನೆಗಳು

1. ಸೋಮವಾರ ಪೇಟೆ ಏತ ನೀರಾವರಿ:ಈ ಯೋಜನೆ ಅಡಿಯಲ್ಲಿ ಎಡದಂಡೆ ನಾಲೆಯ ಸರ: 12.20 ಕಿ.ಮೀ ನಲ್ಲಿ 0.80 ಟಿಎಂಸಿ ನೀರನ್ನು ಎತ್ತಿ, 1500 ಎಕರೆ (607 ಹೆ) ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲು ಯೋಜಿಸಲಾಗಿದೆ. ಈ ಯೋಜನೆಯ ಹೆಡ್‌ವರ್ಕ್ಸ್ ಮತ್ತು 10 ಕಿ.ಮೀ ಉದ್ದ ನಾಲೆಯ ಕಾಮಗಾರಿಗಳು ಪೂರ್ಣಗೊಂಡಿದ್ದು, ಯೋಜನೆಯನ್ನು ಚಾಲನೆಗೊಳಿಸಲಾಗಿದೆ.

2. ಪಿರಿಯಾಪಟ್ಟಣ ಏತ ನೀರಾವರಿ: ಈ ಯೋಜನೆ ಅಡಿಯಲ್ಲಿ ಕರಡಿಲಕ್ಕನ ಕೆರೆಯಿಂದ 324 ಕ್ಯೂಸೆಕ್ಸ್ ನೀರನ್ನು ಎತ್ತಿ 30000 ಎಕರೆ (12141ಹೆ) ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲಾಗಿದೆ. ಈ ಯೋಜನೆ ಅಡಿಯಲ್ಲಿ 5.82 ಟಿಎಂಸಿ ನೀರನ್ನು ಉಪಯೋಗಿಸಿಕೊಳ್ಳಲು ಯೋಜಿಸಲಾಗಿದೆ.

ಹೆಡ್‌ವರ್ಕ್ಸ್ ಮತ್ತು ಪೂರಕ ಕಾಮಗಾರಿಗಳು ಪೂರ್ಣಗೊಂಡಿವೆ. ಮುಖ್ಯ ನಾಲೆಯ ಉದ್ದವಾದ 50 ಕಿ.ಮೀ.ನ ಕಾಮಗಾರಿಗಳು ಪೂರ್ಣಗೊಂಡಿವೆ. ಈ ನಾಲೆಯಡಿ ಬರುವ 1 ರಿಂದ 38 ವಿತರಣಾ ನಾಲೆಯ ಕಾಮಗಾರಿಗಳು ಪೂರ್ಣಗೊಂಡಿರುತ್ತವೆ.

ಯೋಜಿತ 134895 ಎಕರೆ (54591ಹೆ) ಅಚ್ಚುಕಟ್ಟು ಪ್ರದೇಶದ ಎದುರಾಗಿ ಈ ಯೋಜನೆಯ ಪ್ರಾರಂಭದಿಂದ ಮಾರ್ಚ್ 2019 ರ ಅಂತ್ಯದವರೆಗೆ 132248 ಎಕರೆ (53520 ಹೆ.)ಪ್ರದೇಶಕ್ಕೆ ಹರಿ ನೀರಾವರಿ ಹಾಗೂ ಏತ ನೀರಾವರಿ ಯೋಜನೆಗಳಿಂದ ನೀರಾವರಿ ಸೌಲಭ್ಯ ಕಲ್ಪಿಸಲಾಗಿದೆ.ಇನ್ನುಳಿದ 2647 ಎಕರೆ (1071 ಹೆ.)ಅಚ್ಚುಕಟ್ಟು ಪ್ರದೇಶವು ಗ್ರಾಮದ ಪರಿಮಿತಿ ಹಾಗೂ ಎತ್ತರದ ಪ್ರದೇಶಗಳಿಂದ ಕೂಡಿರುವುದರಿಂದ ಈ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲು ಸಾಧ್ಯವಾಗಿರುವುದಿಲ್ಲ.

ಈ ಯೋಜನೆಯು ಭೌತಿಕವಾಗಿ ಪೂರ್ಣಗೊಂಡಿದೆ.

ಈ ಯೋಜನೆಗೆ 2018–19 ನೇ ಸಾಲಿಗೆ ರೂ. 21.06 ಕೋಟಿ ಅನುದಾನ ಒದಗಿಸಲಾಗಿದ್ದು, ಮಾರ್ಚ್–2019 ರ ಅಂತ್ಯದವರೆಗೆ ರೂ. 30.19 ಕೋಟಿ ವೆಚ್ಚ ಮಾಡಲಾಗಿದೆ. ಈ ಯೋಜನೆಯ ಪ್ರಾರಂಭದಿಂದ ಮಾರ್ಚ್–2019 ಅಂತ್ಯದವರೆಗೆ ಮಾಡಲಾದ ಕ್ರೋಢಿಕೃತ ವೆಚ್ಚ ರೂ. 817.38 ಕೋಟಿಗಳಾಗಿರುತ್ತದೆ.

ತಾರಕ ಯೋಜನೆ

ತಾರಕ ಜಲಾಶಯವನ್ನು ಮೈಸೂರು ಜಿಲ್ಲೆಯ ಹೆಗ್ಗಡದೇವನ ಕೋಟೆ ತಾಲ್ಲೂಕಿನ ಪೆಂಜಹಳ್ಳಿ ಗ್ರಾಮದ ಹತ್ತಿರ ಕಬಿನಿ ನದಿಯ ಉಪನದಿಯಾದ ತಾರಕ ನದಿಗೆ ಅಡ್ಡಲಾಗಿ ನಿರ್ಮಿಸಲಾಗಿದೆ. ಈ ಯೋಜನೆಯ ಮೂಲ ಅಂದಾಜು ರೂ.1.70 ಕೋಟಿಗಳಾಗಿದ್ದು, ಇದಕ್ಕೆ ಸರ್ಕಾರಿ ಆದೇಶ ಸಂ. ಪಿ.ಡಬ್ಲ್ಯೂ.ಡಿ/23/ಜಿ.ಐ.ಪಿ./67 ದಿ: 12.04.1970 ರಲ್ಲಿ ಆಡಳಿತಾತ್ಮಕ ಅನುಮೋದನೆ ದೊರೆತಿರುತ್ತದೆ. ಈ ಯೋಜನೆಯ ಕಾಮಗಾರಿಯನ್ನು 1970ರಲ್ಲಿ ಪ್ರಾರಂಭಿಸಲಾಗಿದೆ. ಈ ಯೋಜನೆಯ ಪರಿಷ್ಕೃತ ಅಂದಾಜು ಮೊತ್ತ ರೂ.51.00 ಕೋಟಿಗೆ ಸರ್ಕಾರದ ಆದೇಶ ಸಂ. ಪಿ.ಡಬ್ಲ್ಯೂ.ಡಿ/36/ಎಂ.ಎಂ.ಎಫ್ ದಿ: 15.04.1996 ರಲ್ಲಿ ಆಡಳಿತಾತ್ಮಕ ಅನುಮೋದನೆ ದೊರೆತಿರುತ್ತದೆ.

ಈ ಯೋಜನೆ ಅಡಿಯಲ್ಲಿ 3.20 ಟಿಎಂಸಿ ಯೋಜಿತ ನೀರನ್ನು ಉಪಯೋಗಿಸಿಕೊಂಡು 17400 ಎಕರೆ (7040 ಹೆ) ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲು ಯೋಜಿಸಲಾಗಿದೆ. ಸದರಿ ಯೋಜನೆಯಿಂದ ಮೈಸೂರು ಜಿಲ್ಲೆಯ ಹೆಚ್.ಡಿ.ಕೋಟೆ ತಾಲ್ಲೂಕು ನೀರಾವರಿ ಸೌಲಭ್ಯ ಪಡೆಯಲಿದೆ.

ಎಡದಂಡೆ ನಾಲೆಯ 50 ಕಿ.ಮೀ ಹಾಗೂ ಬಲದಂಡೆ ನಾಲೆಯ 38.50 ಕಿ.ಮೀ. ಕಾಮಗಾರಿಗಳು ಪೂರ್ಣಗೊಂಡಿವೆ. ಈ ಯೋಜನೆಯು ಭೌತಿಕವಾಗಿ ಪೂರ್ಣಗೊಂಡಿದ್ದು, ಉದ್ದೇಶಿತ ಸಂಪೂರ್ಣ 17400 ಎಕರೆ (7040 ಹೆ.) ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲಾಗಿದೆ.

ಎಡದಂಡೆ ನಾಲೆಯ ಸರ: 0.00 ರಿಂದ 50.150 ಕಿ.ಮೀ ವರೆಗಿನ ಸಿ.ಸಿ ಲೈನಿಂಗ್ ಕಾಮಗಾರಿ ಪೂರ್ಣಗೊಂಡಿರುತ್ತದೆ.

ಬಲದಂಡೆ ನಾಲೆಯ ಸರ: 0.00 ರಿಂದ 10.00 ಕಿಮೀ ವರೆಗಿನ ಸಿ.ಸಿ ಲೈನಿಂಗ್ ಕಾಮಗಾರಿಯು ಭೌತಿಕವಾಗಿ ಪೂರ್ಣಗೊಂಡಿರುತ್ತದೆ. ಸರ: 10.00 ರಿಂದ 36.84 ಕಿಮೀ ವರೆಗಿನ ಸಿ.ಸಿ ಲೈನಿಂಗ್ ಕಾಮಗಾರಿ ಪ್ರಗತಿಯಲ್ಲಿದೆ.

ತಾರಕ ಜಲಾಶಯಕ್ಕೆ ನೀರಿನ ಒಳಹರಿವು ಕಡಿಮೆ ಇರುವುದರಿಂದ ಯೋಜನೆಯ ಪೂರ್ಣ ಅಚ್ಚುಕಟ್ಟಿಗೆ ನೀರು ಸರಬರಾಜು ಮಾಡಲು ಸಾಧ್ಯವಾಗದಿರುವ ಪ್ರಯುಕ್ತ, ಕಬಿನಿ ಜಲಾಶಯದಿಂದ 2.07 ಟಿಎಂಸಿ ನೀರನ್ನು ಎತ್ತಿ ತಾರಕ ಜಲಾಶಯಕ್ಕೆ ಹರಿಸುವ ಕಾಮಗಾರಿ ಪೂರ್ಣಗೊಂಡಿರುತ್ತದೆ ಹಾಗೂ ಪರೀಕ್ಷಾರ್ಥವಾಗಿ ಪಂಪುಗಳನ್ನು ಚಾಲನೆ ಮಾಡಿ ನೀರನ್ನು ಎತ್ತಲಾಗಿರುತ್ತದೆ.

ಈ ಯೋಜನೆಯು ಭೌತಿಕವಾಗಿ ಪೂರ್ಣಗೊಂಡಿದ್ದು, ಉದ್ದೇಶಿತ ಸಂಪೂರ್ಣ 17400 ಎಕರೆ (7040 ಹೆ.) ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲಾಗಿದೆ.

ಈ ಯೋಜನೆಗೆ 2018–19 ನೇ ಸಾಲಿಗೆ ರೂ. 7.32 ಕೋಟಿ ಅನುದಾನ ಒದಗಿಸಲಾಗಿದ್ದು, ಮಾರ್ಚ್–2019 ರ ಅಂತ್ಯದವರೆಗೆ ರೂ. 5.37 ಕೋಟಿ ವೆಚ್ಚ ಮಾಡಲಾಗಿದೆ. ಈ ಯೋಜನೆಯ ಪ್ರಾರಂಭದಿಂದ ಮಾರ್ಚ್–2019 ಅಂತ್ಯದವರೆಗೆ ಮಾಡಲಾದ ಕ್ರೋಢಿಕೃತ ವೆಚ್ಚ ರೂ. 135.27 ಕೋಟಿಗಳಾಗಿರುತ್ತದೆ.

ಅರ್ಕಾವತಿ ಯೋಜನೆ

ಅರ್ಕಾವತಿ ಜಲಾಶಯವನ್ನು ರಾಮನಗರ ಜಿಲ್ಲೆಯ ಕನಕಪುರ ತಾಲ್ಲೂಕಿನ ಹಾರೋಬೆಲೆ ಗ್ರಾಮದ ಸಮೀಪ ಕಾವೇರಿ ನದಿಯ ಉಪನದಿಯಾದ ಅರ್ಕಾವತಿ ನದಿಗೆ ಅಡ್ಡಲಾಗಿ ನಿರ್ಮಿಸಲಾಗಿದೆ. ಈ ಯೋಜನೆಯ ಮೂಲ ಅಂದಾಜು ರೂ.22.25 ಕೋಟಿಗಳಾಗಿದ್ದು, ಸರ್ಕಾರಿ ಆದೇಶ ಸಂ. ಪಿ.ಡಬ್ಲ್ಯು.ಡಿ/126/ಎಂ.ಎಂ.ಕೆ/83 ದಿ: 27.06.1984 ರಲ್ಲಿ ಆಡಳಿತಾತ್ಮಕ ಅನುಮೋದನೆ ದೊರೆತಿರುತ್ತದೆ. ಈ ಯೋಜನೆಯ ಕಾಮಗಾರಿಯನ್ನು 1983–84 ರಲ್ಲಿ ಪ್ರಾರಂಭಿಸಲಾಗಿದೆ.

ಈ ಯೋಜನೆಯು ಹರಿನೀರಾವರಿ ಹಾಗೂ ಏತ ನೀರಾವರಿ ಘಟಕಗಳನ್ನು ಒಳಗೊಂಡಿದೆ. ಸದರಿ ಯೋಜನೆಯಿಂದ 3.10 ಟಿಎಂಸಿ ನೀರನ್ನು ಉಪಯೋಗಿಸಲು ಯೋಜಿಸಿದ್ದು, 7500 ಎಕರೆ (3035 ಹೆ) ಪ್ರದೇಶಕ್ಕೆ ಹರಿನೀರಾವರಿಯಲ್ಲಿ ಹಾಗೂ 7900 ಎಕರೆ (3197 ಹೆ) ಪ್ರದೇಶಕ್ಕೆ ಏತ ನೀರಾವರಿಯಲ್ಲಿ ಒಟ್ಟಾರೆಯಾಗಿ 15400 ಎಕರೆ (6232 ಹೆ) ಪ್ರದೇಶಕ್ಕೆ ನೀರಾವರಿ ಸೌಲಭ್ಯವನ್ನು ಒದಗಿಸಬಹುದಾಗಿರುತ್ತದೆ.ಈ ಯೋಜನೆಯಿಂದ ರಾಮನಗರ ಜಿಲ್ಲೆಯ ಕನಕಪುರ ತಾಲ್ಲೂಕು ನೀರಾವರಿ ಸೌಲಭ್ಯ ಪಡೆಯಲಿದೆ.

ಹರಿ ನೀರಾವರಿ: ಈ ಯೋಜನೆಯಅಣೆಕಟ್ಟು ಮತ್ತು ಪೂರಕ ಕಾಮಗಾರಿಗಳು ಪೂರ್ಣಗೊಂಡಿರುತ್ತವೆ. ಎಡದಂಡೆ ನಾಲೆ 23.00 ಕಿ.ಮೀ ಉದ್ದ ಹಾಗೂ ಬಲದಂಡೆ ನಾಲೆ 22.00 ಕಿ.ಮೀ. ಉದ್ದ ಇದ್ದು, ಈ ನಾಲೆಗಳ ಪೂರ್ಣ ಉದ್ದಕ್ಕೆ ಕಾಮಗಾರಿಗಳು ಪೂರ್ಣಗೊಂಡಿರುತ್ತವೆ. ಹರಿ ನೀರಾವರಿಯಿಂದ 7490 ಎಕರೆ (3031 ಹೆ.) ನೀರಾವರಿ ಸಾಮರ್ಥ್ಯ ಕಲ್ಪಿಸಲಾಗಿದೆ. ಉಳಿದ 10 ಎಕರೆ (4 ಹೆ.)ಪ್ರದೇಶಕ್ಕೆ ನೀರಾವರಿ ಸಾಮರ್ಥ್ಯ ಒದಗಿಸಲು ಸಾಧ್ಯವಾಗಿರುವುದಿಲ್ಲ.

ಏತ ನೀರಾವರಿ ಯೋಜನೆಗಳು:

ಅ) ಎಡದಂಡೆ ಏತ ನೀರಾವರಿ ಯೋಜನೆ: ಈ ಯೋಜನೆಯಲ್ಲಿ ಅರ್ಕಾವತಿ ಜಲಾಶಯದ ಹಿನ್ನೀರಿನಿಂದ 32.98 ಕ್ಯೂಸೆಕ್ಸ್ ನೀರನ್ನು ಎತ್ತಿ 3600 ಎಕರೆ (1457 ಹೆ) ಅಚ್ಚುಕಟ್ಟು ಪ್ರದೇಶಕ್ಕೆ ನೀರಾವರಿ ಸೌಲಭ್ಯ ಒದಗಿಸಲು ಯೋಜಿಸಲಾಗಿದೆ. ಈ ನಾಲೆಯ ಉದ್ದ 21 ಕಿ.ಮೀ (18.00+3.00 ಕಿ.ಮೀ. ರಿವರ್ಸ್ ಕಾಲುವೆ) ಇರುತ್ತದೆ.ಎಡದಂಡೆ ಏತ ನೀರಾವರಿ ಯೋಜನೆಯನ್ನು ಪೂರ್ಣಗೊಳಿಸಿ ಚಾಲನೆಗೊಳಿಸಲಾಗಿದೆ.

ಆ) ಬಲದಂಡೆ ಏತ ನೀರಾವರಿ ಯೋಜನೆ: ಈ ಯೋಜನೆಯಲ್ಲಿ ಅರ್ಕಾವತಿ ಜಲಾಶಯದ ಹಿನ್ನೀರಿನಿಂದ 39.98 ಕ್ಯೂಸೆಕ್ಸ್ ನೀರನ್ನು ಎತ್ತಿ 4300 ಎಕರೆ (1740 ಹೆ) ಅಚ್ಚುಕಟ್ಟು ಪ್ರದೇಶಕ್ಕೆ ನೀರಾವರಿ ಸೌಲಭ್ಯ ಒದಗಿಸಲು ಯೋಜಿಸಲಾಗಿದೆ. 0.00 ರಿಂದ 23.00 ಕಿ.ಮೀ ವರೆಗಿನ ಈ ನಾಲೆಯ ತೂಬುಗಳಡಿ ಬರುವ ಅಚ್ಚುಕಟ್ಟು ಪ್ರದೇಶವು 3892 ಎಕರೆ (1575 ಹೆ.)ಆಗಿರುತ್ತದೆ. ಬಲದಂಡೆ ಏತ ನೀರಾವರಿ ಯೋಜನೆಯನ್ನು ಪೂರ್ಣಗೊಳಿಸಿ ಚಾಲನೆಗೊಳಿಸಲಾಗಿದೆ.

ಯೋಜಿತ 15400 ಎಕರೆ (6232ಹೆ) ಅಚ್ಚುಕಟ್ಟು ಪ್ರದೇಶದ ಎದುರಾಗಿ ಈ ಯೋಜನೆಯ ಪ್ರಾರಂಭದಿಂದ ಮಾರ್ಚ್ 2019ರ ಅಂತ್ಯದವರೆಗೆ 15384 ಎಕರೆ (6226 ಹೆ.)ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲಾಗಿದೆ.

ಈ ಯೋಜನೆಗೆ 2018–19 ನೇ ಸಾಲಿಗೆ ರೂ. 2.78 ಕೋಟಿ ಅನುದಾನ ಒದಗಿಸಲಾಗಿದ್ದು, ಮಾರ್ಚ್–2019 ರ ಅಂತ್ಯದವರೆಗೆ ರೂ. 4.58 ಕೋಟಿ ವೆಚ್ಚ ಮಾಡಲಾಗಿದೆ. ಈ ಯೋಜನೆಯ ಪ್ರಾರಂಭದಿಂದ ಮಾರ್ಚ್–2019 ಅಂತ್ಯದವರೆಗೆ ಮಾಡಲಾದ ಕ್ರೋಢಿಕೃತ ವೆಚ್ಚ ರೂ. 212.19 ಕೋಟಿಗಳಾಗಿರುತ್ತದೆ.

ಚಿಕ್ಕಿಹೊಳೆ ಯೋಜನೆ

ಚಿಕ್ಕಿಹೊಳೆ ಜಲಾಶಯವನ್ನು ಕೊಡಗು ಜಿಲ್ಲೆಯ ಸೋಮವಾರಪೇಟೆ ತಾಲ್ಲೂಕಿನ ರಂಗಸಮುದ್ರ ಗ್ರಾಮದ ಬಳಿ ಕಾವೇರಿ ನದಿಯ ಉಪನದಿಯಾದ ಚಿಕ್ಕಿಹೊಳೆಗೆ ಅಡ್ಡಲಾಗಿ ನಿರ್ಮಿಸಲಾಗಿದೆ. ಈ ಯೋಜನೆಯ ಮೂಲ ಅಂದಾಜು ರೂ.3.40 ಕೋಟಿಗಳಾಗಿದ್ದು, ಇದಕ್ಕೆ ಸರ್ಕಾರಿಆದೇಶ ಸಂ. ಪಿ.ಡಬ್ಲ್ಯು.ಡಿ/25/ಜಿ.ಐ.ಪಿ/71 ದಿ: 26.08.1977 ರಲ್ಲಿ ಆಡಳಿತಾತ್ಮಕ ಅನುಮೋದನೆ ದೊರೆತಿರುತ್ತದೆ. ಯೋಜನೆಯ ಪರಿಷ್ಕೃತ ಅಂದಾಜು ಮೊತ್ತ ರೂ. 19.20 ಕೋಟಿಗಳಾಗಿದ್ದು ಆಡಳಿತಾತ್ಮಕ ಅನುಮೋದನೆ ಆಗಬೇಕಾಗಿರುತ್ತದೆ.

ಈ ಯೋಜನೆಯಲ್ಲಿ 0.45 ಟಿಎಂಸಿ ನೀರನ್ನು ಬಳಸಿಕೊಂಡು 2,137 ಎಕರೆ (865ಹೆ) ಅಚ್ಚುಕಟ್ಟು ಪ್ರದೇಶಕ್ಕೆ ನೀರಾವರಿ ಸೌಲಭ್ಯವನ್ನು ಒದಗಿಸಬಹುದಾಗಿರುತ್ತದೆ. ಈ ಯೋಜನೆಯಿಂದ ಕೊಡಗು ಜಿಲ್ಲೆಯ ಸೋಮವಾರ ಪೇಟೆ ತಾಲ್ಲೂಕು ನೀರಾವರಿ ಸೌಲಭ್ಯ ಪಡೆಯುವುದು.

ಎಡದಂಡೆ ನಾಲೆಯು 29.00 ಕಿ.ಮೀ ಉದ್ದ ಇದ್ದು, ಅಣೆಕಟ್ಟು ಮತ್ತು ಅದಕ್ಕೆ ಸಂಬಂಧಿಸಿದ ಕಾಮಗಾರಿಗಳು ಪೂರ್ಣಗೊಂಡಿರುತ್ತವೆ. ನಾಲೆ ಹಾಗೂ ಅಡ್ಡಮೋರಿ ಕಾಮಗಾರಿಗಳು ಪೂರ್ಣಗೊಂಡಿರುತ್ತವೆ. ಈ ಯೋಜನೆಯು ಭೌತಿಕವಾಗಿ ಪೂರ್ಣಗೊಂಡಿದೆ.

ಈ ಯೋಜನೆ ಅಡಿಯಲ್ಲಿ ಉದ್ದೇಶಿತ ಸಂಪೂರ್ಣ 2,137ಎಕರೆ (865 ಹೆ.)ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲಾಗಿದೆ.

ಈ ಯೋಜನೆಗೆ 2018–19 ನೇ ಸಾಲಿಗೆ ಅನುದಾನ ಒದಗಿಸಲಾಗಿರುವುದಿಲ್ಲ, ಮಾರ್ಚ್–2019 ರ ಅಂತ್ಯದವರೆಗೆ ವೆಚ್ಚ ಮಾಡಲಾಗಿರುವುದಿಲ್ಲ. ಈ ಯೋಜನೆಯ ಪ್ರಾರಂಭದಿಂದ ಮಾರ್ಚ್–2019 ಅಂತ್ಯದವರೆಗೆ ಮಾಡಲಾದ ಕ್ರೋಢಿಕೃತ ವೆಚ್ಚ ರೂ. 23.58 ಕೋಟಿಗಳಾಗಿರುತ್ತದೆ.

ಉಡುತೊರೆಹಳ್ಳ ಯೋಜನೆ

ಉಡುತೊರೆ ಹಳ್ಳ ಜಲಾಶಯವನ್ನು ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲ ತಾಲ್ಲೂಕಿನ ಅಜ್ಜಿಪುರ ಗ್ರಾಮದ ಬಳಿ ಉಡುತೊರೆಹಳ್ಳ ನದಿಗೆ ಅಡ್ಡಲಾಗಿ ನಿರ್ಮಿಸಲಾಗಿದೆ.ಈ ಯೋಜನೆಯ ಮೂಲ ಅಂದಾಜು ರೂ.7.55 ಕೋಟಿಗಳಾಗಿದ್ದು, ಇದಕ್ಕೆ ಸರ್ಕಾರಿ ಆದೇಶ ಸಂ. ಪಿ.ಡಬ್ಲ್ಯು.ಡಿ/60/ಜಿ.ಐ.ಪಿ./71 ದಿ: 30.11.1978 ರಲ್ಲಿ ಆಡಳಿತಾತ್ಮಕ ಅನುಮೋದನೆ ದೊರೆತಿರುತ್ತದೆ. ಸದರಿ ಯೋಜನೆಯನ್ನು 1979 ರಲ್ಲಿ ಪ್ರಾರಂಭಿಸಲಾಗಿದೆ.ಯೋಜನೆಯ ಪರಿಷ್ಕೃತ ಅಂದಾಜು ಮೊತ್ತ ರೂ.32.30 ಕೋಟಿಗಳಿಗೆ ಸರ್ಕಾರದ ಆದೇಶ ಸಂ. ಪಿ.ಡಬ್ಲ್ಯು.ಡಿ/134/ ಎಂ.ಎಂ.ಕೆ/85 ದಿ: 25.11.1989 ರಲ್ಲಿ ಆಡಳಿತಾತ್ಮಕ ಅನುಮೋದನೆ ದೊರೆತಿರುತ್ತದೆ.

ಈ ಯೋಜನೆಯ ಅಡಿಯಲ್ಲಿ 1.23 ಟಿಎಂಸಿ ನೀರನ್ನು ಉಪಯೋಗಿಸಿಕೊಂಡು ಕೊಳ್ಳೇಗಾಲ ತಾಲ್ಲೂಕಿನ 16314 ಎಕರೆ (6602 ಹೆ) ಅಚ್ಚುಕಟ್ಟು ಪ್ರದೇಶಕ್ಕೆ ನೀರಾವರಿ ಸೌಲಭ್ಯ ಒದಗಿಸಲು ಉದ್ದೇಶಿಸಲಾಗಿದೆ.

ಸದರಿ ಯೋಜನೆಯ ಅಣೆಕಟ್ಟು ಮತ್ತು ಪೂರಕ ಕಾಮಗಾರಿಗಳು ಪೂರ್ಣಗೊಂಡಿವೆ. ಈ ಯೋಜನೆಯ ಎಡದಂಡೆ ನಾಲೆ ಉದ್ದ 9.33 ಕಿ.ಮೀ ಹಾಗೂ ಬಲದಂಡೆ ನಾಲೆಯ ಉದ್ದ 9.10 ಕಿ.ಮೀ. ಇದ್ದು, ಬಲದಂಡೆ ನಾಲೆಯಲ್ಲಿ 2 ಶಾಖಾ ನಾಲೆಗಳಿದ್ದು, ಎಡ ಶಾಖಾ ನಾಲೆ 11.20 ಕಿ.ಮೀ ಮತ್ತು ಬಲ ಶಾಖಾ ನಾಲೆ 10 ಕಿ.ಮೀ ಇರುತ್ತದೆ. ಎಡದಂಡೆ ನಾಲೆ ಮತ್ತು ಬಲದಂಡೆ ನಾಲೆಗಳಿಂದ ಕ್ರಮವಾಗಿ 6200 ಎಕರೆ (2509 ಹೆ) ಹಾಗೂ 10114 ಎಕರೆ (4093 ಹೆ) ಒಟ್ಟಾರೆಯಾಗಿ 16314 ಎಕರೆ (6602 ಹೆ) ಅಚ್ಚುಕಟ್ಟು ಪ್ರದೇಶಕ್ಕೆ ನೀರಾವರಿ ಸೌಲಭ್ಯವನ್ನು ಒದಗಿಸಲು ಯೋಜಿಸಲಾಗಿದೆ. ಎಡದಂಡೆ ನಾಲೆ ಹಾಗೂ ಬಲದಂಡೆ ನಾಲೆಯ ಕಾಮಗಾರಿಗಳು, ಬಲದಂಡೆ ನಾಲೆಯ 2 ಶಾಖಾ ನಾಲೆಗಳ ಕಾಮಾರಿಗಳು ಹಾಗೂ ಹೊಲಗಾಲುವೆ ಕಾಮಗಾರಿಗಳು ಪೂರ್ಣಗೊಂಡಿವೆ. ಈ ಯೋಜನೆಯು ಭೌತಿಕವಾಗಿ ಪೂರ್ಣಗೊಂಡಿರುತ್ತದೆ.

ಯೋಜಿತ 16314 ಎಕರೆ (6602 ಹೆ) ಅಚ್ಚುಕಟ್ಟು ಪ್ರದೇಶದ ಎದುರಾಗಿ ಈ ಯೋಜನೆಯ ಪ್ರಾರಂಭದಿಂದ ಮಾರ್ಚ್ 2018ರ ಅಂತ್ಯದವರೆಗೆ 15352 ಎಕರೆ (6213 ಹೆ.) ಪ್ರದೇಶಕ್ಕೆ (324 ಹೆ ಸ್ಥಿರ ಅಚುಕಟ್ಟು ಸೇರಿದಂತೆ) ಅರೆ ನೀರಾವರಿ ಯೋಜನೆಯಡಿ ನೀರಾವರಿ ಸೌಲಭ್ಯ ಕಲ್ಪಿಸಲಾಗಿದೆ. ಉಳಿದ 962 ಎಕರೆ (389 ಹೆ) ಅಚ್ಚುಕಟ್ಟು ಪ್ರದೇಶವು ಗ್ರಾಮದ ಪರಿಮಿತಿ ಹಾಗೂ ಎತ್ತರದ ಪ್ರದೇಶಗಳಿಂದ ಕೂಡಿರುವುದರಿಂದ ನೀರಾವರಿ ಸೌಲಭ್ಯ ಕಲ್ಪಿಸಲು ಸಾಧ್ಯವಾಗಿರುವುದಿಲ್ಲ.

ಈ ಯೋಜನೆಗೆ 2018–19 ನೇ ಸಾಲಿಗೆ ರೂ. 1.13 ಕೋಟಿ ಅನುದಾನ ಒದಗಿಸಲಾಗಿದ್ದು, ಮಾರ್ಚ್–2019 ರ ಅಂತ್ಯದವರೆಗೆ ರೂ. 0.12 ಕೋಟಿ ವೆಚ್ಚ ಮಾಡಲಾಗಿದೆ. ಈ ಯೋಜನೆಯ ಪ್ರಾರಂಭದಿಂದ ಮಾರ್ಚ್–2019 ಅಂತ್ಯದವರೆಗೆ ಮಾಡಲಾದ ಕ್ರೋಢಿಕೃತ ವೆಚ್ಚ ರೂ. 238.56 ಕೋಟಿಗಳಾಗಿರುತ್ತದೆ.

ಇಗ್ಗಲೂರು ಬ್ಯಾರೇಜ್ ಯೋಜನೆ

ಇಗ್ಗಲೂರು ಬ್ಯಾರೇಜನ್ನು ರಾಮನಗರ ಜಿಲ್ಲೆಯ ಚನ್ನಪಟ್ಟಣ ತಾಲ್ಲೂಕಿನ ಇಗ್ಗಲೂರು ಗ್ರಾಮದಲ್ಲಿ ಕಾವೇರಿ ನದಿಯ ಉಪನದಿಯಾದ ಶಿಂಷಾ ನದಿಗೆ ಅಡ್ಡಲಾಗಿ ನಿರ್ಮಿಸಲಾಗಿದೆ. ಈ ಯೋಜನೆಯ ಮೂಲ ಅಂದಾಜು ರೂ.3.42 ಕೋಟಿಗಳಾಗಿದ್ದು, ಇದಕ್ಕೆ ಸರ್ಕಾರ ಆದೇಶ ಸಂ. ಪಿ.ಡಬ್ಲ್ಯು.ಡಿ/17/ಜಿ.ಐ.ಪಿ./71 ದಿ: 06.12.1977 ರಲ್ಲಿ ಆಡಳಿತಾತ್ಮಕ ಅನುಮೋದನೆ ದೊರೆತಿರುತ್ತದೆ. ಕಾಮಗಾರಿಯನ್ನು 1977 ರಲ್ಲಿ ಪ್ರಾರಂಭಿಸಲಾಗಿದೆ. ಯೋಜನೆಯ ಪರಿಷ್ಕೃತ ಅಂದಾಜು ಮೊತ್ತ ರೂ.10.75 ಕೋಟಿಗಳಿಗೆ ಸರ್ಕಾರದ ಆದೇಶ ಸಂ. ಪಿ.ಡಬ್ಲ್ಯು.ಡಿ/33/ ಎಂ.ಎಂ.ಹೆಚ್/86 ದಿ: 23.12.1986 ರಲ್ಲಿ ಆಡಳಿತಾತ್ಮಕ ಅನುಮೋದನೆ ದೊರೆತಿರುತ್ತದೆ.

ಈ ಯೋಜನೆಯು ಹರಿ ನೀರಾವರಿ ಹಾಗೂ ಏತ ನೀರಾವರಿಯನ್ನು ಹೊಂದಿದೆ. ನೀರಿನ ಯೋಜಿತ ಬಳಕೆಯು 1.80 ಟಿಎಂಸಿ ಇದ್ದು, ಈ ಯೋಜನೆ ಅಡಿಯಲ್ಲಿ ಹರಿ ನೀರಾವರಿಯಿಂದ 1624ಎಕರೆ (657.22 ಹೆ) ಹಾಗೂ ಏತ ನೀರಾವರಿಯಿಂದ 8908 ಎಕರೆ (3605 ಹೆ) ಪ್ರದೇಶಕ್ಕೆ ಒಟ್ಟಾರೆ 10,532 ಎಕರೆ (4,263ಹೆ) ಯೋಜಿತ ಅಚ್ಚುಕಟ್ಟು ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲು ಉದ್ದೇಶಿಸಲಾಗಿದೆ. ಇದರಿಂದ ರಾಮನಗರ ಜಿಲ್ಲೆಯ ಚನ್ನಪಟ್ಟಣ ತಾಲ್ಲೂಕು ಹಾಗೂ ಮಂಡ್ಯ ಜಿಲ್ಲೆಯ ಮದ್ದೂರು ಮತ್ತು ಮಳವಳ್ಳಿ ತಾಲ್ಲೂಕುಗಳು ನೀರಾವರಿ ಸೌಲಭ್ಯ ಪಡೆಯಲಿವೆ.

ಹರಿ ನೀರಾವರಿ: ಬ್ಯಾರೇಜ್ ಮತ್ತು ಪೂರಕ ಕಾಮಗಾರಿಗಳು ಪೂರ್ಣಗೊಂಡಿವೆ. ಎಡದಂಡೆ ನಾಲೆಯ ಉದ್ದವು 35.00 ಕಿ.ಮೀ. ಇದ್ದು, ಈ ನಾಲೆಯ ಕಾಮಗಾರಿಗಳು ಪೂರ್ಣಗೊಂಡಿದ್ದು, 3,650 ಎಕರೆ (1,477 ಹೆ) ಅಚ್ಚುಕಟ್ಟು ಪ್ರದೇಶಕ್ಕೆ ನೀರನ್ನು ಒದಗಿಸಲಾಗಿದೆ.

ಏತ ನೀರಾವರಿ ಯೋಜನೆಗಳು: ಏತ ನೀರಾವರಿ ಅಡಿಯಲ್ಲಿ 8 ಏತ ನೀರಾವರಿ ಯೋಜನೆಗಳು ಬರುತ್ತಿದ್ದು, ಇವುಗಳಲ್ಲಿ 6 ಏತ ನೀರಾವರಿ ಯೋಜನೆಗಳು ಪಾಯಿಂಟ್–ಎ, ಪಾಯಿಂಟ್–ಬಿ, ಪಾಯಿಂಟ್–ಸಿ, ಪಾಯಿಂಟ್–ಸಿ–2, ಹುಲಿಕೆರೆ ಮತ್ತು ಗರಕಳ್ಳಿ ಏತ ನೀರಾವರಿ ಯೋಜನೆಗಳಲ್ಲಿ ನೀರನ್ನು ಬ್ಯಾರೇಜ್‌ನ ಹಿನ್ನೀರಿನಿಂದ ಎತ್ತಲು ಹಾಗೂ 1 ಯೋಜನೆ ಪಾಯಿಂಟ್–ಡಿ ಏತ ನೀರಾವರಿ ಯೋಜನೆಯಡಿಯಲ್ಲಿ ನಾಲೆಯಿಂದ ನೀರನ್ನು ಎತ್ತಿ 8908 ಎಕರೆ (3605 ಹೆ) ಅಚ್ಚುಕಟ್ಟು ಪ್ರದೇಶಕ್ಕೆ ನೀರಾವರಿ ಸೌಲಭ್ಯ ಒದಗಿಸಲು ಯೋಜಿಸಿದೆ.

ಉಳಿದ ನಿಟ್ಟೂರು ಯೋಜನೆಯನ್ನು ಶಿಂಷಾ ನದಿಯಿಂದ ನೀರನ್ನು ಎತ್ತಿ ಕೆರೆಗಳನ್ನು ತುಂಬಿಸಲು ಯೋಜಿಸಿದೆ.

ಏತ ನೀರಾವರಿ ಯೋಜನೆಯ ಕಾಮಗಾರಿಗಳು ಪೂರ್ಣಗೊಂಡಿದ್ದು, ಇವುಗಳ ವಿವರ ಕೆಳಗಿನಂತಿವೆ:

ಕ್ರ. ಸಂ.	ಏತ ನೀರಾವರಿ ಯೋಜನೆಯ ಹೆಸರು	ಯೋಜಿತ ಅಚ್ಚುಕಟ್ಟು ಎಕರೆಗಳಲ್ಲಿ (ಹೆ)	ಸಾಧಿಸಿರುವ ಅಚ್ಚುಕಟ್ಟು. ಎಕರೆಗಳಲ್ಲಿ (ಹೆ)
1	ಪಾಯಿಂಟ್–ಎ	2,243 (908)	2,204 (892)
2	ಪಾಯಿಂಟ್–ಬಿ	ಪಾಯಂಟ್ – ಎ ಭಾದಿತ ಅಚ್ಚುಕಟ್ಟು	
3	ಪಾಯಿಂಟ್–ಸಿ	1,255 (508)	1,255 (508)
4	ಪಾಯಿಂಟ್–ಸಿ–2	1,000 (405)	1,000 (405)
5	ಪಾಯಿಂಟ್–ಡಿ	1,890 (765)	1,890 (765)
6	ಹುಲಿಕೆರೆ	494 (200)	371 (150)
7	ಗರಕಹಳ್ಳಿ	1863 (754)	1863 (754)
8	ನಿಟ್ಟೂರು	163 (66)	163 (66)
	ಒಟ್ಟು	**8908**	**8746**

ಯೋಜಿತ 10,532 ಎಕರೆ (4,263 ಹೆ) ಅಚ್ಚುಕಟ್ಟು ಪ್ರದೇಶದ ಎದುರಾಗಿ ಈ ಯೋಜನೆಯ ಪ್ರಾರಂಭದಿಂದ ಮಾರ್ಚ್ 2019 ರ ಅಂತ್ಯದವರೆಗೆ 10,370 ಎಕರೆ (4,196 ಹೆ.) ಪ್ರದೇಶಕ್ಕೆ ಹರಿ ನೀರಾವರಿ ಹಾಗೂ ಏತ ನೀರಾವರಿಯಿಂದ ನೀರಾವರಿ ಸೌಲಭ್ಯ ಕಲ್ಪಿಸಲಾಗಿದೆ. ಉಳಿದ 162 ಎಕರೆ (67 ಹೆ.) ಅಚ್ಚುಕಟ್ಟು ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲು ಸಾಧ್ಯವಾಗಿರುವುದಿಲ್ಲ. ಈ ಯೋಜನೆಯು ಭೌತಿಕವಾಗಿ ಪೂರ್ಣಗೊಂಡಿದೆ.

ಈ ಯೋಜನೆಗೆ 2018–19 ನೇ ಸಾಲಿಗೆ ರೂ. 2.59 ಕೋಟಿ ಅನುದಾನ ಒದಗಿಸಲಾಗಿದ್ದು, ಮಾರ್ಚ್–2019 ರ ಅಂತ್ಯದವರೆಗೆ ರೂ. 3.04 ಕೋಟಿ ವೆಚ್ಚ ಮಾಡಲಾಗಿದೆ. ಈ ಯೋಜನೆಯ ಪ್ರಾರಂಭದಿಂದ ಮಾರ್ಚ್–2019 ಅಂತ್ಯದವರೆಗೆ ಮಾಡಲಾದ ಕ್ರೋಢಿಕೃತ ವೆಚ್ಚ ರೂ. 98.68 ಕೋಟಿಗಳಾಗಿರುತ್ತದೆ.

ಮಂಚನಬೆಲೆ ಯೋಜನೆ

ಮಂಚನಬೆಲೆ ಜಲಾಶಯವನ್ನು ರಾಮನಗರ ಜಿಲ್ಲೆಯ ಮಾಗಡಿ ತಾಲ್ಲೂಕಿನ ಮಂಚನಬೆಲೆ ಗ್ರಾಮದ ಸಮೀಪದಲ್ಲಿ ಅರ್ಕಾವತಿ ನದಿಗೆ ಅಡ್ಡಲಾಗಿ ನಿರ್ಮಿಸಲಾಗಿದೆ. ಈ ಯೋಜನೆಯ ಮೂಲ ಅಂದಾಜು ಮೊತ್ತವಾದ ರೂ.2.37 ಕೋಟಿಗಳಿಗೆ ಸರ್ಕಾರದ ಆದೇಶ ಸಂ. ಪಿ.ಡಬ್ಲ್ಯು.ಡಿ/12/ ಜಿ.ಐ.ಪಿ/64 ದಿ: 30.09.69 ರಲ್ಲಿ ಆಡಳಿತಾತ್ಮಕ ಅನುಮೋದನೆ ದೊರೆತಿರುತ್ತದೆ. ಈ ಯೋಜನೆಯ ಕಾಮಗಾರಿಯನ್ನು 1969 ರಲ್ಲಿ ಪ್ರಾರಂಭಿಸಲಾಗಿದೆ.ಯೋಜನೆಯ ಇತ್ತೀಚಿನ ಪರಿಷ್ಕೃತ ಅಂದಾಜು ಮೊತ್ತ ರೂ.18.50 ಕೋಟಿಗೆ ಸರ್ಕಾರದ ಆದೇಶ ಸಂ. ಪಿ.ಡಬ್ಲ್ಯು.ಡಿ/14/ಎಂ.ಎಂ.ಕೆ, ದಿ: 25.08.86 ರಲ್ಲಿ ಆಡಳಿತಾತ್ಮಕ ಅನುಮೋದನೆ ದೊರೆತಿರುತ್ತದೆ.

ಈ ಯೋಜನೆಯಡಿಯಲ್ಲಿ 0.80 ಟಿಎಂಸಿ ನೀರನ್ನು ಬಳಸಿಕೊಂಡು 6,012 ಎಕರೆ (2,433 ಹೆ) ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲು ಯೋಜಿಸಲಾಗಿದೆ.

ಈ ಯೋಜನೆಯಿಂದ ರಾಮನಗರ ಜಿಲ್ಲೆಯ ಮಾಗಡಿ ಮತ್ತು ರಾಮನಗರ ತಾಲ್ಲೂಕುಗಳು ನೀರಾವರಿ ಸೌಲಭ್ಯ ಪಡೆಯಲಿವೆ.

ಈ ಯೋಜನೆಯ ಅಣೆಕಟ್ಟು ಮತ್ತು ಪೂರಕ ಕಾಮಗಾರಿಗಳು ಪೂರ್ಣಗೊಂಡಿವೆ. ಎಡದಂಡೆ ನಾಲೆಯ ಉದ್ದ 35.00 ಕಿ.ಮೀ. ಹಾಗೂ ಬಲದಂಡೆ ನಾಲೆಯ ಉದ್ದ 36.00 ಕಿ.ಮೀ. ಇದ್ದು, ಈ ನಾಲೆಗಳಿಂದ ಕ್ರಮವಾಗಿ 2,768 ಎಕರೆ (1,120 ಹೆ) ಹಾಗೂ 3,244 ಎಕರೆ (1,313 ಹೆ) ಒಟ್ಟಾರೆಯಾಗಿ 6,012 ಎಕರೆ (2,433 ಹೆ) ಅಚ್ಚುಕಟ್ಟು ಪ್ರದೇಶಕ್ಕೆ ನೀರಾವರಿ ಸೌಲಭ್ಯವನ್ನು ಒದಗಿಸಲು ಯೋಜಿಸಲಾಗಿದೆ.

ಈ ಯೋಜನೆಯ ಎಡದಂಡೆ ಮತ್ತು ಬಲದಂಡೆ ನಾಲೆಯ ಕಾಮಗಾರಿಗಳು ಪೂರ್ಣಗೊಂಡಿವೆ. ಈ ಯೋಜನೆಯು ಭೌತಿಕವಾಗಿ ಪೂರ್ಣಗೊಂಡಿರುತ್ತದೆ. ಈ ಯೋಜನೆಯ ಪ್ರಾರಂಭದಿಂದ ಮಾರ್ಚ್ 2019 ರ ಅಂತ್ಯದವರೆಗೆ 6009 ಎಕರೆ (2432 ಹೆ.) ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲಾಗಿದೆ.

ಈ ಯೋಜನೆಗೆ 2018–19 ನೇ ಸಾಲಿಗೆ ರೂ. 2.72 ಕೋಟಿ ಅನುದಾನ ಒದಗಿಸಲಾಗಿದ್ದು, ಮಾರ್ಚ್–2019 ರ ಅಂತ್ಯದವರೆಗೆ ರೂ. 3.94 ಕೋಟಿ ವೆಚ್ಚ ಮಾಡಲಾಗಿದೆ. ಈ ಯೋಜನೆಯ ಪ್ರಾರಂಭದಿಂದ ಮಾರ್ಚ್–2019 ಅಂತ್ಯದವರೆಗೆ ಮಾಡಲಾದ ಕ್ರೋಢಿಕೃತ ವೆಚ್ಚ ರೂ. 106.59 ಕೋಟಿಗಳಾಗಿರುತ್ತದೆ.

ಕೃಷ್ಣರಾಜಸಾಗರ ಆಧುನೀಕರಣ

ಕೃಷ್ಣರಾಜಸಾಗರ ಜಲಾಶಯವನ್ನು ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ತಾಲ್ಲೂಕಿನ ಕನ್ನಂಬಾಡಿ ಗ್ರಾಮದ ಸಮೀಪ ಕಾವೇರಿ ನದಿಗೆ ಅಡ್ಡಲಾಗಿ ನಿರ್ಮಿಸಲಾಗಿದೆ.ಈ ಯೋಜನೆಯ ಎರಡೂ ದಂಡೆಯ ಕಾಲುವೆಗಳಿಂದ ಮಂಡ್ಯ ಮತ್ತು ಮೈಸೂರು ಜಿಲ್ಲೆಯ 196000 ಎಕರೆ (79,312 ಹೆ) ಜಮೀನಿಗೆ ನೀರಾವರಿ ಸೌಲಭ್ಯ ಒದಗಿಸಲಾಗಿದೆ. ಈ ಯೋಜನೆಯ ಎಡದಂಡೆ ಮೇಲ್ಮಟ್ಟದ ನಾಲೆಯಾದ ವಿಶ್ವೇಶ್ವರಯ್ಯ ನಾಲೆಯಿಂದ 1,20,000 ಎಕರೆ (48,564 ಹೆ) ಪ್ರದೇಶಕ್ಕೆ ನೀರಾವರಿ ಸೌಲಭ್ಯ ಒದಗಿಸಲು ಮೂಲ ಯೋಜನೆಯಲ್ಲಿ ಉದ್ದೇಶಿಸಲಾಗಿತ್ತು. ಆದರೆ, ಈ ಯೋಜನೆಯ ನೀರಾವರಿ ಪ್ರದೇಶದ ಅಡಿಯಲ್ಲಿ ಹೊಸ ಪಿಕ್‌ಅಪ್ ನಾಲೆಗಳನ್ನು ನಿರ್ಮಿಸಿದ್ದರಿಂದ, ಎತ್ತರದ ಜಮೀನುಗಳನ್ನು

ಸಮತಟ್ಟು ಮಾಡಿದ್ದರಿಂದ ಹಾಗೂ ಉಪನಾಲೆಗಳನ್ನು ವಿಸ್ತರಿಸಿದ್ದರಿಂದ ವಿ.ಸಿ. ನಾಲೆಯ ಅಚ್ಚುಕಟ್ಟು ಪ್ರದೇಶವು ವಿಸ್ತಾರವಾಗಿರುತ್ತದೆ. ಇದರಿಂದಾಗಿ ವಿಶ್ವೇಶ್ವರಯ್ಯ ನಾಲೆಯ ವಿವಿಧ ಶಾಖೆಗಳಲ್ಲಿ ಹೆಚ್ಚುವರಿಯಾಗಿ ನೀರಿನ ಅವಶ್ಯಕತೆ ಉಂಟಾಗಿ ನೀರಾವರಿ ವಿತರಣಾ ವ್ಯವಸ್ಥೆಯ ಮೇಲೆ ಪ್ರತಿಕೂಲ ಪರಿಣಾಮ ಉಂಟಾಗಿ, ನಾಲೆಯ ಕೊನೆಯ ಭಾಗದ ಅಚ್ಚುಕಟ್ಟಿಗೆ ಸಮರ್ಪಕವಾಗಿ ನೀರಿನ ವಿತರಣೆ ಆಗುತ್ತಿರಲಿಲ್ಲ. ಆದರೆ ನಾಲೆಯಲ್ಲಿ ಹೆಚ್ಚಿನ ನೀರನ್ನು ಹರಿಸಲು ನಾಲೆಯಲ್ಲಿ ಸಾಮರ್ಥ್ಯ ಇರಲಿಲ್ಲ. ಅಲ್ಲದೇ ನಾಲೆಯ 2 ಮುಖ್ಯ ಮೇಲ್ಗಾಲುವೆಗಳ ಮುಖಾಂತರ 67 ಕ್ಯೂಮೆಕ್ಸ್‌ಗಿಂತ (2366 ಕ್ಯೂಸೆಕ್ಸ್) ಹೆಚ್ಚಿನ ನೀರನ್ನು ಹರಿಸಲೂ ಸಹ ಸಾಧ್ಯವಿರಲಿಲ್ಲ. ಇದು ಹಳೆಯ ಅಚ್ಚುಕಟ್ಟು ಪ್ರದೇಶವಾಗಿದ್ದು, ನೀರಿನ ಬಳಕೆ ಹೆಚ್ಚಿದ್ದು, ಅದನ್ನು ಮಿತಿಗೊಳಿಸಿ ನೀರನ್ನು ಸದುಪಯೋಗಪಡಿಸಲು ಹಾಗೂ ಹೊಸದಾಗಿ 5,250 ಎಕರೆ (2,125 ಹೆ) ಪ್ರದೇಶಕ್ಕೆ ನೀರಾವರಿ ಸಾಮರ್ಥ್ಯ ಕಲ್ಪಿಸಲು ಕೆ.ಆರ್.ಎಸ್ ಆಧುನೀಕರಣವನ್ನು ಹಮ್ಮಿಕೊಳ್ಳಲಾಗಿದೆ.

ಕೆ.ಆರ್.ಎಸ್ ಆಧುನೀಕರಣ ಯೋಜನೆಯ ಮೂಲ ಅಂದಾಜು ರೂ. 14.80 ಕೋಟಿಗಳಾಗಿದ್ದು, ಸರ್ಕಾರದ ಆದೇಶ ಸಂ. ಪಿ.ಡಬ್ಲ್ಯು.ಡಿ/ 30/ ಎಂ.ಕೆ.ಎಸ್/ 79 ದಿ: 23.04.1979 ರಲ್ಲಿ ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿದೆ. ಆಧುನೀಕರಣ ಕಾಮಗಾರಿಯನ್ನು 1987 ರಲ್ಲಿ ಪ್ರಾರಂಭಿಸಲಾಗಿದೆ. ಯೋಜನೆಯ ಪರಿಷ್ಕೃತ ಅಂದಾಜು ಮೊತ್ತ ರೂ. 55.00 ಕೋಟಿಗಳಿಗೆ ಸರ್ಕಾರದ ಆದೇಶ ಸಂ. ಪಿ.ಡಬ್ಲ್ಯು.ಡಿ/ 13/ ಎಂ.ಎಂ.ಜಿ/ 86 ದಿ: 06.03.1987 ರಲ್ಲಿ ಆಡಳಿತಾತ್ಮಕ ಅನುಮೋದನೆ ದೊರೆತಿರುತ್ತದೆ.

ಯೋಜನೆಯ ಆಧುನೀಕರಣದ ಕಾಮಗಾರಿಗಳು ಪೂರ್ಣಗೊಂಡಿವೆ. ಈ ಯೋಜನೆಯಿಂದ ಹೆಚ್ಚುವರಿ 5,250 ಎಕರೆ (2,125 ಹೆ) ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲಾಗಿದೆ.

ಈ ಯೋಜನೆಗೆ 2018–19 ನೇ ಸಾಲಿಗೆ ರೂ. 14.85 ಕೋಟಿ ಅನುದಾನ ಒದಗಿಸಲಾಗಿದ್ದು, ಮಾರ್ಚ್–2019 ರ ಅಂತ್ಯದವರೆಗೆ ರೂ. 13.07 ಕೋಟಿ ವೆಚ್ಚ ಮಾಡಲಾಗಿದೆ. ಈ ಯೋಜನೆಯ ಪ್ರಾರಂಭದಿಂದ ಮಾರ್ಚ್–2019 ಅಂತ್ಯದವರೆಗೆ ಮಾಡಲಾದ ಕ್ರೋಢಿಕೃತ ವೆಚ್ಚ ರೂ. 524.95 ಕೋಟಿಗಳಾಗಿರುತ್ತದೆ.

ಹುಲಿಕೆರೆ ಸುರಂಗ ಯೋಜನೆ.

ಕೃಷ್ಣರಾಜಸಾಗರ ಜಲಾಶಯದ ಎಡದಂಡೆಯಿಂದ ಪ್ರಾರಂಭವಾಗುವ ವಿಶ್ವೇಶ್ವರಯ್ಯ ನಾಲೆಯು 45.60 ಕಿ.ಮೀ ಉದ್ದ ಮತ್ತು 2998 ಕ್ಯೂಸೆಕ್ಸ್ ನೀರಿನ ಹರಿವಿನ ಸಾಮರ್ಥ್ಯ ಹೊಂದಿದ್ದು, ಈ ನಾಲೆಯ ಸರಪಳಿ 40.700 ಕಿ.ಮೀ ನಿಂದ 43.50 ಕಿ.ಮೀ ವರೆಗೆ ಮಂಡ್ಯ ತಾಲ್ಲೂಕು ಹುಲಿಕೆರೆ ಗ್ರಾಮದ ಬಳಿ 2.80 ಕಿ.ಮೀ ಉದ್ದಕ್ಕೆ ಸುರಂಗದ ಮೂಲಕ ಹಾದು ಹೋಗುತ್ತದೆ. ಸುರಂಗದ ನಂತರ ವಿಶ್ವೇಶ್ವರಯ್ಯ ನಾಲೆಯು ಎರಡು ಕವಲುಗಳಾಗಿದ್ದು ಅವುಗಳನ್ನು ಕಾವೇರಿ ಶಾಖಾ ನಾಲೆ ಮತ್ತು ಮದ್ದೂರು ಶಾಖಾ ನಾಲೆಗಳೆಂದು ಹೆಸರಿಸಲಾಗಿದೆ. ಈ ಸುರಂಗದ ನಂತರ ಸುಮಾರು 1,85,000 ಎಕರೆ ಅಚ್ಚುಕಟ್ಟಿಗೆ ನೀರನ್ನು ಒದಗಿಸಲಾಗುತ್ತಿದೆ.

2.80 ಕಿ.ಮೀ ಉದ್ದವಿರುವ ಹುಲಿಕೆರೆ ಸುರಂಗವನ್ನು 1931 ರಲ್ಲಿ ನಿರ್ಮಿಸಲಾಗಿದ್ದು, ನಿರ್ಮಾಣದ ಸಮಯದಲ್ಲಿ ಸುರಂಗದ ಪೂರ್ಣ ಉದ್ದಕ್ಕೂ ಎರಡು ಪಾರ್ಶ್ವಗಳಿಗೆ(ಖಜಜಿ) ಖಚಿಟಿಜಡಟ ಖಣಘಟಜ ಟಚಿಡಟಿಡಿಥಿ ತಿಣಿ ಖಣಡಿಞ ಟಡಿಣಚಿಡಿ ಚಿಟಿಜ ಠಿಟಚಿಣಜಡಿಟಿರ ಹಾಗೂ ಸುಮಾರು 800 ಮೀ. ಉದ್ದಕ್ಕೆ ಇಥಣ ಜಟಿಜ ಚಿಡಿಛಿ ಟಟಿಟಿರ ತಿಣಿ ಖಚಿಟಿಜಡಟ ಖಣಘಟಜ ಟಚಿಡಟಿಡಿಥಿ ತಿಣಿ ಖಣಡಿಞ ಟಡಿಣಚಿಡಿ ಚಿಟಿಜ ಠಿಟಚಿಣಜಡಿಟಿರ ಮಾಡಲಾಗಿರುತ್ತದೆ. ವಿಶ್ವೇಶ್ವರಯ್ಯ ನಾಲೆಯ ಹುಲಿಕೆರೆ ಸುರಂಗದ ಪುನಃಶ್ಚೇತನ ಕಾಮಗಾರಿಯ ರೂ. 9.50 ಕೋಟಿಗಳ ಅಂದಾಜಿಗೆ ಸರ್ಕಾರದ ಆದೇಶ ಸಂ: ಜಸಂಇ 42 ಎಂಎಂಕೆ 2013, ದಿ:19.02.2014 ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿರುತ್ತದೆ. 2014–15 ನೇ ಸಾಲಿನಲ್ಲಿ ಸದರಿ ಕಾಮಗಾರಿಯನ್ನು ಸುರಕ್ಷಿತ ಮಟ್ಟಕ್ಕೆ ತಂದು ನಾಲೆಯಲ್ಲಿ ನೀರನ್ನು ಹರಿಸಲಾಗಿರುತ್ತದೆ. ಸದರಿ ಕಾಮಗಾರಿಯು ಭೌತಿಕವಾಗಿ ಪೂರ್ಣಗೊಂಡಿದೆ.

ಈ ಯೋಜನೆಗೆ 2018–19 ನೇ ಸಾಲಿಗೆ ಅನುದಾನವನ್ನು ಒದಗಿಸಲಾಗಿರುವುದಿಲ್ಲ, ಮಾರ್ಚ್–2019 ರ ಅಂತ್ಯದವರೆಗೆ ಯಾವುದೇ ವೆಚ್ಚವಾಗಿರುವುದಿಲ್ಲ. ಈ ಯೋಜನೆಯ ಪ್ರಾರಂಭದಿಂದ ಮಾರ್ಚ್–2019 ಅಂತ್ಯದವರೆಗೆ ಮಾಡಲಾದ ಕ್ರೋಢಿಕೃತ ವೆಚ್ಚ ರೂ. 13.71 ಕೋಟಿಗಳಾಗಿರುತ್ತದೆ.

ಮೇಕೆದಾಟುವಿನ ಮೇಲ್ಭಾಗದಲ್ಲಿ ಕಾವೇರಿ ನದಿಗೆ ಅಡ್ಡಲಾಗಿ ಸಮತೋಲನ / ಶೇಖರಣಾ ಜಲಾಶಯಗಳನ್ನು ನಿರ್ಮಿಸುವ ಕಾಮಗಾರಿ.

ಮೇಕೆದಾಟುವಿನ ಮೇಲ್ಭಾಗದಲ್ಲಿ ಕಾವೇರಿ ನದಿಗೆ ಅಡ್ಡಲಾಗಿ ಸಮತೋಲನ / ಶೇಖರಣಾ ಜಲಾಶಯವನ್ನು ನಿರ್ಮಿಸಲು ರೂ.5912.00 ಕೋಟಿ ಮೊತ್ತದ ಡಿ.ಪಿ.ಆರ್ ಪ್ರಸ್ತಾವನೆಗೆ ಸರ್ಕಾರದ ಆದೇಶ ಸಂಖ್ಯೆ: ಜಸಂಇ 136 ಎಂಎಂಕೆ 2013 ಬೆಂಗಳೂರು ದಿನಾಂಕ 13.03.2017 ರಂದು ತಾತ್ವಿಕ ಅನುಮೋದನೆಯನ್ನು ನೀಡಲಾಗಿದ್ದು, ಯೋಜನೆಯ ಪೂರ್ವ ಸಧ್ಯಾತ ವರದಿಯನ್ನು ದಿ:04.08.2018 ರಂದು ಅನುಮೋದನೆ ಕೋರಿ ಕೇಂದ್ರ ಜಲಾ ಆಯೋಗಕ್ಕೆ ಸಲ್ಲಿಸಲಾಗಿದ್ದು, ಕೇಂದ್ರ ಜಲಾ ಆಯೋಗವು ದಿ:22.11.2018 ರಂದು ಸದಿರಿ ಯೋಜನೆಯ ವಿವರವಾದ ವರದಿಯನ್ನು ತಯಾರಿಸಲು ಅನುಮತಿ ನೀಡಿರುತ್ತಾದೆ. ಅದರಂತೆ, ಸದರಿ ಯೋಜನೆಯ ರೂ.9000.00 ಕೋಟಿ ಮೊತ್ತದ ವಿವರವಾದ ಯೋಜನಾ ವರದಿಯನ್ನು ದಿ:18.01.2019 ರಂದು ಸರ್ಕಾರದಿಂದ ಕೇಂದ್ರ ಜಲಾ ಆಯೋಗ, ನವದೆಹಲಿ ಗೆ ಅನುಮೋದನೆ ಕೋರಿ ಸಲ್ಲಿಸಲಾಗಿರುತ್ತದೆ.

ಈ ಯೋಜನೆಗೆ 2018–19 ನೇ ಸಾಲಿಗೆ ರೂ. 2.00 ಕೋಟಿ ಅನುದಾನ ಒದಗಿಸಲಾಗಿದ್ದು, ಮಾರ್ಚ್–2019 ರ ಅಂತ್ಯದವರೆಗೆ ರೂ. 1.56 ಕೋಟಿ ವೆಚ್ಚ ಮಾಡಲಾಗಿದೆ. ಈ ಯೋಜನೆಯ ಪ್ರಾರಂಭದಿಂದ ಮಾರ್ಚ್–2019 ಅಂತ್ಯದವರೆಗೆ ಮಾಡಲಾದ ಕ್ರೋಢಿಕೃತ ವೆಚ್ಚ ರೂ. 3.62 ಕೋಟಿಗಳಾಗಿರುತ್ತದೆ.

ನಂಜಾಪುರ ಏತ ನೀರಾವರಿ ಯೋಜನೆ

ನಂಜಾಪುರ ಏತ ನೀರಾವರಿ ಯೋಜನೆಯ ಅಡಿಯಲ್ಲಿ ಮೈಸೂರು ಜಿಲ್ಲೆಯ ಟಿ. ನರಸೀಪುರ ತಾಲ್ಲೂಕಿನ ಬನ್ನೂರಿನ ಸಮೀಪ ಕಾವೇರಿ ನದಿಯಿಂದ 119 ಕ್ಯೂಸೆಕ್ಸ್ ನೀರನ್ನು ಎತ್ತಿ ನಂಜಾಪುರ ಗ್ರಾಮದ ಹತ್ತಿರ ವಿಶ್ವೇಶ್ವರಯ್ಯ ನಾಲೆಯ ತುರುಗನೂರು ಶಾಖೆಗೆ ಹರಿಸಿ, ಕೊನೆಯ ಭಾಗದ ವಿಸ್ತೃತ ನಾಲೆಯ 10,000 ಎಕರೆ (4,049 ಹೆ.)ಅಚ್ಚುಕಟ್ಟು ಪ್ರದೇಶಕ್ಕೆ ನೀರೊದಗಿಸಲು ಉದ್ದೇಶಿಸಲಾಗಿದೆ.ಈ ಯೋಜನೆಯು ಭಾದಿತ ಅಚ್ಚುಕಟ್ಟು – 2,000 ಎಕರೆ (809 ಹೆ.)ಮತ್ತು ಹೊಸ ಅಚ್ಚುಕಟ್ಟು – 8,000 ಎಕರೆ (3,237 ಹೆ.)ಗಳನ್ನು ಒಳಗೊಂಡಿರುತ್ತದೆ.

ಈ ಯೋಜನೆಯ ಮೂಲ ಅಂದಾಜು ರೂ.28.40 ಕೋಟಿಗಳಾಗಿದ್ದು, ಇದಕ್ಕೆ ಸರ್ಕಾರಿಆದೇಶ ಸಂ. ಪಿ.ಡಬ್ಲ್ಯು.ಡಿ/197/ಎಂ.ಎಂ.ಕೆ/1996 ದಿ: 27.05.1997 ರಲ್ಲಿ ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿದೆ. ಯೋಜನೆಯ ಅಂದಾಜು ಮೊತ್ತ ರೂ.31.60 ಕೋಟಿಗಳಿಗೆ ಸಿ.ಇ.ಆರ್ ಸಂ:119/1998–99 ರಲ್ಲಿ ತಾಂತ್ರಿಕ ಮಂಜೂರಾತಿ ನೀಡಲಾಗಿದೆ. ಕಾಮಗಾರಿಯನ್ನು 1999–2000ರಲ್ಲಿ ಪ್ರಾರಂಭಿಸಲಾಗಿದೆ.ಈ ಯೋಜನೆಯಿಂದ ಮೈಸೂರು ಜಿಲ್ಲೆಯ ಟಿ.ನರಸೀಪುರ ಹಾಗೂ ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲ್ಲೂಕುಗಳು ನೀರಾವರಿ ಸೌಲಭ್ಯ ಪಡೆಯಲಿವೆ.

ಈ ಯೋಜನೆಯನ್ನು ದಿನಾಂಕ: 01.03.2009 ರಂದು ಚಾಲನೆಗೊಳಿಸಲಾಗಿದೆ. ಈ ಯೋಜನೆಯು ಭೌತಿಕವಾಗಿ ಪೂರ್ಣಗೊಂಡಿದೆ, ಈ ಯೋಜನೆಯಿಂದ 10,000 ಎಕರೆ (4,049 ಹೆ.)ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲಾಗಿದೆ.

ಈ ಯೋಜನೆಗೆ 2018–19 ನೇ ಸಾಲಿಗೆ ರೂ. 3.05 ಕೋಟಿ ಅನುದಾನ ಒದಗಿಸಲಾಗಿದ್ದು, ಮಾರ್ಚ್–2019 ರ ಅಂತ್ಯದವರೆಗೆ ರೂ. 3.66 ಕೋಟಿ ವೆಚ್ಚ ಮಾಡಲಾಗಿದೆ. ಈ ಯೋಜನೆಯ ಪ್ರಾರಂಭದಿಂದ ಮಾರ್ಚ್–2019 ಅಂತ್ಯದವರೆಗೆ ಮಾಡಲಾದ ಕ್ರೋಢಿಕೃತ ವೆಚ್ಚ ರೂ. 85.64 ಕೋಟಿಗಳಾಗಿರುತ್ತದೆ.

ಬನ್ನಹಳ್ಳಿಹುಂಡಿ ಏತ ನೀರಾವರಿ ಯೋಜನೆ

ಮೈಸೂರು ಜಿಲ್ಲೆ ನಂಜನಗೂಡು ತಾಲ್ಲೂಕಿನ ತಾಯೂರು ಗ್ರಾಮದ ಸಮೀಪವಿರುವ ಕಬಿನಿ ನದಿಯಿಂದ 50 ಕ್ಯೂಸೆಕ್ಸ್ ನೀರನ್ನು ಎತ್ತಿ 4,384 ಎಕರೆ (1,774 ಹೆ) ಪ್ರದೇಶಕ್ಕೆ ಅರೆ ನೀರಾವರಿ ಬೆಳೆಗೆ ನೀರಾವರಿ ಸೌಲಭ್ಯ ಕಲ್ಪಿಸಲು ಯೋಜಿಸಲಾಗಿದೆ. ಈ ಯೋಜನೆಯ ಮೂಲ ಅಂದಾಜು ರೂ.16.25 ಕೋಟಿಗಳಾಗಿದ್ದು, ಇದಕ್ಕೆ ಸರ್ಕಾರಿ ಆದೇಶ ಸಂ.ನೀಇ/272/ಎಂ.ಎಂ.ಕೆ/97 ದಿ:02.02.2001 ರಲ್ಲಿ ಆಡಳಿತಾತ್ಮಕ ಅನುಮೋದನೆ ದೊರೆತಿರುತ್ತದೆ. ಈ ಯೋಜನೆಯಿಂದ ಮೈಸೂರು ಜಿಲ್ಲೆಯ ಟಿ.ನರಸೀಪುರ ಹಾಗೂ ಚಾಮರಾಜನಗರ ಜಿಲ್ಲೆಯ ಚಾಮರಾಜನಗರ ತಾಲ್ಲೂಕುಗಳು ನೀರಾವರಿ ಸೌಲಭ್ಯ ಪಡೆಯಲಿವೆ.

ಈ ಯೋಜನೆಯನ್ನು ಜುಲೈ 2006 ರಲ್ಲಿ ಪ್ರಾರಂಭಿಸಲಾಗಿದ್ದು, ಪ್ರಸ್ತುತ ಈ ಯೋಜನೆಯು ಭೌತಿಕವಾಗಿ ಪೂರ್ಣಗೊಂಡಿದೆ. ಈ ಯೋಜನೆಯಿಂದ 4,384 ಎಕರೆ (1,774 ಹೆ.) ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲಾಗಿದೆ.

ಈ ಯೋಜನೆಗೆ 2018–19 ನೇ ಸಾಲಿಗೆ ರೂ. 0.50 ಕೋಟಿ ಅನುದಾನ ಒದಗಿಸಲಾಗಿದ್ದು, ಮಾರ್ಚ್–2019 ರ ಅಂತ್ಯದವರೆಗೆ ರೂ. 0.23 ಕೋಟಿ ವೆಚ್ಚ ಮಾಡಲಾಗಿದೆ. ಈ ಯೋಜನೆಯ ಪ್ರಾರಂಭದಿಂದ ಮಾರ್ಚ್–2019 ಅಂತ್ಯದವರೆಗೆ ಮಾಡಲಾದ ಕ್ರೋಢಿಕೃತ ವೆಚ್ಚ ರೂ. 26.38 ಕೋಟಿಗಳಾಗಿರುತ್ತದೆ.

ಹೇಮಾವತಿ ಯೋಜನೆ, ಗೊರೂರು

ಹೇಮಾವತಿ ಅಣೆಕಟ್ಟೆಯನ್ನು ಹಾಸನ ಜಿಲ್ಲೆ ಹಾಸನ ತಾಲ್ಲೂಕಿನ ಗೊರೂರು ಗ್ರಾಮದ ಹತ್ತಿರ ಹೇಮಾವತಿ ನದಿಗೆ ಅಡ್ಡಲಾಗಿ ನಿರ್ಮಿಸಲಾಗಿರುತ್ತದೆ. 1967 ರಲ್ಲಿ ಹೇಮಾವತಿ ಯೋಜನೆಯ ಮೂಲ ಅಂದಾಜು ರೂ.16.30 ಕೋಟಿಗಳಿಗೆ ಸರ್ಕಾರದ ಆದೇಶ ಸಂ. ಪಿ.ಡಬ್ಲ್ಯೂ.ಡಿ/1/ಜಿ.ಕೆ.ಹೆಚ್/63, ದಿ:18.09.1967 ರಲ್ಲಿ ಆಡಳಿತಾತ್ಮಕ ಅನುಮೋದನೆ ದೊರೆತಿರುತ್ತದೆ. 2007–08ನೇ ಸಾಲಿನ ಪರಿಷ್ಕೃತ ಅಂದಾಜು ಮೊತ್ತ ರೂ.3877.00 ಕೋಟಿಗಳಿಗೆ ಸರ್ಕಾರದ ಆದೇಶ ಸಂ. ಡಬ್ಲ್ಯೂ.ಆರ್.ಡಿ/46/ ಎನ್.ಹೆಚ್.ಪಿ 2007, ದಿ:30.07.2007 ರಲ್ಲಿ ಆಡಳಿತಾತ್ಮಕ ಅನುಮೋದನೆ ದೊರೆತಿರುತ್ತದೆ. ಈ ಅಂದಾಜು ಹೇಮಾವತಿ ಯೋಜನೆ–ಗೊರೂರಿನ ಅಂದಾಜು ಮೊತ್ತ ರೂ.1751.00 ಕೋಟಿ ಹಾಗೂ ಹೇಮಾವತಿ ನಾಲಾ ವಲಯ, ತುಮಕೂರಿನ ಅಂದಾಜು ಮೊತ್ತವಾದ ರೂ.2126.00 ಕೋಟಿಗಳನ್ನು ಒಳಗೊಂಡಿರುತ್ತದೆ.

ಈ ಯೋಜನೆಯು ಹರಿ ನೀರಾವರಿ ಹಾಗೂ ಏತ ನೀರಾವರಿ ಯೋಜನೆಗಳನ್ನು ಒಳಗೊಂಡಿದೆ.ಈ ಯೋಜನೆ ಅಡಿಯಲ್ಲಿ ಒಟ್ಟು 56.67 ಟಿಎಂಸಿ ನೀರನ್ನು ಬಳಸಿಕೊಳ್ಳಲು ಯೋಜಿಸಲಾಗಿದ್ದು, ಇದರಲ್ಲಿ ಹೇಮಾವತಿ ನಾಲಾ ವಲಯ ತುಮಕೂರಿನ ಯೋಜಿತ 30.99 ಟಿಎಂಸಿ ನೀರು ಒಳಗೊಂಡಿರುತ್ತದೆ. ಹೇಮಾವತಿ ಯೋಜನಾ ವಲಯ, ಗೊರೂರಿಗೆ ಯೋಜಿತ 25.68 ಟಿಎಂಸಿ ನೀರು ಬಳಸಿಕೊಳ್ಳಲು ಲಭ್ಯವಿರುತ್ತದೆ.ಗೊರೂರು ವಲಯದ ವ್ಯಾಪ್ತಿಯಲ್ಲಿ ಹರಿ ನೀರಾವರಿಯಿಂದ 2,71,000 ಎಕರೆ (1,09,672 ಹೆ) ಹಾಗೂ ಏತ ನೀರಾವರಿಯಿಂದ 39,743 ಎಕರೆ (16,165 ಹೆ) ಪ್ರದೇಶಕ್ಕೆ ಒಟ್ಟು 3,10,943 ಎಕರೆ (1,25,837 ಹೆ) ಅಚ್ಚುಕಟ್ಟು ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲು ಯೋಜಿಸಲಾಗಿದ್ದು, ಹರಿ ನೀರಾವರಿಯಿಂದ 271000 ಎಕರೆ (109672 ಹೆ) ಹಾಗೂ ಏತ ನೀರಾವರಿಯಿಂದ 39743 ಎಕರೆ (16165 ಹೆ) ಅಚ್ಚುಕಟ್ಟು ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲು ಉದ್ದೇಶಿಸಲಾಗಿದೆ.ಹಾಸನ ಜಿಲ್ಲೆಯ ಹಾಸನ, ಆಲೂರು, ಅರಕಲಗೂಡು, ಹೊಳೆನರಸೀಪುರ ಮತ್ತು ಚನ್ನರಾಯಪಟ್ಟಣ ತಾಲ್ಲೂಕುಗಳು, ಮಂಡ್ಯ ಜಿಲ್ಲೆಯ ಮಂಡ್ಯ, ಕೆ.ಆರ್.ಪೇಟೆ, ಪಾಂಡವಪುರ, ನಾಗಮಂಗಲ ತಾಲ್ಲೂಕುಗಳು, ಮೈಸೂರು ಜಿಲ್ಲೆಯ ಕೆ.ಆರ್.ನಗರ ಹಾಗೂ ಕೊಡಗು ಜಿಲ್ಲೆಯ ಸೋಮವಾರ ಪೇಟೆ ತಾಲ್ಲೂಕು ಈ ಯೋಜನೆಯಿಂದ ನೀರಾವರಿ ಸೌಲಭ್ಯ ಪಡೆಯಲಿವೆ.

ಈ ಯೋಜನೆಯಡಿ ಬರುವ ನಾಲೆಗಳ ಹಾಗೂ ಕಲ್ಪಿಸಲಾಗುವ ಯೋಜಿತ ಅಚ್ಚುಕಟ್ಟು ವಿವರಗಳು ಈ ಕೆಳಗಿನಂತಿವೆ:

ಕ್ರ.ಸಂ	ನಾಲೆಯ ಹೆಸರು	ನಾಲೆಯ ಉದ್ದ (ಕಿ.ಮೀ. ಗಳಲ್ಲಿ)	ಯೋಜಿತ ಅಚ್ಚುಕಟ್ಟು ಎಕರೆಗಳಲ್ಲಿ (ಹೆ)
		ಹರಿ ನೀರಾವರಿ	
1	ಹೇಮಾವತಿ ಎಡದಂಡೆ ನಾಲೆ	214	195000 (78915)
2	ಹೇಮಾವತಿ ಬಲದಂಡೆ ನಾಲೆ	91 (ಪೂರ್ಣ ಉದ್ದ)	20000 (8094)
3	ಹೇಮಾವತಿ ಬಲಮೇಲ್ದಂಡೆ ನಾಲೆ	97 (ಪೂರ್ಣ ಉದ್ದ)	56000 (22663)
		ಉಪ ಮೊತ್ತ	271000 (109672)
4	ಏತ ನೀರಾವರಿ ಯೋಜನೆ	14 (ಸಂ.)	39943 (16179)
		ಒಟ್ಟು	**310943 (125837)**
	ಪ್ರಸ್ತುತ ಹಂತ: ಅಣೆಕಟ್ಟು ಮತ್ತು ಪೂರಕ ಕಾಮಗಾರಿಗಳು ಪೂರ್ಣಗೊಂಡಿವೆ.		

ಪ್ರಸ್ತುತ ಹಂತ : ಅಣೆಕಟ್ಟು ಮತ್ತು ಪೂರಕ ಕಾಮಗಾರಿಗಳು ಪೂರ್ಣಗೊಂಡಿವೆ.

ಹೇಮಾವತಿ ಎಡದಂಡೆ ನಾಲೆ : ಹೇಮಾವತಿ ಎಡದಂಡೆ ನಾಲೆಯ ಪೂರ್ಣ ಉದ್ದವಾದ 214 ಕಿ.ಮೀ. ಗಳ ಎದುರಿಗೆ ಮಣ್ಣು ಅಗೆತ, ಸಿ.ಡಿ.ಕಾಮಗಾರಿಗಳು 212 ಕಿ.ಮೀ. ವರೆಗೆ ಪೂರ್ಣಗೊಂಡಿವೆ. 72 ವಿತರಣಾ ನಾಲೆಗಳ ಎಲ್ಲಾ ಕಾಮಗಾರಿಗಳು ಪೂರ್ಣಗೊಂಡಿವೆ.

ಹೇಮಾವತಿ ಎಡದಂಡೆ ನಾಲೆಯ 0.00 ಯಿಂದ 72.00 ಕಿ.ಮೀ ವರೆಗಿನ ಆಧುನೀಕರಣ ಕಾಮಗಾರಿಯು ಭೌತಿಕವಾಗಿ ಪೂರ್ಣಗೊಂಡಿದ್ದು, ಕಾಲುವೆಯಲ್ಲಿ ನೀರನ್ನು ಹರಿಸಲಾಗಿರುತ್ತದೆ.

ಹೇಮಾವತಿ ಎಡದಂಡೆ ನಾಲೆಯ 72.00 ನೇ ಕಿ.ಮೀ ನಿಂದ 214.00 ಕಿ.ಮೀ ವರೆಗೆ ಕಾಲುವೆಯನ್ನು ಆಧುನೀಕರಣಗೊಳಿಸಲು ಯೋಜಿಸಲಾಗಿದ್ದು, ಸದರಿ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.

ಹೇಮಾವತಿ ಬಲದಂಡೆ ನಾಲೆ : ಹೇಮಾವತಿ ಬಲದಂಡೆ ನಾಲೆಯ ಪೂರ್ಣ ಉದ್ದವಾದ 92.104 ಕಿ.ಮೀ. ವರೆಗಿನ ಮಣ್ಣು ಅಗೆತ ಹಾಗೂ ಸಿ.ಡಿ.ಕಾಮಗಾರಿಗಳು ಪೂರ್ಣಗೊಂಡಿವೆ. ಉಳಿಕೆ ಲೈನಿಂಗ್ ಕಾಮಗಾರಿಗಳು ಪ್ರಗತಿಯಲ್ಲಿವೆ.ಸದರಿ ನಾಲೆಯಡಿ ಬರುವ 57 ವಿತರಣಾ ನಾಲೆಗಳ ಅಗೆತ ಹಾಗೂ ಅಡ್ಡಮೋರಿಗಳ ಕಾಮಗಾರಿ ಪೂರ್ಣಗೊಂಡಿರುತ್ತದೆ.

ಹೇಮಾವತಿ ಬಲದಂಡೆ ನಾಲೆ ಸರಪಳಿ 0.00 ಕಿ.ಮೀ ನಿಂದ 92.104 ಕಿ.ಮೀ ವರೆಗೆ ಆಧುನೀಕರಣ ಕಾಮಗಾರಿ ಯೋಜನಾ ವರದಿ ರೂ.422.75 ಕೋಟಿಗಳಿಗೆ ಸಿದ್ದಪಡಿಸಿದ್ದು, ಆಡಳಿತಾತ್ಮಕ ಅನುಮೋದನೆಯಾಗಬೇಕಾಗಿರುತ್ತದೆ.

ಹೇಮಾವತಿ ಬಲಮೇಲ್ದಂಡೆ ನಾಲೆ: ಹೇಮಾವತಿ ಬಲಮೇಲ್ದಂಡೆ ನಾಲೆಯ ಪೂರ್ಣ ಉದ್ದವಾದ 97.00 ಕಿ.ಮೀ. ವರೆಗಿನ ಮಣ್ಣು ಅಗೆತ ಹಾಗೂ ಸಿ.ಡಿ.ಕಾಮಗಾರಿಗಳು ಪೂರ್ಣಗೊಂಡಿವೆ. ಉಳಿಕೆ ಲೈನಿಂಗ್ ಕಾಮಗಾರಿಗಳು ಪ್ರಗತಿಯಲ್ಲಿವೆ.ಸದರಿ ನಾಲೆಯಡಿ ಬರುವ 41 ವಿತರಣಾ ನಾಲೆಗಳ ಪೂರ್ಣಗೊಂಡಿರುತ್ತದೆ.

ಹೇಮಾವತಿ ಬಲಮೇಲ್ದಂಡೆ ನಾಲೆಯಲ್ಲಿ ವಿನ್ಯಾಸಿತ ನೀರನ್ನು ಹರಿಸಲು ಸಾಧ್ಯವಾಗದೆ ಯೋಜಿತ ಅಚ್ಚುಕಟ್ಟಿಗೆ ಅವಶ್ಯಕವಿರುವ ನೀರನ್ನು ನಿಗಧಿತ ಸಮಯದಲ್ಲಿ ಹರಿಸಲು ಸಾಧ್ಯವಾಗಿರುವುದಿಲ್ಲ. ಆದ್ದರಿಂದ ಹೇಮಾವತಿ ಬಲಮೇಲ್ದಂಡೆ ನಾಲೆಯ ಆಧುನೀಕರಣ ಕಾಮಗಾರಿಯನ್ನು ಕೈಗೆತ್ತಿಕೊಂಡು ಯೋಜಿತ ಅಚ್ಚುಕಟ್ಟಿಗೆ ಸಮರ್ಪಕವಾಗಿ ನೀರನ್ನು ಒದಗಿಸಲು ಉದ್ದೇಶಿಸಲಾಗಿದೆ. ಸದರಿ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.

ಏತ ನೀರಾವರಿ ಯೋಜನೆಗಳು : ಈ ಯೋಜನೆಯಡಿ 14 ಏತ ನೀರಾವರಿ ಯೋಜನೆಗಳು ಬರುತ್ತಿದ್ದು, ಇದರಲ್ಲಿ 8 ಏತ ನೀರಾವರಿ ಯೋಜನೆಗಳನ್ನು ಪೂರ್ಣಗೊಳಿಸಲಾಗಿದೆ. (ಗಂಜಿಗೆರೆ, ರಾಮೇನಹಳ್ಳಿ, ಮುದಿಗೆರೆ, ಮೆರ್ವೆ, ಅಡಿಕೆಬೊಮ್ಮನಹಳ್ಳಿ, ಕಟ್ಟೇಪುರ, ಹಳ್ಳಿಮೈಸೂರು ಹಾಗೂ ಬಾಗೂರು ನವಿಲೆ ಆಗಮನ). ಹೇಮಾವತಿ ನಾಲಾ ವಲಯ, ತುಮಕೂರು ಅಡಿಯಲ್ಲಿ ಬರುವ ಬಾಗೂರು ನವಿಲೆ ಸುರಂಗ ನಿರ್ಗಮನ ಏತ ನೀರಾವರಿ ಯೋಜನೆಯನ್ನು ಈಗಾಗಲೇ ಪೂರ್ಣಗೊಳಸಲಾಗಿದೆ. ಕೆಂದಿಣ್ಣೆ, ಮಣಿಗನಹಳ್ಳಿ ಹಾಗೂ ಜನಾರ್ಧನಹಳ್ಳಿ ಏತ ನೀರಾವರಿ ಯೋಜನೆಗಳನ್ನು ಹೊರತು ಪಡಿಸಿ, ಕ್ಯಾತನಹಳ್ಳಿ ಮತ್ತು ಹೊಸಪಟ್ಟಣ ಏತ ನೀರಾವರಿ ಯೋಜನೆಯ ಕಾಮಗಾರಿಗಳುಪ್ರಗತಿಯಲ್ಲಿವೆ.

ಯೋಜಿತ 3,10,943 ಎಕರೆ (1,25,837 ಹೆ) ಅಚ್ಚುಕಟ್ಟು ಪ್ರದೇಶದ ಎದುರಾಗಿ ಈ ಯೋಜನೆಯ ಪ್ರಾರಂಭದಿಂದ ಮಾರ್ಚ್ 2019ರ ಅಂತ್ಯದವರೆಗೆ 3,11,714 ಎಕರೆ (1,26,149 ಹೆ.)ಪ್ರದೇಶಕ್ಕೆ ಹರಿ ನೀರಾವರಿ ಮತ್ತು ಏತ ನೀರಾವರಿ ಯೋಜನೆಯಡಿ ನೀರಾವರಿ ಸೌಲಭ್ಯ ಕಲ್ಪಿಸಲಾಗಿದೆ.

ಈ ಯೋಜನೆಗೆ 2018–19 ನೇ ಸಾಲಿಗೆ ರೂ. 60.07 ಕೋಟಿ ಅನುದಾನ ಒದಗಿಸಲಾಗಿದ್ದು, ಮಾರ್ಚ್–2019 ರ ಅಂತ್ಯದವರೆಗೆ ರೂ. 92.99 ಕೋಟಿ ವೆಚ್ಚ ಮಾಡಲಾಗಿದೆ. ಈ ಯೋಜನೆಯ ಪ್ರಾರಂಭದಿಂದ ಮಾರ್ಚ್–2019 ಅಂತ್ಯದವರೆಗೆ ಮಾಡಲಾದ ಕ್ರೋಢಿಕೃತ ವೆಚ್ಚ ರೂ. 2167.92 ಕೋಟಿಗಳಾಗಿರುತ್ತದೆ.

ಯಗಚಿ ಯೋಜನೆ

ಆಕ್ವಡಕ್ಟ್



ಅಗಿಲೆ ಸುರಂಗ

ಬೇಲೂರು ತಾಲ್ಲೂಕು, ಚಿಕ್ಕಬ್ಯಾಡಗೆರೆ ಹತ್ತಿರ ಯಗಚಿ ನದಿಗೆ ಅಡ್ಡಲಾಗಿ ಯಗಚಿ ಜಲಾಶಯವನ್ನು ನಿರ್ಮಿಸಲಾಗಿದೆ.ಯಗಚಿ ಯೋಜನೆಯ ಮೂಲ ಅಂದಾಜು ರೂ.35.38 ಕೋಟಿಗಳಿಗೆ ಸರ್ಕಾರದ ಆದೇಶ ಸಂ.ಪಿ.ಡಬ್ಲ್ಯೂ.ಡಿ/91/ಎನ್.ಎ.ಪಿ./83 ದಿ: 27.06.1984 ರಲ್ಲಿ ಆಡಳಿತಾತ್ಮಕ ಅನುಮೋದನೆಯನ್ನು ದೊರೆತಿರುತ್ತದೆ. ಇದರ ಕಾಮಗಾರಿಯನ್ನು 1984–85 ರಲ್ಲಿ ಪ್ರಾರಂಭಿಸಲಾಗಿದೆ.ಯೋಜನೆಯ ಪರಿಷ್ಕೃತ ಅಂದಾಜು ಮೊತ್ತವಾದ ರೂ.440.00 ಕೋಟಿಗಳಿಗೆ ಸರ್ಕಾರದ ಆದೇಶ ಸಂ. ಡಬ್ಲ್ಯೂ.ಆರ್.ಡಿ/40/ಎನ್.ಹೆಚ್.ಪಿ 2007 ದಿ: 30.07.2007 ರಲ್ಲಿ ಆಡಳಿತಾತ್ಮಕ ಅನುಮೋದನೆ ದೊರೆತಿರುತ್ತದೆ.

ಈ ಯೋಜನೆಯಿಂದ 5.74 ಟಿಎಂಸಿ ನೀರನ್ನು ಬಳಸಿಕೊಂಡು 37,000ಎಕರೆ(14,973 ಹೆ) ಅಚ್ಚುಕಟ್ಟು ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲು ಯೋಜಿಸಲಾಗಿದೆ.

ಈ ಯೋಜನೆಯಡಿ ಬರುವ ನಾಲೆಗಳ ವಿವರ ಈ ಕೆಳಗಿನಂತಿದೆ:

ಕ್ರ ಸಂ	ನಾಲೆಯ ಹೆಸರು	ನಾಲೆಯ ಉದ್ದ (ಕಿ.ಮೀ.ಗಳಲ್ಲಿ)	ನಿಯೋಜಿತ ಅಚ್ಚುಕಟ್ಟು ಎಕರೆಗಳಲ್ಲಿ (ಹೆ)
1	ಯಗಚಿ ಎಡದಂಡೆ ನಾಲೆ	100	29085 (11770)
2	ಮೊಸಳೆ ಶಾಖಾ ನಾಲೆ	10	2500 (1012)
3	ಕಾಮಸಮುದ್ರ ಶಾಖಾ ನಾಲೆ	35	5415 (2191)
			37000 (14973)
4	ಕ್ಯಾತನಹಳ್ಳಿ ಏ.ನೀ.ಯೋಜನೆ		5685 (2301)
	ಒಟ್ಟು		**42685 (17274)**

ಈ ಯೋಜನೆಯಿಂದ ಹಾಸನ ಜಿಲ್ಲೆಯ ಹಾಸನ, ಬೇಲೂರು ಮತ್ತು ಆಲೂರು ತಾಲ್ಲೂಕುಗಳು ನೀರಾವರಿ ಸೌಲಭ್ಯ ಪಡೆಯಲಿವೆ. ಅಣೆಕಟ್ಟು ಹಾಗೂ ಪೂರಕ ಕಾಮಗಾರಿಗಳು ಪೂರ್ಣಗೊಂಡಿವೆ.

ಯಗಚಿ ಎಡದಂಡೆ ನಾಲೆಯ ಪೂರ್ಣ ಉದ್ದವಾದ 100.00 ಕಿ.ಮೀ. ಎದುರಿಗೆ ಮಣ್ಣು ಅಗೆತದ ಹಾಗೂ ಅಡ್ಡಮೋರಿ ಕಾಮಗಾರಿಗಳನ್ನು 100.00 ಕಿಮೀ ವರೆಗೆ ಪೂರ್ಣಗೊಳಿಸಿದೆ. ಸರ: 60.54 ರಿಂದ 63.56 ಕಿ.ಮೀ ನಲ್ಲಿ ಬರುವ ಮೇಲ್ಗಾಲುವೆಯ 1ನೇ, 2ನೇ ಹಾಗೂ 3ನೇ ರೀಚ್‌ನ ಕಾಮಗಾರಿಗಳು ಪೂರ್ಣಗೊಂಡಿವೆ. 2,3,4,5,7,8,9 ಮತ್ತು 11 ಹಾಗೂ 13,14 ಮತ್ತು 15 ನೇ ಕಿ.ಮೀಗಳನ್ನು ಹೊರತು ಪಡಿಸಿ, 50 ಕಿ.ಮೀ ವರೆಗೆ ಲೈನಿಂಗ್ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ. ಈ ಯೋಜನೆಯ ಮುಖ್ಯ ನಾಲೆಯಲ್ಲಿ 84 ವಿತರಣಾ ನಾಲೆಗಳು ಬರುತ್ತಿದ್ದು, 84ವಿತರಣಾ ನಾಲೆಗಳು ಪೂರ್ಣಗೊಂಡಿದ್ದು, ಈ ವಿತರಣಾ ನಾಲೆಗಳ ಅಡಿಯಲ್ಲಿ ಬರುವ ಮೈನರ್‌ಗಳು ಹಾಗೂ ಡಿ.ಪಿ.ಓ ಗಳ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ. ಈ ಯೋಜನೆಯನ್ನು 2019–20ನೇ ಸಾಲಿನಲ್ಲಿ ಪೂರ್ಣಗೊಳಿಸಲು ಉದ್ದೇಶಿಸಿದೆ.

ಸರ: 75.40 ಕಿ.ಮೀ ನಲ್ಲಿ ಬರುವ ಅಗಿಲೆ ಸುರಂಗ ಕಾಮಗಾರಿಯು ಪೂರ್ಣಗೊಂಡಿದೆ. ಅಗಿಲೆ ಸುರಂಗ ಮಾರ್ಗದಿಂದ ಪ್ರಾರಂಭವಾಗುವ ಮೊಸಳೆ ಶಾಖಾ ನಾಲೆಯು 10 ಕಿ.ಮೀ ಉದ್ದವಿದ್ದು, ಕಾಮಗಾರಿಯು ಪೂರ್ಣಗೊಂಡಿರುತ್ತದೆ. ಯಗಚಿ ಯೋಜನೆಯಲ್ಲಿ ಬರುವ ಕಾಮಸಮುದ್ರ ಶಾಖಾ ಕಾಲುವೆಯು ಒಟ್ಟು 35.00 ಕಿಮೀ ಉದ್ದವಿದ್ದು ಸರ. 0.00 ರಿಂದ 5.00 ಕಿಮೀ ವರೆಗಿನ ಕಾಮಗಾರಿಗಳು ಮುಕ್ತಾಯದ ಹಂತದಲ್ಲಿರುತ್ತವೆ. 5.00 ರಿಂದ 35.00 ಕಿ.ಮೀ. ವರೆಗಿನ ಕಾಮಗಾರಿಯು ಪ್ರಗತಿಯಲ್ಲಿದೆ.

ಈ ಯೋಜನೆಗೆ 2018–19 ನೇ ಸಾಲಿಗೆ ರೂ. 22.00 ಕೋಟಿ ಅನುದಾನ ಒದಗಿಸಲಾಗಿದ್ದು, ಮಾರ್ಚ್–2019 ರ ಅಂತ್ಯದವರೆಗೆ ರೂ. 44.22 ಕೋಟಿ ವೆಚ್ಚ ಮಾಡಲಾಗಿದೆ. ಈ ಯೋಜನೆಯ ಪ್ರಾರಂಭದಿಂದ ಮಾರ್ಚ್–2019 ಅಂತ್ಯದವರೆಗೆ ಮಾಡಲಾದ ಕ್ರೋಢಿಕೃತ ವೆಚ್ಚ ರೂ. 642.10 ಕೋಟಿಗಳಾಗಿರುತ್ತದೆ.

ಕ್ಯಾತನಹಳ್ಳಿ ಏತ ನೀರಾವರಿ ಯೋಜನೆ

ಈ ಯೋಜನೆಯು ಹಾಸನ ತಾಲ್ಲೂಕು, ಯಗಚಿ ಎಡದಂಡೆ ನಾಲೆ ಸರ: 33.133 ಕಿ.ಮೀ ನಿಂದ 0.464 ಟಿ.ಎಂ.ಸಿ ನೀರನ್ನು ಎರಡು ಹಂತಗಳಲ್ಲಿ ಎತ್ತಿ 5685 ಎಕರೆ (2301 ಹೆ.) ಅಚ್ಚುಕಟ್ಟು ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲು ಯೋಜಿಸಲಾಗಿದ್ದು, ಮೊದಲನೇ ಹಂತದಲ್ಲಿ 1920 ಎಕರೆ (777 ಹೆ.) ಹಾಗೂ ಎರಡನೇ ಹಂತದಲ್ಲಿ 3765 ಎಕರೆ (1524 ಹೆ.) ಅಚ್ಚುಕಟ್ಟು ಒಳಗೊಂಡಿರುತ್ತದೆ.

ಮೊದಲನೇ ಹಂತ: ಎಲ್ಲಾ ಕಾಮಗಾರಿಗಳು ಪೂರ್ಣಗೊಂಡಿರುತ್ತವೆ.

ಎರಡನೇ ಹಂತ: ಇನ್‌ಟೇಕ್, ಸಂಪ್‌ವೆಲ್, ಪಂಪ್‌ಹೌಸ್, ರೈಸಿಂಗ್‌ಮೈನ್, ರಿಡ್ಜ್‌ಸಿಸ್ಟ್ರನ್, ಯಂತ್ರೋಪಕರಣ ಮತ್ತು ವಿದ್ಯುದ್ಧಿಕರಣ ಹಾಗೂ ಸರ: 0.00 ರಿಂದ 6.235 ಕಿ.ಮೀ ವರೆಗಿನ ನಾಲಾ ಅಗೆತ ಮತ್ತು ಸಿ.ಡಿ ನಿರ್ಮಾಣ ಕಾಮಗಾರಿಗಳ ರೂ. 8.30 ಕೋಟಿ ಮೊತ್ತದ ಅಂದಾಜಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ಸದರಿ ಕಾಮಗಾರಿಯ ಇನ್‌ಟೇಕ್, ಸಂಪ್‌ವೆಲ್, ಪಂಪ್‌ಹೌಸ್, ರೈಸಿಂಗ್‌ಮೈನ್‌ಹಾಗೂ ಡೆಲಿವರಿ ಸಿಸ್ಟ್ರನ್ ಕಾಮಗಾರಿಯು ಪೂರ್ಣಗೊಂಡಿದ್ದು, ಪಂಪ್‌ಗಳು ಮತ್ತು ಮೆಷನರಿ ಅಳವಡಿಸುವ ಕಾಮಗಾರಿ ಪ್ರಗತಿಯಲ್ಲಿರುತ್ತದೆ.ಫೀಡರ್ ನಾಲೆಯ ಮಣ್ಣು ಅಗೆತದ, ,ಸಿ.ಡಿ. ಕಾಮಗಾರಿ 0 ಯಿಂದ 1.20 ಕಿ.ಮೀ.ವರೆಗೆ ಎಲ್ಲಾ ಕಾಮಗಾರಿಗಳು ಪೂರ್ಣಗೊಂಡಿರುತ್ತವೆ. ಹಾಗೂ ಮುಖ್ಯ ನಾಲೆಯ 1.50 ಕಿ.ಮೀ.ನ ಸಿ.ಡಿ. ಕಾಮಗಾರಿಗಳು ಹಾಗೂ ಕೆನಾಲ್ ನೆಟ್‌ವರ್ಕ್ ಕಾಮಗಾರಿಗಳು ಪೂರ್ಣಗೊಂಡಿರುತ್ತವೆ. ಉಳಿಕೆ ಕಾಮಗಾರಿ ಪ್ರಗತಿಯಲ್ಲಿರುತ್ತದೆ.

ಒಟ್ಟಾರೆ ಕ್ಯಾತನಹಳ್ಳಿ ಏತ ನೀರಾವರಿ ಯೋಜನೆ ಸೇರಿಸಿ ಯಗಚಿ ಯೋಜನೆಯ ಯೋಜಿತ 37,740 ಎಕರೆ (15,273 ಹೆ) ಅಚ್ಚುಕಟ್ಟು ಪ್ರದೇಶದ ಎದುರಾಗಿ ಈ ಯೋಜನೆಯ ಪ್ರಾರಂಭದಿಂದ ಮಾರ್ಚ್ 2019 ರ ಅಂತ್ಯದವರೆಗೆ 32,313 ಎಕರೆ (13,077 ಹೆ.)ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲಾಗಿದೆ.

ಮೊದಲನೇ ಹಂತದ ಕಾಮಗಾರಿಯನ್ನು ಬಹುತೇಕ ಪೂರ್ಣಗೊಳಿಸಲಾಗಿದ್ದು, 1920 ಎಕರೆಗಳಿಗೆ ಪ್ರಾಯೋಗಿಕವಾಗಿ ನೀರನ್ನು ಒದಗಿಸಲಾಗಿರುತ್ತದೆ. ಎರಡನೇ ಹಂತದ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.

ಈ ಯೋಜನೆಗೆ 2018–19 ನೇ ಸಾಲಿಗೆ ರೂ. 6.90 ಕೋಟಿ ಅನುದಾನ ಒದಗಿಸಲಾಗಿದ್ದು, ಮಾರ್ಚ್–2019 ರ ಅಂತ್ಯದವರೆಗೆ ರೂ. 1.09 ಕೋಟಿ ವೆಚ್ಚ ಮಾಡಲಾಗಿದೆ. ಈ ಯೋಜನೆಯ ಪ್ರಾರಂಭದಿಂದ ಮಾರ್ಚ್–2019 ಅಂತ್ಯದವರೆಗೆ ಮಾಡಲಾದ ಕ್ರೋಢಿಕೃತ ವೆಚ್ಚ ರೂ. 21.89 ಕೋಟಿಗಳಾಗಿರುತ್ತದೆ.

ಹುಚ್ಚನಕೊಪ್ಪಲು ಏತ ನೀರಾವರಿ ಯೋಜನೆ

ಹುಚ್ಚನಕೊಪ್ಪಲು ಏತ ನೀರಾವರಿ ಯೋಜನೆಯು ಹಾಸನ ಜಿಲ್ಲೆ, ಹೊಳೆನರಸೀಪುರ ತಾಲ್ಲೂಕು, ಹುಚ್ಚನಕೊಪ್ಪಲು ಗ್ರಾಮದ ಸಮೀಪ ಹೇಮಾವತಿ ನದಿಯಿಂದ 0.936 ಟಿಎಂಸಿ ನೀರನ್ನು ಎತ್ತಿ ಎರಡು ಹಂತಗಳಲ್ಲಿ 8305 ಎಕರೆ (3361 ಹೆ) ಅಚ್ಚುಕಟ್ಟು ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲು ಯೋಜಿಸಲಾಗಿದೆ. ಇದರಲ್ಲಿ ಮೊದಲನೇ ಹಂತದಿಂದ 3785 ಎಕರೆ (1532 ಹೆ), 2ನೇ ಹಂತದಿಂದ 4520 ಎಕರೆ (1829 ಹೆ) ಪ್ರದೇಶಕ್ಕೆ ನೀರಾವರಿ ಸೌಲಭ್ಯ ಒದಗಿಸಲು ಯೋಜಿಸಿದೆ.ಈ ಯೋಜನೆಯಿಂದ ಹಾಸನ ಜಿಲ್ಲೆಯ ಹೊಳೆನರಸೀಪುರ ಹಾಗೂ ಅರಕಲಗೂಡು ತಾಲ್ಲೂಕುಗಳು ನೀರಾವರಿ ಸೌಲಭ್ಯ ಪಡೆಯಲಿವೆ.

ಈ ಯೋಜನೆಯ ಮೂಲ ಅಂದಾಜು ರೂ.6.90 ಕೋಟಿಗಳಿಗೆ ಸರ್ಕಾರದ ಆದೇಶ ಸಂ. ಪಿಡಬ್ಲ್ಯೂಡಿ/186/ಎಲ್ಎಸ್/86, ದಿ: 14.07.86 ರಲ್ಲಿ ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿದೆ. ಕಾಮಗಾರಿಯನ್ನು 1985–86 ರಲ್ಲಿ ಪ್ರಾರಂಭಿಸಲಾಗಿದೆ.ಯೋಜನೆಯ ಪರಿಷ್ಕೃತ ಅಂದಾಜು ಪಟ್ಟಿ ಮೊತ್ತ ರೂ.50.00 ಕೋಟಿಗಳಿಗೆ ಸರ್ಕಾರದ ಆದೇಶ ಸಂ. ಡಬ್ಲ್ಯೂಆರ್.ಡಿ/ 38/ಎನ್.ಹೆಚ್.ಪಿ/ 2007 ದಿ: 30.07.2007 ರಲ್ಲಿ ಆಡಳಿತಾತ್ಮಕ ಅನುಮೋದನೆ ದೊರೆತಿರುತ್ತದೆ.

ಮೊದಲನೇ ಹಂತದ ಹಾಗೂ ಎರಡನೇ ಹಂತದ ಕಾಮಗಾರಿಗಳು ಭೌತಿಕವಾಗಿ ಪೂರ್ಣಗೊಂಡಿದ್ದು ಯೋಜನೆಯನ್ನು ಚಾಲನೆಗೊಳಿಸಲಾಗಿದೆ.

ಈ ಯೋಜನೆಯಿಂದ 8303 ಎಕರೆ (3360 ಹೆ.)ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲಾಗಿದೆ.

1st stagePump house

66/606w Transformer
Sub station in 1st stage

1200hp Turbine pump sets
in 1st stage

1st stage Ridge cistern

ಈ ಯೋಜನೆಗೆ 2018–19 ನೇ ಸಾಲಿಗೆ ರೂ. 1.30ಕೋಟಿ ಅನುದಾನ ಒದಗಿಸಲಾಗಿದ್ದು, ಮಾರ್ಚ್–2019 ರ ಅಂತ್ಯದವರೆಗೆ ರೂ. 2.07 ಕೋಟಿ ವೆಚ್ಚ ಮಾಡಲಾಗಿದೆ. ಈ ಯೋಜನೆಯ ಪ್ರಾರಂಭದಿಂದ ಮಾರ್ಚ್–2019 ಅಂತ್ಯದವರೆಗೆ ಮಾಡಲಾದ ಕ್ರೋಢಿಕೃತ ವೆಚ್ಚ ರೂ. 60.92 ಕೋಟಿಗಳಾಗಿರುತ್ತದೆ.

ಕಾಮಸಮುದ್ರ ಏತ ನೀರಾವರಿ ಯೋಜನೆ

ಕಾಮಸಮುದ್ರ ಏತ ನೀರಾವರಿ ಯೋಜನೆಯು ಹಾಸನ ಜಿಲ್ಲೆ, ಹೊಳೆನರಸೀಪುರ ತಾಲ್ಲೂಕು ಕಾಮಸಮುದ್ರ ಗ್ರಾಮದ ಸಮೀಪದಲ್ಲಿ ಹೇಮಾವತಿ ನದಿಯಿಂದ 1.451 ಟಿಎಂಸಿ ನೀರನ್ನು 3 ಹಂತಗಳಲ್ಲಿ ಎತ್ತಿ 12670 ಎಕರೆ (5128 ಹೆ) ಅಚ್ಚುಕಟ್ಟು ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲು ಯೋಜಿಸಲಾಗಿದೆ.

ಇದರಲ್ಲಿ ಮೊದಲನೇ ಹಂತದಿಂದ 2450 ಎಕರೆ (992 ಹೆ), ಎರಡನೇ ಹಂತದಿಂದ 7220 ಎಕರೆ (2922 ಹೆ) ಮತ್ತು ಮೂರನೇ ಹಂತದಿಂದ 3000 ಎಕರೆ (1214 ಹೆ) ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲು ಯೋಜಿಸಲಾಗಿದೆ. ಇದರಿಂದ ಹಾಸನ ಜಿಲ್ಲೆಯ ಹಾಸನ ಮತ್ತು ಹೊಳೆನರಸೀಪುರ ತಾಲ್ಲೂಕುಗಳು ನೀರಾವರಿ ಸೌಲಭ್ಯ ಪಡೆಯಲಿವೆ.

ಈ ಯೋಜನೆಯ ಮೂಲ ಅಂದಾಜು ರೂ.0.995 ಕೋಟಿಗಳಿಗೆ ಸರ್ಕಾರದ ಆದೇಶ ಸಂ. ಪಿ.ಡಬ್ಲ್ಯು.ಡಿ/180/ಎಲ್.ಐ.ಎಸ್/84 ದಿ: 12.06.1984 ರಲ್ಲಿ ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿದೆ. ಕಾಮಗಾರಿಯನ್ನು 1984–85 ರಲ್ಲಿ ಪ್ರಾರಂಭಿಸಲಾಗಿದೆ. ಪರಿಷ್ಕೃತ ಅಂದಾಜು ಮೊತ್ತ ರೂ.70.00 ಕೋಟಿಗಳಿಗೆ ಸರ್ಕಾರದ ಆದೇಶ ಸಂ. ಡಬ್ಲ್ಯು.ಆರ್.ಡಿ/39/ಎನ್.ಹೆಚ್.ಪಿ/2007 ದಿ: 30.07.2007 ರಲ್ಲಿ ಆಡಳಿತಾತ್ಮಕ ಅನುಮೋದನೆ ದೊರೆತಿರುತ್ತದೆ.ಈ ಆದೇಶವು ಮೊದಲನೇ ಮತ್ತು ಎರಡನೇ ಹಂತದ ಏತ ನೀರಾವರಿ ಕಾಮಗಾರಿಗಳನ್ನು ಆದ್ಯತೆಯ ಮೇರೆಗೆ ಪೂರ್ಣಗೊಳಿಸುವ ಹಾಗೂ ಮೂರನೇ ಹಂತದ ಕಾಮಗಾರಿಗಳನ್ನು ನೀರಿನ ಲಭ್ಯತೆಯ ಮೇರೆಗೆ ಕೈಗೆತ್ತಿಕೊಳ್ಳುವ ಷರತ್ತಿಗೆ ಒಳಪಟ್ಟಿರುತ್ತವೆ.

1st stage pump House

1st Stage Turbine pump sets

2nd stage pump House

2nd stage sump well

ಸದರಿ ಯೋಜನೆಯ ವಿವರಗಳು ಈ ಕೆಳಗಿನಂತಿವೆ

ಕ್ರ.ಸಂ	ಹಂತ	ನಾಲೆಯ ಹೆಸರು	ನಾಲೆಯ ಉದ್ದ (ಕಿ.ಮೀ.ಗಳಲ್ಲಿ)	ನಿಯೋಜಿತ ಅಚ್ಚುಕಟ್ಟು ಎಕರೆಗಳಲ್ಲಿ (ಹೆ)
1	1ನೇ ಹಂತ	ಎಡದಂಡೆ ನಾಲೆ	14.20	1820 (737)
		ಬಲದಂಡೆ ನಾಲೆ	7.00	630 (255)
2	2ನೇ ಹಂತ	ಮಳಲಿ ಶಾಖಾ ನಾಲೆ	54.00 (35.00)	5220 (2113)
		ನಾಗೇನಹಳ್ಳಿ ಶಾಖಾ ನಾಲೆ	12.40	2000 (809)
3	3ನೇ ಹಂತ	ಹೆರಗು ನಾಲಾ ಮತ್ತು ಎಡದಂಡೆ ನಾಲೆ	11.00	3000 (1214)
			ಒಟ್ಟು	**12670 (5128)**

ಮೊದಲನೇ ಹಂತದ ಹಾಗೂ ಎರಡನೇ ಹಂತದ ಕಾಮಗಾರಿಗಳನ್ನು ಪೂರ್ಣಗೊಳಿಸಿ, ಯೋಜನೆಯನ್ನು ಚಾಲನೆಗೊಳಿಸಲಾಗಿದೆ. ಎರಡನೇ ಹಂತದಲ್ಲಿ ಬರುವ ಮಳಲಿ ಶಾಖಾ ನಾಲೆಯ ಹಾಗೂ ನಾಗೇನಹಳ್ಳಿ ಶಾಖಾ ನಾಲೆಯ ಕಾಮಗಾರಿಗಳು ಪೂರ್ಣಗೊಳ್ಳುವ ಹಂತದಲ್ಲಿವೆ.

ಈ ಯೋಜನೆಯ ಪ್ರಾರಂಭದಿಂದ ಮಾರ್ಚ್ 2019 ರ ಅಂತ್ಯದವರೆಗೆ ಯೋಜಿತ ಮೊದಲನೇ ಹಂತ ಹಾಗೂ ಎರಡನೇ ಹಂತದ ಅಚ್ಚುಕಟ್ಟು ಪ್ರದೇಶವಾದ 9670 ಎಕರೆ (3914 ಹೆ) ಎದುರಿಗೆ 9098 ಎಕರೆ (3682 ಹೆ.) ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲಾಗಿದೆ. 572 ಎಕರೆ (232 ಹೆ.) ಅಚ್ಚುಕಟ್ಟು ಪ್ರದೇಶವನ್ನು ಮಿತವ್ಯಯವಲ್ಲದ ಕಾರಣ ಕಡಿತಗೊಳಿಸಲಾಗಿದೆ. ಈ ಯೋಜನೆಯು ಭೌತಿಕವಾಗಿ ಪೂರ್ಣಗೊಂಡಿದೆ.

ಈ ಯೋಜನೆಗೆ 2018–19 ನೇ ಸಾಲಿಗೆ ರೂ. 2.50 ಕೋಟಿ ಅನುದಾನ ಒದಗಿಸಲಾಗಿದ್ದು, ಮಾರ್ಚ್–2019 ರ ಅಂತ್ಯದವರೆಗೆ ರೂ. 7.18 ಕೋಟಿ ವೆಚ್ಚ ಮಾಡಲಾಗಿದೆ. ಈ ಯೋಜನೆಯ ಪ್ರಾರಂಭದಿಂದ ಮಾರ್ಚ್–2019 ಅಂತ್ಯದವರೆಗೆ ಮಾಡಲಾದ ಕ್ರೋಢಿಕೃತ ವೆಚ್ಚ ರೂ. 95.35 ಕೋಟಿಗಳಾಗಿರುತ್ತದೆ.

ಕಾಚೇನಹಳ್ಳಿ ಏತ ನೀರಾವರಿ ಯೋಜನೆ

ಕಾಚೇನಹಳ್ಳಿ ಏತ ನೀರಾವರಿ ಯೋಜನೆಯು ಹಾಸನ ಜಿಲ್ಲೆಯ ಚನ್ನರಾಯಪಟ್ಟಣ ತಾಲ್ಲೂಕಿನ ಕಾಚೇನಹಳ್ಳಿ ಗ್ರಾಮದ ಸಮೀಪ ಹೇಮಾವತಿ ನದಿಯಿಂದ 0.73 ಟಿಎಂಸಿ ನೀರನ್ನು ಮೂರು ಹಂತಗಳಲ್ಲಿ ಎತ್ತಿ 12600 ಎಕರೆ (5100 ಹೆ) ಅಚ್ಚುಕಟ್ಟು ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲು ಯೋಜಿಸಲಾಗಿದೆ. ಇದರಲ್ಲಿ ಮೊದಲನೇ ಹಂತದಲ್ಲಿ 1390 ಎಕರೆ (563 ಹೆ), ಎರಡನೇ ಹಂತದಲ್ಲಿ 6610 ಎಕರೆ (2675 ಹೆ) ಮತ್ತು ಮೂರನೇ ಹಂತದಲ್ಲಿ 4600 ಎಕರೆ (1862 ಹೆ) ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲು ಯೋಜಿಸಲಾಗಿದೆ.ಇದರಿಂದ ಹಾಸನ ಜಿಲ್ಲೆಯ ಹೊಳೆನರಸೀಪುರ, ಹಾಸನ, ಅರಸೀಕೆರೆ ಹಾಗೂ ಚನ್ನರಾಯಪಟ್ಟಣ ತಾಲ್ಲೂಕುಗಳು ನೀರಾವರಿ ಸೌಲಭ್ಯ ಪಡೆಯಲಿವೆ.

ಈ ಯೋಜನೆಯ ಮೂಲ ಅಂದಾಜು ರೂ.8.90 ಕೋಟಿಗಳಿಗೆ ಸರ್ಕಾರದ ಆದೇಶ ಸಂ. ಐ.ಡಿ/1/ಎನ್.ಹೆಚ್.ಪಿ./92 ದಿ: 27.12.1991 ರಲ್ಲಿ ಆಡಳಿತಾತ್ಮಕ ಅನುಮೋದನೆ ದೊರೆತಿರುತ್ತದೆ. ಕಾಮಗಾರಿಯನ್ನು 1991–92 ರಲ್ಲಿ ಪ್ರಾರಂಭಿಸಲಾಗಿದೆ. ಯೋಜನೆಯ ಪರಿಷ್ಕೃತ ಅಂದಾಜು ಪಟ್ಟಿ ಮೊತ್ತ ರೂ.68.30 ಕೋಟಿಗಳಿಗೆ ಆದೇಶ ಸಂಖ್ಯೆ: ಡಬ್ಲ್ಯೂಆರ್‌ಡಿ /35/ಎನ್‌ಹೆಚ್‌ಪಿ /99, ದಿ: 19.10.2002 ರಲ್ಲಿ ಆಡಳಿತಾತ್ಮಕ ಅನುಮೋದನೆ ದೊರೆತಿರುತ್ತದೆ. ಇತ್ತೀಚಿನ ಪುನರ್ ಪರಿಷ್ಕೃತ ಅಂದಾಜು ಮೊತ್ತವಾದ ರೂ.165.00 ಕೋಟಿಗಳಿಗೆ ಸರ್ಕಾರದ ಆದೇಶ ಸಂ. ಡಬ್ಲ್ಯೂ.ಆರ್.ಡಿ/37/ಎನ್.ಹೆಚ್.ಪಿ./2007 ದಿ: 30.07.2007ರಲ್ಲಿ ಆಡಳಿತಾತ್ಮಕ ಅನುಮೋದನೆ ದೊರೆತಿರುತ್ತದೆ.ಈ ಆದೇಶವು ಮೊದಲನೇ ಮತ್ತು ಎರಡನೇ ಹಂತದ ಕಾಮಗಾರಿಗಳನ್ನು ಆದ್ಯತೆಯ ಮೇರೆಗೆ ಪೂರ್ಣಗೊಳಿಸುವ ಹಾಗೂ ಮೂರನೇ ಹಂತದ ಕಾಮಗಾರಿಗಳನ್ನು ನೀರಿನ ಲಭ್ಯತೆಯ ಮೇರೆಗೆ ಕೈಗೆತ್ತಿಕೊಳ್ಳುವ ಷರತ್ತಿಗೆ ಒಳಪಟ್ಟಿರುತ್ತದೆ.

ಈ ಯೋಜನೆಯ ವಿವರಗಳು ಈ ಕೆಳಗಿನಂತಿವೆ:

ಕ್ರ.ಸಂ	ಹಂತ	ನಾಲೆಯ ಹೆಸರು	ನಾಲೆಯ ಉದ್ದ (ಕಿ.ಮೀ.ಗಳಲ್ಲಿ)	ನಿಯೋಜಿತ ಅಚ್ಚುಕಟ್ಟು ಎಕರೆಗಳಲ್ಲಿ (ಹೆ)
1	1ನೇ ಹಂತ	ಸಮುದ್ರವಲ್ಲಿ ಮುಖ್ಯ ನಾಲೆ	1.875	1390 (563)
2	2ನೇ ಹಂತ	ದಂಡಿಗಾನಹಳ್ಳಿ ಶಾಖಾ ನಾಲೆ	22.50	5385 (2179)
		ಬಿಜಮಾರನಹಳ್ಳಿ ಶಾಖಾ ನಾಲೆ	8.00	1225 (496)
3	3ನೇ ಹಂತ	ಗಂಡಸಿ ಶಾಖಾ ನಾಲೆ	32.00	4600 (1862)
ಒಟ್ಟು				**12600 (5100)**

ಮೊದಲನೇ ಹಂತದಕಾಮಗಾರಿಗಳು ಪೂರ್ಣಗೊಂಡಿದ್ದು, ದಿನಾಂಕ: 13.04.2015ರಂದು ಚಾಲನೆಗೊಳಿಸಿ ಪ್ರಾಯೋಗಿಕವಾಗಿ ನಾಲೆಯಲ್ಲಿ ನೀರನ್ನು ಹರಿಸಲಾಗುತ್ತಿದೆ.

ಎರಡನೇ ಹಂತದ ಇನಟೇಕ್ ಕೆನಾಲ್ ಕಂ ಜಾಕ್ ವೆಲ್, ಸಿಸ್ಟರ್ನ್, ಪಂಪ್ ಹೌಸ್, ಪವರ್ ಸಪ್ಲೈ ಮತ್ತು ಎಲೆಕ್ಟ್ರೋ-ಮೆಕ್ಯಾನಿಕಲ್ ಕಾಮಗಾರಿಗಳು ಪೂರ್ಣಗೊಂಡಿದ್ದು, ದಿ: 02.09.2015 ರಂದು ಪ್ರಾಯೋಗಿಕವಾಗಿ ಚಾಲನೆ ಮಾಡಲಾಗಿದೆ.

ಈ ಯೋಜನೆಯ ಸಮುದ್ರವಳ್ಳಿ ಹಾಗೂ ದಂಡಿಗಾನಹಳ್ಳಿ ಶಾಖಾ ಕಾಲುವೆಯ ಕಾಮಗಾರಿಗಳು ಪೂರ್ಣಗೊಂಡಿರುತ್ತವೆ. ವಿತರಣಾ ನಾಲೆಗಳ ಭೂಸ್ವಾಧೀನ ಪ್ರಕ್ರಿಯೆಗಳು ಪ್ರಗತಿಯಲ್ಲಿದೆ.

ಯೋಜನೆಯಲ್ಲಿ ಪ್ರಾರಂಭದಿಂದ ಮಾರ್ಚ್-2019ರ ಅಂತ್ಯದ ವರೆಗೆ 8001 ಎಕರೆ (3238 ಹೆ) ನೀರಾವರಿ ಸೌಲಭ್ಯ ಕಲ್ಪಿಸಲಾಗಿದೆ.

ಈ ಯೋಜನೆಗೆ 2018-19 ನೇ ಸಾಲಿಗೆ ರೂ. 5.80 ಕೋಟಿ ಅನುದಾನ ಒದಗಿಸಲಾಗಿದ್ದು, ಮಾರ್ಚ್-2019 ರ ಅಂತ್ಯದವರೆಗೆ ರೂ. 3.54 ಕೋಟಿ ವೆಚ್ಚ ಮಾಡಲಾಗಿದೆ. ಈ ಯೋಜನೆಯ ಪ್ರಾರಂಭದಿಂದ ಮಾರ್ಚ್-2019 ಅಂತ್ಯದವರೆಗೆ ಮಾಡಲಾದ ಕ್ರೋಢಿಕೃತ ವೆಚ್ಚ ರೂ. 100.03 ಕೋಟಿಗಳಾಗಿರುತ್ತದೆ.

ಮಳಲೂರು ಏತ ನೀರಾವರಿ ಯೋಜನೆ

ಮಳಲೂರು ಏತ ನೀರಾವರಿ ಯೋಜನೆಯು ಚಿಕ್ಕಮಗಳೂರು ತಾಲ್ಲೂಕಿನ ಬಿರಂಜಿ ಹಳ್ಳದಿಂದ ನೀರನ್ನು 2 ಹಂತಗಳಲ್ಲಿ ಎತ್ತಿ 599.00 ಎಕರೆ ಅಚ್ಚುಕಟ್ಟು ಪ್ರದೇಶಕ್ಕೆ ನೀರಾವರಿ ಸೌಲಭ್ಯ ಒದಗಿಸಲು ಯೋಜಿಸಲಾಗಿದೆ. ಸರ್ಕಾರಿ ಆದೇಶ ಸಂಖ್ಯೆ ಎನ್.ಇ:10:ಎಸ್ಎಎನ್.ಇ.ಇ.ಎಸ್. ಹೆಚ್.ಐ.:94: ದಿನಾಂಕ: 10-12-1997 ರಲ್ಲಿ ಅಂದಾಜು ಮೊತ್ತ ರೂ. 5.95 ಕೋಟಿಗಳಿಗೆ (ಮೂಲ ಅಂದಾಜು ಪಟ್ಟಿ ಮೊತ್ತ ರೂ. 268.61 ಲಕ್ಷಗಳು) ಅನುಮೋದನೆ ಆಗಿರುತ್ತದೆ. ಅಂದಾಜು ಮಂಜೂರಾತಿ ಸಂಖ್ಯೆ ದಿನಾಂಕ: 29-10-2010 ರಂದು ಸಿ.ಇ.ಆರ್.ಸಂಖ್ಯೆ: 90/2010-11 ರಲ್ಲಿ ಅಂದಾಜಿಗೆಮಂಜೂರಾತಿ ನೀಡಲಾಗಿರುತ್ತದೆ. ಸದರಿ ಕಾಮಗಾರಿಯನ್ನು ಟೆಂಡರ್ ಆಧಾರದ ಮೇಲೆ ಗುತ್ತಿಗೆ ಕರಾರು ಸಂಖ್ಯೆ 101/2012-13 ದಿ: 16-08-2012 ರಲ್ಲಿ ವಹಿಸಲಾಗಿರುತ್ತದೆ.

ಮೊದಲನೇ ಹಂತ: ಇನ್‌ಟೇಕ್, ಜಾಕ್‌ವೆಲ್/ಪಂಪ್‌ಹೌಸ್ ನ ಕಾಮಗಾರಿಗಳು ಪಂಪು ಮತ್ತು ಮೋಟಾರ್ ಅಳವಡಿಸುವ ಕಾಮಗಾರಿ, ವಿದ್ಯುತ್ ಕಾಮಗಾರಿ, ಥ್ರಸ್ಟ್ ಬ್ಲಾಕ್, ಮ್ಯಾನಿಫೋಲ್ಡ್ ಕಾಮಗಾರಿ, ಸಬ್‌ಸ್ಟೇಶನ್ ಕಾಮಗಾರಿ ಪೂರ್ಣಗೊಂಡಿರುತ್ತದೆ.ಓಪನ್ ಕೆನಾಲ್‌ಗಳ ಒಟ್ಟು 8.21 ಕಿ.ಮೀ ಉದ್ದದ ಪೈಕಿ 3.66 ಕಿ.ಮೀ. ಕಾಮಗಾರಿಯು ಪೂರ್ಣಗೊಂಡಿರುತ್ತದೆ. ಒಟ್ಟು ಲೈನಿಂಗ್ 6.82 ಕಿ.ಮೀ ಪೈಕಿ 0.11 ಕಿ.ಮೀ. ಪೂರ್ಣಗೊಂಡಿದೆ.

ಎರಡನೇ ಹಂತ: ಇನ್‌ಟೇಕ್, ಜಾಕ್‌ವೆಲ್/ಪಂಪ್‌ಹೌಸ್, ಪಂಪು ಮತ್ತು ಮೋಟಾರ್ ಅಳವಡಿಸುವ ಕಾಮಗಾರಿ, ವಿದ್ಯುತ್ ಕಾಮಗಾರಿ, ಥ್ರಸ್ಟ್ ಬ್ಲಾಕ್, ಮ್ಯಾನಿಫೋಲ್ಡ್ ಕಾಮಗಾರಿ, ಸಬ್‌ಸ್ಟೇಶನ್ ಕಾಮಗಾರಿ, ರೈಸಿಂಗ್‌ಮೇನ್ ಪೂರ್ಣಗೊಂಡಿರುತ್ತದೆ.ನಾಲೆಗಳ ಒಟ್ಟು 4.27 ಕಿ.ಮೀ. ಉದ್ದದ ಪೈಕಿ 3.57 ಕಿ.ಮೀ ಮಣ್ಣು ಅಗೆತದ ಕಾಮಗಾರಿ ಪೂರ್ಣಗೊಂಡಿದೆ ಹಾಗೂ ಅಕ್ವಡೆಕ್ಟ್ ಕಾಮಗಾರಿಯು ಪೂರ್ಣಗೊಂಡಿರುತ್ತದೆ.

ಎಲೆಕ್ಟ್ರಿಕಲ್ ಕಾಮಗಾರಿ:ಪವರ್‌ಸಪ್ಲೈ ಕಾಮಗಾರಿಯು ಪೂರ್ಣಗೊಂಡಿದ್ದು, ಲೈನ್ ಚಾರ್ಜ್ ಮಾಡುವುದು ಬಾಕಿ ಇರುತ್ತದೆ. ಬ್ರೇಕರ್ ಅಳವಡಿಸುವ ಕಾಮಗಾರಿಯ ಡಿಸೈನ್ ಡ್ರಾಯಿಂಗ್ ಅನುಮೋದನೆಯಾಗಿದ್ದು, ಬ್ರೇಕರ್ ಅಳವಡಿಸಬೇಕಾಗಿರುತ್ತದೆ.

ಈ ಯೋಜನೆಗೆ 2018-19 ನೇ ಸಾಲಿಗೆ ರೂ. 1.50 ಕೋಟಿ ಅನುದಾನ ಒದಗಿಸಲಾಗಿದ್ದು, ಮಾರ್ಚ್-2019 ರ ಅಂತ್ಯದವರೆಗೆ ರೂ. 0.08 ಕೋಟಿ ವೆಚ್ಚ ಮಾಡಲಾಗಿದೆ. ಈ ಯೋಜನೆಯ ಪ್ರಾರಂಭದಿಂದ ಮಾರ್ಚ್-2019 ಅಂತ್ಯದವರೆಗೆ ಮಾಡಲಾದ ಕ್ರೋಢಿಕೃತ ವೆಚ್ಚ ರೂ. 4.09 ಕೋಟಿಗಳಾಗಿರುತ್ತದೆ.

ವಾಟೆಹೊಳೆ ಯೋಜನೆ

ವಾಟೆಹೊಳೆ ಜಲಾಶಯವನ್ನು ಹಾಸನ ಜಿಲ್ಲೆಯ ಬೇಲೂರು ತಾಲ್ಲೂಕಿನ ಲಕ್ಕೇನಹಳ್ಳಿ ಗ್ರಾಮದ ಬಳಿಯಲ್ಲಿ ವಾಟೆಹೊಳೆ ನದಿಗೆ ಅಡ್ಡಲಾಗಿ ನಿರ್ಮಿಸಲಾಗಿದೆ.ಈ ಯೋಜನೆಯ ಮೂಲ ಅಂದಾಜು ರೂ.2.05 ಕೋಟಿಗಳಿಗೆ ಸರ್ಕಾರದ ಆದೇಶ ಸಂ. ಪಿಡಬ್ಲ್ಯೂಡಿ/ಜಿ.ಐ.ಪಿ/64, ದಿ: 15.12.1971 ರಲ್ಲಿ ಆಡಳಿತಾತ್ಮಕ ಅನುಮೋದನೆ ದೊರೆತಿರುತ್ತದೆ. ಕಾಮಗಾರಿಯನ್ನು 1971 ರಲ್ಲಿ ಪ್ರಾರಂಭಿಸಲಾಗಿದೆ. ಪರಿಷ್ಕೃತ ಅಂದಾಜು ಮೊತ್ತ ರೂ.38.00 ಕೋಟಿಗಳಿಗೆ 22.02.1996 ರಂದು ಆಡಳಿತಾತ್ಮಕ ಅನುಮೋದನೆ ದೊರೆತಿರುತ್ತದೆ. ಪುನರ್ ಪರಿಷ್ಕೃತ ಅಂದಾಜು ಮೊತ್ತ ರೂ.59.75 ಕೋಟಿಗಳಿಗೆ ಸರ್ಕಾರದ ಆದೇಶ ಸಂ. ಡಬ್ಲ್ಯು.ಆರ್.ಡಿ/47/ಎನ್.ಹೆಚ್.ಪಿ./2007, ದಿ: 30.07.2007 ರಲ್ಲಿ ಆಡಳಿತಾತ್ಮಕ ಅನುಮೋದನೆ ದೊರೆತಿರುತ್ತದೆ.

ಈ ಯೋಜನೆಯಲ್ಲಿ 2.40 ಟಿ.ಎಂ.ಸಿ ನೀರನ್ನು ಉಪಯೋಗಿಸಿಕೊಂಡು 18500 ಎಕರೆ (7487ಹೆ) ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲು ಯೋಜಿಸಲಾಗಿದೆ.

ಈ ಯೋಜನೆ ಅಡಿಯಲ್ಲಿ ಬರುವ ನಾಲೆಗಳ ವಿವರ ಕೆಳಗಿನಂತಿದೆ:

ಕ್ರ.ಸಂ	ನಾಲೆಯ ಹೆಸರು	ನಾಲೆಯ ಉದ್ದ (ಕಿ.ಮೀ. ಗಳಲ್ಲಿ)	ನಿಯೋಜಿತ ಅಚ್ಚುಕಟ್ಟು ಎಕರೆಗಳಲ್ಲಿ (ಹೆ)
1	ಎಡದಂಡೆ ನಾಲೆ	10	500 (202)
2	ಬಲದಂಡೆ ಶಾಖಾ ನಾಲೆ	45	10582 4283)
3	ನಾಕಲಗೂಡು ಶಾಖಾ ನಾಲೆ	15	7418 (3002)
		ಒಟ್ಟು	**18500 (7487)**

ಈ ಯೋಜನೆಯಿಂದ ಹಾಸನ ಜಿಲ್ಲೆಯ ಬೇಲೂರು ಮತ್ತು ಆಲೂರು ತಾಲ್ಲೂಕುಗಳು ನೀರಾವರಿ ಸೌಲಭ್ಯ ಪಡೆಯಲಿವೆ.

ಅಣೆಕಟ್ಟು ಮತ್ತು ಪೂರಕ ಕಾಮಗಾರಿಗಳು ಪೂರ್ಣಗೊಂಡಿವೆ. ನಾಲಾ ಕಾಮಗಾರಿಗಳು ಭೌತಿಕವಾಗಿ ಪೂರ್ಣಗೊಂಡಿವೆ. ಈ ಯೋಜನೆಯಿಂದ 18500 ಎಕರೆ (7487 ಹೆ) ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲಾಗಿದೆ.

ಈ ಯೋಜನೆಗೆ 2018–19 ನೇ ಸಾಲಿಗೆ ರೂ. 1.43 ಕೋಟಿ ಅನುದಾನ ಒದಗಿಸಲಾಗಿದ್ದು, ಮಾರ್ಚ್–2019 ರ ಅಂತ್ಯದವರೆಗೆ ರೂ. 1.19 ಕೋಟಿ ವೆಚ್ಚ ಮಾಡಲಾಗಿದೆ. ಈ ಯೋಜನೆಯ ಪ್ರಾರಂಭದಿಂದ ಮಾರ್ಚ್–2019 ಅಂತ್ಯದವರೆಗೆ ಮಾಡಲಾದ ಕ್ರೋಢಿಕೃತ ವೆಚ್ಚ ರೂ. 70.99 ಕೋಟಿಗಳಾಗಿರುತ್ತದೆ.

ಹೇಮಾವತಿ ಎಡದಂಡೆ ನಾಲೆಯ ಸರಪಳಿ 0 ರಿಂದ 72 ಕಿ.ಮೀ ವರೆಗಿನ ರೀಮಾಡಲಿಂಗ್ ಕಾಮಗಾರಿ

ಹೇಮಾವತಿ ಎಡದಂಡೆ ನಾಲೆಯು ಪ್ರಸ್ತುತ 2800 ಕ್ಯೂಸೆಕ್ಸ್ ಪ್ರಮಾಣದಷ್ಟು ನೀರು ಹರಿವಿನ ಸಾಮರ್ಥ್ಯವನ್ನು ಹೊಂದಿದ್ದು, ಕಾವೇರಿ ನ್ಯಾಯಾಧೀಕರಣದಲ್ಲಿ ತುಮಕೂರು ಮತ್ತು ಮಂಡ್ಯ ಭಾಗಕ್ಕೆ 24.83 ಟಿ.ಎಂ.ಸಿ ಪ್ರಮಾಣದಷ್ಟು ನೀರನ್ನು ಹಂಚಿಕೆ ಮಾಡಿದ್ದು, ಅದರನ್ವಯ ಃಓಖಿ ನಿರ್ಗಮನ ನಾಲೆಯಲ್ಲಿ 2400 ಕ್ಯೂಸೆಕ್ಸ್ ನೀರು ಹರಿವಿನ ಸಾಮರ್ಥ್ಯಕ್ಕೆ ಬದಲಾಗಿ 1500 ಕ್ಯೂಸೆಕ್ಸ್ ಪ್ರಮಾಣದಷ್ಟೆ ನೀರನ್ನು ಹರಿಸಲಾಗುತ್ತಿದೆ. ಹಂಚಿಕೆಗೆ ಅನುಗುಣವಾಗಿ ನೀರು ಪೂರೈಸಲು ಹೇಮಾವತಿ ಎಡದಂಡೆ ನಾಲೆಯ ಪ್ರಾರಂಭಿಕ ಭಾಗವನ್ನು 4000 ಕ್ಯೂಸೆಕ್ಸ್ ನೀರು ಹರಿವಿನ ಸಾಮರ್ಥ್ಯಕ್ಕೆ ಮರು ವಿನ್ಯಾಸಗೊಳಿಸುವುದು ಅವಶ್ಯವಿರುವ ಹಿನ್ನೆಲೆಯಲ್ಲಿ ಹೇಮಾವತಿ ಎಡದಂಡೆ ನಾಲೆಯ ಕಿ.ಮೀ 0.00 ರಿಂದ 72 ರ ವರೆಗೆ ಆಧುನೀಕರಣ ಕಾಮಗಾರಿಯನ್ನು ಕೈಗೊಳ್ಳಲು ಉದ್ದೇಶಿಸಲಾಗಿದೆ. ಸದರಿ ಕಾಮಗಾರಿಯ ರೂ.562.00

ಕೋಟಿ ಮೊತ್ತದ ಅಂದಾಜಿಗೆ ದಿನಾಂಕ: 04.02.2015 ರಂದು ಆಡಳಿತಾತ್ಮಕ ಅನುಮೋದನೆ ದೊರೆತಿರುತ್ತದೆ. ಸದರಿ ಕಾಮಗಾರಿಯು ಭೌತಿಕವಾಗಿ ಪೂರ್ಣಗೊಂಡಿರುತ್ತದೆ.

ಈ ಯೋಜನೆಗೆ 2018–19 ನೇ ಸಾಲಿಗೆ ರೂ. 2.00 ಕೋಟಿ ಅನುದಾನ ಒದಗಿಸಲಾಗಿದ್ದು, ಮಾರ್ಚ್–2019 ರ ಅಂತ್ಯದವರೆಗೆ ರೂ. 144.32 ಕೋಟಿ ವೆಚ್ಚ ಮಾಡಲಾಗಿದೆ. ಈ ಯೋಜನೆಯ ಪ್ರಾರಂಭದಿಂದ ಮಾರ್ಚ್–2019 ಅಂತ್ಯದವರೆಗೆ ಮಾಡಲಾದ ಕ್ರೋಢಿಕೃತ ವೆಚ್ಚ ರೂ. 780.33 ಕೋಟಿಗಳಾಗಿರುತ್ತದೆ.

ಹೇಮಾವತಿ ಎಡದಂಡೆ ನಾಲೆ (ಸಾಹುಕಾರ್ ಚೆನ್ನಯ್ಯ ನಾಲೆ) ಸರಪಳಿ 72.26 ಕಿ.ಮೀ ಇಂದ 214.30 ಕಿ.ಮೀ ವರೆಗೆ ಆಧುನೀಕರಣ ಕಾಮಗಾರಿ:

ಹೇಮಾವತಿ ಎಡದಂಡೆ ನಾಲೆಯು ಒಟ್ಟಾರೆ 214.30 ಕಿಮೀ ಉದ್ದವಿದ್ದು, ಸರಪಳಿ 72.26 ಕಿ.ಮೀ.ನಲ್ಲಿ ಕವಲೊಡೆಯುತ್ತಿದ್ದು (ಜ–ಂಟುಡಿಟಜಿಟಿಣ) ಕೆ.ಆರ್.ಪೇಟೆ, ಪಾಂಡವಪುರ ಕಡೆಗೆ ಹಾಗೂ ಬಾಗೂರು–ನವಿಲೆ ಸುರಂಗದ ಕಡೆಗೆ ಹರಿಯುತ್ತದೆ. ಸರಪಳಿ 72.26 ಕಿ.ಮೀ ಇಂದ 214.30 ಕಿ.ಮೀ ವರೆಗೆ (ಸಾಹುಕಾರ್ ಚೆನ್ನಯ್ಯ ನಾಲೆ) ನಾಲೆಯಲ್ಲಿ ವಿನ್ಯಾಸಿತ ನೀರನ್ನು ಹರಿಸಲು ಸಾಧ್ಯವಾಗದೆ ಯೋಜಿತ ಅಚ್ಚುಕಟ್ಟಿಗೆ ಅವಶ್ಯಕವಿರುವ ನೀರನ್ನು ನಿಗಧಿತ ಸಮಯದಲ್ಲಿ ಹರಿಸಲು ಸಾಧ್ಯವಾಗಿರುವುದಿಲ್ಲ. ಆದ್ದರಿಂದ ಹೇಮಾವತಿ ಎಡದಂಡೆ ನಾಲೆಯ ಸರಪಳಿ 72.26 ಕಿ.ಮೀ. ನಿಂದ 214.30 ಕಿ.ಮೀ. ವರೆಗಿನ ಆಧುನೀಕರಣ ಕಾಮಗಾರಿಯನ್ನು ಕೈಗೆತ್ತಿಕೊಂಡು ಯೋಜಿತ ಅಚ್ಚುಕಟ್ಟಿಗೆ ಸಮರ್ಪಕವಾಗಿ ನೀರನ್ನು ಒದಗಿಸಲು ಉದ್ದೇಶಿಸಲಾಗಿದೆ. ಸದರಿ ಕಾಮಗಾರಿಯ ರೂ. 809.58 ಕೋಟಿಗಳ ಯೋಜನಾ ವರದಿಗೆ ಸರ್ಕಾರದ ಆದೇಶ ಸಂಖ್ಯೆ ಜಸಂಇ 121 ಎನ್‌ಹೆಚ್‌ಪಿ 2017, ಬೆಂಗಳೂರು ದಿನಾಂಕ 08.11.2017 ರಲ್ಲಿ ಆಡಳಿತಾತ್ಮಕ ಅನುಮೋದನೆ ದೊರೆತಿರುತ್ತದೆ. ಸದರಿ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ. ಒಟ್ಟಾರೆ 141.805 ಕಿ.ಮೀ ಉದ್ದದ ನಾಲೆಯ ಲೈನಿಂಗ್ ಪೈಕಿ 115.210 ಕಿ.ಮೀ ಉದ್ದ ಲೈನಿಂಗ್ ಕಾಮಗಾರಿ ಹಾಗೂ ಒಟ್ಟಾರೆ 532 ಸಿ.ಡಿ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿರುತ್ತದೆ.

ಈ ಯೋಜನೆಗೆ 2018–19 ನೇ ಸಾಲಿಗೆ ರೂ. 267.00 ಕೋಟಿ ಅನುದಾನ ಒದಗಿಸಲಾಗಿದ್ದು, ಮಾರ್ಚ್–2019 ರ ಅಂತ್ಯದವರೆಗೆ ರೂ. 261.43 ಕೋಟಿ ವೆಚ್ಚ ಮಾಡಲಾಗಿದೆ. ಈ ಯೋಜನೆಯ ಪ್ರಾರಂಭದಿಂದ ಮಾರ್ಚ್–2019 ಅಂತ್ಯದವರೆಗೆ ಮಾಡಲಾದ ಕ್ರೋಢಿಕೃತ ವೆಚ್ಚ ರೂ. 261.65 ಕೋಟಿಗಳಾಗಿರುತ್ತದೆ.

ಹೇಮಾವತಿ ಬಲಮೇಲ್ದಂಡೆ ನಾಲೆ ಸರಪಳಿ 0.00 ಕಿ.ಮೀ ನಿಂದ 96.812 ಕಿ.ಮೀ ವರೆಗೆ ಆಧುನೀಕರಣ ಕಾಮಗಾರಿ.

ಹೇಮಾವತಿ ಬಲಮೇಲ್ದಂಡೆ ನಾಲೆಯಲ್ಲಿ ವಿನ್ಯಾಸಿತ ನೀರನ್ನು ಹರಿಸಲು ಸಾಧ್ಯವಾಗದೆ ಯೋಜಿತ ಅಚ್ಚುಕಟ್ಟಿಗೆ ಅವಶ್ಯಕವಿರುವ ನೀರನ್ನು ನಿಗಧಿತ ಸಮಯದಲ್ಲಿ ಹರಿಸಲು ಸಾಧ್ಯವಾಗಿರುವುದಿಲ್ಲ. ಆದ್ದರಿಂದ ಹೇಮಾವತಿ ಬಲಮೇಲ್ದಂಡೆ ನಾಲೆಯ ಆಧುನೀಕರಣ ಕಾಮಗಾರಿಯನ್ನು ಕೈಗೆತ್ತಿಕೊಂಡು ಯೋಜಿತ ಅಚ್ಚುಕಟ್ಟಿಗೆ ಸಮರ್ಪಕವಾಗಿ ನೀರನ್ನು ಒದಗಿಸಲು ಉದ್ದೇಶಿಸಲಾಗಿದೆ. ಸರ್ಕಾರಿ ಆದೇಶ ಸಂ: ಜಸಂಇ 197 ಎನ್‌ಹೆಚ್‌ಪಿ 2017, ಬೆಂಗಳೂರು ದಿ:11.01.2019 ರಲ್ಲಿ ರೂ.380.07 ಕೋಟಿಗಳಿಗೆ ಸರ್ಕಾರದಿಂದ ಆಡಳಿತಾತ್ಮಕ ಅನುಮೋದನೆ ದೊರೆತಿರುತ್ತದೆ. ಸದರಿ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.

ಈ ಯೋಜನೆಗೆ 2018–19 ನೇ ಸಾಲಿಗೆ ರೂ.126.70 ಕೋಟಿ ಅನುದಾನ ಒದಗಿಸಲಾಗಿದ್ದು, ಮಾರ್ಚ್–2019 ರ ಅಂತ್ಯದವರೆಗೆ ರೂ. 0.006 ಕೋಟಿ ವೆಚ್ಚ ಮಾಡಲಾಗಿದೆ. ಈ ಯೋಜನೆಯ ಪ್ರಾರಂಭದಿಂದ ಮಾರ್ಚ್–2019 ಅಂತ್ಯದವರೆಗೆ ಮಾಡಲಾದ ಕ್ರೋಢಿಕೃತ ವೆಚ್ಚ ರೂ. 0.006 ಕೋಟಿಗಳಾಗಿರುತ್ತದೆ.

ಹೇಮಾವತಿ ನಾಲಾ ವಲಯ, ತುಮಕೂರು

ತುಮಕೂರು ಹೇಮಾವತಿ ನಾಲಾ ವಲಯವು ಸರ್ಕಾರದ ಆದೇಶ ಸಂಖ್ಯೆ: ಪಿಡಬ್ಲ್ಯೂಡಿ 11 ಪಿಸಿಒ 87, ಬೆಂಗಳೂರು, ದಿನಾಂಕ: 14.01.1987 ರ ಪ್ರಕಾರ ಹೇಮಾವತಿ ನಾಲಾ ಕಾಮಗಾರಿಗಳನ್ನು ಅನುಷ್ಠಾನಗೊಳಿಸುವ ಸಲುವಾಗಿ ತುಮಕೂರು ಕೇಂದ್ರ ಸ್ಥಾನದಲ್ಲಿ ದಿನಾಂಕ 23.04.1987 ರಿಂದ ಕೆಲಸ ನಿರ್ವಹಿಸುತ್ತಿರುತ್ತದೆ. ಹೇಮಾವತಿ ಎಡದಂಡೆ ನಾಲೆಯ ಅಡಿಯಲ್ಲಿ ಬರುವ ವೈ ನಾಲೆ, ತುಮಕೂರು ಶಾಖಾ ನಾಲೆ, ನಾಗಮಂಗಲ ಶಾಖಾ ನಾಲೆ, ಬಾಗೂರು ನವಿಲೆ ಏತ ನೀರಾವರಿ ಯೋಜನೆ ಹಾಗೂ ತುಮಕೂರು ಮತ್ತು ತಿಪಟೂರು ಪಟ್ಟಣಗಳಿಗೆ ನೀರನ್ನು ಒದಗಿಸುವ ಕಾಮಗಾರಿಗಳನ್ನು ನಿರ್ವಹಿಸಲಾಗುತ್ತಿದೆ. ಈ ವಲಯವು ಹೇಮಾವತಿ ಜಲಾಶಯ ಯೋಜನೆಯ ಒಂದು ಭಾಗವಾಗಿರುತ್ತದೆ. 1985–86ರ ದರಪಟ್ಟಿಯಂತೆ ಹೇಮಾವತಿ ಯೋಜನೆಯ ಅಂದಾಜು ರೂ. 588.00 ಕೋಟಿಗಳಿದ್ದು ಈ ವಲಯಕ್ಕೆ 196.31 ಕೋಟಿ ಇರುತ್ತದೆ. ಸರ್ಕಾರದ ಆದೇಶ ಸಂ. ಪಿ.ಡಬ್ಲ್ಯೂ.ಡಿ /1 /ಜಿ.ಕೆ.ಹೆಚ್ /84, ದಿನಾಂಕ 20–06–1986 ರಲ್ಲಿ ಆಡಳಿತಾತ್ಮಕ ಅನುಮೋದನೆ ದೊರೆತಿರುತ್ತದೆ. 2007–08 ನೇ ಸಾಲಿನ ಪರಿಷ್ಕೃತ ಅಂದಾಜು ಮೊತ್ತ ರೂ. 3,877.00 ಕೋಟಿಗಳಿಗೆ ಸರ್ಕಾರದ ಆದೇಶ ಸಂ. ಡಬ್ಲ್ಯೂ.ಆರ್.ಡಿ/46/ಎನ್.ಹೆಚ್.ಪಿ 2007, ದಿನಾಂಕ 30.07.2007 ರಲ್ಲಿ ಆಡಳಿತಾತ್ಮಕ ಅನುಮೋದನೆ ದೊರೆತಿರುತ್ತದೆ. ಈ ಮೊತ್ತವು ಹೇಮಾವತಿ ಯೋಜನಾ ವಲಯ, ಗೊರೂರಿನ ಅಂದಾಜು ಮೊತ್ತ ರೂ. 1751.00 ಕೋಟಿಗಳನ್ನು ಹಾಗೂ

ಹೇಮಾವತಿ ನಾಲಾ ವಲಯ, ತುಮಕೂರಿನ ಅಂದಾಜು ಮೊತ್ತ ರೂ. 2,126.00 ಕೋಟಿಗಳನ್ನು ಒಳಗೊಂಡಿರುತ್ತದೆ.

ಕ್ರ.ಸಂ	ನಾಲಾ ವಿವರ	ಒಟ್ಟುಉದ್ದ (ಕಿ.ಮೀ. ಗಳಲ್ಲಿ)	ಯೋಜಿತ ಅಚ್ಚುಕಟ್ಟು ಎಕರೆಗಳಲ್ಲಿ (ಹೆ)	ಯೋಜಿತ ಉಪ ಯೋಗತೆ (ಟಿಎಂಸಿಗಳಲ್ಲಿ)	ಉಪಯೋಗ ಪಡೆಯಲಿರುವ ತಾಲ್ಲೂಕುಗಳು
1	ವೈ ನಾಲಾ ಪಂಕ್ತೀಕರಣ	5.50	-	-	-
2	ತುಮಕೂರು ಶಾಖಾ ನಾಲೆ	240.00	236990 (95,909)	10.936	ತುಮಕೂರು ಜಿಲ್ಲೆಯ ತುರುವೇಕೆರೆ, ತಿಪಟೂರು, ಗುಬ್ಬಿ, ತುಮಕೂರು, ಕುಣಿಗಲ್
3	ನಾಗಮಂಗಲ ಶಾಖಾ ನಾಲೆ	78.32	146994 (59488)	7.757	ತುಮಕೂರು ಜಿಲ್ಲೆಯ ತುರುವೇಕೆರೆ, ತಿಪಟೂರು, ಗುಬ್ಬಿ, ಕುಣಿಗಲ್ ಮತ್ತು ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕು
4	ಬಾಗೂರು–ನವಿಲೆ ಸುರಂಗ ನಿರ್ಗಮನದ ಬಳಿ ಏತ ನೀರಾವರಿಯೋಜನೆ	13.97 (ಎಡದಂಡೆ) 16.25 (ಬಲದಂಡೆ)	5828 (2358)	0.290	ಹಾಸನ ಜಿಲ್ಲೆಯ ಸಿ.ಆರ್.ಪಟ್ಟಣ ಮತ್ತು ತುಮಕೂರು ಜಿಲ್ಲೆಯ ತಿಟಪೂರು
5	ತುಮಕೂರು ಮತ್ತು ತಿಪಟೂರು ಟೌನ್‌ಗಳಿಗೆ ನೀರನ್ನು ಮತ್ತು ಇತರೆ ಕುಡಿಯುವ ನೀರಿನ ಯೋಜನೆಗಳು	-	-	5.834	
		ಒಟ್ಟು	**389812 (157755)**	**24.817**	

ತುಮಕೂರು ಶಾಖಾ ನಾಲೆ:

ತುಮಕೂರು ಶಾಖಾ ನಾಲೆಯು ಯೋಜನಾ ಅಂದಾಜಿನ ಪ್ರಕಾರ 240 ಕಿ.ಮೀ. ಉದ್ದವಿದ್ದು ಸದರಿ ನಾಲೆಯಿಂದ ತಿಪಟೂರು, ತುರುವೇಕೆರೆ, ಗುಬ್ಬಿ, ತುಮಕೂರು ಹಾಗೂ ಕುಣಿಗಲ್ ತಾಲ್ಲೂಕಿನ ಅಚ್ಚುಕಟ್ಟಿಗೆ ನೀರನ್ನು ಒದಗಿಸಲು ಉದ್ದೇಶಿಸಿದೆ.ಸದರಿ ನಾಲೆಯಿಂದ ಒಟ್ಟಾರೆ 236990 ಎಕರೆ ಪ್ರದೇಶಕ್ಕೆ ನೀರನ್ನು ಒದಗಿಸಲು ಉದ್ದೇಶಿಸಲಾಗಿದೆ.ಸದರಿ ನಾಲೆಯ 228 ನೇ ಕಿ.ಮೀ.ವರೆಗೆ ನಾಲಾ ಅಗೆತ, ಅಡ್ಡಮೋರಿ ಕಾಮಗಾರಿಗಳು ಬಹುತೇಕ ಪೂರ್ಣಗೊಂಡಿರುತ್ತದೆ. ವಿತರಣಾ ನಾಲೆ 31ರ ಕಾಮಗಾರಿಗಳು ಪ್ರಗತಿಯಲ್ಲಿರುತ್ತದೆ.

ನಾಗಮಂಗಲ ಶಾಖಾ ನಾಲೆ:

ನಾಗಮಂಗಲ ಶಾಖಾ ನಾಲೆಯು ಯೋಜನಾ ಅಂದಾಜಿನ ಪ್ರಕಾರ 78.325 ಕಿ.ಮೀ.ಉದ್ದವಿದ್ದು, ಸದರಿ ನಾಲೆಯಿಂದ ತುಮಕೂರು ಜಿಲ್ಲೆಯ ತುರುವೇಕೆರೆ ಹಾಗೂ ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕಿನ ಅಚ್ಚುಕಟ್ಟಿಗೆ ನೀರನ್ನು ಒದಗಿಸಲು ಉದ್ದೇಶಿಸಿದೆ.ಸದರಿ ನಾಲೆಯಿಂದ ಒಟ್ಟಾರೆ 146994 ಎಕರೆ ಅಚ್ಚುಕಟ್ಟಿಗೆ ನೀರನ್ನು ಒದಗಿಸಲು ಉದ್ದೇಶಿಸಿದೆ. ಸದರಿ ನಾಲೆಯ ನಾಲಾ ಅಗೆತ ಮತ್ತು ಅಡ್ಡಮೋರಿ ಕಾಮಗಾರಿಗಳು ಪೂರ್ಣಗೊಂಡಿದ್ದು, 78.325 ನೇ ಕಿ.ಮೀ.ವರೆಗೆ ನೀರನ್ನು ಹರಿಸಲಾಗಿದೆ.

ಬಾಗೂರು ನವಿಲೆ ಸುರಂಗ ನಿರ್ಗಮನ ಏತ ನೀರಾವರಿ ಯೋಜನೆ:

ಬಾಗೂರು ನವಿಲೆ ಸುರಂಗ ನಿರ್ಗಮನ ಏತ ನೀರಾವರಿ ಯೋಜನೆಯನ್ನು 2004ರಲ್ಲಿ ಚಾಲನೆಗೊಳಿಸುವ ಮೂಲಕ ನೀರನ್ನು ಎತ್ತಲಾಗಿದೆ. ಈ ಯೋಜನೆಯಿಂದ ತುಮಕೂರು ಜಿಲ್ಲೆಯ ತಿಪಟೂರು ಹಾಗೂ ಹಾಸನ ಜಿಲ್ಲೆ ಚನ್ನರಾಯಪಟ್ಟಣ ತಾಲ್ಲೂಕು 5828 ಎಕರೆ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲು ಯೋಜಿಸಲಾಗಿದೆ.

ಹೇಮಾವತಿ ನಾಲಾ ವಲಯದಡಿಯಲ್ಲಿ ಬರುವ ತುಮಕೂರು ಶಾಖಾ ನಾಲೆ,ನಾಗಮಂಗಲ ಶಾಖಾ ನಾಲೆ ಹಾಗೂ ಬಾಗೂರು ನವಿಲೆ ಏತ ನೀರಾವರಿ ಯೋಜನೆಯ ಒಟ್ಟು 85623.16 ಹೆಕ್ಟೇರ್ ಅಚ್ಚುಕಟ್ಟು ಪ್ರದೇಶಕ್ಕೆ ನೀರನ್ನು ಒದಗಿಸಲು ಕರ್ನಾಟಕ ರಾಜ್ಯಪತ್ರದ ದಿನಾಂಕ 25/09/2014 ರಲ್ಲಿ ಪ್ರಕಟಣೆ ಮಾಡಲಾಗಿದೆ.

2017–18ನೇ ಸಾಲಿನಲ್ಲಿ ಹೇಮಾವತಿ ನಾಲಾ ಯೋಜನೆ ಅಡಿಯಲ್ಲಿ 511 ಹೆ. ಅಚ್ಚುಕಟ್ಟು ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲು ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಅದರಂತೆ 03/2018 ರಲ್ಲಿ 511 ಹೆ ನೀರಾವರಿ ಸಾಮರ್ಥ್ಯ ಕಲ್ಪಿಸಲಾಗಿದೆ. ಯೋಜಿತ 3,89,812 ಎಕರೆ (1,57,755 ಹೆ) ಅಚ್ಚುಕಟ್ಟು ಪ್ರದೇಶದ ಎದುರಾಗಿ ಈ ಯೋಜನೆಯ ಪ್ರಾರಂಭದಿಂದ ಮಾರ್ಚ್ 2019 ರ ಅಂತ್ಯದವರೆಗೆ 3,08,546 ಎಕರೆ (1,24,867 ಹೆ.)ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲಾಗಿದೆ.

ನೀರಾವರಿ ಸಾಮರ್ಥ್ಯ ಕಲ್ಪಸುವ ಕಾಮಗಾರಿಗಳಿಗೆ ಸದರಿ ಯೋಜನೆಗೆ 2018–19 ನೇ ಸಾಲಿಗೆ ರೂ. 86.20ಕೋಟಿ ಅನುದಾನ ಒದಗಿಸಲಾಗಿದ್ದು, ಮಾರ್ಚ್–2019 ರ ಅಂತ್ಯದವರೆಗೆ ರೂ. 34.45 ಕೋಟಿ ವೆಚ್ಚ ಮಾಡಲಾಗಿದೆ. ಈ ಯೋಜನೆಯ ಪ್ರಾರಂಭದಿಂದ ಮಾರ್ಚ್–2019 ಅಂತ್ಯದವರೆಗೆ ಮಾಡಲಾದ ಕ್ರೋಢಿಕೃತ ವೆಚ್ಚ ರೂ. 2017.46 ಕೋಟಿಗಳಾಗಿರುತ್ತದೆ.

ಕುಡಿಯುವ ನೀರಿನ ಯೋಜನೆಗಳು

1. ಗೂಳೂರು – ಹೆಬ್ಬೂರು ಹೋಬಳಿಗಳಿಗೆ ಕುಡಿಯುವ ನೀರಿನ ಯೋಜನೆ:

ತುಮಕೂರು ಶಾಖಾ ನಾಲೆಯ 142.225 ಕಿ.ಮೀ. ನಿಂದ 51 ಕ್ಯೂಸೆಕ್ಸ್ ನೀರನ್ನು ಎರಡು ಹಂತಗಳಲ್ಲಿ ಎತ್ತಿ ಅಭಾವ ಪೀಡಿತ ತುಮಕೂರು ತಾಲ್ಲೂಕಿನ ಗೂಳೂರು ಹೋಬಳಿಯ 23 ಕೆರೆಗಳಿಗೆ ಹಾಗೂ ಹೆಬ್ಬೂರು ಹೋಬಳಿಯ 29 ಕೆರೆಗಳಿಗೆ ಒಟ್ಟಾರೆ 52 ಕೆರೆಗಳಿಗೆ ನೀರನ್ನು ಹರಿಸಿ 52 ಗ್ರಾಮಗಳ ಕುಡಿಯುವ ನೀರಿನ ಬೇಡಿಕೆಯನ್ನು ಪೂರೈಸುವುದು ಈ ಯೋಜನೆಯ ಪ್ರಮುಖ ಉದ್ದೇಶವಾಗಿರುತ್ತದೆ.ಈ ಯೋಜನೆಯ ಅಂದಾಜು ಮೊತ್ತವಾದ ರೂ.55.00 ಕೋಟಿಗಳಿಗೆ ಸರ್ಕಾರದ ಆದೇಶ ಸಂ.ಜಸಂಇ 315 ಎನ್‌ಹೆಚ್‌ಪಿ 2003 ಬೆಂಗಳೂರು ದಿನಾಂಕ: 11.02.2009 ರಲ್ಲಿ ಆಡಳಿತಾತ್ಮಕ ಅನುಮೋದನೆ ದೊರೆತಿರುತ್ತದೆ. ಈ ಯೋಜನೆಯ ಎಲ್ಲಾ ಕಾಮಗಾರಿಗಳು ಪೂರ್ಣಗೊಂಡಿದ್ದು, ಚಾಲನೆಯಲ್ಲಿದೆ.

ಈ ಯೋಜನೆಗೆ 2018–19 ನೇ ಸಾಲಿಗೆ ಅನುದಾನ ಒದಗಿಸಲಾಗಿರುವುದಿಲ್ಲ, ಮಾರ್ಚ್–2019 ರ ಅಂತ್ಯದವರೆಗೆ ವೆಚ್ಚ ಮಾಡಲಾಗಿರುವುದಿಲ್ಲ. ಈ ಯೋಜನೆಯ ಪ್ರಾರಂಭದಿಂದ ಮಾರ್ಚ್–2019 ಅಂತ್ಯದವರೆಗೆ ಮಾಡಲಾದ ಕ್ರೋಢಿಕೃತ ವೆಚ್ಚ ರೂ. 71.75 ಕೋಟಿಗಳಾಗಿರುತ್ತದೆ.

2. ಹೊನ್ನವಳ್ಳಿ ಮತ್ತು ಇತರೆ ಹೋಬಳಿಗಳ ಕುಡಿಯುವ ನೀರಿನ ಯೋಜನೆ:

ತುಮಕೂರು ಶಾಖಾ ನಾಲೆಯ 9.90 ಕಿ.ಮೀ., ನಿಂದ 27.03 ಕ್ಯೂಸೆಕ್ಸ್ ನೀರನ್ನು ತಿಪಟೂರು ಶಾಖೆಗೆ ಹಾಗೂ 31.25 ಕ್ಯೂಸೆಕ್ಸ್ ನೀರನ್ನು ಅರಸೀಕೆರೆ ಶಾಖೆಗೆ ಪ್ರತ್ಯೇಕವಾಗಿ ಎತ್ತಿ ಕ್ರಮವಾಗಿ ತಿಪಟೂರು ಶಾಖೆಯಿಂದ ತಿಪಟೂರು ತಾಲ್ಲೂಕಿನಲ್ಲಿ ಬರುವ 18 ಸರಣಿ ಕೆರೆಗಳಿಗೆ ಹರಿಸಿ, ಈ ತಾಲ್ಲೂಕಿನ 48 ಗ್ರಾಮಗಳ ಕುಡಿಯುವ ನೀರಿನ ಬೇಡಿಕೆಯನ್ನು ಈಡೇರಿಸಲು ಹಾಗೂ ಅರಸೀಕೆರೆ ಶಾಖೆಯಿಂದ ಅರಸೀಕೆರೆ ತಾಲ್ಲೂಕಿನ 3 ಕೆರೆಗಳು, ಕಡೂರು ತಾಲ್ಲೂಕಿನ 1 ಕೆರೆ ಹಾಗೂ ಹೊಸದುರ್ಗ ತಾಲ್ಲೂಕಿನ 1 ಕೆರೆಗೆ ಒಟ್ಟಾರೆ 5 ಕೆರೆಗಳಿಗೆ ನೀರನ್ನು ಹರಿಸಿ, ಅರಸೀಕೆರೆ ತಾಲ್ಲೂಕಿನ 20 ಗ್ರಾಮಗಳ, ಕಡೂರು ತಾಲ್ಲೂಕಿನ 8 ಗ್ರಾಮಗಳ, ಹಾಗೂ ಹೊಸದುರ್ಗ ತಾಲ್ಲೂಕಿನ 10 ಗ್ರಾಮಗಳ ಕುಡಿಯುವ ನೀರಿನ ಬೇಡಿಕೆಯನ್ನು ಒಟ್ಟಾರೆ 86 ಗ್ರಾಮಗಳ ಕುಡಿಯುವ ನೀರಿನ ಬೇಡಿಕೆಯನ್ನು ಪೂರೈಸುವುದು ಈ ಯೋಜನೆಯ ಪ್ರಮುಖ ಉದ್ದೇಶವಾಗಿರುತ್ತದೆ. ಯೋಜನೆಯ ಅಂದಾಜು ಮೊತ್ತ ರೂ. 87.20 ಕೋಟಿಗಳಿಗೆ ಸರ್ಕಾರದ ಆದೇಶ ಸಂಖ್ಯೆ: ಜಸಂಇ/26/ಎನ್‌ಹೆಚ್‌ಪಿ/2008 ಬೆಂಗಳೂರು ದಿ: 11.02.2009 ರಲ್ಲಿ ಆಡಳಿತಾತ್ಮಕ ಅನುಮೋದನೆ ದೊರೆತಿರುತ್ತದೆ.

ಈ ಯೋಜನೆಯಡಿಯಲ್ಲಿ ತಿಪಟೂರು ಮತ್ತು ಅರಸೀಕೆರೆ ಬ್ರಾಂಚ್‌ಗಳ ಮುಖಾಂತರ ಈ ಯೋಜನೆಯಲ್ಲಿ ಬರುವ 24 ಕೆರೆಗಳಿಗೆ ನೀರನ್ನು ಹರಿಸಲಾಗಿರುತ್ತದೆ. ಈ ಯೋಜನೆಯ ಎಲ್ಲಾ ಕಾಮಗಾರಿಗಳು ಪೂರ್ಣಗೊಂಡಿದ್ದು, ಚಾಲನೆಯಲ್ಲಿದೆ.

ಈ ಯೋಜನೆಗೆ 2018–19 ನೇ ಸಾಲಿಗೆ ಅನುದಾನ ಒದಗಿಸಲಾಗಿರುವುದಿಲ್ಲ, ಮಾರ್ಚ್–2019 ರ ಅಂತ್ಯದವರೆಗೆ ವೆಚ್ಚ ಮಾಡಲಾಗಿರುವುದಿಲ್ಲ. ಈ ಯೋಜನೆಯ ಪ್ರಾರಂಭದಿಂದ ಮಾರ್ಚ್–2019 ಅಂತ್ಯದವರೆಗೆ ಮಾಡಲಾದ ಕ್ರೋಢಿಕೃತ ವೆಚ್ಚ ರೂ. 84.19 ಕೋಟಿಗಳಾಗಿರುತ್ತದೆ.

3. ಚಾಮರಾಜನಗರ, ನಂಜನಗೂಡು ಮತ್ತು ಗುಂಡ್ಲುಪೇಟೆ ತಾಲ್ಲೂಕಿನ 20 ಕೆರೆಗಳಿಗೆ ನೀರು ಒದಗಿಸುವುದು ಅಲಂಬೂರು ಕುಡಿಯುವ ನೀರಿನ ಯೋಜನೆ

ಚಾಮರಾಜನಗರ ತಾಲ್ಲೂಕಿನ ಹರವೇ, ಹರದನಹಳ್ಳಿ ಮತ್ತು ಕಸಬಾ ಹೋಬಳಿಗೆ, ನಂಜನಗೂಡು ತಾಲ್ಲೂಕಿನ ಕವಲಂದೆ ಹೋಬಳಿ ಹಾಗೂ ಹೊಂದಿಕೊಂಡಿರುವ ಗುಂಡ್ಲುಪೇಟೆ ತಾಲ್ಲೂಕಿನ ಹೋಬಳಿಗಳ ಬರಪೀಡಿತ ಪ್ರದೇಶಗಳಿಗೆ ಕುಡಿಯುವ ನೀರನ್ನು ಒದಗಿಸುವ ಸಲುವಾಗಿ ಆಲಂಬೂರು ಗ್ರಾಮದ ಬಳಿ ಕಬಿನಿ ನದಿಯಿಂದ 0.60 ಟಿ.ಎಂ.ಸಿ ನೀರನ್ನು 3 ಹಂತಗಳಲ್ಲಿ ಎತ್ತಿ, 20 ಕೆರೆಗಳಿಗೆ ಒದಗಿಸಲು ಹಾಗೂ ಅಂರ್ತಜಲ ಮಟ್ಟವನ್ನು ಹೆಚ್ಚಿಸುವುದು ಈ ಯೋಜನೆಯ ಉದ್ದೇಶವಾಗಿರುತ್ತದೆ. ಈ ಯೋಜನೆಯ ಅಂದಾಜು ಮೊತ್ತ ರೂ.212.00 ಕೋಟಿಗಳಿಗೆ ಸರ್ಕಾರದ ಆದೇಶದ ಸಂಖ್ಯೆ: ಜಸಂಇ 10 ಎಂಎಂಕೆ 2009, ಬೆಂಗಳೂರು, ದಿನಾಂಕ: 15.04.2011 ರಲ್ಲಿ ಆಡಳಿತಾತ್ಮಕ ಅನುಮೋದನೆ ದೊರೆತಿರುತ್ತದೆ. ಈ ಯೋಜನೆಯ ಮೂರು ಹಂತದ ಕಾಮಗಾರಿಯನ್ನು ಪ್ರಾಯೋಗಿಕವಾಗಿ ಚಾಲನೆಗೊಳಿಸಲಾಗಿದ್ದು, ಪ್ರಸ್ತುತ ಕಾಮಗಾರಿಯು ನಿರ್ವಹಣಾ ಹಂತದಲ್ಲಿರುತ್ತದೆ.

ನಾಲ್ಕನೇ ಹಂತದ (ಉತ್ತುರು ಏತ ಯೋಜನೆ) ಪಂಪ್ ಹೌಸ್ ಕಾಮಗಾರಿ ಹಾಗೂ ರೈಸಿಂಗ್ ಮೈನ್ ನ 3.50ಕಿ.ಮೀ ಮತ್ತು ಗ್ರಾವಿಟಿ ಮೈನ್ ನ 2.10 ಕಿ.ಮೀ ಕಾಮಗಾರಿ ಪೂರ್ಣಗೊಂಡಿರುತ್ತದೆ. ಉಳಿದಂತೆ ಗ್ರಾವಿಟಿ ಸಬ್ ಮೈನ್ ಪೈಪ್ ಲೈನ್ ಕಾಮಗಾರಿ ಪ್ರಗತಿಯಲ್ಲಿದೆ. ಎಲೆಕ್ಟ್ರೋ ಮೆಕಾನಿಕಲ್ ಕಾಮಗಾರಿ ಪೂರ್ಣಗೊಂಡಿರುತ್ತದೆ.

ಈ ಯೋಜನೆಗೆ 2018–19 ನೇ ಸಾಲಿಗೆ ರೂ. 1.50 ಕೋಟಿ ಅನುದಾನ ಒದಗಿಸಲಾಗಿದ್ದು, ಮಾರ್ಚ್–2019 ರ ಅಂತ್ಯದವರೆಗೆ ರೂ. 32.51 ಕೋಟಿ ವೆಚ್ಚ ಮಾಡಲಾಗಿದೆ. ಈ ಯೋಜನೆಯ ಪ್ರಾರಂಭದಿಂದ ಮಾರ್ಚ್–2019 ಅಂತ್ಯದವರೆಗೆ ಮಾಡಲಾದ ಕ್ರೋಢಿಕೃತ ವೆಚ್ಚ ರೂ. 307.44 ಕೋಟಿಗಳಾಗಿರುತ್ತದೆ.

4. ಕಣ್ವ ಹಾಗೂ ಇತರೆ 17 ಕೆರೆಗಳಿಗೆ ನೀರು ಒದಗಿಸುವುದು ಕುಡಿಯುವ ನೀರಿನ ಯೋಜನೆ

ರಾಮನಗರ ಜಿಲ್ಲೆ, ಚನ್ನಪಟ್ಟಣ ತಾಲ್ಲೂಕಿನ ಗ್ರಾಮಗಳು ಬರಪೀಡಿತವಾಗಿದ್ದು, ಅಂರ್ತಜಲ ಮಟ್ಟವು ಕುಸಿದಿದ್ದು, ಕುಡಿಯುವ ನೀರಿನ ಬವಣೆಯನ್ನು ನೀಗಿಸಲು ಇಗ್ಗಲೂರು ಬ್ಯಾರೇಜ್‌ನಿಂದ ನೀರನ್ನು ಎತ್ತಿ ಕಣ್ವ ಜಲಾಶಯ ಹಾಗೂ ಇತರೆ 17 ಕೆರೆಗಳಿಗೆ 0.903ಟಿ.ಎಂ.ಸಿ ನೀರನ್ನು ಒದಗಿಸುವ ಹಾಗೂ ಅಂತರ್‌ಜಲ ಮಟ್ಟವನ್ನು ಹೆಚ್ಚಿಸುವುದು ಈ ಯೋಜನೆಯ ಉದ್ದೇಶವಾಗಿರುತದೆ. ಈ ಯೋಜನೆಯ ಅಂದಾಜಿಗೆ ಸರ್ಕಾರದ ಆದೇಶ ಸಂಖ್ಯೆ: ಜಸಂಇ 38 ಎಂಎಂಕೆ 2012, ಬೆಂಗಳೂರು, ದಿ: 10.05.2012 ರಲ್ಲಿ ರೂ.198.00 ಕೋಟಿಗಳಿಗೆ ಆಡಳಿತಾತ್ಮಕ ಅನುಮೋದನೆ ದೊರೆತಿರುತ್ತದೆ. ಈ ಯೋಜನೆಯ ಕಾಮಗಾರಿಯು ಪೂರ್ಣಗೊಂಡಿದ್ದು, ಮೊದಲನೆ ಹಂತವು ದಿನಾಂಕ 25.12.2014 ಮತ್ತು ಎರಡನೆ ಹಂತವು ದಿನಾಂಕ 24.04.015 ರಂದು ಪ್ರಾಯೋಗಿಕವಾಗಿ ಚಾಲನೆಗೊಳಿಸಲಾಗಿರುತ್ತದೆ.

ಈ ಯೋಜನೆಗೆ 2018–19 ನೇ ಸಾಲಿಗೆ ರೂ. 8.00 ಕೋಟಿ ಅನುದಾನ ಒದಗಿಸಲಾಗಿದ್ದು, ಮಾರ್ಚ್–2019 ರ ಅಂತ್ಯದವರೆಗೆ ರೂ. 28.44 ಕೋಟಿ ವೆಚ್ಚ ಮಾಡಲಾಗಿದೆ. ಈ ಯೋಜನೆಯ ಪ್ರಾರಂಭದಿಂದ ಮಾರ್ಚ್–2019 ಅಂತ್ಯದವರೆಗೆ ಮಾಡಲಾದ ಕ್ರೋಢಿಕೃತ ವೆಚ್ಚ ರೂ. 255.06 ಕೋಟಿಗಳಾಗಿರುತ್ತದೆ.

5. ವಜ್ರನಕಟ್ಟೆ, ಸಿ.ಕಟ್ಟಿಗೇನಹಳ್ಳಿ ಹಾಗೂ ಕೊಪ್ಪ ಕೆರೆಗಳನ್ನು ಇಂಟರ್ ಲಿಂಕ್ ಮಾಡುವುದು – ಕುಡಿಯುವ ನೀರಿನ ಯೋಜನೆ

ವಜ್ರನಕಟ್ಟೆ, ಸಿ.ಕಟ್ಟಿಗೇನಹಳ್ಳಿ ಹಾಗೂ ಕೊಪ್ಪ ಕೆರೆಗಳನ್ನು ಇಂಟರ್‌ಲಿಂಕ್ ಮಾಡಿ ಗುರುತ್ವಾಕರ್ಷಣೆ ಮೂಲಕ ತುಮಕೂರು ಶಾಖಾ ನಾಲೆಯ ವಿತರಣಾ ನಾಲೆ 23 ರ ಸರ: 14600 ಮೀ. ನಿಂದ 21 ಎಂ.ಸಿ.ಎಫ್.ಟಿ ನೀರನ್ನು 11 ಗ್ರಾಮಗಳ ಕುಡಿಯುವ ನೀರಿಗಾಗಿ ಹರಿಸುವುದುಈ ಯೋಜನೆಯ ಪ್ರಮುಖ ಉದ್ದೇಶವಾಗಿರುತ್ತದೆ. ಈ ಯೋಜನೆಯ ಅಂದಾಜು ಮೊತ್ತವಾದ ರೂ.2.20 ಕೋಟಿಗಳಿಗೆ ಸರ್ಕಾರದ ಆದೇಶ ಸಂಖ್ಯೆ: ಜಸಂಇ 71 ಎನ್‌ಹೆಚ್‌ಪಿ 2009, ದಿನಾಂಕ: 13.06.2011 ರಂದು ಆಡಳಿತಾತ್ಮಕ ಅನುಮೋದನೆ ದೊರೆತಿರುತ್ತದೆ.

ಭೂಸ್ವಾದೀನದ ಮತ್ತು ಉಳಿಕೆ ಕಾಮಗಾರಿಯ ವಿನ್ಯಾಸದ ಬದಲಾವಣೆಯಿಂದ ಕಾಮಗಾರಿಯು ಸ್ಥಗಿತಗೊಂಡಿರುತ್ತದೆ. ಉಚ್ಚ ನ್ಯಾಯಲಯದ ದಿ:– 04.07.2016 ರ ಆದೇಶದಂತೆ ಗುತ್ತಿಗೆದಾರರೊಂದಿಗೆ ಪೂರಕ ಕರಾರನ್ನು ನಿರ್ವಹಿಸಲಾಗಿದ್ದು ಕಾಮಗಾರಿ ಪ್ರಗತಿಯಲ್ಲಿರುತ್ತದೆ. 03 ಸಂಖ್ಯೆ ಹೆಡ್ ಸ್ಲೂಯಿಸ್ ನಿರ್ಮಾಣ, 03 ಸಂಖ್ಯೆ ಪೈಪ್ ಕ್ರಾಸಿಂಗ್ ನಿರ್ಮಾಣ ಮತ್ತು 50ಮೀ. ಉದ್ದದ ಪೈಪ್ ಅಕ್ವೆಡಕ್ಟ್ ನಿರ್ಮಾಣ ಕಾಮಗಾರಿ ಪೂರ್ಣಗೊಂಡಿರುತ್ತದೆ. ಕಾಮಗಾರಿಯ ಒಟ್ಟು 2009 ಮೀ. ನಾಲಾ ಮಣ್ಣು ಅಗೆತದಲ್ಲಿ 1550 ಮೀ ಪೂರ್ಣಗೊಂಡಿದ್ದು ಉಳಿಕೆ 459 ಮೀ. ಮಣ್ಣು ಅಗೆತ ಕಾಮಗಾರಿ ಪ್ರಗತಿಯಲ್ಲಿರುತ್ತದೆ ಹಾಗೂ 625ಮೀ. ಪೈಪ್ ಅಳವಡಿಕೆ ಕಾಮಗಾರಿ ಪ್ರಗತಿಯಲ್ಲಿರುತ್ತದೆ.

ಈ ಯೋಜನೆಗೆ 2018–19 ನೇ ಸಾಲಿಗೆ ರೂ. 1.00 ಕೋಟಿ ಅನುದಾನ ಒದಗಿಸಲಾಗಿದ್ದು, ಮಾರ್ಚ್–2019 ರ ಅಂತ್ಯದವರೆಗೆ ವೆಚ್ಚ ಮಾಡಲಾಗಿರುವುದಿಲ್ಲ. ಈ ಯೋಜನೆಯ ಪ್ರಾರಂಭದಿಂದ ಮಾರ್ಚ್–2019 ಅಂತ್ಯದವರೆಗೆ ಮಾಡಲಾದ ಕ್ರೋಢಿಕೃತ ವೆಚ್ಚ ರೂ. 0.22 ಕೋಟಿಗಳಾಗಿರುತ್ತದೆ.

6. ಬೆಳ್ಳಾವಿ ಹಾಗೂ ಸುತ್ತಮುತ್ತಲ ಗ್ರಾಮಗಳ ಕೆರೆಗಳಿಗೆ ನೀರು ಒದಗಿಸುವುದು–ಕುಡಿಯುವ ನೀರಿನ ಯೋಜನೆ

ತುಮಕೂರು ಜಿಲ್ಲೆ, ಗುಬ್ಬಿ ತಾಲ್ಲೂಕಿನ ಬೆಳ್ಳಾವಿ ಹಾಗೂ ಸುತ್ತಮುತ್ತಲ 5 ಗ್ರಾಮಗಳ ಕುಡಿಯುವ ನೀರನ್ನು ಒದಗಿಸುವ ಸಲುವಾಗಿ ಬೆಳ್ಳಾವಿ ಹಾಗೂ ಇತರೆ 5 ಗ್ರಾಮಗಳ ಕೆರೆಗಳಿಗೆ ತುಮಕೂರು ಶಾಖಾ ನಾಲೆಯ ಸರ: 106.80 ಕಿ.ಮೀ ನಿಂದ 7.50 ಎಂ.ಸಿ.ಎಫ್.ಟಿ ನೀರನ್ನು ಎತ್ತಿ ಹರಿಸುವುದು ಈ ಯೋಜನೆ ಉದ್ದೇಶವಾಗಿರುತ್ತದೆ. ಈ ಯೋಜನೆಯ ಅಂದಾಜು ಮೊತ್ತವಾದ ರೂ. 5.70 ಕೋಟಿಗಳಿಗೆ ಸರ್ಕಾರದ ಆದೇಶ ಸಂಖ್ಯೆ: ಜಸಂಇ 79 ಎನ್‌ಹೆಚ್‌ಪಿ 2010, ದಿನಾಂಕ: 19.03.2012 ರಂದು ಆಡಳಿತಾತ್ಮಕ ಅನುಮೋದನೆ ದೊರೆತಿರುತ್ತದೆ. ಈ ಯೋಜನೆಯು ಎಲ್ಲಾ ಹಂತದಲ್ಲಿಯು ಪೂರ್ಣಗೊಂಡಿದ್ದು, ಎಲ್ಲಾ ಕೆರೆಗಳಿಗೆ ನೀರನ್ನು ಹರಿಸಲಾಗಿರುತ್ತದೆ.

ಈ ಯೋಜನೆಗೆ 2018–19 ನೇ ಸಾಲಿಗೆ ರೂ. 0.50 ಕೋಟಿ ಅನುದಾನ ಒದಗಿಸಲಾಗಿದ್ದು, ಮಾರ್ಚ್–2019 ರ ಅಂತ್ಯದವರೆಗೆ ವೆಚ್ಚ ಮಾಡಲಾಗಿರುವುದಿಲ್ಲ. ಈ ಯೋಜನೆಯ ಪ್ರಾರಂಭದಿಂದ ಮಾರ್ಚ್–2019 ಅಂತ್ಯದವರೆಗೆ ಮಾಡಲಾದ ಕ್ರೋಢಿಕೃತ ವೆಚ್ಚ ರೂ. 6.35 ಕೋಟಿಗಳಾಗಿರುತ್ತದೆ.

7. ಚಿಕ್ಕನಾಯಕನಹಳ್ಳಿ ತಾಲ್ಲೂಕಿನ 26 ಕೆರೆಗಳಿಗೆ ನೀರು ಒದಗಿಸುವುದು – ಕುಡಿಯುವ ನೀರಿನ ಯೋಜನೆ:

ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಅಭಾವ ಪೀಡಿತ ಗ್ರಾಮಗಳಿಗೆ ಕುಡಿಯುವ ನೀರನ್ನು ಒದಗಿಸುವ ಸಲುವಾಗಿ ಹೇಮಾವತಿ ಯೋಜನೆಯ ತುಮಕೂರು ಶಾಖಾ ನಾಲೆಯಿಂದ ಗುರುತ್ವಾಕರ್ಷಣೆ ಮುಖಾಂತರ 22 ಕೆರೆಗಳಿಗೆ ಹಾಗೂ ಏತ ನೀರಾವರಿ ಮುಖಾಂತರ 4 ಕೆರೆಗಳು ಸೇರಿದಂತೆ, ಒಟ್ಟಾರೆ 26 ಕೆರೆಗಳಿಗೆ 0.80 ಟಿ.ಎಂ.ಸಿ ನೀರನ್ನು ಒದಗಿಸುವುದು ಈ ಯೋಜನೆಯ ಉದ್ದೇಶವಾಗಿರುತ್ತದೆ. ಈ ಯೋಜನೆಯ ಅಂದಾಜಿಗೆ ಸರ್ಕಾರದ ಆದೇಶ ಸಂಖ್ಯೆ: ಜಸಂಇ 74 ಎನ್‌ಹೆಚ್‌ಪಿ 2009, ದಿ: 20.07.2011 ರಲ್ಲಿ ರೂ.102.60 ಕೋಟಿಗಳಿಗೆ ಆಡಳಿತಾತ್ಮಕ ಅನುಮೋದನೆ ದೊರೆತಿರುತ್ತದೆ. ಈ ಯೋಜನೆಯ ಲಿಫ್ಟ್ ಮೂಲಕ ನೀರು ಹರಿಸುವ ಯೋಜನೆಯ ಕಾಮಗಾರಿ ಪೂರ್ಣಗೊಂಡಿದ್ದು, ಪ್ರಾಯೋಗಿಕವಾಗಿ ನೀರು ಹರಿಸಲಾಗಿದೆ.

ಈ ಯೋಜನೆಯ ಗುರುತ್ವಾಕರ್ಷಣೆಯ ಮುಖ್ಯ ಫೀಡರ್ ನಾಲೆಯ 6.85 ಕಿ.ಮೀ ಇದ್ದು ಈ ಪೈಕಿ 3.30 ಕಿಮೀ ನಾಲಾ ಅಗೆತ ಪೂರ್ಣಗೊಂಡಿರುತ್ತದೆ. ಚಿಕ್ಕನಾಯಕನಹಳ್ಳಿ ಬ್ರಾಂಚ್ ನಾಲೆಯ 11.59 ಕಿ.ಮೀ ಇದ್ದು ಈ ಪೈಕಿ 0.20 ಕಿಮೀ ನಾಲಾ ಅಗೆತ ಪೂರ್ಣಗೊಂಡಿರುತ್ತದೆ ಮತ್ತು ಹಾಲ್ಕುರಿಕೆ ಬ್ರಾಂಚ್ ನಾಲೆಯ 20.45 ಕಿ.ಮೀ. ಇದ್ದು ಈ ಪೈಕಿ 3.35 ಕಿಮೀ ನಾಲಾ ಅಗೆತ ಪೂರ್ಣಗೊಂಡಿರುತ್ತದೆ. ಒಟ್ಟು 89 ಸಂಖ್ಯೆ ಅಡ್ಡಮೋರಿ ಕಾಮಗಾರಿಗಳಲ್ಲಿ 19 ಸಂಖ್ಯೆ ಅಡ್ಡಮೋರಿ ಕಾಮಗಾರಿಗಳು ಪೂರ್ಣಗೊಂಡಿರುತ್ತದೆ. ಪ್ರಸ್ತುತ ಸದರಿ ಕಾಮಗಾರಿಯು ಭೂಸ್ವಾಧೀನ ಅಡಚಣೆಯಿಂದಾಗಿ ಸ್ಥಗಿತಗೊಂಡಿರುತ್ತದೆ.

ಈ ಯೋಜನೆಗೆ 2018–19 ನೇ ಸಾಲಿಗೆ ರೂ. 8.00 ಕೋಟಿ ಅನುದಾನ ಒದಗಿಸಲಾಗಿದ್ದು, ಮಾರ್ಚ್–2019 ರ ಅಂತ್ಯದವರೆಗೆ ರೂ. 0.01 ಕೋಟಿ ವೆಚ್ಚ ಮಾಡಲಾಗಿದೆ. ಈ ಯೋಜನೆಯ ಪ್ರಾರಂಭದಿಂದ ಮಾರ್ಚ್–2019 ಅಂತ್ಯದವರೆಗೆ ಮಾಡಲಾದ ಕ್ರೋಢಿಕೃತ ವೆಚ್ಚ ರೂ. 43.04 ಕೋಟಿಗಳಾಗಿರುತ್ತದೆ.

8. ದೊಡ್ಡಗುಣಿ ಕುಡಿಯುವ ನೀರಿನ ಯೋಜನೆ

ತುಮಕೂರು ಜಿಲ್ಲೆ, ಗುಬ್ಬಿ ತಾಲ್ಲೂಕಿನ ದೊಡ್ಡಗುಣಿ ಮತ್ತು ಇತರೆ 14 ಗ್ರಾಮಗಳಿಗೆ ಕುಡಿಯುವ ನೀರಿಗಾಗಿ ಹೇಮಾವತಿ ಯೋಜನೆಯ ತುಮಕೂರು ಶಾಖಾ ನಾಲೆಯ ಸ: 64.625 ಕಿ.ಮೀ ನಿಂದ 18.20 ಎಂ.ಸಿ.ಎಫ್.ಟಿ ನೀರನ್ನು ಎತ್ತಿ ದೊಡ್ಡಗುಣಿ ಗ್ರಾಮದ ಕೆರೆಗೆ ಒದಗಿಸುವುದುಈ ಯೋಜನೆಯ ಪ್ರಮುಖ ಉದ್ದೇಶವಾಗಿರುತ್ತದೆ. ಈ ಯೋಜನೆಯ ಅಂದಾಜಿಗೆ ಸರ್ಕಾರದ ಆದೇಶ ಸಂಖ್ಯೆ: ಜಸಂಇ 53 ಎನ್‌ಹೆಚ್‌ಪಿ 2008, ಬೆಂಗಳೂರು, ದಿ: 13.06.2011 ರಲ್ಲಿ ರೂ.3.25 ಕೋಟಿಗಳಿಗೆ ಆಡಳಿತಾತ್ಮಕ ಅನುಮೋದನೆ ದೊರೆತಿರುತ್ತದೆ. ಈ ಯೋಜನೆಯ ಕಾಮಗಾರಿಗಳು ಪೂರ್ಣಗೊಂಡಿದ್ದು, ನೀರು ಹರಿಸಲಾಗಿರುತ್ತದೆ.

ಈ ಯೋಜನೆಗೆ 2018–19 ನೇ ಸಾಲಿಗೆ ಅನುದಾನ ಒದಗಿಸಲಾಗಿರುವುದಿಲ್ಲ, ಮಾರ್ಚ್–2019 ರ ಅಂತ್ಯದವರೆಗೆ ವೆಚ್ಚ ಮಾಡಲಾಗಿರುವುದಿಲ್ಲ. ಈ ಯೋಜನೆಯ ಪ್ರಾರಂಭದಿಂದ ಮಾರ್ಚ್–2019 ಅಂತ್ಯದವರೆಗೆ ಮಾಡಲಾದ ಕ್ರೋಢಿಕೃತ ವೆಚ್ಚ ರೂ. 4.50 ಕೋಟಿಗಳಾಗಿರುತ್ತದೆ.

9. ಹಳೇಬೀಡು ಮಾದಿಹಳ್ಳಿ ಕುಡಿಯುವ ನೀರಿನ ಯೋಜನೆ

ಹಾಸನ ಜಿಲ್ಲೆಯ ಬೇಲೂರು ತಾಲ್ಲೂಕಿನ ಹಳೇಬೀಡು ಹೋಬಳಿಯ 24 ಕೆರೆಗಳಿಗೆ ಮತ್ತು ಮಾದಿಹಳ್ಳಿ ಹೋಬಳಿಯ 15 ಕೆರೆಗಳಿಗೆ ಯಗಚಿ ಎಡದಂಡೆ ನಾಲೆಯಿಂದ 0.22 ಟಿ.ಎಂ.ಸಿ ನೀರನ್ನು ಎತ್ತಿ ಒದಗಿಸುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿರುತ್ತದೆ. ಈ ಯೋಜನೆಯ ಅಂದಾಜಿಗೆ ಸರ್ಕಾರದ ಆದೇಶ ಸಂಖ್ಯೆ: ಜಸಂಇ 43 ಎನ್‌ಹೆಚ್‌ಪಿ 2010, ಬೆಂಗಳೂರು, ದಿ: 05.07.2011 ರಲ್ಲಿ ರೂ.9.00 ಕೋಟಿಗಳಿಗೆ ಆಡಳಿತಾತ್ಮಕ ಅನುಮೋದನೆ ದೊರೆತಿರುತ್ತದೆ. ಸದರಿ ಯೋಜನೆಯ ಕಾಮಗಾರಿ ಪ್ರಗತಿಯಲ್ಲಿದೆ.

ಎಲೆಕ್ಟ್ರೋ ಮೆಕಾನಿಕಲ್ ಕಾಮಗಾರಿ: ಜಾಕ್‌ವೆಲ್, ಪಂಪ್ ಹೌಸ್ ಹಾಗೂ ರೈಸಿಂಗ್ ಮೇನ್, ಪಂಪ್ಸ್ ಮತ್ತು ಮೋಟಾರ್‌ಗಳು, ವಿದ್ಯುತ್‌ಚ್ಛಕ್ತಿ ಕಾಮಗಾರಿ ಹಾಗೂ ಸಬ್‌ಸ್ಟೇಷನ್ ಕಾಮಗಾರಿಗಳು ಪೂರ್ಣಗೊಂಡಿರುತ್ತದೆ.

ಎಲ್.ಬಿ.ಸಿ. ಕಾಲುವೆ: 3.98 ಕಿ.ಮೀ ಉದ್ದದ ಎಡದಂಡೆ ನಾಲಾ ಕಾಮಗಾರಿಯು ಪೂರ್ಣಗೊಂಡಿರುತ್ತದೆ. ಈ ಕಾಲುವೆಯಲ್ಲಿ ಬರುವ 270 ಮೀ. ಉದ್ದದ ಫೀಡರ್ ನಾಲೆಯಲ್ಲಿ 100 ಮೀ ಪೂರ್ಣಗೊಂಡಿರುತ್ತದೆ. ಉಳಿಕೆ ಕಾಮಗಾರಿ ಪ್ರಗತಿಯಲ್ಲಿದೆ. ಈ ಕಾಲುವೆಯಡಿಯಲ್ಲಿ ಬರುವ 17 ಕೆರೆಗಳಿಗೆ ನೀರು ಹರಿಸಲಾಗಿದೆ.

ಆರ್.ಬಿ.ಸಿ.ಕಾಲುವೆ: 5.20 ಕಿ.ಮೀ ಉದ್ದದ ಬಲದಂಡೆ ನಾಲಾ ಕಾಮಗಾರಿಯು ಪೂರ್ಣಗೊಂಡಿರುತ್ತದೆ. ಇದರ ಅಡಿಯಲ್ಲಿ 22 ಕೆರೆಗಳು ಬರುತ್ತಿದ್ದು, ಇವುಗಳಲ್ಲಿ 10 ಕೆರೆಗಳಿಗೆ ನೀರನ್ನು ಹರಿಸಲಾಗಿರುತ್ತದೆ. ಇದರಡಿ ಇರುವ ಫೀಡರ್ ನಾಲೆಯ ಸರಪಳಿ 2900 ಮೀ. ನಿಂದ 3650 ಮೀ. ಮತ್ತು ಸರಪಳಿ 7300 ಮೀ ನಿಂದ 7450 ಮೀ. ನ ಮಣ್ಣು ಅಗೆತದ ಕಾಮಗಾರಿ ಪ್ರಗತಿಯಲ್ಲಿರುತ್ತದೆ.

ಈ ಯೋಜನೆಗೆ 2018–19 ನೇ ಸಾಲಿಗೆ ರೂ. 3.00 ಕೋಟಿ ಅನುದಾನ ಒದಗಿಸಲಾಗಿದ್ದು, ಮಾರ್ಚ್–2019 ರ ಅಂತ್ಯದವರೆಗೆ ರೂ. 6.25 ಕೋಟಿ ವೆಚ್ಚ ಮಾಡಲಾಗಿದೆ. ಈ ಯೋಜನೆಯ ಪ್ರಾರಂಭದಿಂದ ಮಾರ್ಚ್–2019 ಅಂತ್ಯದವರೆಗೆ ಮಾಡಲಾದ ಕ್ರೋಢಿಕೃತ ವೆಚ್ಚ ರೂ. 21.08 ಕೋಟಿಗಳಾಗಿರುತ್ತದೆ.

10. ನುಗ್ಗೇಹಳ್ಳಿ ಕುಡಿಯುವ ನೀರಿನ ಯೋಜನೆ

ಹಾಸನ ಜಿಲ್ಲೆಯ ಚನ್ನರಾಯಪಟ್ಟಣ ತಾಲ್ಲೂಕು, ನುಗ್ಗೆಹಳ್ಳಿ ಹೋಬಳಿಯ ಸುತ್ತಮುತ್ತಲ 15 ಗ್ರಾಮಗಳಿಗೆ ಕುಡಿಯುವ ನೀರನ್ನು ಒದಗಿಸುವ ಸಲುವಾಗಿ ಹೇಮಾವತಿ ಯೋಜನೆಯ ಬಾಗೂರು ನವಿಲೆ ಸುರಂಗದ ಆಗಮನ ಕಾಲುವೆಯಿಂದ ನೀರನ್ನು ಎತ್ತಿ 171.00 ಎಂ.ಸಿ.ಎಫ್.ಟಿ ನೀರನ್ನು 11 ಕೆರೆಗಳಿಗೆ ತುಂಬಿಸುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿರುತ್ತದೆ. ಈ ಯೋಜನೆಯ ಅಂದಾಜಿಗೆ ಸರ್ಕಾರದ ಆದೇಶ ಸಂಖ್ಯೆ: ಜಸಂಇ 54 ಎನ್‌ಹೆಚ್‌ಪಿ 2011, ಬೆಂಗಳೂರು, ದಿ: 19.03.2012 ರಲ್ಲಿ ರೂ.17.60 ಕೋಟಿಗಳಿಗೆ ಆಡಳಿತಾತ್ಮಕ ಅನುಮೋದನೆ ದೊರೆತಿರುತ್ತದೆ. ಸದರಿ ಯೋಜನೆಯ ಕಾಮಗಾರಿಗಳು ಪ್ರಗತಿಯಲ್ಲಿದೆ.

ಪಂಪ್ ಹೌಸ್‌ನ ಕಾಮಗಾರಿ ಪೂರ್ಣಗೊಂಡಿರುತ್ತದೆ. ಪಂಪು ಮತ್ತು ಮೋಟಾರ್‌ಗಳನ್ನು ಅಳವಡಿಸಲಾಗಿದೆ. ವಿತರಣಾ ತೊಟ್ಟಿ, ಸಕ್ಷನ್, ಡೆಲಿವರಿ ಪೈಪು ಹಾಗೂ ಮ್ಯಾನಿಫೋಲ್ಡ್‌ನ ಕಾಮಗಾರಿ ಪೂರ್ಣಗೊಂಡಿದ್ದು, ಪ್ಯಾನಲ್ ಬೋರ್ಡ್ ಅಳವಡಿಸಲಾಗಿದೆ ಹಾಗೂ ಟ್ರಾನ್ಸ್ಫಾರ್ಮರ್ಸ್ ಅಳವಡಿಸಬೇಕಿದೆ. ಎಂ.ಎಸ್.ರೈಸಿಂಗ್ ಮೈನ್ 3.05 ಕಿ.ಮೀ. ಉದ್ದವಿದ್ದು 0.50 ಕಿ.ಮೀ ಉದ್ದದ ಪೈಪುಗಳ ಜೋಡಣೆ ಪೂರ್ಣಗೊಂಡಿದೆ. ಓಪನ್ ಕೆನಾಲ್‌ನ 8.95 ಕಿ.ಮೀ. ಪೈಕಿ 4.50 ಕಿ.ಮೀ. ಲೈನಿಂಗ್‌ನ ಪೂರ್ಣಗೊಂಡಿದೆ.

ಈ ಯೋಜನೆಗೆ 2018–19 ನೇ ಸಾಲಿಗೆ ರೂ. 3.00 ಕೋಟಿ ಅನುದಾನ ಒದಗಿಸಲಾಗಿದ್ದು, ಮಾರ್ಚ್–2019 ರ ಅಂತ್ಯದವರೆಗೆ ರೂ. 0.37 ಕೋಟಿ ವೆಚ್ಚ ಮಾಡಲಾಗಿದೆ. ಈ ಯೋಜನೆಯ ಪ್ರಾರಂಭದಿಂದ ಮಾರ್ಚ್–2019 ಅಂತ್ಯದವರೆಗೆ ಮಾಡಲಾದ ಕ್ರೋಢಿಕೃತ ವೆಚ್ಚ ರೂ. 12.59 ಕೋಟಿಗಳಾಗಿರುತ್ತದೆ.

11. ಗುಬ್ಬಿ ತಾಲ್ಲೂಕಿನ ನಿಟ್ಟೂರು ಹೋಬಳಿಯ ಶಿವಸಂದ್ರ ಮುಸಕೊಂಡ್ಲಿ ಎಮ್ಮೆದೊಡ್ಡಿಕಟ್ಟೆ ಹರೇನಹಳ್ಳಿಕೊಂಡ್ಲಿಮತ್ತು ಹಂದನಹಳ್ಳಿ ಗ್ರಾಮಗಳ ಕುಡಿಯುವ ನೀರೋದಗಿಸುವ ಯೋಜನೆ.

ತುಮಕೂರು ಜಿಲ್ಲೆ ಗುಬ್ಬಿ ತಾಲ್ಲೂಕಿನ ನಿಟ್ಟೂರು ಹೋಬಳಿಯ ಶಿವಸಂದ್ರ, ಕೊಂಡ್ಲಿ ಮುಸಕೊಂಡ್ಲಿ ಎಮ್ಮೆದೊಡ್ಡಿಕಟ್ಟೆ ಹರೇನಹಳ್ಳಿ ಮತ್ತು ಹಂದನಹಳ್ಳಿ12 ಗ್ರಾಮಗಳಿಗೆ ಕುಡಿಯುವ ನೀರಿಗಾಗಿ ಹೇಮಾವತಿ ಯೋಜನೆಯ ತುಮಕೂರು ಶಾಖಾ ನಾಲೆಯ ಸ: 77.565 ಕಿ.ಮೀ ನಿಂದ 29.55 ಎಂ.ಸಿ.ಎಫ್.ಟಿ ನೀರನ್ನು ಎತ್ತಿ ಶಿವಸಂದ್ರ ಮುಸಕೊಂಡ್ಲಿ ಹರೇನಹಳ್ಳಿ ಕೊಂಡ್ಲಿ ಎಮ್ಮೆದೊಡ್ಡಿಕಟ್ಟೆ ಮತ್ತು ಹಂದನಹಳ್ಳಿ ಗ್ರಾಮಗಳ ಕೆರೆಗೆ ನೀರು ತುಂಬಿಸುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿರುತ್ತದೆ. ಈ ಯೋಜನೆಯ ಅಂದಾಜಿಗೆ ಸರ್ಕಾರದ

ಆದೇಶಸಂಖ್ಯೆ: ಜಸಂಇ 38 ಎನ್‌ಹೆಚ್‌ಪಿ 2013 ಬೆಂಗಳೂರು, ದಿ: 28–02–2014 ರಲ್ಲಿ ರೂ. 12.50 ಕೋಟಿಗಳಿಗೆ ಆಡಳಿತಾತ್ಮಕ ಅನುಮೋದನೆ ದೊರೆತಿರುತ್ತದೆ. ಕಾಮಗಾರಿಯು ಪೂರ್ಣಗೊಂಡಿದ್ದು, ಪ್ರಾಯೋಗಿಕವಾಗಿ ನೀರನ್ನು ಹರಿಸಲಾಗಿದೆ.

ಈ ಯೋಜನೆಗೆ 2018–19 ನೇ ಸಾಲಿಗೆ ರೂ. 0.10 ಕೋಟಿ ಅನುದಾನ ಒದಗಿಸಲಾಗಿದ್ದು, ಮಾರ್ಚ್–2019 ರ ಅಂತ್ಯದವರೆಗೆ ರೂ. 0.10 ಕೋಟಿ ವೆಚ್ಚ ಮಾಡಲಾಗಿದೆ. ಈ ಯೋಜನೆಯ ಪ್ರಾರಂಭದಿಂದ ಮಾರ್ಚ್–2019 ಅಂತ್ಯದವರೆಗೆ ಮಾಡಲಾದ ಕ್ರೋಢಿಕೃತ ವೆಚ್ಚ ರೂ. 10.13 ಕೋಟಿಗಳಾಗಿರುತ್ತದೆ.

12. ಗುಬ್ಬಿ ತಾಲ್ಲೂಕಿನ ಕಸಬಾ ಹಾಗೂ ಕಡಬ ಹೋಬಳಿಯ ಬಿಕ್ಕೇಗುಡ್ಡ ಮತ್ತು ಸುತ್ತಮುತ್ತಲಿನ 30 ಗ್ರಾಮಗಳಿಗೆ ಕುಡಿಯುವ ನೀರಿನ ಯೋಜನೆ.

ತುಮಕೂರು ಜಿಲ್ಲೆ, ಗುಬ್ಬಿ ತಾಲ್ಲೂಕಿನ ಕಸಬಾ ಹಾಗೂ ಕಡಬ ಹೋಬಳಿಯ ಬಿಕ್ಕೇಗುಡ್ಡ ಮತ್ತು ಸುತ್ತಮುತ್ತಲಿನ 30 ಗ್ರಾಮಗಳಿಗೆ ಕುಡಿಯುವ ನೀರಿಗಾಗಿ ಹೇಮಾವತಿ ಯೋಜನೆಯ ತುಮಕೂರು ಶಾಖಾ ನಾಲೆಯ ಸರ: 69.55 ಕಿ.ಮೀ ನಿಂದ 106.04 ಎಂ.ಸಿ.ಎಫ್.ಟಿ ನೀರನ್ನು ಎತ್ತಿ ಗುರುತ್ವಾಕರ್ಷಣೆ ಮೂಲಕ ಗುಬ್ಬಿ ತಾಲ್ಲೂಕಿನ 19 ಕೆರೆಗಳಿಗೆ ನೀರನ್ನು ತುಂಬಿಸುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿರುತ್ತದೆ. ಈ ಯೋಜನೆಯ ಅಂದಾಜಿಗೆ ಸರ್ಕಾರದ ಆದೇಶ ಸಂಖ್ಯೆ: ಜಸಂಇ 37 ಎನ್‌ಹೆಚ್‌ಪಿ 2013 ಬೆಂಗಳೂರು, ದಿ: 28.02.2014 ರಲ್ಲಿ ರೂ. 28.16 ಕೋಟಿಗಳಿಗೆ ಆಡಳಿತಾತ್ಮಕ ಅನುಮೋದನೆ ದೊರೆತಿರುತ್ತದೆ. ಸದರಿ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.

ಹೆಡ್‌ವರ್ಕ್ಸ್ ಕಾಮಗಾರಿ ಪೂರ್ಣಗೊಂಡಿರುತ್ತದೆ. ಗ್ರಾವಿಟಿ ಮೈನ್‌ನ ಒಟ್ಟು ಉದ್ದ 18.00 ಕಿ.ಮೀ ಪೈಕಿ 10.00 ಕಿ.ಮೀ ಉದ್ದಕ್ಕೆಪೈಪನ್ನು ಜೋಡಿಸಲಾಗಿರುತ್ತದೆ. ವಿತರಣಾಲೈನ್18.975 ಕಿ.ಮೀ ಉದ್ದದಪೈಕಿ 14.75 ಕಿ.ಮೀ, ಪೈಪ್‌ಗಳನ್ನು ಅಳವಡಿಸಲಾಗಿರುತ್ತದೆ. ಉಳಿದ ಕಾವ ಗಾರಿಗಳುಪ್ರಗತಿಯಲ್ಲಿರುತ್ತವೆ.

ಈ ಯೋಜನೆಗೆ 2018–19 ನೇ ಸಾಲಿಗೆ ರೂ. 7.50 ಕೋಟಿ ಅನುದಾನ ಒದಗಿಸಲಾಗಿದ್ದು, ಮಾರ್ಚ್–2019 ರ ಅಂತ್ಯದವರೆಗೆ ಯಾವುದೇ ವೆಚ್ಚ ಮಾಡಿರುವುದಿಲ್ಲ. ಈ ಯೋಜನೆಯ ಪ್ರಾರಂಭದಿಂದ ಮಾರ್ಚ್–2019 ಅಂತ್ಯದವರೆಗೆ ಮಾಡಲಾದ ಕ್ರೋಢಿಕೃತ ವೆಚ್ಚ ರೂ. 21.40 ಕೋಟಿಗಳಾಗಿರುತ್ತದೆ.

13. ಗುಬ್ಬಿ ತಾಲ್ಲೂಕಿನ ಹಾಗಲವಾಡಿ ಕೆರೆಗೆ ಕುಡಿಯುವ ನೀರು ಒದಗಿಸುವುದು–ಕುಡಿಯುವ ನೀರೋದಗಿಸುವ ಯೋಜನೆ.

ತುಮಕೂರು ಜಿಲ್ಲೆ, ಗುಬ್ಬಿ ತಾಲ್ಲೂಕಿನ ಹಾಗಲವಾಡಿ ಹಾಗೂ ಸುತ್ತಮುತ್ತಲ 35 ಗ್ರಾಮಗಳಿಗೆಕುಡಿಯುವ ನೀರಿಗಾಗಿ ಹೇಮಾವತಿ ಯೋಜನೆಯ ತುಮಕೂರು ಶಾಖಾ ನಾಲೆಯ ಸರ: 83.34 ಕಿ.ಮೀ ನಿಂದ 37.154 ಎಂ.ಸಿ.ಎಫ್.ಟಿ ನೀರನ್ನು ಎತ್ತಿ ಗುಬ್ಬಿ ತಾಲ್ಲೂಕಿನ ಹಾಗಲವಾಡಿ ಕೆರೆಗೆ ನೀರನ್ನು ತುಂಬಿಸುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿರುತ್ತದೆ. ಈ ಯೋಜನೆಯ ಅಂದಾಜಿಗೆ ಸರ್ಕಾರದ ಆದೇಶ ಸಂಖ್ಯೆ: ಜಸಂಇ 193ಎನ್‌ಹೆಚ್‌ಪಿ 2013 ಬೆಂಗಳೂರು, ದಿ: 28–02–2014 ರಲ್ಲಿ ರೂ.11.75 ಕೋಟಿಗಳಿಗೆ ಆಡಳಿತಾತ್ಮಕ ಅನುಮೋದನೆ ದೊರೆತಿರುತ್ತದೆ. ಈ ಯೋಜನೆಯನ್ನು ಒಳಗೊಂಡಂತೆ ಒಟ್ಟು 05 ಯೋಜನೆಗಳನ್ನು ಕ್ರೋಢೀಕರಿಸಿದ ಪ್ಯಾಕೇಜ್ ಟೆಂಡರ್‌ಗೆ ದಿನಾಂಕ: 24.02.2015 ರಂದು ಅನುಮೋದನೆ ನೀಡಲಾಗಿದೆ.

ಸಂಪ್ ನಿರ್ಮಾಣ, ಪಂಪ್‌ಹೌಸ್ ಕಾಮಗಾರಿ ಮತ್ತು ರೈಸಿಂಗ್ ಮೇನ್ ಕಾಮಗಾರಿ ಪೂರ್ಣಗೊಂಡಿರುತ್ತದೆ. 50 ಸಂಖ್ಯೆಯ ಅಡ್ಡಮೋರಿ ಕಾಮಗಾರಿಗಳಲ್ಲಿ 44 ಸಂಖ್ಯೆ ಕಾಮಗಾರಿ ಪೂರ್ಣಗೊಂಡಿದ್ದು ಇನ್ನುಳಿದ 06 ಸಂಖ್ಯೆ ಅಡ್ಡಮೋರಿ ಕಾಮಗಾರಿ ಪ್ರಗತಿಯಲ್ಲಿರುತ್ತವೆ. 13.58 ಕಿ.ಮೀ ಉದ್ದದ ನಾಲಾ ಅಗೆತದಲ್ಲಿ 12.73 ಕಿ.ಮೀ ಉದ್ದದ ನಾಲಾ ಅಗೆತೆ ಕಾಮಗಾರಿಯು ಪೂರ್ಣಗೊಂಡಿದ್ದು, ಉಳಿಕೆ 0.85 ಕಿ.ಮೀ ಉದ್ದದ ನಾಲಾ ಅಗೆತದ ಕಾಮಗಾರಿಯಲ್ಲಿ 0.550 ಕಿ.ಮೀ ಉದ್ದದ ನಾಲಾ ಅಗೆತದ ಕೆಲಸವನ್ನು ನಾಲ ಪಂಕ್ತೀಕರಣದ ಬದಲಾವಣೆಯಿಂದಾಗಿ ಮತ್ತು 0.30 ಕಿ.ಮೀ ಉದ್ದದ ನಾಲಾ ಅಗೆತದ ಕಾಮಗಾರಿಯು ಬಾಕಿ ಇರುತ್ತದೆ. ಇನ್ನುಳಿದಂತೆ ಬೇರೆ ಎಲ್ಲಾ ಕಾಮಗಾರಿಗಳು ಪೂರ್ಣಗೊಂಡಿದ್ದು ಪ್ರಾಯೋಗಿಕ ಚಾಲನೆ ನಡೆಸಲಾಗಿರುತ್ತದೆ.

ಈ ಯೋಜನೆಗೆ 2018–19 ನೇ ಸಾಲಿಗೆ ರೂ. 2.50 ಕೋಟಿ ಅನುದಾನ ಒದಗಿಸಲಾಗಿದ್ದು, ಮಾರ್ಚ್–2019 ರ ಅಂತ್ಯದವರೆಗೆ ರೂ. 0.09 ಕೋಟಿ ವೆಚ್ಚ ಮಾಡಲಾಗಿದೆ. ಈ ಯೋಜನೆಯ ಪ್ರಾರಂಭದಿಂದ ಮಾರ್ಚ್–2019 ಅಂತ್ಯದವರೆಗೆ ಮಾಡಲಾದ ಕ್ರೋಢಿಕೃತ ವೆಚ್ಚ ರೂ. 10.32 ಕೋಟಿಗಳಾಗಿರುತ್ತದೆ.

14. ಗುಬ್ಬಿ ತಾಲ್ಲೂಕಿನ ಚೇಳೂರು ಕುಡಿಯುವ ನೀರೋದಗಿಸುವ ಯೋಜನೆ.

ತುಮಕೂರು ಜಿಲ್ಲೆ, ಗುಬ್ಬಿ ತಾಲ್ಲೂಕಿನ 21 ಗ್ರಾಮಗಳಿಗೆಕುಡಿಯುವ ನೀರಿಗಾಗಿ ಹೇಮಾವತಿ ಯೋಜನೆಯ ತುಮಕೂರು ಶಾಖಾ ನಾಲೆಯ ಸರ: 101.380 ಕಿ.ಮೀ. ನಿಂದ ನೀರನ್ನು 26.48 ಎಂ.ಸಿ.ಎಫ್.ಟಿ ನೀರನ್ನು ಎತ್ತಿ ಗುಬ್ಬಿ ತಾಲ್ಲೂಕಿನ ಚೇಳೂರು ಕೆರೆಗೆ ನೀರನ್ನು ತುಂಬಿಸುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿರುತ್ತದೆ. ಈ ಯೋಜನೆಯ ಅಂದಾಜಿಗೆ ಸರ್ಕಾರದ ಆದೇಶ ಸಂಖ್ಯೆ: ಜಸಂಇ 190 ಎನ್‌ಹೆಚ್‌ಪಿ 2013 ಬೆಂಗಳೂರು, ದಿ: 28–02–2014 ರಲ್ಲಿ ರೂ. 3.35 ಕೋಟಿಗಳಿಗೆ ಆಡಳಿತಾತ್ಮಕ ಅನುಮೋದನೆ ದೊರೆತಿರುತ್ತದೆ. ಈ ಯೋಜನೆಯನ್ನು ಒಳಗೊಂಡಂತೆ ಒಟ್ಟು 05 ಯೋಜನೆಗಳನ್ನು ಕ್ರೋಢೀಕರಿಸಿದ ಪ್ಯಾಕೇಜ್ ಟೆಂಡರ್‌ಗೆ ದಿನಾಂಕ: 24.02.2015 ರಂದು ಅನುಮೋದನೆ ನೀಡಲಾಗಿದೆ.ಕಾಮಗಾರಿಯು ಎಲ್ಲಾ ರೀತಿಯಿಂದಲು ಭೌತಿಕವಾಗಿ ಪೂರ್ಣಗೊಂಡಿದ್ದು, ಎಲ್ಲಾ ಕೆರೆಗಳಿಗೆ ನೀರನ್ನು ಹರಿಸಲಾಗಿದೆ.

ಈ ಯೋಜನೆಗೆ 2018–19 ನೇ ಸಾಲಿಗೆ ರೂ. 1.00 ಕೋಟಿ ಅನುದಾನ ಒದಗಿಸಲಾಗಿದ್ದು, ಮಾರ್ಚ್–2019 ರ ಅಂತ್ಯದವರೆಗೆ ರೂ. 0.02 ಕೋಟಿ ವೆಚ್ಚ ಮಾಡಲಾಗಿದೆ. ಈ ಯೋಜನೆಯ ಪ್ರಾರಂಭದಿಂದ ಮಾರ್ಚ್–2019 ಅಂತ್ಯದವರೆಗೆ ಮಾಡಲಾದ ಕ್ರೋಢಿಕೃತ ವೆಚ್ಚ ರೂ. 3.48 ಕೋಟಿಗಳಾಗಿರುತ್ತದೆ.

15. ಗುಬ್ಬಿ ತಾಲ್ಲೂಕಿನ ಕೋಡಿಯಾಳ ಕುಡಿಯುವ ನೀರೋದಗಿಸುವ ಯೋಜನೆ

ತುಮಕೂರು ಜಿಲ್ಲೆ, ಗುಬ್ಬಿ ತಾಲ್ಲೂಕಿನ ಕೋಡಿಯಾಳ ಹಾಗೂ ಮುಗುನುನ್ಸಿ ಗ್ರಾಮಗಳಿಗೆಕುಡಿಯುವ ನೀರಿಗಾಗಿ ಹೇಮಾವತಿ ಯೋಜನೆಯ ತುಮಕೂರು ಶಾಖಾ ನಾಲೆಯ ಸರ: 98.95 ಕಿ.ಮೀ. ನಿಂದ 7.00 ಎಂ.ಸಿ.ಎಫ್.ಟಿ ನೀರನ್ನು ಎತ್ತಿ ಗುಬ್ಬಿ ತಾಲ್ಲೂಕಿನ ಕೋಡಿಯಾಳ ಕೆರೆಗೆ ನೀರನ್ನು ತುಂಬಿಸುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿರುತ್ತದೆ. ಈ ಯೋಜನೆಯ ಅಂದಾಜಿಗೆ ಸರ್ಕಾರದ ಆದೇಶ ಸಂಖ್ಯೆ: ಜಸಂಇ 191ಎನ್‌ಹೆಚ್‌ಪಿ 2013 ಬೆಂಗಳೂರು, ದಿ: 28–02–2014 ರಲ್ಲಿ ರೂ. 2.90 ಕೋಟಿಗಳಿಗೆ ಆಡಳಿತಾತ್ಮಕ ಅನುಮೋದನೆ ದೊರೆತಿರುತ್ತದೆ. ಈ ಯೋಜನೆಯನ್ನು ಒಳಗೊಂಡಂತೆ ಒಟ್ಟು 05 ಯೋಜನೆಗಳನ್ನು ಕ್ರೊಢೀಕರಿಸಿದ ಪ್ಯಾಕೇಜ್ ಟೆಂಡರ್‌ಗೆ ದಿನಾಂಕ: 24.02.2015 ರಂದು ಅನುಮೋದನೆ ನೀಡಲಾಗಿದೆ. ಕಾಮಗಾರಿಯು ಎಲ್ಲಾ ರೀತಿಯಿಂದಲು ಭೌತಿಕವಾಗಿ ಪೂರ್ಣಗೊಂಡಿದ್ದು, ಎಲ್ಲಾ ಕೆರೆಗಳಿಗೆ ನೀರನ್ನು ಹರಿಸಲಾಗಿದೆ.

ಈ ಯೋಜನೆಗೆ 2018–19 ನೇ ಸಾಲಿಗೆ ರೂ. 1.00 ಕೋಟಿ ಅನುದಾನ ಒದಗಿಸಲಾಗಿದ್ದು, ಮಾರ್ಚ್–2019 ರ ಅಂತ್ಯದವರೆಗೆ ರೂ. 0.004 ಕೋಟಿ ವೆಚ್ಚ ಮಾಡಲಾಗಿದೆ. ಈ ಯೋಜನೆಯ ಪ್ರಾರಂಭದಿಂದ ಮಾರ್ಚ್–2019 ಅಂತ್ಯದವರೆಗೆ ಮಾಡಲಾದ ಕ್ರೋಢಿಕೃತ ವೆಚ್ಚ ರೂ. 2.66 ಕೋಟಿಗಳಾಗಿರುತ್ತದೆ.

16. ಗುಬ್ಬಿ ತಾಲ್ಲೂಕಿನ ಮತ್ತಿಕೆರೆ, ಹೊಸಹಳ್ಳಿ ಹಾಗೂ ಶಿವನೇಹಳ್ಳಿ ಕುಡಿಯುವ ನೀರೋದಗಿಸುವ ಯೋಜನೆ.

ತುಮಕೂರು ಜಿಲ್ಲೆ, ಗುಬ್ಬಿ ತಾಲ್ಲೂಕಿನ 6 ಗ್ರಾಮಗಳಿಗೆ ಕುಡಿಯುವ ನೀರಿಗಾಗಿ ಹೇಮಾವತಿ ಯೋಜನೆಯ ತುಮಕೂರು ಶಾಖಾ ನಾಲೆಯ ಸರ:93.850 ಕಿ.ಮೀ ನಿಂದ9.457 ಎಂ.ಸಿ.ಎಫ್‌ಟಿ ನೀರನ್ನು ಎತ್ತಿ ಮತ್ತಿಕೆರೆ, ಹೊಸಹಳ್ಳಿ ಹಾಗೂ ಶಿವನೇಹಳ್ಳಿ ಕೆರೆಗಳಿಗೆ ನೀರನ್ನು ತುಂಬಿಸುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿರುತ್ತದೆ. ಈ ಯೋಜನೆಯ ಅಂದಾಜಿಗೆ ಸರ್ಕಾರದ ಆದೇಶ ಸಂಖ್ಯೆ: ಜಸಂಇ 192 ಎನ್‌ಹೆಚ್‌ಪಿ 2013 ಬೆಂಗಳೂರು, ದಿ: 28–02–2014 ರಲ್ಲಿ ರೂ. 5.31 ಕೋಟಿಗಳಿಗೆ ಆಡಳಿತಾತ್ಮಕ ಅನುಮೋದನೆ ದೊರೆತಿರುತ್ತದೆ. ಈ ಯೋಜನೆಯನ್ನು ಒಳಗೊಂಡಂತೆ ಒಟ್ಟು 05 ಯೋಜನೆಗಳನ್ನು ಕ್ರೊಢೀಕರಿಸಿದ ಪ್ಯಾಕೇಜ್ ಟೆಂಡರ್‌ಗೆ ದಿನಾಂಕ: 24.02.2015 ರಂದು ನಿಗಮದಿಂದ ಅನುಮೋದನೆ ನೀಡಲಾಗಿದೆ. ಕಾಮಗಾರಿಯು ಎಲ್ಲಾ ರೀತಿಯಿಂದಲು ಭೌತಿಕವಾಗಿ ಪೂರ್ಣಗೊಂಡಿದ್ದು, ಎಲ್ಲಾ ಕೆರೆಗಳಿಗೆ ನೀರನ್ನು ಹರಿಸಲಾಗಿದೆ.

ಈ ಯೋಜನೆಗೆ 2018–19 ನೇ ಸಾಲಿಗೆ ರೂ. 1.20 ಕೋಟಿ ಅನುದಾನ ಒದಗಿಸಲಾಗಿದ್ದು, ಮಾರ್ಚ್–2019 ರ ಅಂತ್ಯದವರೆಗೆ ಯಾವುದೇ ವೆಚ್ಚ ಮಾಡಿರುವುದಿಲ್ಲ. ಈ ಯೋಜನೆಯ ಪ್ರಾರಂಭದಿಂದ ಮಾರ್ಚ್–2019 ಅಂತ್ಯದವರೆಗೆ ಮಾಡಲಾದ ಕ್ರೋಢಿಕೃತ ವೆಚ್ಚ ರೂ. 5.41 ಕೋಟಿಗಳಾಗಿರುತ್ತದೆ.

17. ಗುಬ್ಬಿ ತಾಲ್ಲೂಕಿನ ಹೊಸಕೆರೆ, ಅಳಿಲುಘಟ್ಟ ಹಾಗೂ ಅಳಿಲುಘಟ್ಟ ಅಮಾನಿ ಕುಡಿಯುವ ನೀರೋದಗಿಸುವ ಯೋಜನೆ.

ತುಮಕೂರು ಜಿಲ್ಲೆ, ಗುಬ್ಬಿ ತಾಲ್ಲೂಕಿನ 16 ಗ್ರಾಮಗಳಿಗೆ ಕುಡಿಯುವ ನೀರಿಗಾಗಿ ಹೇಮಾವತಿ ಯೋಜನೆಯ ತುಮಕೂರು ಶಾಖಾ ನಾಲೆಯ ಸರ: 88.35 ಕಿ.ಮೀ. ನಿಂದ 38.68 ಎಂ.ಸಿ.ಎಫ್.ಟಿ ನೀರನ್ನು ಎತ್ತಿ ಗುಬ್ಬಿ ತಾಲ್ಲೂಕಿನ ಹೊಸಕೆರೆ, ಅಳಿಲುಘಟ್ಟ ಹಾಗೂ ಅಳಿಲುಘಟ್ಟ ಅಮಾನಿ ಕೆರೆಗಳಿಗೆ ನೀರನ್ನು ಹರಿಸುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿರುತ್ತದೆ. ಈ ಯೋಜನೆಯ ಅಂದಾಜಿಗೆ ಸರ್ಕಾರದ ಆದೇಶ ಸಂಖ್ಯೆ: ಜಸಂಇ 189 ಎನ್‌ಹೆಚ್‌ಪಿ 2013 ಬೆಂಗಳೂರು, ದಿ: 28–02–2014 ರಲ್ಲಿ ರೂ.8.20 ಕೋಟಿಗಳಿಗೆ ಆಡಳಿತಾತ್ಮಕ ಅನುಮೋದನೆ ದೊರೆತಿರುತ್ತದೆ. ಈ ಯೋಜನೆಯನ್ನು ಒಳಗೊಂಡಂತೆ ಒಟ್ಟು 05 ಯೋಜನೆಗಳನ್ನು ಕ್ರೊಢೀಕರಿಸಿದ ಪ್ಯಾಕೇಜ್ ಟೆಂಡರ್‌ಗೆ ದಿನಾಂಕ: 24.02.2015 ರಂದು ನಿಗಮದಿಂದ ಅನುಮೋದನೆನೀಡಲಾಗಿದೆ. ಕಾಮಗಾರಿಯು ಎಲ್ಲಾ ರೀತಿಯಿಂದಲು ಭೌತಿಕವಾಗಿ ಪೂರ್ಣಗೊಂಡಿದ್ದು, ಎಲ್ಲಾ ಕೆರೆಗಳಿಗೆ ನೀರನ್ನು ಹರಿಸಲಾಗಿದೆ.

ಈ ಯೋಜನೆಗೆ 2018–19 ನೇ ಸಾಲಿಗೆ ರೂ. 1.70 ಕೋಟಿ ಅನುದಾನ ಒದಗಿಸಲಾಗಿದ್ದು, ಮಾರ್ಚ್–2019 ರ ಅಂತ್ಯದವರೆಗೆ ಯಾವುದೇ ವೆಚ್ಚ ಮಾಡಿರುವುದಿಲ್ಲ. ಈ ಯೋಜನೆಯ ಪ್ರಾರಂಭದಿಂದ ಮಾರ್ಚ್–2019 ಅಂತ್ಯದವರೆಗೆ ಮಾಡಲಾದ ಕ್ರೋಢಿಕೃತ ವೆಚ್ಚ ರೂ. 8.10 ಕೋಟಿಗಳಾಗಿರುತ್ತದೆ.

18. ಮಾಗಡಿ ತಾಲ್ಲೂಕು ಹಾಗೂ ಕುಣಿಗಲ್ ತಾಲ್ಲೂಕಿನ ಹುತ್ತರಿದುರ್ಗ ಹೋಬಳಿಯ 83 ಕೆರೆಗಳ ಕುಡಿಯುವ ನೀರೋದಗಿಸುವ ಯೋಜನೆ – ಶ್ರೀರಂಗ ಕುಡಿಯುವ ನೀರಿನ ಯೋಜನೆ.

ಹೇಮಾವತಿ ನಾಲಾ ವಲಯ ಯೋಜನೆಯಡಿಯಲ್ಲಿ ತುಮಕೂರು ಶಾಖಾ ನಾಲೆ ಸರಪಳಿ 192.30 ಕಿ.ಮೀ ನಿಂದ 843.71 ಎಂ.ಸಿ.ಎಫ್.ಟಿ ನೀರನ್ನು ಎತ್ತಿ ರಾಮನಗರ ಜಿಲ್ಲೆ ಮಾಗಡಿ ತಾಲ್ಲೂಕು ಹಾಗೂ ತುಮಕೂರು ಜಿಲ್ಲೆ ಕುಣಿಗಲ್ ತಾಲ್ಲೂಕು ಹುತ್ತಿದುರ್ಗ ಹೋಬಳಿಯ 83 ಕೆರೆಗಳಿಗೆ ಕುಡಿಯುವ ನೀರನ್ನು ಒದಗಿಸುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿರುತ್ತದೆ. ಈ ಯೋಜನೆಯ

ಅಂದಾಜಿಗೆ ಸರ್ಕಾರದ ಆದೇಶ ಸಂಖ್ಯೆ: ಜಸಂಇ 45 ಎನ್‌ಹೆಚ್‌ಪಿ 2013 ಬೆಂಗಳೂರು, ದಿ: 28.02.2014 ರಲ್ಲಿ ರೂ. 277.50 ಕೋಟಿಗಳಿಗೆ ಆಡಳಿತಾತ್ಮಕ ಅನುಮೋದನೆ ದೊರೆತಿರುತ್ತದೆ. ಸದರಿ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.

ಪಂಪ್‌ಹೌಸ್‌ನ ಆಯ್ದ ಭಾಗಗಳಾದ ರ್‍ಯಾಫ್ಟ್, ಸೈಡ್ ವಾಲ್, ವಾಲ್ವ್ ಫ್ಲೋರ್ ಹಾಗೂ ಮೋಟಾರ್ ಫ್ಲೋರ್ ಸ್ಲಾಬ್ ಕಾಮಗಾರಿಯು ಪೂರ್ಣಗೊಂಡಿರುತ್ತದೆ. ಟೈ ಭೀಮ್ ಗೆ ಕಾಂಕ್ರೀಟ್ ಒದಗಿಸುವ ಕಾಮಗಾರಿಯು ಪೂರ್ಣಗೊಂಡಿರುತ್ತದೆ. ಕಾಲಂಗಳಿಗೆ ಭೀಮ್ ಲೆವೆಲ್ ನ ಮೊದಲನೇ ಹಂತದ ಕಾಂಕ್ರೀಟ್ ಕೆಲಸ ಪೂರ್ಣಗೊಂಡಿದೆ. ಎಲೆಕ್ಟ್ರಿಕಲ್ ಸಬ್‌ಸ್ಟೇಷನ್ ನ ಸಿವಿಲ್ ಹಾಗೂ ಮೌಂಟಿಂಗ್ ಸ್ಟ್ರಕ್ಚರ್ಸ್ ಪ್ರಗತಿಯಲ್ಲಿರುತ್ತದೆ. ರೈಸಿಂಗ್‌ಮೇನ್ –1 ರಲ್ಲಿ 8.00 ಕಿ.ಮೀ ಉದ್ದ ಹಾಗೂ ರೈಸಿಂಗ್‌ಮೇನ್ –2 ರಲ್ಲಿ 5.50 ಕಿ.ಮೀ ಉದ್ದದ ಪೈಪ್ ಲೇಯಿಂಗ್ ಪೂರ್ಣಗೊಂಡಿರುತ್ತದೆ. ರೈಸಿಂಗ್ ಮೈನ್–1 ಹಾಗೂ 2 ರ 37.433 ಕಿ.ಮೀ ಉದ್ದದ ಪೈಕಿ, 36.00ಕಿ.ಮೀ ಇನ್‌ಲೈನಿಂಗ್ ಕಾಮಗಾರಿಯು ಪೂರ್ಣಗೊಂಡಿರುತ್ತದೆ. 34 ಕಿ.ಮೀ ಗನೈಟಿಂಗ್ ಕಾಮಗಾರಿಯು ಪೂರ್ಣಗೊಂಡಿರುತ್ತದೆ.

ಈ ಯೋಜನೆಗೆ 2018–19 ನೇ ಸಾಲಿಗೆ ರೂ. 15.00 ಕೋಟಿ ಅನುದಾನ ಒದಗಿಸಲಾಗಿದ್ದು, ಮಾರ್ಚ್–2019 ರ ಅಂತ್ಯದವರೆಗೆ ರೂ. 10.12 ಕೋಟಿ ವೆಚ್ಚ ಮಾಡಲಾಗಿದೆ. ಈ ಯೋಜನೆಯ ಪ್ರಾರಂಭದಿಂದ ಮಾರ್ಚ್–2019 ಅಂತ್ಯದವರೆಗೆ ಮಾಡಲಾದ ಕ್ರೋಢಿಕೃತ ವೆಚ್ಚ ರೂ. 163.55 ಕೋಟಿಗಳಾಗಿರುತ್ತದೆ.

19. ತುರುವೇಕೆರೆ ತಾಲ್ಲೂಕಿನ ದಬ್ಬೇಘಟ್ಟ ಹಾಗೂ ಗೊಟ್ಟಿಕೆರೆ ಕುಡಿಯುವ ನೀರೋದಗಿಸುವ ಯೋಜನೆ.

ತುಮಕೂರು ಜಿಲ್ಲೆ, ತುರುವೇಕೆರೆ ತಾಲ್ಲೂಕಿನ ದಬ್ಬೇಘಟ್ಟ ಹೋಬಳಿಯ 6 ಗ್ರಾಮಗಳಿಗೆ ಕುಡಿಯುವ ನೀರಿಗಾಗಿ ಹೇಮಾವತಿ ಯೋಜನೆಯ ನಾಗಮಂಗಲ ಶಾಖಾ ನಾಲೆಯ ಸರ: 42.856 ಕಿ.ಮೀ. ನಿಂದ 16.40 ಎಂ.ಸಿ.ಎಫ್.ಟಿ ನೀರನ್ನು ಎತ್ತಿ ದಬ್ಬೇಘಟ್ಟ ಮತ್ತು ಗೊಟ್ಟಿಕೆರೆ ಕೆರೆಗಳಿಗೆ ನೀರನ್ನು ಹರಿಸುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿರುತ್ತದೆ.ಈ ಯೋಜನೆಯ ಅಂದಾಜಿಗೆ ನಿಗಮ ಕಾರ್ಯದೇಶ ದಿನಾಂಕ 11.02.2013 ರಲ್ಲಿ ರೂ. 3.00 ಕೋಟಿಗಳಿಗೆ ಆಡಳಿತಾತ್ಮಕ ಅನುಮೋದನೆ ದೊರೆತಿರುತ್ತದೆ. ಸದರಿ ಯೋಜನೆಯ ಟೆಂಡರ್‌ಗೆ ದಿನಾಂಕ: 24.02.2015 ರಂದು ಅನುಮೋದನೆನೀಡಲಾಗಿರುತ್ತದೆ. ಸದರಿ ಕಾಮಗಾರಿಯು ಪೂರ್ಣಗೊಂಡಿದ್ದು, ಕೆರೆಗಳಿಗೆ ಪ್ರಾಯೋಗಿಕವಾಗಿ ನೀರನ್ನು ಹರಿಸಲಾಗಿದೆ.

ಈ ಯೋಜನೆಗೆ 2018–19 ನೇ ಸಾಲಿಗೆ ರೂ. 1.20 ಕೋಟಿ ಅನುದಾನ ಒದಗಿಸಲಾಗಿದ್ದು, ಮಾರ್ಚ್–2019 ರ ಅಂತ್ಯದವರೆಗೆ ಯಾವುದೇ ವೆಚ್ಚ ಮಾಡಿರುವುದಿಲ್ಲ. ಈ ಯೋಜನೆಯ ಪ್ರಾರಂಭದಿಂದ ಮಾರ್ಚ್–2019 ಅಂತ್ಯದವರೆಗೆ ಮಾಡಲಾದ ಕ್ರೋಢಿಕೃತ ವೆಚ್ಚ ರೂ. 2.09 ಕೋಟಿಗಳಾಗಿರುತ್ತದೆ.

20. ತುರುವೇಕೆರೆ ತಾಲ್ಲೂಕಿನ ದಬ್ಬೇಘಟ್ಟ ಹೋಬಳಿಯ ಹಬಕನಹಳ್ಳಿ ಹಾಗೂ ಕಣತ್ತೂರು ಕೆರೆಗಳಿಗೆ ನೀರು ಒದಗಿಸುವುದು–ಕುಡಿಯುವ ನೀರೋದಗಿಸುವ ಯೋಜನೆ.

ತುಮಕೂರು ಜಿಲ್ಲೆ, ತುರುವೇಕೆರೆ ತಾಲ್ಲೂಕಿನ ದಬ್ಬೇಘಟ್ಟ ಹೋಬಳಿಯ 10 ಗ್ರಾಮಗಳಿಗೆ ಕುಡಿಯುವ ನೀರಿಗಾಗಿ ಹೇಮಾವತಿ ಯೋಜನೆಯ ನಾಗಮಂಗಲ ಶಾಖಾ ನಾಲೆಯ ಸ: 22.750 ಕಿ.ಮೀ ನಿಂದ 2.85 ಎಂ.ಸಿ.ಎಫ್.ಟಿ ಹಾಗೂ 27.325 ಕಿ.ಮೀ. ನಿಂದ 9.90 ಎಂ.ಸಿ.ಎಫ್.ಟಿ ನೀರನ್ನು ಎತ್ತಿ ಕ್ರಮವಾಗಿ ಹಬಕನಹಳ್ಳಿ ಹಾಗೂ ಕಣತ್ತೂರು ಕೆರೆಗಳಿಗೆ ನೀರನ್ನು ಹರಿಸುವುದುಈ ಯೋಜನೆಯ ಮುಖ್ಯ ಉದ್ದೇಶವಾಗಿರುತ್ತದೆ. ಈ ಯೋಜನೆಯ ರೂ. 1.30 ಕೋಟಿ ಮೊತ್ತದ ಅಂದಾಜಿಗೆ ನಿಗಮದ ಕಾರ್ಯಾದೇಶ ಸಂಖ್ಯೆ CNNL /TA –2/410/12–13, ದಿನಾಂಕ 11.02.2013 ರಂದು ಆಡಳಿತಾತ್ಮಕ ಅನುಮೋದನೆ ದೊರೆತಿರುತ್ತದೆ. ಈ ಕಾಮಗಾರಿಯು ಪೂರ್ಣಗೊಂಡಿದ್ದು, ಪ್ರಾಯೋಗಿಕವಾಗಿ ನೀರನ್ನು ಹರಿಸಲಾಗಿರುತ್ತದೆ.

ಈ ಯೋಜನೆಗೆ 2018–19 ನೇ ಸಾಲಿಗೆ ರೂ. 0.40 ಕೋಟಿ ಅನುದಾನ ಒದಗಿಸಲಾಗಿದ್ದು, ಮಾರ್ಚ್–2019 ರ ಅಂತ್ಯದವರೆಗೆ ಯಾವುದೇ ವೆಚ್ಚ ಮಾಡಿರುವುದಿಲ. ಈ ಯೋಜನೆಯ ಪ್ರಾರಂಭದಿಂದ ಮಾರ್ಚ್–2019 ಅಂತ್ಯದವರೆಗೆ ಮಾಡಲಾದ ಕ್ರೋಢಿಕೃತ ವೆಚ್ಚ ರೂ. 1.09 ಕೋಟಿಗಳಾಗಿರುತ್ತದೆ.

21. ಚಿಕ್ಕನಂದಿ ಕುಡಿಯುವ ನೀರೋದಗಿಸುವ ಯೋಜನೆ.

ಮೈಸೂರು ಜಿಲ್ಲೆ, ಮೈಸೂರು, ನಂಜನಗೂಡು ಹಾಗೂ ಹೆಚ್.ಡಿ.ಕೋಟೆ ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರುವ 27 ಗ್ರಾಮಗಳಿಗೆ ಕುಡಿಯುವ ನೀರಿನ ಪೂರೈಕೆಗಾಗಿ ಕಬಿನಿ ನದಿಯಿಂದ 505 ಎಂ.ಸಿ.ಎಫ್.ಟಿ ನೀರನ್ನು ಎತ್ತಿ ರೈಸಿಂಗ್ ಮೈನ್ ಮೂಲಕ ಡಿ.ಡಿ.ಅರಸ್ ನಾಲೆಯ 77.24 ಕಿ.ಮೀ. ನಲ್ಲಿ ನಿರ್ಮಿಸುವ ಡೆಲಿವರಿ ಚೇಂಬರ್‌ಗೆ ನೀರನ್ನು ಹರಿಸಿ, ಅಲ್ಲಿಂದ ಗುರುತ್ವಾಕರ್ಷಣೆ ಮೂಲಕ ಡಿ.ಡಿ.ಅರಸ್ ನಾಲಾ ಜಾಲಾದಿಂದ ಹಾಗೂ ಫೀಡರ್ ಕಾಲುವೆಯ ಮುಖಾಂತರ 23 ಕೆರೆಗಳಿಗೆ ನೀರನ್ನು ಹರಿಸುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿರುತ್ತದೆ. ಈ ಯೋಜನೆಯ ಅಂದಾಜಿಗೆ ಸರ್ಕಾರದ ಆದೇಶ ಸಂಖ್ಯೆ: ಜಸಂಇ 4 ಎಂಎಂಕೆ 2014 ಬೆಂಗಳೂರು, ದಿ: 19.02.2014 ರಲ್ಲಿ ರೂ. 45.50 ಕೋಟಿಗಳಿಗೆ ಆಡಳಿತಾತ್ಮಕ ಅನುಮೋದನೆ ದೊರೆತಿರುತ್ತದೆ. ಸದರಿ ಯೋಜನೆಯ ಕಾಮಗಾರಿಗಳು ಭೌತಿಕವಾಗಿ ಪೂರ್ಣಗೊಂಡಿದ್ದು, 23 ಕೆರೆಗಳನ್ನು ತುಂಬಿಸಲಾಗಿದೆ.

ಈ ಯೋಜನೆಗೆ 2018–19 ನೇ ಸಾಲಿಗೆ ರೂ. 6.00 ಕೋಟಿ ಅನುದಾನ ಒದಗಿಸಲಾಗಿದ್ದು, ಮಾರ್ಚ್–2019 ರ ಅಂತ್ಯದವರೆಗೆ ರೂ. 6.39 ಕೋಟಿ ವೆಚ್ಚ ಮಾಡಲಾಗಿದೆ. ಈ ಯೋಜನೆಯ ಪ್ರಾರಂಭದಿಂದ ಮಾರ್ಚ್–2019 ಅಂತ್ಯದವರೆಗೆ ಮಾಡಲಾದ ಕ್ರೋಢಿಕೃತ ವೆಚ್ಚ ರೂ. 47.40 ಕೋಟಿಗಳಾಗಿರುತ್ತದೆ.

22. ನಂಜನಗೂಡು ಮತ್ತು ಗುಂಡ್ಲುಪೇಟೆ ತಾಲ್ಲೂಕಿನ 12 ಕೆರೆಗಳಿಗೆ ನೀರು ಒದಗಿಸುವುದು–ಗಾಂಧಿ ಗ್ರಾಮ ಕುಡಿಯುವ ನೀರೋದಗಿಸುವ ಯೋಜನೆ.

ಮೈಸೂರು ಜಿಲ್ಲೆ ನಂಜನಗೂಡು ತಾಲ್ಲೂಕು ಹಾಗೂ ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ತಾಲ್ಲೂಕಿನ 30 ಗ್ರಾಮಗಳಿಗೆ ಕುಡಿಯುವ ನೀರಿಗಾಗಿಗಾಂಧಿಗ್ರಾಮದ ಬಳಿ ಎರಡು ಹಂತಗಳಲ್ಲಿ 95.00 ಎಂ.ಸಿ.ಎಫ್.ಟಿ ನೀರನ್ನು ಕಬಿನಿ ನದಿಯಿಂದ ಎತ್ತಿ ಗುಂಡ್ಲುಪೇಟೆ ತಾಲ್ಲೂಕಿನ 9 ಕೆರೆಗಳಿಗೆ ಹಾಗೂ ನಂಜನಗೂಡು ತಾಲ್ಲೂಕಿನ 3 ಕೆರೆಗಳಿಗೆ ನೀರು ತುಂಬಿಸುವುದುಈ ಯೋಜನೆಯ ಮುಖ್ಯ ಉದ್ದೇಶವಾಗಿರುತ್ತದೆ. ಈ ಯೋಜನೆಯ ಅಂದಾಜಿಗೆ ಸರ್ಕಾರದ ಆದೇಶ ಸಂಖ್ಯೆ: ಜಸಂಇ 171 ಎಂಎಂಕೆ 2013 ಬೆಂಗಳೂರು, ದಿ: 29.01.2014 ರಲ್ಲಿ ರೂ. 67.50

ಕೋಟಿಗಳಿಗೆ ಆಡಳಿತಾತ್ಮಕ ಅನುಮೋದನೆ ದೊರೆತಿರುತ್ತದೆ. ಸದರಿ ಯೋಜನೆಯ ಮೊದಲನೆ ಮತ್ತು ಎರಡನೇ ಹಂತದ ಕಾಮಗಾರಿಗಳು ಭೌತಿಕವಾಗಿ ಪೂರ್ಣಗೊಂಡಿದ್ದು, ಪ್ರಾರಂಭಿಕ ಚಾಲನೆ ಮಾಡಲಾಗಿರುತ್ತದೆ.

ಈ ಯೋಜನೆಗೆ 2018–19 ನೇ ಸಾಲಿಗೆ ರೂ. 4.00 ಕೋಟಿ ಅನುದಾನ ಒದಗಿಸಲಾಗಿದ್ದು, ಮಾರ್ಚ್–2019 ರ ಅಂತ್ಯದವರೆಗೆ ರೂ. 3.27 ಕೋಟಿ ವೆಚ್ಚ ಮಾಡಲಾಗಿದೆ. ಈ ಯೋಜನೆಯ ಪ್ರಾರಂಭದಿಂದ ಮಾರ್ಚ್–2019 ಅಂತ್ಯದವರೆಗೆ ಮಾಡಲಾದ ಕ್ರೋಢಿಕೃತ ವೆಚ್ಚ ರೂ. 66.06 ಕೋಟಿಗಳಾಗಿರುತ್ತದೆ.

23. ಅರಕಲಗೂಡು ತಾಲ್ಲೂಕಿನ 88 ಕೆರೆಗಳಿಗೆ ನೀರು ಒದಗಿಸುವುದು–ಕುಡಿಯುವ ನೀರೋದಗಿಸುವ ಯೋಜನೆ.

ಹಾಸನ ಜಿಲ್ಲೆ, ಅರಕಲಗೂಡು ತಾಲ್ಲೂಕು ಹೆಬ್ಬಾಲೆ, ಗಂಗನಾಳು ಗಂಜಲಗೂಡು ಹಾಗೂ ಇತರೆ 42 ಗ್ರಾಮಗಳಿಗೆ ಕುಡಿಯುವ ನೀರಿಗಾಗಿ ಹೇಮಾವತಿ ನದಿಯಿಂದ ಗಂಗನಾಳು ಗ್ರಾಮದ ಬಳಿ 87.10 ಎಂ.ಸಿ.ಎಫ್.ಟಿ ನೀರನ್ನು ಎರಡು ಹಂತಗಳಲ್ಲಿ ಎತ್ತಿ ಗುರುತ್ವಾಕರ್ಷಣೆ ಮೂಲಕ 88 ಕೆರೆಗಳಿಗೆ ನೀರನ್ನು ಹರಿಸುವುದುಈ ಯೋಜನೆಯ ಮುಖ್ಯ ಉದ್ದೇಶವಾಗಿರುತ್ತದೆ. ಈ ಯೋಜನೆಯ ಅಂದಾಜಿಗೆ ಸರ್ಕಾರದ ಆದೇಶ ಸಂಖ್ಯೆ: ಜಸಂಇ 40 ಎನ್ಎಚ್ಪಿ 2013 ಬೆಂಗಳೂರು, ದಿ: 04.03.2014 ರಲ್ಲಿ ರೂ. 28.00 ಕೋಟಿಗಳಿಗೆ ಆಡಳಿತಾತ್ಮಕ ಅನುಮೋದನೆ ಹಾಗೂ ತಾಂತ್ರಿಕ ಮಂಜೂರಾತಿ ದೊರೆತಿರುತ್ತದೆ. ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.

1ನೇ ಹಂತ: ರಿಂಗ್ ಬಂಡ್, ಇನ್ಟೇಕ್, ಕನೆಕ್ಟಿಂಗ್ ಪೈಪ್ ಅಳವಡಿಕೆ, ಜಾಕ್‌ವೆಲ್/ಪಂಪ್ ಹೌಸ್, ವಿತರಣಾ ತೊಟ್ಟಿ, ರೈಸಿಂಗ್ ಮೈನ್ (5.32 ಕಿ.ಮೀ), ಪೂರ್ಣಗೊಂಡಿರುತ್ತದೆ. ವಿತರಣಾ ಕೊಳವೆ 21.52 ಕಿ.ಮೀ ಉದ್ದದ ಪೈಕಿ 20.00 ಕಿ.ಮೀ ಪೂರ್ಣಗೊಂಡಿರುತ್ತದೆ. ಪಂಪ್, ಮೋಟಾರ್, ಟ್ರಾನ್ಸ್‌ಫಾರ್ಮರ್ಸ್ ಅಳವಡಿಕೆ ಆಗಿರುತ್ತದೆ. ವಿದ್ಯುತ್ ಲೈನ್ ಅಳವಡಿಕೆ (6.50 ಕಿ.ಮೀ) ಪೂರ್ಣಗೊಂಡಿರುತ್ತದೆ. ಉಳಿಕೆ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.

2ನೇ ಹಂತ: ಇನ್ಟೇಕ್‌ವೆಲ್, ಕನೆಕ್ಟಿಂಗ್ ಪೈಪ್ ಅಳವಡಿಕೆ, ಜಾಕ್‌ವೆಲ್/ಪಂಪ್ ಹೌಸ್, ವಿತರಣಾ ತೊಟ್ಟಿ ಪೂರ್ಣಗೊಂಡಿರುತ್ತದೆ, ರೈಸಿಂಗ್ ಮೈನ್ 1.25 ಕಿ.ಮೀ ಉದ್ದದ ಪೈಕಿ 1.095 ಕಿ.ಮೀ ಪೂರ್ಣಗೊಂಡಿರುತ್ತದೆ, ವಿತರಣ ಕೊಳವೆ 11.710.ಕಿ.ಮೀ ಉದ್ದದ ಪೈಕಿ 10.00 ಕಿ.ಮೀ ಪೂರ್ಣಗೊಂಡಿರುತ್ತದೆ. ಪಂಪ್, ಮೋಟಾರ್, ಟ್ರಾನ್ಸ್‌ಫಾರ್ಮರ್ಸ್ ಅಳವಡಿಕೆ ಆಗಿರುತ್ತದೆ, ವಿದ್ಯುತ್ ಲೈನ್ ಅಳವಡಿಕೆ (2.50 ಕಿ.ಮೀ) ಪೂರ್ಣಗೊಂಡಿರುತ್ತದೆ.

ಈ ಯೋಜನೆಗೆ 2018–19 ನೇ ಸಾಲಿಗೆ ರೂ. 2.00 ಕೋಟಿ ಅನುದಾನ ಒದಗಿಸಲಾಗಿದ್ದು, ಮಾರ್ಚ್–2019 ರ ಅಂತ್ಯದವರೆಗೆ ರೂ. 2.72 ಕೋಟಿ ವೆಚ್ಚ ಮಾಡಲಾಗಿದೆ. ಈ ಯೋಜನೆಯ ಪ್ರಾರಂಭದಿಂದ ಮಾರ್ಚ್–2019 ಅಂತ್ಯದವರೆಗೆ ಮಾಡಲಾದ ಕ್ರೋಢಿಕೃತ ವೆಚ್ಚ ರೂ. 32.19 ಕೋಟಿಗಳಾಗಿರುತ್ತದೆ.

24. ಕನಕಪುರ ತಾಲ್ಲೂಕಿನ ಸಾತನೂರು ಹೋಬಳಿ ಮತ್ತು ರಾಮನಗರ ತಾಲ್ಲೂಕಿನ ಕೈಲಾಂಚ ಹೋಬಳಿ ವ್ಯಾಪ್ತಿಯಲ್ಲಿ ಬರುವ ಒಟ್ಟು 27 ಕೆರೆಗಳಿಗೆ ಇಗ್ಗಲೂರು ಬ್ಯಾರೇಜ್ ಕೆಳಭಾಗದಲ್ಲಿ ಶಿಂಷಾ ನದಿಯಿಂದ ನೀರನ್ನು ಎತ್ತಿ ತುಂಬಿಸುವ ಯೋಜನೆ.

ಕನಕಪುರ ತಾಲ್ಲೂಕಿನ ಸಾತನೂರು ಹೋಬಳಿ ಮತ್ತು ರಾಮನಗರ ತಾಲ್ಲೂಕಿನ ಕೈಲಾಂಚ ಹೋಬಳಿ ವ್ಯಾಪ್ತಿಯಲ್ಲಿ ಬರುವ ಇಗ್ಗಲೂರು ಬ್ಯಾರೇಜ್ ಕೆಳಭಾಗದಲ್ಲಿ ಶಿಂಷಾ ನದಿಯಿಂದ 549.00 ಎಂ.ಸಿ.ಎಫ್.ಟಿ ನೀರನ್ನು 3 ಹಂತಗಳಲ್ಲಿ ಎತ್ತಿ ಒಟ್ಟು 27 ಕೆರೆಗಳಿಗೆ ನೀರನ್ನು ಹರಿಸುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿರುತ್ತದೆ. ಈ ಯೋಜನೆಯ ಅಂದಾಜಿಗೆ ಸರ್ಕಾರದ ಆದೇಶ ಸಂಖ್ಯೆ: ಜಸಂಇ 17 ಎಂಎಂಕೆ 2014 ಬೆಂಗಳೂರು, ದಿ: 07.02.2015 ರಲ್ಲಿ ರೂ. 155.00 ಕೋಟಿಗಳಿಗೆ ಆಡಳಿತಾತ್ಮಕ ಅನುಮೋದನೆ ದೊರೆತಿರುತ್ತದೆ. ಸದರಿ ಯೊಜನೆಯ ಕಾಮಗಾರಿಗಳು ಪ್ರಗತಿಯಲ್ಲಿರುತ್ತದೆ. ಈ ಯೋಜನೆಯಡಿ 2017–18 ನೇ ಸಾಲಿನಲ್ಲಿ ಹಂತ 1 ರ ಕಾಮಗಾರಿಯು ಪೂರ್ಣಗೊಂಡಿದ್ದು , ಪ್ರಾರಂಭಿಕ ಚಾಲನೆ ಮಾಡಲಾಗಿರುತ್ತದೆ. ಹಂತ 2 ಮತ್ತು 3 ರ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.

2ನೇ ಹಂತ: ಎಲೆಕ್ಟ್ರಿಕಲ್ ವರ್ಕ್, ಸಬ್‌ಸ್ಟೇಷನ್ ಮತ್ತು ರೈಸಿಂಗ್ ಮೇನ್ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.

3ನೇ ಹಂತ: ರ್‍ಯಾಫ್ಟ್ ಘುಟಿಂಗ್, ಪಂಪ್‌ಹೌಸ್ ನಿರ್ಮಾಣ ಮತ್ತು ರೈಸಿಂಗ್ ಮೈನ್ ಕಾಮಗಾರಿಗಳು ಪ್ರಗತಿಯಲ್ಲಿರುತ್ತದೆ.

ಈ ಯೋಜನೆಗೆ 2018–19 ನೇ ಸಾಲಿಗೆ ರೂ. 11.00 ಕೋಟಿ ಅನುದಾನ ಒದಗಿಸಲಾಗಿದ್ದು, ಮಾರ್ಚ್–2019 ರ ಅಂತ್ಯದವರೆಗೆ ರೂ. 23.68 ಕೋಟಿ ವೆಚ್ಚ ಮಾಡಲಾಗಿದೆ. ಈ ಯೋಜನೆಯ ಪ್ರಾರಂಭದಿಂದ ಮಾರ್ಚ್–2019 ಅಂತ್ಯದವರೆಗೆ ಮಾಡಲಾದ ಕ್ರೋಢಿಕೃತ ವೆಚ್ಚ ರೂ. 140.95 ಕೋಟಿಗಳಾಗಿರುತ್ತದೆ.

25. ಚನ್ನರಾಯಪಟ್ಟಣ ತಾಲ್ಲೂಕಿನ ಹಿರೇಸಾವೆ – ಶ್ರವಣಬೆಳಗೊಳ ಹೋಬಳಿ ಮತ್ತು ಕೆ.ಆರ್ ಪೇಟೆ ತಾಲ್ಲೂಕಿನ ಸಂತೆಬಾಚನಹಳ್ಳಿ ಹೋಬಳಿ 22 ಕೆರೆಗಳನ್ನು ಲಿಫ್ಟ್ ಮುಖೇನ ಕುಡಿಯುವ ನೀರಿಗಾಗಿ ತುಂಬಿಸುವ ಯೋಜನೆ.

ಚನ್ನರಾಯಪಟ್ಟಣ ತಾಲ್ಲೂಕಿನ ಹಿರೇಸಾವೆ – ಶ್ರವಣಬೆಳಗೊಳ ಹೋಬಳಿ ಮತ್ತು ಕೆ.ಆರ್ ಪೇಟೆ ತಾಲ್ಲೂಕಿನ ಸಂತೆಬಾಚನಹಳ್ಳಿ ಹೋಬಳಿ ಕೆರೆಗಳನ್ನು ಲಿಫ್ಟ್ ಮುಖೇನ ಕುಡಿಯುವ ನೀರಿಗಾಗಿ ಜನಿವಾರ ಕೆರೆಯಿಂದ 264.00 ಎಂ.ಸಿ.ಎಫ್.ಟಿ ನೀರನ್ನು 2 ಹಂತಗಳಲ್ಲಿ ಎತ್ತಿ ಒಟ್ಟು 22 ಕೆರೆಗಳಿಗೆ ನೀರನ್ನು ಹರಿಸುವುದುಈ ಯೋಜನೆಯ ಮುಖ್ಯ ಉದ್ದೇಶವಾಗಿರುತ್ತದೆ. ಈ ಯೋಜನೆಯ ಯೋಜನಾ

ವರದಿಗೆ ಸರ್ಕಾರದ ಆದೇಶ ಸಂಖ್ಯೆ: ಜಸಂಇ 107 ಎನ್‌ಹೆಚ್‌ಪಿ 2014 ಬೆಂಗಳೂರು, ದಿ: 31.03.2015 ರಲ್ಲಿ ರೂ. 56.00 ಕೋಟಿಗಳಿಗೆ ಆಡಳಿತಾತ್ಮಕ ಅನುಮೋದನೆ ದೊರೆತಿರುತ್ತದೆ. ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.

1ನೇ ಹಂತ: ಪಂಪ್ ಹೌಸ್‌ನ ಸಿವಿಲ್ ಕಾಮಗಾರಿ ಪೂರ್ಣಗೊಂಡಿದ್ದು, ಪಂಪು ಮೋಟಾರ್‌ಗಳನ್ನು ಅಳವಡಿಸಲಾಗಿರುತ್ತದೆ. ಪ್ಯಾನಲ್ ಬೋರ್ಡ್ ಅಳವಡಿಸುವ ಕಾಮಗಾರಿ ಪ್ರಗತಿಯಲ್ಲಿರುತ್ತದೆ. ರೈಸಿಂಗ್ ಮೈನ್‌ನ 9.80 ಕಿ.ಮೀ. ಉದ್ದದ ಪೈಕಿ 9.40 ಕಿ.ಮೀ ಪೂರ್ಣಗೊಂಡಿರುತ್ತದೆ. ಬಲದಂಡೆ ಮತ್ತು ಎಡದಂಡೆ ನಾಲೆಯ ಅಗೆತದ ಕೆಲಸವು ಪ್ರಗತಿಯಲ್ಲಿರುತ್ತದೆ.

2ನೇ ಹಂತ: ಪಂಪ್ ಹೌಸ್ ಕಾಮಗಾರಿ ಪ್ರಗತಿಯಲ್ಲಿದ್ದು, ಪಂಪ್ ಹಾಗೂ ಮೋಟಾರ್‌ಗಳು ಸರಬರಾಜಾಗಿರುತ್ತವೆ. ರೈಸಿಂಗ್ ಮೈನ್‌ನ 1.80 ಕಿ.ಮೀ. ಉದ್ದದ ಪೈಕಿ 1.00 ಕಿ.ಮೀ ಪೂರ್ಣಗೊಂಡಿರುತ್ತದೆ.

ಈ ಯೋಜನೆಗೆ 2018–19 ನೇ ಸಾಲಿಗೆ ರೂ. 2.00 ಕೋಟಿ ಅನುದಾನ ಒದಗಿಸಲಾಗಿದ್ದು, ಮಾರ್ಚ್–2019 ರ ಅಂತ್ಯದವರೆಗೆ ರೂ. 5.56 ಕೋಟಿ ವೆಚ್ಚ ಮಾಡಲಾಗಿದೆ. ಈ ಯೋಜನೆಯ ಪ್ರಾರಂಭದಿಂದ ಮಾರ್ಚ್–2019 ಅಂತ್ಯದವರೆಗೆ ಮಾಡಲಾದ ಕ್ರೋಢಿಕೃತ ವೆಚ್ಚ ರೂ. 46.47 ಕೋಟಿಗಳಾಗಿರುತ್ತದೆ.

26. ಮಂಡ್ಯ ಜಿಲ್ಲೆಯ 6 ಗ್ರಾಮಗಳಿಗೆ ಕುಡಿಯುವ ನೀರನ್ನು ಒದಗಿಸುವ ಸಲುವಾಗಿ ಲೋಕಪಾವನಿ ನದಿಯಿಂದ ನೀರನ್ನು ಎತ್ತಿ ಎಲೆಚಾಕನಹಳ್ಳಿ ಮತ್ತು ಇನ್ನಿತರೆ 5 ಕೆರೆಗಳಿಗೆ ನೀರನ್ನು ತುಂಬಿಸುವ ಯೋಜನೆ.

ಮಂಡ್ಯ ತಾಲ್ಲೂಕಿನ 28 ಗ್ರಾಮಗಳಿಗೆ ಕುಡಿಯುವ ನೀರನ್ನು ಒದಗಿಸಲುಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ತಾಲ್ಲೂಕಿನ ಚಿನ್ನೇನಹಳ್ಳಿ ಗ್ರಾಮದ ಹತ್ತಿರ ಲೋಕಪಾವನಿ ನದಿಯಿಂದ 18.40 ಕ್ಯೂಸೆಕ್ಸ್ ನೀರನ್ನು ಎತ್ತಿ 6 ಕೆರೆಗಳಿಗೆ ನೀರು ತುಂಬಿಸುವುದುಈ ಯೋಜನೆಯ ಮುಖ್ಯ ಉದ್ದೇಶವಾಗಿರುತ್ತದೆ. ಈ ಯೋಜನೆಯ ಅಂದಾಜಿಗೆ ಸರ್ಕಾರದ ಆದೇಶ ಸಂಖ್ಯೆ: ಜಸಂಇ 40 ಎಂಎಂಕೆ 2013 ಬೆಂಗಳೂರು, ದಿ: 08.03.2013 ರಲ್ಲಿ ರೂ. 18.50 ಕೋಟಿಗಳಿಗೆ ಆಡಳಿತಾತ್ಮಕ ಅನುಮೋದನೆ ದೊರೆರುತ್ತದೆ. ಪ್ರಸ್ತುತ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.

ಏರು ಕೊಳವೆ ಮಾರ್ಗದ ಒಟ್ಟು ಉದ್ದ 9.845 ಕಿ.ಮೀ (ಎಂ.ಎಸ್ ಪೈಪ್ 8.245 ಕಿ.ಮೀ ಮತ್ತು ಪಿ.ಎಸ್.ಸಿ 1.60 ಕಿ.ಮೀ) 8.00 ಕಿ.ಮೀ ಪೂರ್ಣಗೊಂಡಿದೆ ಮತ್ತು ಪಂಪ್ ಹೌಸ್/ಜ್ಯಾಕ್‌ವೆಲ್ ಸಿವಿಲ್ ಕಾಮಗಾರಿಗಳು ಪೂರ್ಣಗೊಂಡಿದೆ. ಎಲೆಕ್ಟ್ರಿಕಲ್ ಸಬ್ ಸ್ಟೇಷನ್ ಕಾಮಗಾರಿಗಳು ಪೂರ್ಣಗೊಂಡಿರುತ್ತವೆ, ಪಂಪು ಮತ್ತು ಮೋಟಾರ್‌ಗಳನ್ನು ಅಳವಡಿಸಲಾಗಿದ್ದು, ಮ್ಯಾನಿಪೋಲ್ಡ್ ಮತ್ತು ಇದಕ್ಕೆ

ಸಂಬಂಧಿಸಿದ ಇನ್ನಿತರೆ ಕಾಮಗಾರಿಗಳು ಪ್ರಗತಿಯಲ್ಲಿವೆ. ಫವರ್ ಫೀಡರ್ ಲೈನ್ ಕಾಮಗಾರಿಯನ್ನು ಪ್ರಾರಂಭಿಸಬೇಕಿದೆ ಮತ್ತು ಉಳಿದ ಕಾಮಗಾರಿಗಳು ಪ್ರಗತಿಯಲಿವೆ. ಭೂಸ್ವಾಧೀನ ಪ್ರಕ್ರಿಯೆ ವಿಳಂಬದಿಂದಾಗಿ ಕಾಮಗಾರಿಯ ಪ್ರಗತಿ ಕುಂಠಿತವಾಗಿರುತ್ತದೆ.

ಈ ಯೋಜನೆಗೆ 2018–19 ನೇ ಸಾಲಿಗೆ ರೂ. 2.50 ಕೋಟಿ ಅನುದಾನ ಒದಗಿಸಲಾಗಿದ್ದು, ಮಾರ್ಚ್–2019 ರ ಅಂತ್ಯದವರೆಗೆ ರೂ. 3.48 ಕೋಟಿ ವೆಚ್ಚ ಮಾಡಲಾಗಿದೆ. ಈ ಯೋಜನೆಯ ಪ್ರಾರಂಭದಿಂದ ಮಾರ್ಚ್–2019 ಅಂತ್ಯದವರೆಗೆ ಮಾಡಲಾದ ಕ್ರೋಢಿಕೃತ ವೆಚ್ಚ ರೂ. 11.07 ಕೋಟಿಗಳಾಗಿರುತ್ತದೆ.

27. ಬನ್ನಹಳ್ಳಿ ಕೆರೆಯಿಂದ ನೀರನ್ನು ಎತ್ತಿ ಶ್ರೀರಂಗಪಟ್ಟಣ ತಾಲ್ಲೂಕಿನ ನೇರಳೆಕೆರೆಗೆ ಕುಡಿಯುವ ನೀರನ್ನು ಒದಗಿಸುವ ಯೋಜನೆ.

ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ತಾಲ್ಲೂಕಿನ ಬೆಟ್ಟಹಳ್ಳಿ, ಗಾಮನಹಳ್ಳಿ ಮತ್ತು ಬಳ್ಳೇಕೆರೆ ಗ್ರಾಮಗಳ ಕುಡಿಯುವ ನೀರಿನ ಬವಣೆ ನೀಗಿಸುವ ಸಲುವಾಗಿ ಬನ್ನಹಳ್ಳಿ ಕೆರೆಯಿಂದ 3.50 ಕ್ಯೂಸೆಕ್ಸ್ ನೀರನ್ನು ಎತ್ತಿ ನೇರಳೆಕೆರೆಗೆ ನೀರು ಒದಗಿಸುವುದುಈ ಯೋಜನೆಯ ಮುಖ್ಯ ಉದ್ದೇಶವಾಗಿರುತ್ತದೆ. ಈ ಯೋಜನೆಯ ಅಂದಾಜಿಗೆ ನಿಗಮದ ಆದೇಶ ಸಂಖ್ಯೆ: ಕಾನೀನಿ/ ತಾಂತ್ರಿಕ–1/ ಕೆ.ಆರ್.ಎಸ್/ 145/ 2011–12, ದಿ: 11.04.2012 ರಲ್ಲಿ ರೂ. 62.00 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿರುತ್ತದೆ. ಈ ಯೋಜನೆಯ ಕಾಮಗಾರಿಗಳು ಪೂರ್ಣಗೊಂಡಿದ್ದು, ಪ್ರಾಯೋಗಿಕವಾಗಿ ಕೆರೆಗೆ ನೀರನ್ನು ಹರಿಸಲಾಗಿದೆ.

ಈ ಯೋಜನೆಗೆ 2018–19 ನೇ ಸಾಲಿಗೆ ರೂ. 0.65 ಕೋಟಿ ಅನುದಾನ ಒದಗಿಸಲಾಗಿದ್ದು, ಮಾರ್ಚ್–2019 ರ ಅಂತ್ಯದವರೆಗೆ ರೂ. 0.02 ಕೋಟಿ ವೆಚ್ಚ ಮಾಡಲಾಗಿದೆ. ಈ ಯೋಜನೆಯ ಪ್ರಾರಂಭದಿಂದ ಮಾರ್ಚ್–2019 ಅಂತ್ಯದವರೆಗೆ ಮಾಡಲಾದ ಕ್ರೋಢಿಕೃತ ವೆಚ್ಚ ರೂ. 0.11 ಕೋಟಿಗಳಾಗಿರುತ್ತದೆ.

28. ತುಮಕೂರು ಶಾಖಾ ನಾಲೆಯ ಸರಪಳಿ 9.90 ಕಿಮೀ ರ ಹೊನ್ನವಳ್ಳಿ ಕುಡಿಯುವ ನೀರಿನ ಪೈಪ್ ಲೈನ್ ವಿಸ್ತರಿಸಿ ತಿಪಟೂರು ತಾಲ್ಲೂಕಿನ ಶಿವರ ಗೌಡನಕಟ್ಟೆ ಕರೀಕೆರೆ ಮಾದೀಹಳ್ಳಿ ಮತ್ತು ಭೈರನಾಯಕನಹಳ್ಳಿಯ 5 ಹೆಚ್ಚುವರಿ ಕೆರೆಗಳಿಗೆ ನೀರೊದಗಿಸುವ ಯೋಜನೆ

ತುಮಕೂರು ಶಾಖಾ ನಾಲೆಯ ಸರಪಳಿ 9.90 ಕಿಮೀ ರ ಹೊನ್ನವಳ್ಳಿ ಕುಡಿಯುವ ನೀರಿನ ಪೈಪ್ ಲೈನ್ ವಿಸ್ತರಿಸಿ ತಿಪಟೂರು ತಾಲ್ಲೂಕಿನ ಶಿವರ ಗೌಡನಕಟ್ಟೆ ಕರೀಕೆರೆ ಮಾದೀಹಳ್ಳಿ ಮತ್ತು ಭೈರನಾಯಕನಹಳ್ಳಿಯ 5 ಹೆಚ್ಚುವರಿ ಕೆರೆಗಳಿಗೆ 16.66 ಎಂ.ಸಿ.ಎಫ್.ಟಿ

ನೀರನ್ನು ಒದಗಿಸುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿರುತ್ತದೆ.ಈ ಯೋಜನೆಯ ಅಂದಾಜಿಗೆ ಸರ್ಕಾರದ ಆದೇಶಸಂಖ್ಯೆ: ಜಸಂಇ 90 ಎನ್‌ಹೆಚ್‌ಪಿ 2016 ಬೆಂಗಳೂರು, ದಿ: 28–03–2017 ರಲ್ಲಿ ರೂ. 4.80 ಕೋಟಿಗಳಿಗೆ ಆಡಳಿತಾತ್ಮಕ ಅನುಮೋದನೆ ದೊರೆತಿರುತ್ತದೆ. ಸದರಿ ಕಾಮಗಾರಿಯ ಟೆಂಡರ್ ಪ್ರಕ್ರಿಯೆಯಲ್ಲಿದೆ.

ಈ ಯೋಜನೆಗೆ 2018–19 ನೇ ಸಾಲಿಗೆ ರೂ. 2.00 ಕೋಟಿ ಅನುದಾನ ಒದಗಿಸಲಾಗಿದ್ದು, ಮಾರ್ಚ್–2019 ರ ಅಂತ್ಯದವರೆಗೆ ರೂ. 0.01 ಕೋಟಿ ವೆಚ್ಚ ಮಾಡಲಾಗಿದೆ. ಈ ಯೋಜನೆಯ ಪ್ರಾರಂಭದಿಂದ ಮಾರ್ಚ್–2019 ಅಂತ್ಯದವರೆಗೆ ಮಾಡಲಾದ ಕ್ರೋಢಿಕೃತ ವೆಚ್ಚ ರೂ. 0.01 ಕೋಟಿಗಳಾಗಿರುತ್ತದೆ.

29. ಅರಸೀಕೆರೆ ತಾಲ್ಲೂಕಿನ ಕೆಂಕೆರೆ ಮತ್ತು ಇತರೆ 2 ಕೆರೆಗಳು ಹಾಗೂ ತಿಪಟೂರು ತಾಲ್ಲೂಕಿನ ದಸರೀಘಟ್ಟ ಕೆರೆಗೆ ಒಟ್ಟು 11 ಗ್ರಾಮಗಳ ಕುಡಿಯುವ ನೀರಿನ ಬೇಡಿಕೆಯನ್ನು ಪೂರೈಸಲು ತುಮಕೂರು ಶಾಖಾ ನಾಲೆಯ ಸರಪಳಿ 5.725 ಕಿಮೀ ನಿಂದ ನೀರನ್ನು ಒದಗಿಸುವ ಯೋಜನೆ

ತುಮಕೂರು ಶಾಖಾ ನಾಲೆಯ ಸರಪಳಿ 5.725 ಕಿಮೀ ನಿಂದ 15.29 ಎಂ.ಸಿ.ಎಫ್.ಟಿ ನೀರನ್ನು ಎತ್ತಿ ಅರಸೀಕೆರೆ ತಾಲ್ಲೂಕಿನ ಕೆಂಕೆರೆ ಮತ್ತು ಇತರೆ 2 ಕೆರೆಗಳು ಹಾಗೂ ತಿಪಟೂರು ತಾಲ್ಲೂಕಿನ ದಸರೀಘಟ್ಟ ಕೆರೆಗೆ ಒಟ್ಟು 11 ಗ್ರಾಮಗಳ ಕುಡಿಯುವ ನೀರನ್ನು ಒದಗಿಸುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿರುತ್ತದೆ.ಈ ಯೋಜನೆಯ ಅಂದಾಜಿಗೆ ಸರ್ಕಾರದ ಆದೇಶಸಂಖ್ಯೆ: ಜಸಂಇ 89 ಎನ್‌ಹೆಚ್‌ಪಿ 2016 ಬೆಂಗಳೂರು, ದಿ: 23–02–2017 ರಲ್ಲಿ ರೂ. 7.50 ಕೋಟಿಗಳಿಗೆ ಆಡಳಿತಾತ್ಮಕ ಅನುಮೋದನೆ ದೊರೆತಿರುತ್ತದೆ. ಕಾಮಗಾರಿ ಪ್ರಗತಿಯಲ್ಲಿರುತ್ತದೆ.

ಸಂಪು ಹಾಗೂ ಪಂಪ್ ಹೌಸ್ ಕಾಮಗಾರಿ ಪೂರ್ಣಗೊಂಡಿದೆ. ಕೌಂಟರ್ ಪೋರ್ಟ್ ಹಾಗೂ ಹೆಡ್ ವಾಲ್ ಕಾಮಗಾರಿ ಪ್ರಗತಿಯಲ್ಲಿದೆ. ಎಂ.ಎಸ್ ಪೈಪ್ ನ 4.45 ಕಿ.ಮೀ ಪೈಕಿ 4.10 ಕಿ.ಮೀ ಪೂರ್ಣಗೊಂಡಿದೆ. ಹೆಚ್.ಡಿ.ಪಿ.ಇ ಪೈಪ್ ನ 5.97 ಕಿ.ಮೀ ಪೈಕಿ 5.50 ಕಿ.ಮೀ ಪೂರ್ಣಗೊಂಡಿದೆ.

ಈ ಯೋಜನೆಗೆ 2018–19 ನೇ ಸಾಲಿಗೆ ರೂ. 2.00 ಕೋಟಿ ಅನುದಾನ ಒದಗಿಸಲಾಗಿದ್ದು, ಮಾರ್ಚ್–2019 ರ ಅಂತ್ಯದವರೆಗೆ ರೂ. 2.26 ಕೋಟಿ ವೆಚ್ಚ ಮಾಡಲಾಗಿದೆ. ಈ ಯೋಜನೆಯ ಪ್ರಾರಂಭದಿಂದ ಮಾರ್ಚ್–2019 ಅಂತ್ಯದವರೆಗೆ ಮಾಡಲಾದ ಕ್ರೋಢಿಕೃತ ವೆಚ್ಚ ರೂ. 2.26 ಕೋಟಿಗಳಾಗಿರುತ್ತದೆ.

30. ತುಮಕೂರು ತಾಲ್ಲೂಕಿನ ಬಸವಪಟ್ಟಣ, ಕರೆಕಲ್ ಪಾಳ್ಯ, ಬೂದಮರಡ ಪಾಳ್ಯ ಹಾಗೂ ಇನ್ನಿತರ ಹಳ್ಳಿಗಳಿಗೆ ಕುಡಿಯುವ ನೀರಿಗಾಗಿ ದೇವರಾಯಪಟ್ಟಣ ಕೆರೆಯಿಂದ ಉದ್ದಾನ ಶಿವಯೋಗಿ ಕಟ್ಟೆಗೆ ನೀರು ಒದಗಿಸುವ ಯೋಜನೆ

ತುಮಕೂರು ತಾಲ್ಲೂಕಿನ ಬಸವಪಟ್ಟಣ, ಕರೆಕಲ್ ಪಾಳ್ಯ, ಬೂದಮರಡ ಪಾಳ್ಯ ಹಾಗೂ ಇನ್ನಿತರ ಹಳ್ಳಿಗಳಿಗೆ ಕುಡಿಯುವ ನೀರಿಗಾಗಿ ದೇವರಾಯಪಟ್ಟಣ ಕೆರೆಯಿಂದ ಉದ್ದಾನ ಶಿವಯೋಗಿ ಕಟ್ಟೆಗೆ 20.31 ಎಂ.ಸಿ.ಎಫ್.ಟಿ ನೀರನ್ನು ಒದಗಿಸುವುದುಈ ಯೋಜನೆಯ ಮುಖ್ಯ ಉದ್ದೇಶವಾಗಿರುತ್ತದೆ. ಈ ಯೋಜನೆಯ ಅಂದಾಜಿಗೆ ಸರ್ಕಾರದ ಆದೇಶ ಸಂಖ್ಯೆ: ಜಸಂಇ 07 ಎನ್‌ಹೆಚ್‌ಪಿ 2017 ಬೆಂಗಳೂರು ದಿ:07.02.2017 ರಲ್ಲಿ ರೂ.3.30 ಕೋಟಿಗಳಿಗೆ ಆಡಳಿತಾತ್ಮಕ ಅನುಮೋದನೆ ದೊರೆತಿರುತ್ತದೆ. ಸದರಿ ಕಾಮಗಾರಿಪೂರ್ಣಗೊಂಡಿದ್ದು, ಪ್ರಾಯೋಗಿಕವಾಗಿ ಕೆರೆಗೆ ನೀರನ್ನು ಹರಿಸಲಾಗಿದೆ.

ಈ ಯೋಜನೆಗೆ 2018–19 ನೇ ಸಾಲಿಗೆ ರೂ. 0.50 ಕೋಟಿ ಅನುದಾನ ಒದಗಿಸಲಾಗಿದ್ದು, ಮಾರ್ಚ್–2019 ರ ಅಂತ್ಯದವರೆಗೆ ರೂ. 0.001 ಕೋಟಿ ವೆಚ್ಚ ಮಾಡಲಾಗಿದೆ. ಈ ಯೋಜನೆಯ ಪ್ರಾರಂಭದಿಂದ ಮಾರ್ಚ್–2019 ಅಂತ್ಯದವರೆಗೆ ಮಾಡಲಾದ ಕ್ರೋಢಿಕೃತ ವೆಚ್ಚ ರೂ. 3.10 ಕೋಟಿಗಳಾಗಿರುತ್ತದೆ.

31. ಹೇಮಾವತಿ ಯೋಜನೆ ತುಮಕೂರು ಶಾಖಾ ನಾಲೆಯ ಸರಪಳಿ 38.975 ಕಿಮೀ ನಿಂದ ನೀರನ್ನು ಎತ್ತಿ ತುರುವೇಕೆರೆ ತಾಲ್ಲೂಕು ನೀರಗುಂದ ಮತ್ತು ಇತರೆ 9 ಹಳ್ಳಿಗಳಿಗೆ ಕುಡಿಯುವ ನೀರನ್ನು ಒದಗಿಸುವ ಯೋಜನೆ

ತುಮಕೂರು ಜಿಲ್ಲೆ, ತುರುವೇಕೆರೆ ತಾಲ್ಲೂಕಿನ ನೀರಗುಂದ ಮತ್ತು ಇತರೆ 9 ಗ್ರಾಮಗಳಿಗೆ ಕುಡಿಯುವ ನೀರನ್ನು ಒದಗಿಸುವ ಸಲುವಾಗಿ ಹೇಮಾವತಿ ಯೋಜನೆಯ ತುಮಕೂರು ಶಾಖಾ ನಾಲೆಯ ಸ: 38.975 ಕಿ.ಮೀ ನಿಂದ 18.128 ಎಂ.ಸಿ.ಎಫ್.ಟಿ ನೀರನ್ನು ಎತ್ತಿ ನೀರಗುಂದ ಕೆರೆಗೆ ನೀರನ್ನು ಹರಿಸುವುದುಈ ಯೋಜನೆಯ ಮುಖ್ಯ ಉದ್ದೇಶವಾಗಿರುತ್ತದೆ. ಈ ಯೋಜನೆಯ ಅಂದಾಜು ಮೊತ್ತ ರೂ. 4.67 ಕೋಟಿಗಳಿಗೆ ಸರ್ಕಾರದ ಆದೇಶ ಸಂಖ್ಯೆ ಜಸಂಇ 9 ಎನ್‌ಹೆಚ್‌ಪಿ 2017, ದಿನಾಂಕ 24.03.2017 ರಂದು ಆಡಳಿತಾತ್ಮಕ ಅನುಮೋದನೆ ದೊರೆತಿರುತ್ತದೆ. ಸದರಿ ಕಾಮಗಾರಿ ಪ್ರಗತಿಯಲ್ಲಿರುತ್ತದೆ.

ರೈಸಿಂಗ್ ಮೇನ್‌ಗೆ 2.00 ಕಿಮೀ ಉದ್ದಕ್ಕೆ ಪೈಪು ಅಳವಡಿಸಲಾಗಿದೆ ಹಾಗೂ ವಿತರಣಾ ಪೈಪುಗಳನ್ನು 0.50 ಕಿಮೀ ವರೆಗೆ ಅಳವಡಿಸಲಾಗಿದೆ. ಹೆಡ್ ಸ್ಲೂಯಿಸ್ ಹಾಗೂ ಸಂಪ್ ನ ಕಾಮಗಾರಿ ಪ್ರಗತಿಯಲ್ಲಿದೆ.

ಈ ಯೋಜನೆಗೆ 2018–19 ನೇ ಸಾಲಿಗೆ ರೂ. 2.00 ಕೋಟಿ ಅನುದಾನ ಒದಗಿಸಲಾಗಿದ್ದು, ಮಾರ್ಚ್–2019 ರ ಅಂತ್ಯದವರೆಗೆ ರೂ. 0.003 ಕೋಟಿ ವೆಚ್ಚ ಮಾಡಲಾಗಿದೆ. ಈ ಯೋಜನೆಯ ಪ್ರಾರಂಭದಿಂದ ಮಾರ್ಚ್–2019 ಅಂತ್ಯದವರೆಗೆ ಮಾಡಲಾದ ಕ್ರೋಢಿಕೃತ ವೆಚ್ಚ ರೂ. 0.003 ಕೋಟಿಗಳಾಗಿರುತ್ತದೆ.

32. ಹಾಸನ ಜಿಲ್ಲೆ ಹೊಳೆನರಸೀಪುರ ತಾಲ್ಲೂಕಿನ ರಂಗೇನಹಳ್ಳಿ ಮತ್ತು ಇತರೆ 22 ಕೆರೆಗಳಿಗೆ ಕುಡಿಯುವ ನೀರಿಗಾಗಿ ಹೇಮಾವತಿ ನದಿಯಿಂದ ಕೆ.ಆರ್. ಪೇಟೆ ತಾಲ್ಲೂಕಿನ ಬೇವಿನಹಳ್ಳಿ ಗ್ರಾಮದ ಹತ್ತಿರ ನೀರನ್ನು ಎತ್ತಿ ನೀರು ತುಂಬಿಸುವ ಕಾಮಗಾರಿ.

ಹೊಳೆನರಸೀಪುರ ತಾಲ್ಲೂಕಿನ ರಂಗೇನಹಳ್ಳಿ ಮತ್ತು ಇತರೆ 22 ಕರೆಗಳಿಗೆ ಮತ್ತು 9 ಕಟ್ಟೆಗಳನ್ನು ಹೇಮಾವತಿ ನದಿಯಿಂದ ಬೇವಿನಹಳ್ಳಿ ಬಳಿ 0.133 ಟಿ.ಎಂ.ಸಿ. ನೀರನ್ನು ಎತ್ತಿ ಪೈಪ್ ನೆಟ್ ವರ್ಕ್ ಮುಖಾಂತರ ಕುಡಿಯುವ ನೀರೊದಗಿಸುವುದುಈ ಯೋಜನೆಯ ಮುಖ್ಯ ಉದ್ದೇಶವಾಗಿರುತ್ತದೆ.ಈ ಯೋಜನೆಯ ಅಂದಾಜಿಗೆ ಸರ್ಕಾರದ ಆದೇಶ ಸಂಖ್ಯೆ: ಜಸಂಇ 91ಎನ್‌ಎಚ್‌ಪಿ 2016ಬೆಂಗಳೂರು, ದಿ:20.02.2017ರಲ್ಲಿರೂ.46.50 ಕೋಟಿಗಳಿಗೆಆಡಳಿತಾತ್ಮಕ ಅನುಮೋದನೆ ದೊರೆತಿರುತ್ತದೆ. ಪ್ರಸ್ತುತ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.

ಜಾಕ್‌ವೆಲ್/ಪಂಪ್ ಹೌಸ್ ಕಾಮಗಾರಿಯು ಪ್ರಾರಂಭವಾಗಿದೆ ಹಾಗೂ ಗ್ರಾವಿಟಿಮೈನ್‌ನ ಪಿವಿಸಿ ಮತ್ತು ಪಿಎಸ್‌ಸಿ ಪೈಪ್‌ಲೈನ್ ಅಳವಡಿಸುವ ಕಾಮಗಾರಿಯು ಪ್ರಗತಿಯಲ್ಲಿದೆ. ರೈಸಿಂಗ್‌ಮೈನ್ ಸಂಬಂಧಿಸಿದ ಭೂಸ್ವಾಧೀನ ಪ್ರಕ್ರಿಯೆಗಳು ಪ್ರಗತಿಯಲ್ಲಿರುತ್ತದೆ.

ಈ ಯೋಜನೆಗೆ 2018–19 ನೇ ಸಾಲಿಗೆ ರೂ. 3.00 ಕೋಟಿ ಅನುದಾನ ಒದಗಿಸಲಾಗಿದ್ದು, ಮಾರ್ಚ್–2019 ರ ಅಂತ್ಯದವರೆಗೆ ರೂ. 3.79 ಕೋಟಿ ವೆಚ್ಚ ಮಾಡಲಾಗಿದೆ. ಈ ಯೋಜನೆಯ ಪ್ರಾರಂಭದಿಂದ ಮಾರ್ಚ್–2019 ಅಂತ್ಯದವರೆಗೆ ಮಾಡಲಾದ ಕ್ರೋಢಿಕೃತ ವೆಚ್ಚ ರೂ. 3.79 ಕೋಟಿಗಳಾಗಿರುತ್ತದೆ.

33. ಮಂಡ್ಯ ಜಿಲ್ಲೆ ಮದ್ದೂರು ತಾಲ್ಲುಕು ಕಸಬಾ ಹೋಬಳಿಯಲ್ಲಿ ಬರುವ 6 ಸಂಖ್ಯೆ ಕುಂಠಿತಗೊಂಡಿರುವ ಏತ ನೀರಾವರಿ ಯೋಜನೆಗಳ ಅಚ್ಚುಕಟ್ಟುಗಳಿಗೆ ಪುನಃಶ್ಚೇತನ ಮತ್ತು 16 ಕೆರೆಗಳಿಗೆ ಇಗ್ಗಲೂರು ಬ್ಯಾರೇಜಿನ ಹಿನ್ನೀರನ್ನು ಬನ್ನಹಳ್ಳಿ ಹತ್ತಿರ ಏತ ನೀರಾವರಿ ಮೂಲಕ ನೀರು ತುಂಬಿಸುವ ಯೋಜನೆ.

ಮಂಡ್ಯ ಜಿಲ್ಲೆ, ಮದ್ದೂರು ತಾಲ್ಲೂಕು ಕಸಬಾ ಹೋಬಳಿಯಲ್ಲಿ ಬರುವ ಬನ್ನಹಳ್ಳಿ ಹತ್ತಿರ ಇಗ್ಗಲೂರು ಬ್ಯಾರೇಜಿನ ಹಿನ್ನೀರಿನಿಂದ 0.5742 ಟಿ.ಎಂ.ಸಿ. ನೀರನ್ನು ಎತ್ತಿ ಶಿಂಷಾ ನದಿಯ ಎಡಭಾಗದ ಕಸಬಾ ಹೋಬಳಿ ವ್ಯಾಪ್ತಿಯಲ್ಲಿ ಬರುವ 6 ಸಂಖ್ಯೆ ನಿಷ್ಕ್ರಿಯೆಗೊಂಡಿರುವ ಏತ ನೀರಾವರಿ ಯೋಜನೆಗಳ ಅಚ್ಚುಕಟ್ಟುಗಳಿಗೆ ಪುನ:ಶ್ಚೇತನಗೊಳಿಸಲು ಹಾಗೂ ಕುಡಿಯುವ ನೀರಿಗಾಗಿ 30 ಹಳ್ಳಿಗಳ 16 ಕೆರೆಗಳಿಗೆ ನೀರು ತುಂಬಿಸುವುದುಈ ಯೋಜನೆಯ ಮುಖ್ಯ ಉದ್ದೇಶವಾಗಿರುತ್ತದೆ.ಈ ಯೋಜನೆಯ ಅಂದಾಜಿಗೆ ಸರ್ಕಾರದ ಆದೇಶ ಸಂಖ್ಯೆ: ಜಸಂಇ 58 ಎಂಎಂಕೆ 2016 ಬೆಂಗಳೂರು, ದಿ: 20.02.2017 ರಲ್ಲಿ ರೂ. 77.00 ಕೋಟಿಗಳಿಗೆ ಆಡಳಿತಾತ್ಮಕ ಅನುಮೋದನೆ ದೊರೆತಿರುತ್ತದೆ.ಸದರಿ ಕಾಮಗಾರಿಯು ಪ್ರಗತಿಯಲ್ಲಿದೆ.

ಮುಖ್ಯ ಏರು ಕೊಳವೆ ಉದ್ದ 15.63 ಕಿ.ಮೀ. ಉದ್ದದ ಪೈಕಿ 1.00 ಕಿಮೀ ವರೆಗೆ ಪೈಪ್ ಅಳವಡಿಸುವ ಕಾಮಗಾರಿಯನ್ನು ಪೂರ್ಣಗೊಳಿಸಲಾಗಿದೆ. 4.35 ಕಿಮೀ ವರೆಗೆ ಪೈಪುಗಳ ಪೂರೈಕೆಯಾಗಿರುತ್ತದೆ.ಪಂಪ್ ಹೌಸ್ ನ ಮಣ್ಣು ಅಗೆತದ ಕಾಮಗಾರಿ ಪ್ರಗತಿಯಲ್ಲಿದೆ.

ಈ ಯೋಜನೆಗೆ 2018–19 ನೇ ಸಾಲಿಗೆ ರೂ. 8.00 ಕೋಟಿ ಅನುದಾನ ಒದಗಿಸಲಾಗಿದ್ದು, ಮಾರ್ಚ್–2019 ರ ಅಂತ್ಯದವರೆಗೆ ರೂ. 0.05 ಕೋಟಿ ವೆಚ್ಚ ಮಾಡಲಾಗಿದೆ. ಈ ಯೋಜನೆಯ ಪ್ರಾರಂಭದಿಂದ ಮಾರ್ಚ್–2019 ಅಂತ್ಯದವರೆಗೆ ಮಾಡಲಾದ ಕ್ರೋಢಿಕೃತ ವೆಚ್ಚ ರೂ. 0.05 ಕೋಟಿಗಳಾಗಿರುತ್ತದೆ.

34. ಚಾಮರಾಜನಗರ,ನಂಜನಗೂಡು ಮತ್ತು ಯಳಂದೂರು ತಾಲ್ಲೂಕಿನ 24 ಕೆರೆಗಳಿಗೆ ನೀರು ಒದಗಿಸುವುದು–ಸುತ್ತೂರು ಕುಡಿಯುವ ನೀರೋದಗಿಸುವ ಯೋಜನೆ.

ಮೈಸೂರು ಜಿಲ್ಲೆ ಚಾಮರಾಜನಗರ,ನಂಜನಗೂಡು ಹಾಗೂ ಯಳಂದೂರು ತಾಲ್ಲೂಕುಗಳ 33 ಗ್ರಾಮಗಳು ಬರ ಪೀಡಿತ ಪ್ರದೇಶಗಳಾಗಿದ್ದು, ಸದರಿ ಗ್ರಾಮಗಳಲ್ಲಿ ಅಂತರ ಜಲ ಅಭಿವೃದ್ಧಿ ಪಡಿಸಲು ಸುತ್ತೂರು ಗ್ರಾಮದ ಬಳಿ ಕಬಿನಿ ನದಿಯಿಂದ 0.628 ಟಿ.ಎಂ.ಸಿ ನೀರನ್ನು ಮೂರು ಹಂತಗಳಲ್ಲಿ ಎತ್ತಿ 24 ಕೆರೆಗಳಿಗೆ ಕುಡಿಯುವ ನೀರು ತುಂಬಿಸುವುದುಈ ಯೋಜನೆಯ ಮುಖ್ಯ ಉದ್ದೇಶವಾಗಿರುತ್ತದೆ.ಈ ಯೋಜನೆಯ ಅಂದಾಜಿಗೆ ಸರ್ಕಾರದ ಆದೇಶ ಸಂಖ್ಯೆ: ಜಸಂಇ 52 ಎಂಎಂಕೆ 2016 ಬೆಂಗಳೂರು, ದಿ: 05.10.2016 ರಲ್ಲಿ ರೂ. 233.00 ಕೋಟಿಗಳಿಗೆ ಆಡಳಿತಾತ್ಮಕ ಅನುಮೋದನೆ ದೊರೆತಿರುತ್ತದೆ. ಪ್ರಸ್ತುತ ಸದರಿ ಯೋಜನೆಯ ಕಾಮಗಾರಿಗಳು ಪ್ರಗತಿಯಲ್ಲಿದೆ.

ಸರ್ವೆ ಕಾರ್ಯ ಪೂರ್ಣಗೊಂಡಿದ್ದು, ಪಂಪ್ ಹೌಸ್ ಕಾಮಗಾರಿಯ ರಿಟೆನಿಂಗ್ ವಾಲ್ ಮತ್ತು ಕಾಲಮ್ ಕಾಂಕ್ರಿಟ್ ಪ್ರಗತಿಯಲ್ಲಿದೆ. ರೈಸಿಂಗ್ ಮೈನ್ ಒಟ್ಟು 14.25 ಕಿ.ಮೀ ಉದ್ದದ ಪೈಕಿ 7.40ಕಿ.ಮೀ ಮತ್ತು ಗ್ರಾವಿಟಿ ಮೈನ್ ಒಟ್ಟು 20.00 ಕಿ.ಮೀ ಉದ್ದದ ಪೈಕಿ 10.80 ಕಿ.ಮೀ ಪೂರ್ಣಗೊಂಡಿದೆ. ಉಳಿದ ಕಾಮಗಾರಿಗಳು ಪ್ರಗತಿಯಲ್ಲಿವೆ.

ಈ ಯೋಜನೆಗೆ 2018–19 ನೇ ಸಾಲಿಗೆ ರೂ. 10.00 ಕೋಟಿ ಅನುದಾನ ಒದಗಿಸಲಾಗಿದ್ದು, ಮಾರ್ಚ್–2019 ರ ಅಂತ್ಯದವರೆಗೆ ರೂ. 51.95 ಕೋಟಿ ವೆಚ್ಚ ಮಾಡಲಾಗಿದೆ. ಈ ಯೋಜನೆಯ ಪ್ರಾರಂಭದಿಂದ ಮಾರ್ಚ್–2019 ಅಂತ್ಯದವರೆಗೆ ಮಾಡಲಾದ ಕ್ರೋಢಿಕೃತ ವೆಚ್ಚ ರೂ. 95.66 ಕೋಟಿಗಳಾಗಿರುತ್ತದೆ.

35. ನಂಜನಗೂಡು ತಾಲ್ಲೂಕಿನ ಹುರ ಮತ್ತು ಇತರೆ 25 ಕೆರೆಗಳಿಗೆ ನೀರು ಒದಗಿಸುವುದು–ಹುರ ಕುಡಿಯುವ ನೀರೋದಗಿಸುವ ಯೋಜನೆ.

ಮೈಸೂರು ಜಿಲ್ಲೆ ನಂಜನಗೂಡು ತಾಲ್ಲೂಕಿನ 14 ಗ್ರಾಮಗಳು ಬರ ಪೀಡಿತ ಪ್ರದೇಶಗಳಾಗಿದ್ದು, ಸದರಿ ಗ್ರಾಮಗಳಲ್ಲಿ ಅಂತರ ಜಲ ಅಭಿವೃದ್ಧಿ ಪಡಿಸಲು ಕಣ್ಣೇನೂರು ಗ್ರಾಮದ ಬಳಿ 0.188 ಟಿ.ಎಂ.ಸಿ ನೀರನ್ನು ಒಂದೇ ಹಂತದಲ್ಲಿ ಎತ್ತಿ ನಂಜನಗೂಡು ತಾಲ್ಲೂಕಿನ ಹುರ ಮತ್ತು ಇತರೆ 25 ಕೆರೆಗಳಿಗೆ ಕುಡಿಯುವ ನೀರು ತುಂಬಿಸುವುದುಈ ಯೋಜನೆಯ ಮುಖ್ಯ ಉದ್ದೇಶವಾಗಿರುತ್ತದೆ.ಈ ಯೋಜನೆಯ ಅಂದಾಜಿಗೆ ಸರ್ಕಾರದ ಆದೇಶ ಸಂಖ್ಯೆ: ಜಸಂಇ 54 ಎಂಎಂಕೆ 2016 ಬೆಂಗಳೂರು, ದಿ: 05.11.2016 ರಲ್ಲಿ ರೂ. 45.00 ಕೋಟಿಗಳಿಗೆ ಆಡಳಿತಾತ್ಮಕ ಅನುಮೋದನೆ ದೊರೆತಿರುತ್ತದೆ. ಪ್ರಸ್ತುತ ಸದರಿ ಯೋಜನೆಯ ಕಾಮಗಾರಿಗಳು ಪ್ರಗತಿಯಲ್ಲಿದೆ.

ಪಂಪ್ ಹೌಸ್ ನ ಮೋಟರ್ ಫ್ಲೋರ್ ಲೆವೆಲ್ ವರೆಗಿನ ಕಾಮಗಾರಿ ಪೂರ್ಣಗೊಂಡಿರುತ್ತದೆ. ರೈಸಿಂಗ್ ಮೈನ್ ಒಟ್ಟು 11.15 ಕಿ.ಮೀ ಉದ್ದದ ಪೈಕಿ 8.50ಕಿ.ಮೀ ಪೂರ್ಣಗೊಂಡಿರುತ್ತದೆ. ಗ್ರಾವಿಟಿ ಮೈನ್ 15.57 ಕಿ.ಮಿ ಉದ್ದದ ಪೈಕಿ 5.50 ಕಿ.ಮೀ ಪೂರ್ಣಗೊಂಡಿದ್ದು, ಉಳಿದ ಕಾಮಗಾರಿಗಳು ಪ್ರಗತಿಯಲ್ಲಿವೆ.

ಈ ಯೋಜನೆಗೆ 2018–19 ನೇ ಸಾಲಿಗೆ ರೂ. 7.00 ಕೋಟಿ ಅನುದಾನ ಒದಗಿಸಲಾಗಿದ್ದು, ಮಾರ್ಚ್–2019 ರ ಅಂತ್ಯದವರೆಗೆ ರೂ. 6.95 ಕೋಟಿ ವೆಚ್ಚ ಮಾಡಲಾಗಿದೆ. ಈ ಯೋಜನೆಯ ಪ್ರಾರಂಭದಿಂದ ಮಾರ್ಚ್–2019 ಅಂತ್ಯದವರೆಗೆ ಮಾಡಲಾದ ಕ್ರೋಢಿಕೃತ ವೆಚ್ಚ ರೂ. 23.55 ಕೋಟಿಗಳಾಗಿರುತ್ತದೆ.

36. ರಾಮನಗರ ಜಿಲ್ಲೆ ಕನಕಪುರ ತಾಲ್ಲೂಕಿನ ಗರಳಾಪುರ ಮತ್ತು ಇತರೆ 12 ಕೆರೆಗಳಿಗೆ ಅರ್ಕಾವತಿ ಜಲಾಶಯ ಸಮೀಪ ಕೊತಗಳ ಗ್ರಾಮದ ನದಿಯಿಂದ ನೀರನ್ನು ಎತ್ತಿ ಕೆರೆಗಳಿಗೆ ತುಂಬಿಸುವ ಯೋಜನೆ.

ರಾಮನಗರ ಜಿಲ್ಲೆ ಕನಕಪುರ ತಾಲ್ಲೂಕಿನ ಗರಳಾಪುರ ಮತ್ತು ಇತರೆ 12 ಕೆರೆಗಳಿಗೆ ಅರ್ಕಾವತಿ ಜಲಾಶಯ ಸಮೀಪ ಕೂತಗಳ ಗ್ರಾಮದ ಹತ್ತಿರ ಅರ್ಕಾವತಿ ನದಿಯಿಂದ 0.222 ಟಿ.ಎಂ.ಸಿ ನೀರನ್ನು ಎತ್ತಿ ಕೆರೆಗಳಿಗೆ ಕುಡಿಯುವ ನೀರು ತುಂಬಿಸುವುದುಈ ಯೋಜನೆಯ ಮುಖ್ಯ ಉದ್ದೇಶವಾಗಿರುತ್ತದೆ.ಈ ಯೋಜನೆಯ ಅಂದಾಜಿಗೆ ಸರ್ಕಾರದ ಆದೇಶ ಸಂಖ್ಯೆ: ಜಸಂಇ 69 ಎಂಎಂಕೆ 2016 ಬೆಂಗಳೂರು, ದಿ:16.02.2017 ರಲ್ಲಿ ರೂ. 70.00 ಕೋಟಿಗಳಿಗೆ ಆಡಳಿತಾತ್ಮಕ ಅನುಮೋದನೆ ದೊರೆತಿರುತ್ತದೆ. ಪ್ರಸ್ತುತ ಕಾಮಗಾರಿಯ ಪ್ರಗತಿಯಲ್ಲಿದೆ.

1ನೇ ಹಂತ: ಪಂಪ್ ಹೌಸ್‌ನ ಮಣ್ಣು ಅಗೆತದ ಕಾಮಗಾರಿ ಪ್ರಗತಿಯಲ್ಲಿರುತ್ತದೆ.

2ನೇ ಹಂತ: ಪಂಪ್ ಹೌಸ್ ನ ಫ್ಲೋರ್ ಲೆವೆಲ್ ವರೆಗಿನ ಕಾಮಗಾರಿ ಪೂರ್ಣಗೊಂಡಿರುತ್ತದೆ. ರೈಸಿಂಗ್ ಮೈನ್ 10.00 ಕಿ.ಮೀ. ವರೆಗೆ ಪೂರ್ಣಗೊಂಡಿರುತ್ತದೆ.

ಈ ಯೋಜನೆಗೆ 2018–19 ನೇ ಸಾಲಿಗೆ ರೂ. 11.00 ಕೋಟಿ ಅನುದಾನ ಒದಗಿಸಲಾಗಿದ್ದು, ಮಾರ್ಚ್–2019 ರ ಅಂತ್ಯದವರೆಗೆ ರೂ. 36.13 ಕೋಟಿ ವೆಚ್ಚ ಮಾಡಲಾಗಿದೆ. ಈ ಯೋಜನೆಯ ಪ್ರಾರಂಭದಿಂದ ಮಾರ್ಚ್–2019 ಅಂತ್ಯದವರೆಗೆ ಮಾಡಲಾದ ಕ್ರೋಢಿಕೃತ ವೆಚ್ಚ ರೂ. 36.46 ಕೋಟಿಗಳಾಗಿರುತ್ತದೆ.

37. ರಾಮನಗರ ಜಿಲ್ಲೆ ಕನಕಪುರ ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರುವ ಶ್ರೀನಿವಾಸನಹಳ್ಳಿ, ನಾರಾಯಣಪುರ, ಕೆರಳಾಲುಸಂದ್ರ ಮತ್ತು ಇತರ ಕೆರೆಗಳಿಗೆ ಟಿ.ಬೇಕುಪ್ಪೆ ಗ್ರಮದ ಬಳಿ ಅರ್ಕಾವತಿ ನದಿಯ ನೀರನ್ನು ಎತ್ತಿ ಕೆರೆಗಳಿಗೆ ತುಂಬಿಸುವ ಯೋಜನೆ.

ರಾಮನಗರ ಜಿಲ್ಲೆ ಕನಕಪುರ ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರುವ ಶ್ರೀನಿವಾಸನಹಳ್ಳಿ, ನಾರಾಯಣಪುರ, ಕೆರಳಾಲುಸಂದ್ರ ಮತ್ತು ಇತರ ಕೆರೆಗಳಿಗೆ ಟಿ.ಬೇಕುಪ್ಪೆ ಗ್ರಾಮದ ಬಳಿ ಅರ್ಕಾವತಿ ನದಿಯಿಂದ 0.124 ಟಿ.ಎಂ.ಸಿ ನೀರನ್ನು ಎತ್ತಿ ಕೆರೆಗಳಿಗೆ ಕುಡಿಯುವ ನೀರು ತುಂಬಿಸುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿರುತ್ತದೆ.ಈ ಯೋಜನೆಯ ಅಂದಾಜಿಗೆ ಸರ್ಕಾರದ ಆದೇಶ ಸಂಖ್ಯೆ: ಜಸಂಇ 71 ಎಂಎಂಕೆ 2016 ಬೆಂಗಳೂರು, ದಿ:20.02.2017 ರಲ್ಲಿ ರೂ. 27.00 ಕೋಟಿಗಳಿಗೆ ಆಡಳಿತಾತ್ಮಕ ಅನುಮೋದನೆ ದೊರೆತಿರುತ್ತದೆ.ಪ್ರಸ್ತುತ ಕಾಮಗಾರಿಯ ಪ್ರಗತಿಯಲ್ಲಿದೆ.

1ನೇ ಹಂತ ಹಾಗೂ 2ನೇ ಹಂತ: ಪಂಪ್ ಹೌಸ್ ಹಾಗೂ ಜಾಕ್‌ವೆಲ್ ನ ಕಾಮಗಾರಿ ಪ್ರಗತಿಯಲ್ಲಿರುತ್ತದೆ. ರೈಸಿಂಗ್ ಮೈನ್ 2.00 ಕಿ.ಮೀ. ವರೆಗೆ ಪೂರ್ಣಗೊಂಡಿರುತ್ತದೆ.

ಈ ಯೋಜನೆಗೆ 2018–19 ನೇ ಸಾಲಿಗೆ ರೂ. 11.00 ಕೋಟಿ ಅನುದಾನ ಒದಗಿಸಲಾಗಿದ್ದು, ಮಾರ್ಚ್–2019 ರ ಅಂತ್ಯದವರೆಗೆ ರೂ. 9.74 ಕೋಟಿ ವೆಚ್ಚ ಮಾಡಲಾಗಿದೆ. ಈ ಯೋಜನೆಯ ಪ್ರಾರಂಭದಿಂದ ಮಾರ್ಚ್–2019 ಅಂತ್ಯದವರೆಗೆ ಮಾಡಲಾದ ಕ್ರೋಢಿಕೃತ ವೆಚ್ಚ ರೂ. 9.83 ಕೋಟಿಗಳಾಗಿರುತ್ತದೆ.

38. ಪಿರಿಯಾಪಟ್ಟಣ ತಾಲ್ಲೂಕಿನ ಮುತ್ತಿನಮುಳುಸೋಗೆ ಗ್ರಾಮದ ಬಳಿ ಕಾವೇರಿ ನದಿಯಿಂದ ನೀರನ್ನು ಎತ್ತಿ 79 ಗ್ರಾಮಗಳಲ್ಲಿ ಬರುವ 133 ಕೆರೆಗಳಿಗೆ ಮತ್ತು 17 ಕಟ್ಟೆಗಳಿಗೆ ನೀರು ತುಂಬಿಸುವ ಯೋಜನೆ:

ಪಿರಿಯಾಪಟ್ಟಣ ತಾಲ್ಲೂಕಿನ ಮುತ್ತಿನಮುಳುಸೋಗೆ ಗ್ರಾಮದ ಬಳಿ ಕಾವೇರಿ ನದಿಯಿಂದ ಏತ ನೀರಾವರಿ ಮೂಲಕ 24 ಗಂಟೆ 90 ದಿನಗಳು 0.721 ಟಿ.ಎಂ.ಸಿ (93 ಕ್ಯೂಸೆಕ್ಸ್) ನೀರನ್ನು ಎತ್ತಿ ಪಿರಿಯಾಪಟ್ಟಣ ತಾಲ್ಲೂಕಿನ 133 ಕೆರೆಗಳನ್ನು ಮತ್ತು 17 ಕಟ್ಟೆಗಳಿಗೆ ಕುಡಿಯುವ ನೀರು ತುಂಬಿಸುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿರುತ್ತದೆ.ಈ ಯೋಜನೆಯ ಅಂದಾಜು ಮೊತ್ತವಾದ ರೂ.295.00 ಕೋಟಿಗಳಿಗೆ ಸರ್ಕಾರದ ಆದೇಶ ಸಂ.ಜಸಂಇ 66 ಎಂಎಂಕೆ 2016, ಬೆಂಗಳೂರು, ದಿನಾಂಕ 20.02.2017 ರಲ್ಲಿ ಆಡಳಿತಾತ್ಮಕ ಅನುಮೋದನೆ ದೊರೆತಿರುತ್ತದೆ. ಸದರಿ ಕಾಮಗಾರಿ ಪ್ರಗತಿಯಲ್ಲಿದೆ.

ಸದರಿ ಕಾಮಗಾರಿಯ ಪಂಪ್ ಹೌಸ್ ಮತ್ತು ರೈಸಿಂಗ್ ಮೈನ್ ಕಾಮಗಾರಿ ಪ್ರಗತಿಯಲ್ಲಿದ್ದು, ರೈಸಿಂಗ್ ಮೇನ್ ಒಟ್ಟು 11.37 ಕಿ.ಮೀ ಉದ್ದದ ಪೈಕಿ 3.80 ಕಿ.ಮೀ ಪೂರ್ಣಗೊಂಡಿರುತ್ತದೆ ಹಾಗೂ ಟಿಟಟಟಿರ ಚಿಟಿಜ ಡಾಟಿಟಿಣಟಿರ ಪೂರ್ಣಗೊಂಡಿರುತ್ತದೆ. ಉಳಿಕೆ ಕಾಮಗಾರಿಗಳು ಪ್ರಗತಿಯಲ್ಲಿವೆ.

ಈ ಯೋಜನೆಗೆ 2018–19 ನೇ ಸಾಲಿಗೆ ರೂ. 8.00 ಕೋಟಿ ಅನುದಾನ ಒದಗಿಸಲಾಗಿದ್ದು, ಮಾರ್ಚ್–2019 ರ ಅಂತ್ಯದವರೆಗೆ ರೂ. 74.82 ಕೋಟಿ ವೆಚ್ಚ ಮಾಡಲಾಗಿದೆ. ಈ ಯೋಜನೆಯ ಪ್ರಾರಂಭದಿಂದ ಮಾರ್ಚ್–2019 ಅಂತ್ಯದವರೆಗೆ ಮಾಡಲಾದ ಕ್ರೋಢಿಕೃತ ವೆಚ್ಚ ರೂ. 96.37 ಕೋಟಿಗಳಾಗಿರುತ್ತದೆ.

39. ತಿಪಟೂರು ತಾಲ್ಲೂಕಿನ ರಜತಾದ್ರಿಪುರ ಗ್ರಾಮದ ಸರ್ವೆ ನಂ 104 ಮತ್ತು 105 ಕ್ಕೆ ಹೊಂದಿಕೊಂಡಂತಿರುವ ಅಯ್ಯನಕೆರೆ ಮತ್ತು ಪಾದದೇವರ ಕಟ್ಟೆಗೆ ಹೇಮಾವತಿ ನಾಲೆಯ ತುಮಕೂರು ಶಾಖಾ ನಾಲೆಯ ಸರಪಳಿ 53.530 ಕಿ.ಮೀ ನಿಂದ ನೀರನ್ನು ಎತ್ತಿ ಕುಡಿಯುವ ನೀರಿಗಾಗಿ ಕೆರೆ ತುಂಬಿಸುವ ಯೋಜನೆ.

ತಿಪಟೂರು ತಾಲ್ಲೂಕಿನ ರಜತಾದ್ರಿಪುರ ಗುಡ್ಡದ ಪಾಳ್ಯಕ್ಕೆ ಹೊಂದಿಕೊಂಡಿರುವ ಪಾದದೇವರಕಟ್ಟೆ ಮತ್ತು ಅಯ್ಯನಕೆರೆಗೆ ಹೇಮಾವತಿ ಯೋಜನೆಯ ತುಮಕೂರು ಶಾಖಾ ನಾಲೆಯ ಸರಪಳಿ 53.530 ಕಿ.ಮೀ ನಿಂದ 2.00 ಎಂ.ಸಿ.ಎಫ್.ಟಿ ನೀರನ್ನು ಎತ್ತಿ ಕುಡಿಯುವ ನೀರಿಗಾಗಿ ಕೆರೆ ತುಂಬಿಸಿ, ರಜತಾದ್ರಿಪುರ ಹಾಗೂ ಗುಡ್ಡದಪಾಳ್ಯ ಮತ್ತು ಶ್ರೀ ಲಕ್ಷ್ಮಿ ನರಸಿಂಹ ದೇವಸ್ಥಾನಕ್ಕೆ ಬರುವ ಜನರಿಗೆ ಅನುವಾಗುವಂತೆ ನೀರನ್ನು ಒದಗಿಸುವುದುಈ ಯೋಜನೆಯ ಮುಖ್ಯ ಉದ್ದೇಶವಾಗಿರುತ್ತದೆ.ಈ ಯೋಜನೆಯ ಅಂದಾಜು ಮೊತ್ತ ರೂ 3.30 ಕೋಟಿಗಳಿಗೆ ಸರ್ಕಾರದ ಆದೇಶ ಸಂಖ್ಯೆ ಜಸಂಇ 198 ಎನ್‌ಹೆಚ್‌ಪಿ 2017 ಬೆಂಗಳೂರು, ದಿನಾಂಕ 27.02.2018 ರಂದು ಆಡಳಿತಾತ್ಮಕ ಅನುಮೋದನೆ ದೊರೆತಿರುತ್ತದೆ.ಪ್ರಸ್ತುತ ಕಾಮಗಾರಿಯ ಟೆಂಡರ್ ಪ್ರಕ್ರಿಯೆಯಲ್ಲಿರುತ್ತದೆ.

ಈ ಯೋಜನೆಗೆ 2018–19 ನೇ ಸಾಲಿಗೆ ರೂ. 0.50 ಕೋಟಿ ಅನುದಾನ ಒದಗಿಸಲಾಗಿದ್ದು, ಮಾರ್ಚ್–2019 ರ ಅಂತ್ಯದವರೆಗೆ ರೂ. 0.001 ಕೋಟಿ ವೆಚ್ಚ ಮಾಡಲಾಗಿದೆ. ಈ ಯೋಜನೆಯ ಪ್ರಾರಂಭದಿಂದ ಮಾರ್ಚ್–2019 ಅಂತ್ಯದವರೆಗೆ ಮಾಡಲಾದ ಕ್ರೋಢಿಕೃತ ವೆಚ್ಚ ರೂ. 0.001 ಕೋಟಿಗಳಾಗಿರುತ್ತದೆ.

40. ಚಾಮರಾಜನಗರ ಜಿಲ್ಲೆ, ಕೊಳ್ಳೇಗಾಲ ತಾಲ್ಲೂಕಿನ ಸರಗೂರು ಗ್ರಾಮದ ಬಳಿ ಕಾವೇರಿ ನದಿಯಿಂದ ನೀರನ್ನು ಎತ್ತಿ ಗುಂಡಾಲ್ ಜಲಾಶಯದ ಭಾದಿತ ಅಚ್ಚುಕಟ್ಟು ಪ್ರದೇಶಕ್ಕೆ ನೀರೋದಗಿಸುವುದು ಹಾಗೂ ಕೊಳ್ಳೇಗಾಲ ತಾಲ್ಲೂಕಿನ ಎರಡು ಕೆರೆಗಳಿಗೆ ನೀರು ತುಂಬಿಸುವ ಯೋಜನೆ (ರಾಮನಗುಡ್ಡ ಕೆರೆ ತುಂಬಿಸುವ ಯೋಜನೆ)

ಚಾಮರಾಜನಗರ ಜಿಲ್ಲೆ, ಕೊಳ್ಳೇಗಾಲ ತಾಲ್ಲೂಕಿನ ಸರಗೂರು ಗ್ರಾಮದ ಬಳಿ ಕಾವೇರಿ ನದಿಯಿಂದ ಏತ ನೀರಾವರಿ ಮೂಲಕ 0.83 ಟಿ.ಎಂ.ಸಿ ನೀರನ್ನು ಎತ್ತಿ ಗುಂಡಾಲ್ ಜಲಾಶಯದ 12,100 ಎಕರೆ ಭಾದಿತ ಅಚ್ಚುಕಟ್ಟು ಪ್ರದೇಶಕ್ಕೆ ನೀರೋದಗಿಸುವುದು ಹಾಗೂ ಕೊಳ್ಳೇಗಾಲ

ತಾಲ್ಲೂಕಿನ ಎರಡು ಕೆರೆಗಳಿಗೆ ನೀರನ್ನು ತುಂಬಿಸುವುದುಈ ಯೋಜನೆಯ ಮುಖ್ಯ ಉದ್ದೇಶವಾಗಿರುತ್ತದೆ.ಈ ಯೋಜನೆಯ ಅಂದಾಜು ಮೊತ್ತವಾದ ರೂ. 129.00 ಕೋಟಿಗಳಿಗೆ ಸರ್ಕಾರದ ಆದೇಶ ಸಂ.ಜಸಂಇ 105 ಎಂಎಂಕೆ 2017, ಬೆಂಗಳೂರು, ದಿನಾಂಕ 14.02.2018 ರಲ್ಲಿ ಆಡಳಿತಾತ್ಮಕ ಅನುಮೋದನೆ ದೊರೆತಿರುತ್ತದೆ. ಸದರಿ ಕಾಮಗಾರಿಯ ಟೆಂಡರ್ ಅನುಮೋದನೆಯಾಗಿದ್ದು, ಕಾಮಗಾರಿಯನ್ನು ಪ್ರಾರಂಭಿಸಬೇಕಾಗಿರುತ್ತದೆ.

ಈ ಯೋಜನೆಗೆ 2018–19 ನೇ ಸಾಲಿಗೆ ರೂ. 5.00 ಕೋಟಿ ಅನುದಾನ ಒದಗಿಸಲಾಗಿದೆ.

41. ನಾಗಮಂಗಲ ತಾಲ್ಲೂಕಿನ ಬೆಳ್ಳೂರು ಹೋಬಳಿಯ ನಾಗಮಂಗಲ ಬ್ಯಾಂಚ್ ನಾಲೆ ಅಡಿಯಲ್ಲಿ ಬರುವ ಬ್ಯಾಳದಕೆರೆ ಕುಡಿಯುವ ನೀರಿನ ಯೋಜನೆ ಮತ್ತು ಇತರೆ ಯೋಜನೆಗಳ 7ನೇ ಕಿ.ಮೀ. ನಲ್ಲಿ ಚುಂಚನ ಉಪ ವಿತರಣಾ ನಾಲೆ ಮತ್ತು ಡಿ–10 ಚುಂಚನಹಳ್ಳಿ (ಅಯ್ಯನಕಟ್ಟೆ) ಕೆರೆ ಕಾಮಗಾರಿ

ನಾಗಮಂಗಲ ತಾಲ್ಲೂಕಿನ ಬೆಳ್ಳೂರು ಹೋಬಳಿಯ ನಾಗಮಂಗಲ ಬ್ಯಾಂಚ್ ನಾಲೆ ಅಡಿಯಲ್ಲಿ ಬರುವ ಬ್ಯಾಲದಕೆರೆ ಕೆರೆ ಮತ್ತು ಕಟ್ಟೆಗೆ 4.869 ಎಂ.ಸಿ.ಎಫ್.ಟಿ. ನೀರನ್ನು ಚುಂಚನಗಿರಿ ಉಪ ವಿತರಣಾ ನಾಲೆಯ 7 ಕಿ.ಮೀ ಮತ್ತು ಡಿ–10 ಚುಂಚನಹಳ್ಳಿ (ಅಯ್ಯನಕಟ್ಟೆ) ಇಂದ ಎತ್ತಿ ಕೆರೆ ತುಂಬಿಸುವುದುಈ ಯೋಜನೆಯ ಮುಖ್ಯ ಉದ್ದೇಶವಾಗಿರುತ್ತದೆ. 4 ಗ್ರಾಮಗಳು ಯೋಜನೆಯ ಫಲಾನುಭವಿಗಳಾಗಿದ್ದು, ಈ ಯೋಜನೆಯ ಅಂದಾಜಿಗೆ ಸಿ.ಇ.ಆರ್ ಸಂಖ್ಯೆ: 266/2015–16, ದಿ: 28.12.2015 ರಲ್ಲಿ ರೂ. 3.34 ಕೋಟಿಗಳಿಗೆ ತಾಂತ್ರಿಕ ಅನುಮೋದನೆ ನೀಡಲಾಗಿರುತ್ತದೆ. ಸದರಿ ಕಾಮಗಾರಿ ಪ್ರಗತಿಯಲ್ಲಿರುತ್ತದೆ.

ಸದರಿ ಯೋಜನೆಯ ರೈಸಿಂಗ್ ಮೈನ್ ಉದ್ದ 1.848 ಮೀ ಮತ್ತು ಗ್ರಾವಿಟಿ ಮೈನ್ ಉದ್ದ 0.05 ಕಿ.ಮೀ. ಇದ್ದು, ಎಲ್ಲಾ ಪೈಪುಗಳು ಪೂರೈಕೆ ಆಗಿದ್ದು, ಸದರಿ ಪೈಪುಗಳಿಗೆಹೊರಗಿನ ಮತ್ತು ಒಳಗಿನ ಗನೈಟಿಂಗ್ ಕಾಮಗಾರಿ ಮುಗಿದಿರುತ್ತದೆ. ಜಾಕ್‌ವೆಲ್, ಡಿಲಿವರಿ ಚೆಂಬರ್ ಮತ್ತು ವಿದ್ಯುತ್ ಸಂಪರ್ಕ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ.

ಈ ಯೋಜನೆಗೆ 2018–19 ನೇ ಸಾಲಿಗೆ ರೂ. 2.00 ಕೋಟಿ ಅನುದಾನ ಒದಗಿಸಲಾಗಿದ್ದು, ಮಾರ್ಚ್–2019 ರ ಅಂತ್ಯದವರೆಗೆ ರೂ. 0.95 ಕೋಟಿ ವೆಚ್ಚ ಮಾಡಲಾಗಿದೆ. ಈ ಯೋಜನೆಯ ಪ್ರಾರಂಭದಿಂದ ಮಾರ್ಚ್–2019 ಅಂತ್ಯದವರೆಗೆ ಮಾಡಲಾದ ಕ್ರೋಢಿಕೃತ ವೆಚ್ಚ ರೂ. 0.95 ಕೋಟಿಗಳಾಗಿರುತ್ತದೆ.

42. ಹೊಳೆನರಸೀಪುರ ತಾಲ್ಲೂಕಿನ ತಟ್ಟೇಕೆರೆ ಗ್ರಾಮದ ಹತ್ತಿರ ಹೇಮಾವತಿ ನದಿಯಿಂದ ಶ್ರೀರಾಮದೇವರ ದಕ್ಷಿಣ ನಾಲೆಗೆ ನೀರನ್ನು ಎತ್ತಿ ನೀರಾವರಿ ವಂಚಿತ ಅಚ್ಚುಕಟ್ಟಿಗೆ ನೀರನ್ನು ಒದಗಿಸುವ ತಟ್ಟೇಕೆರೆ ಏತ ನೀರಾವರಿ ಯೋಜನೆಯನ್ನು ಪುನರ್ ಸ್ಥಾಪಿಸುವ ಕಾಮಗಾರಿ.

ಹೊಳೆನರಸೀಪುರ ತಾಲ್ಲೂಕಿನ ತಟ್ಟೇಕೆರೆ ಗ್ರಾಮದ ಹತ್ತಿರ ಹೇಮಾವತಿ ನದಿಯಿಂದ ಹಾಸನ ಜಿಲ್ಲೆ ಹೊಳೆನರಸೀಪುರ ತಾಲ್ಲೂಕು ಕಟ್ಟೆಬೆಳಗುಲಿ ಸಮೀಪ ಕಟ್ಟಲಾಗಿರುವ ಶ್ರೀರಾಮದೇವರ ಅಣೆಕಟ್ಟಿನಿಂದ ಶ್ರೀರಾಮದೇವರ ದಕ್ಷಿಣ ನಾಲೆಗೆ ನೀರನ್ನು ಎತ್ತಿ ನೀರಾವರಿ ವಂಚಿತ ಅಚ್ಚುಕಟ್ಟಿಗೆ ನೀರನ್ನು ಒದಗಿಸುವ ತಟ್ಟೇಕೆರೆ ಏತ ನೀರಾವರಿ ಯೋಜನೆಯನ್ನು ಪುನರ್ ಸ್ಥಾಪಿಸುವ ಕಾಮಗಾರಿಯಾಗಿದ್ದು, ಸದರಿ ಯೋಜನೆಯಿಂದ ಖಾರೀಫ್ ಬೆಳೆಗೆ 40 ಕ್ಯೂಸೆಕ್ಸ್ ನಂತೆ ನಾಲೆಯ ಕೊನೆಯ ಭಾಗದಲ್ಲಿ ಒಟ್ಟು 1290 ಎಕರೆ ಅಚ್ಚುಕಟ್ಟು ಪ್ರದೇಶವು ನೀರಾವರಿ ಸೌಲಭ್ಯ ಒದಗಿಸುವುದುಈ ಯೋಜನೆಯ ಮುಖ್ಯ ಉದ್ದೇಶವಾಗಿರುತ್ತದೆ. ಈ ಯೋಜನೆಯ ಅಂದಾಜು ಮೊತ್ತವಾದ ರೂ. 4.95 ಕೋಟಿಗಳಿಗೆ ಸರ್ಕಾರದ ಆದೇಶ ಸಂ. ಜಸಂಇ 119 ಎನ್‌ಹೆಚ್‌ಪಿ 2017, ಬೆಂಗಳೂರು ದಿನಾಂಕ: 30.08.2017 ರಲ್ಲಿ ಆಡಳಿತಾತ್ಮಕ ಅನುಮೋದನೆ ದೊರೆತಿರುತ್ತದೆ. ಪ್ರಸ್ತುತ ಕಾಮಗಾರಿಯ ಪ್ರಗತಿಯಲ್ಲಿರುತ್ತದೆ.

ಪಂಪ್ ಹೌಸ್ ಹಾಗೂ ಜಾಕ್‌ವೆಲ್ ನಿರ್ಮಾಣ ಕಾಮಗಾರಿ ಪೂರ್ಣಗೊಂಡಿರುತ್ತದೆ. ಸಬ್‌ಸ್ಟೇಷನ್, ಇಂಟೇಕ್ ನಾಲೆ ಕಾಮಗಾರಿಗಳು ಪ್ರಗತಿಯಲ್ಲಿವೆ.

ಈ ಯೋಜನೆಗೆ 2018–19 ನೇ ಸಾಲಿಗೆ ರೂ. 1.00 ಕೋಟಿ ಅನುದಾನ ಒದಗಿಸಲಾಗಿದ್ದು, ಮಾರ್ಚ್–2019 ರ ಅಂತ್ಯದವರೆಗೆ ರೂ. 3.11 ಕೋಟಿ ವೆಚ್ಚ ಮಾಡಲಾಗಿದೆ. ಈ ಯೋಜನೆಯ ಪ್ರಾರಂಭದಿಂದ ಮಾರ್ಚ್–2019 ಅಂತ್ಯದವರೆಗೆ ಮಾಡಲಾದ ಕ್ರೋಢಿಕೃತ ವೆಚ್ಚ ರೂ.3.11 ಕೋಟಿಗಳಾಗಿರುತ್ತದೆ.

43. ಒಂಟಿಗುಡ್ಡ ಏತ ನೀರಾವರಿ ಯೋಜನೆಯ ಪುನರುಜ್ಜೀವನ ಕಾಮಗಾರಿ.

ಹೊಳೆನರಸೀಪುರ ತಾಲ್ಲೂಕಿನ ದೊಡ್ಡಕುಂಚ ಗ್ರಾಮದ ಬಳಿ ಹೇಮಾವತಿ ಎಡದಂಡೆ ನಾಲೆಯ ಸರಪಳಿ38 ನೇ ಕಿ.ಮೀ ನಲ್ಲಿ ಬರುವ ದೊಡ್ಡ ಕುಂಚ ಸಮತೋಲನ ಕೆರೆಯಿಂದ ನೀರೆತ್ತಿ ಸುತ್ತಮುತ್ತಲಿನ ಗ್ರಾಮಗಳಾದ ದೊಡ್ಡಕುಂಚ, ಒಂಟಿಗುಡ್ಡ ಕಾವಲ್, ಅತ್ತಿಚೌಡೇನಹಳ್ಳಿ, ಕಾಮೇನಹಳ್ಳಿ, ಕೋಡಿಹಳ್ಳಿ, ಗ್ರಾಮಗಳ ಒಟ್ಟು 1024 ಎಕರೆ ಅಚ್ಚುಕಟ್ಟು ಪ್ರದೇಶಕ್ಕೆ 36 ಕ್ಯೂಸೆಕ್ಸ್ ನೀರಾವರಿ ಒದಗಿಸುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿರುತ್ತದೆ. ಈ ಯೋಜನೆಯ ಅಂದಾಜು ಮೊತ್ತವಾದ ರೂ.4.92 ಕೋಟಿಗಳಿಗೆ ಸರ್ಕಾರದ ಆದೇಶ ಸಂಖ್ಯೆ:ಜಸಂಇ 120 ಎನ್‌ಹೆಚ್‌ಪಿ 2017 ಬೆಂಗಳೂರು, ದಿನಾಂಕ:30.08.2017ರಲ್ಲಿ ಆಡಳಿತಾತ್ಮಕ ಅನುಮೋದನೆ ದೊರೆತಿರುತ್ತದೆ. ಪ್ರಸ್ತುತ ಕಾಮಗಾರಿಯ ಪ್ರಗತಿಯಲ್ಲಿರುತ್ತದೆ.

ಇಂಟೇಕ್ ನಾಲೆ, ಪಂಪ್ ಹೌಸ್ ಹಾಗೂ ಜಾಕ್‌ವೆಲ್ ನಿರ್ಮಾಣ ಕಾಮಗಾರಿ ಪೂರ್ಣಗೊಂಡಿರುತ್ತದೆ. ಸಬ್‌ಸ್ಟೇಷನ್ ಕಾಮಗಾರಿಗಳು ಪ್ರಗತಿಯಲ್ಲಿವೆ.

ಈ ಯೋಜನೆಗೆ 2018–19 ನೇ ಸಾಲಿಗೆ ರೂ. 1.00 ಕೋಟಿ ಅನುದಾನ ಒದಗಿಸಲಾಗಿದ್ದು, ಮಾರ್ಚ್–2019 ರ ಅಂತ್ಯದವರೆಗೆ ರೂ. 2.68 ಕೋಟಿ ವೆಚ್ಚ ಮಾಡಲಾಗಿದೆ. ಈ ಯೋಜನೆಯ ಪ್ರಾರಂಭದಿಂದ ಮಾರ್ಚ್–2019 ಅಂತ್ಯದವರೆಗೆ ಮಾಡಲಾದ ಕ್ರೋಢಿಕೃತ ವೆಚ್ಚ ರೂ.2.68 ಕೋಟಿಗಳಾಗಿರುತ್ತದೆ.

44. ಹೇಮಾವತಿ ಯೋಜನೆಯ ಹೊಳೆನರಸೀಪುರ ತಾಲ್ಲೂಕಿನ ಮುಕ್ಕನಹಳ್ಳಿ ಕೆರೆಯಿಂದ ನೀರನ್ನು ಏತ್ತಿ ಕೆ.ಆರ್.ನಗರ ತಾಲ್ಲೂಕಿನ 28 ಗ್ರಾಮಗಳಿಗೆ ಕುಡಿಯುವ ನೀರು ಒದಗಿಸಲು ಕೆ.ಆರ್.ನಗರ ತಾಲ್ಲೂಕಿನ 24 ಕೆರೆಗಳಿಗೆ ನೀರನ್ನು ತುಂಬಿಸುವ ಕಾಮಗಾರಿ.

ಹೇಮಾವತಿ ಯೋಜನೆಯ ಹೊಳೆನರಸೀಪುರ ತಾಲ್ಲೂಕಿನ ಮುಕ್ಕನಹಳ್ಳಿ ಕೆರೆಯಿಂದ ಎತ್ತಿ ಕೆ.ಆರ್.ನಗರ ತಾಲ್ಲೂಕಿನ 28 ಗ್ರಾಮಗಳಿಗೆ ಕುಡಿಯುವ ನೀರು ಒದಗಿಸಲು ಕೆ.ಆರ್ ನಗರ ತಾಲ್ಲೂಕಿನ 24 ಕೆರೆಗಳಿಗೆ 0.119 ಟಿ.ಎಂ.ಸಿ. ನೀರನ್ನು 90 ದಿವಸಗಳು ಪೈಪ್ ನೆಟ್ ವರ್ಕ್ ಮುಖಾಂತರ ಕೆರೆಗಳಿಗೆ ಹರಿಸುವುದುಈ ಯೋಜನೆಯ ಮುಖ್ಯ ಉದ್ದೇಶವಾಗಿರುತ್ತದೆ.ಈ ಯೋಜನೆಯ ಅಂದಾಜಿಗೆ ಸರ್ಕಾರದ ಆದೇಶ

ಸಂಖ್ಯೆ: ಜಸಂಇ 01 ಎನ್‌ಹೆಚ್‌ಪಿ 2017, ಬೆಂಗಳೂರು ದಿ: 23.05.2017 ರಲ್ಲಿ ರೂ.6.20 ಕೋಟಿ ಮೊತ್ತಕ್ಕೆ ಆಡಳಿತಾತ್ಮಕ ಅನುಮೋದನೆ ದೊರೆತಿರುತ್ತದೆ. ಪ್ರಸ್ತುತ ಕಾಮಗಾರಿಯ ಪ್ರಗತಿಯಲ್ಲಿರುತ್ತದೆ.

ಪಂಪ್ ಹೌಸ್ ಹಾಗೂ ಇಂಟೆಕ್ ಕಾಮಗಾರಿ ಪೂರ್ಣಗೊಂಡಿದ್ದು, ರೈಸಿಂಗ್ ಮೈನ್ ನ ಕಾಮಗಾರಿ ಪ್ರಗತಿಯಲ್ಲಿದೆ.

ಈ ಯೋಜನೆಗೆ 2018–19 ನೇ ಸಾಲಿಗೆ ರೂ. 2.00 ಕೋಟಿ ಅನುದಾನ ಒದಗಿಸಲಾಗಿದ್ದು, ಮಾರ್ಚ್–2019 ರ ಅಂತ್ಯದವರೆಗೆ ಯಾವುದೇ ವೆಚ್ಚ ಮಾಡಿರುವುದಿಲ್ಲ. ಈ ಯೋಜನೆಯ ಪ್ರಾರಂಭದಿಂದ ಮಾರ್ಚ್–2019 ಅಂತ್ಯದವರೆಗೆ ಮಾಡಲಾದ ಕ್ರೋಢಿಕೃತ ವೆಚ್ಚ ರೂ. 21.55 ಕೋಟಿಗಳಾಗಿರುತ್ತದೆ.

45. ಹಾಸನ ಜಿಲ್ಲೆ, ಅರಕಲಗೂಡು ತಾಲ್ಲೂಕಿನ ಜಗನ್ನಾಥ ಕೆರೆಯ ಕೋಡಿಯಿಂದ ನೀರನ್ನು ಎತ್ತಿ ಕಣಿಯಾರು ಹಾಗೂ ಇತರೆ 17 ಕೆರೆಗಳಿಗೆ ಕುಡಿಯುವ ನೀರಿಗಾಗಿ ನೀರು ತುಂಬಿಸುವ ಯೋಜನೆ.

ಹಾಸನ ಜಿಲ್ಲೆ, ಅರಕಲಗೂಡು ತಾಲ್ಲೂಕಿನ ಕಣಿಯಾರು ಹಾಗೂ ಇತರೆ 17 ಕೆರೆಗಳಿಗೆ ಜಗನ್ನಾಥ ಕೆರೆಯ ಕೋಡಿಯಿಂದ ನೀರನ್ನು 50.00 ಎಂ.ಸಿ.ಎಫ್.ಟಿ ನೀರನ್ನು ಎತ್ತಿ 24 ಗಂಟೆ 120 ದಿನಗಳ ಕಾಲ 4.250 ಕಿ.ಮೀ. ಉದ್ದದ ಎಂ.ಎಸ್ ರೈಸಿಂಗ್ ಮೈನ್‌ಮೂಲಕ ನೈಸರ್ಗಿಕ ಹಳ್ಳಗಳ ಮೂಲಕ ಕುಡಿಯುವ ನೀರನ್ನು ಒದಗಿಸುವುದುಈ ಯೋಜನೆಯ ಮುಖ್ಯ ಉದ್ದೇಶವಾಗಿರುತ್ತದೆ.ಈ ಯೋಜನೆಯ ಅಂದಾಜಿಗೆ ಸರ್ಕಾರದ ಆದೇಶ ಸಂಖ್ಯೆ: ಜಸಂಇ 196 ಎನ್‌ಹೆಚ್‌ಪಿ 2017, ದಿನಾಂಕ: 16.01.2018 ರಲ್ಲಿ ರೂ.6.20 ಕೋಟಿ ಮೊತ್ತಕ್ಕೆ ಆಡಳಿತಾತ್ಮಕ ಅನುಮೋದನೆ ದೊರೆತಿರುತ್ತದೆ. ಪ್ರಸ್ತುತ ಕಾಮಗಾರಿಯ ಟೆಂಡರ್ ಪ್ರಕ್ರಿಯೆಯಲ್ಲಿರುತ್ತದೆ.

ಈ ಯೋಜನೆಗೆ 2018–19 ನೇ ಸಾಲಿಗೆ ರೂ.3.00 ಕೋಟಿ ಅನುದಾನ ಒದಗಿಸಲಾಗಿರುತ್ತದೆ.

46. ಚನ್ನರಾಯಪಟ್ಟಣ ಅಮಾನಿಕೆರೆಯಿಂದ ಲಿಫ್ಟ್ ಮುಖೇನ ನೀರನ್ನು ಎತ್ತಿ ಚನ್ನರಾಯಪಟ್ಟಣ ತಾಲ್ಲೂಕಿನ 25 ಕೆರೆಗಳನ್ನು ಕುಡಿಯುವ ನೀರಿಗಾಗಿ ತುಂಬಿಸುವ ಯೋಜನೆ.

ಚನ್ನರಾಯಪಟ್ಟಣ ಅಮಾನಿಕೆರೆಯಿಂದ ಜುಲೈ ನಿಂದ ಸೆಪ್ಟೆಂಬರ್ ಅವಧಿಯಲ್ಲಿ 90 ದಿನಗಳಲ್ಲಿ 0.34 ಟಿ.ಎಂ.ಸಿ (44 ಕ್ಯೂಸೆಕ್ಸ್) 122 ಮೀ ಹೆಡ್ ಗೆ ಎತ್ತಿ ಚನ್ನರಾಯಪಟ್ಟಣ ತಾಲ್ಲೂಕಿನ 25 ಕೆರೆಗಳಿಗೆ ಕುಡಿಯುವ ನೀರನ್ನು ತುಂಬಿಸುವುದುಈ ಯೋಜನೆಯ ಮುಖ್ಯ ಉದ್ದೇಶವಾಗಿರುತ್ತದೆ. ಈ ಯೋಜನೆಯ ಅಂದಾಜಿಗೆ ಸರ್ಕಾರದ ಆದೇಶ ಸಂಖ್ಯೆ: ಜಸಂಇ 12 ಎನ್‌ಹೆಚ್‌ಪಿ 2017, ಬೆಂಗಳೂರು, ದಿನಾಂಕ: 20.09.2017ರಲ್ಲಿ ರೂ.70.00 ಕೋಟಿ ಮೊತ್ತಕ್ಕೆ ಆಡಳಿತಾತ್ಮಕ ಅನುಮೋದನೆ ದೊರೆತಿರುತ್ತದೆ. ಸರ್ವೆ ಕಾರ್ಯ ಪೂರ್ಣಗೊಂಡಿದ್ದು, ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.

ಈ ಯೋಜನೆಗೆ 2018–19 ನೇ ಸಾಲಿಗೆ ರೂ. 8.00 ಕೋಟಿ ಅನುದಾನ ಒದಗಿಸಲಾಗಿದ್ದು, ಮಾರ್ಚ್–2019 ರ ಅಂತ್ಯದವರೆಗೆ ರೂ. 0.05 ಕೋಟಿ ವೆಚ್ಚ ಮಾಡಲಾಗಿದೆ. ಈ ಯೋಜನೆಯ ಪ್ರಾರಂಭದಿಂದ ಮಾರ್ಚ್–2019 ಅಂತ್ಯದವರೆಗೆ ಮಾಡಲಾದ ಕ್ರೋಢಿಕೃತ ವೆಚ್ಚ ರೂ. 0.05 ಕೋಟಿಗಳಾಗಿರುತ್ತದೆ.

47. ಹಾಸನ ಜಿಲ್ಲೆ ಚನ್ನರಾಯಪಟ್ಟಣ ತಾಲ್ಲೂಕು ಕಸಬಾ ಹೋಬಳಿ ಗೊಲ್ಲರಹೊಸಹಳ್ಳಿ ಗ್ರಾಮದ ವ್ಯಾಪ್ತಿಯ ಹೇಮಾವತಿ ಎಡದಂಡೆ ನಾಲೆಯಿಂದ ಗೊಲ್ಲರಹೊಸಹಳ್ಳಿ ಮತ್ತು ಕುರುವಂಕ ಕೆರೆಗಳಿಗೆ ಕುಡಿಯುವ ನೀರಿಗಾಗಿ ನೀರನ್ನು ತುಂಬಿಸುವ ಯೋಜನೆ

ಬಾಗೂರು–ನವಿಲೆ ಸುರಂಗದ ಆಗಮನ ಕಾಲುವೆಯ ಸ:3.065 ಕಿ.ಮಿ. ನಿಂದ 5 ಕ್ಯೂಸೆಕ್ಸ್ ನೀರನ್ನು 14.90 ಮಿ. ಎತ್ತರಕ್ಕೆ ಎತ್ತಿ ಎಡಭಾಗದ ಕುರುವಂಕ ಕೆರೆಗೆ 80 ಮಿ. ಉದ್ದ ಮತ್ತು ಬಲಭಾಗದ ಗೊಲ್ಲರಹೊಸಹಳ್ಳಿ ಕೆರೆಗೆ 60 ಮಿ. ಉದ್ದದ ರೈಸಿಂಗ್ ಮೇನ್ ಮುಖಾಂತರ 90 ದಿನಗಳ ಕಾಲ ನೀರು ತುಂಬಿಸುವುದುಈ ಯೋಜನೆಯ ಮುಖ್ಯ ಉದ್ದೇಶವಾಗಿರುತ್ತದೆ. ಈ ಯೋಜನೆಗೆ ನೀರನ ಅಗತ್ಯತೆಯು 33.36 ಎಂ.ಸಿ.ಎಫ್.ಟಿ ಆಗಿರುತ್ತದೆ. ಈ ಯೋಜನೆಯ ಅಂದಾಜಿಗೆ ಸರ್ಕಾರದ ಆದೇಶ ಸಂಖ್ಯೆ: ಜಸಂಇ 68 ಎನ್‌ಹೆಚ್‌ಪಿ 2017, ಬೆಂಗಳೂರು, ದಿನಾಂಕ: 20.09.2017ರಲ್ಲಿ ರೂ. 90.00 ಲಕ್ಷಗಳ ಆಡಳಿತಾತ್ಮಕ ಅನುಮೋದನೆ ದೊರೆತಿರುತ್ತದೆ. ಸರ್ವೆ ಕಾರ್ಯ ಪೂರ್ಣಗೊಂಡಿದ್ದು, ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.

ಈ ಯೋಜನೆಗೆ 2018–19 ನೇ ಸಾಲಿಗೆ ರೂ. 0.20 ಕೋಟಿ ಅನುದಾನ ಒದಗಿಸಲಾಗಿದೆ.

48. ಮಂಡ್ಯ ಜಿಲ್ಲೆ ಮಳವಳ್ಳಿ ತಾಲ್ಲೂಕು ಹೆಬ್ಬಳ್ಳ ಚೆನ್ನಯ್ಯ ನಾಲೆಯ ಬಾಧಿತ ಅಚ್ಚುಕಟ್ಟು ಪ್ರದೇಶಕ್ಕೆ ನೀರೊದಗಿಸಲು ಹೆಬ್ಬಳ್ಳದಿಂದ ಏತ ನೀರಾವರಿ ಯೋಜನೆ ನಿರ್ಮಾಣ ಮಾಡುವ ಕಾಮಗಾರಿ

ಹೆಬ್ಬಳ ಚೆನ್ನಯ್ಯ ನಾಲೆಯು 40.00 ಕಿ.ಮೀ. ಉದ್ದವಿದ್ದು 386 ಕ್ಯೂಸೆಕ್ಸ್ ನೀರು ಹರಿವಿನ ಸಾಮರ್ಥ್ಯವನ್ನು ಹೊಂದಿರುತ್ತದೆ. ಈ ನಾಲೆಯಿಂದ ಮದ್ದೂರು ತಾಲ್ಲೂಕಿನ 7168.60 ಎಕರೆ ಹಾಗೂ ಮಳವಳ್ಳಿ ತಾಲ್ಲೂಕಿನ 12331.40 ಎಕರೆ ಅಚ್ಚುಕಟ್ಟು ಪ್ರದೇಶ ಸೇರಿದಂತೆ ಒಟ್ಟಾರೆ 19500.00 ಎಕರೆ ಅಚ್ಚುಕಟ್ಟು ಪ್ರದೇಶಕ್ಕೆ ನೀರೊದಗಿಸಲಾಗುತ್ತದೆ. ಸದರಿ ನಾಲೆಯನ್ನು ಆಧುನೀಕರಣಗೊಳಿಸುವ ಕಾಮಗಾರಿ ಪ್ರಗತಿಯಲ್ಲಿರುತ್ತದೆ. ಹೆಬ್ಬಳ್ಳ ಚೆನ್ನಯ್ಯ ನಾಲೆಗೆ ಒಟ್ಟು 3.893 ಟಿ.ಎಂ.ಸಿ ನೀರಿನ ಅವಶ್ಯಕತೆ ಇದ್ದು, ಪ್ರಸ್ತುತ ಹೆಬ್ಬಳ್ಳ ಚೆನ್ನಯ್ಯ ನಾಲೆಗೆ 0.766 ಟಿ.ಎಂ.ಸಿ ನೀರಿನ ಕೊರತೆ ಇರುತ್ತದೆ. ಈ ನೀರಿನ ಕೊರತೆಯಿಂದಾಗಿ ಹೆಬ್ಬಳ್ಳ ಚೆನ್ನಯ್ಯ ನಾಲೆಯ 19500 ಎಕರೆ ಅಚ್ಚುಕಟ್ಟು ಪ್ರದೇಶಕ್ಕೆ ಸಮರ್ಪಕವಾಗಿ ನೀರು ಒದಗಿಸಲು ಸಾಧ್ಯವಾಗುತ್ತಿರುವುದಿಲ್ಲ ಆದ್ದರಿಂದ ಸೂಳೆಕೆರೆ ಕೊಡಿಯ ಕೆಳಭಾಗದಲ್ಲಿ ಲಭ್ಯವಿರುವ ನೀರನ್ನು ಏತ ನೀರಾವರಿ ಮೂಲಕ ಹೆಬ್ಬಳ್ಳ ಚೆನ್ನಯ್ಯ ನಾಲೆಗೆ ಒದಗಿಸುವ ಅವಶ್ಯಕತೆ ಇರುತ್ತದೆ. ಈ ಭಾಗದ ಬಾಧಿತ ಅಚ್ಚುಕಟ್ಟು ಪ್ರದೇಶಕ್ಕೆ ನೀರೊದಗಿಸಲು ಮದ್ದೂರು ತಾಲ್ಲೂಕು ತಿಟ್ಟಮಾರನಹಳ್ಳಿ ಹತ್ತಿರ ಹೆಬ್ಬಳ್ಳದ ಸೋರು ನೀರಿಗೆ ಏತ ನೀರಾವರಿ ಯೋಜನೆ ನಿರ್ಮಿಸಿ, ಸೊರು ನೀರನ್ನು ಎತ್ತಿ ಹೆಬ್ಬಳ್ಳ ಚೆನ್ನಯ್ಯ ನಾಲೆಯ ಸರಪಳಿ 29.20 ಕಿಮೀ ನ ಮುಂದಕ್ಕೆ ನೀರೊದಗಿಸಲು ಹಾಗೂ ಆ ಭಾಗದಲ್ಲಿ ಬರುವ 17 ಕೆರೆಗಳನ್ನು ತುಂಬಿಸುವುದು ಈ ಯೋಜನೆಯ ಉದ್ದೇಶವಾಗಿರುತ್ತದೆ.ಈ ಯೋಜನೆಯ ರೂ.44.00 ಕೋಟಿ ಮೊತ್ತದ ಅಂದಾಜಿಗೆ, ಸರ್ಕಾರಿ ಆದೇಶ ಸಂ:ಜಸಂಇ 241 ಎಂಎಂಕೆ 2017, ಬೆಂಗಳೂರು, ದಿನಾಂಕ: 14.02.2018 ರಲ್ಲಿ ಆಡಳಿತಾತ್ಮಕ ಅನುಮೋದನೆ ದೊರೆತಿರುತ್ತದೆ. ಸದರಿ ಕಾಮಗಾರಿಯ ಟೆಂಡರ್‌ಗೆ ದಿ: 08.03.2019 ರಂದು ಅನುಮೋದನೆ ನೀಡಲಾಗಿರುತ್ತದೆ.

ಈ ಯೋಜನೆಗೆ 2018–19 ನೇ ಸಾಲಿಗೆ ರೂ.2.00 ಕೋಟಿ ಅನುದಾನ ಒದಗಿಸಲಾಗಿರುತ್ತದೆ.

49. ಕಬಿನಿ ನದಿಯಿಂದ ಇಬ್ಬಾಲ ಗ್ರಾಮದ ಬಳಿ ನೀರನ್ನು ಎತ್ತಿ ಕುಡಿಯುವ ನೀರನ್ನು ಒದಗಿಸುವ ಸಲುವಾಗಿ 39 ಕೆರೆಗಳಿಗೆ ನೀರು ತುಂಬಿಸುವ ಯೋಜನೆ:

ನಂಜನಗೂಡು ತಾಲ್ಲೂಕಿನ ಇಬ್ಬಾಲ ಗ್ರಾಮದ ಬಳಿ ಕಬಿನಿ ನದಿಯಿಂದ ಏತ ನೀರಾವರಿ ಮೂಲಕ 0.124 ಟಿ.ಎಂ.ಸಿ ನೀರನ್ನು ಎತ್ತಿ ಮೈಸೂರು ಮತ್ತು ಹೆಚ್.ಡಿ.ಕೋಟೆ ತಾಲ್ಲೂಕಿನ 26 ಕೆರೆಗಳನ್ನು ಹಾಗೂ 13 ಕಟ್ಟೆಗಳಿಗೆ ನೀರನ್ನು ತುಂಬಿಸುವುದುಈ ಯೋಜನೆಯ ಮುಖ್ಯ ಉದ್ದೇಶವಾಗಿರುತ್ತದೆ.ಈ ಯೋಜನೆಯ ಅಂದಾಜು ಮೊತ್ತವಾದ ರೂ. 68.00 ಕೋಟಿಗಳಿಗೆ ಸರ್ಕಾರದ ಆದೇಶ ಸಂ.ಜಸಂಇ 142 ಎಂಎಂಕೆ 2017, ಬೆಂಗಳೂರು, ದಿನಾಂಕ 06.02.2018 ರಲ್ಲಿ ಆಡಳಿತಾತ್ಮಕ ಅನುಮೋದನೆ ದೊರೆತಿರುತ್ತದೆ. ಸದರಿ ಕಾಮಗಾರಿಯ ಟೆಂಡರ್‌ಗೆ ದಿ: 08.03.2019 ರಂದು ಅನುಮೋದನೆ ನೀಡಲಾಗಿರುತ್ತದೆ.

ಈ ಯೋಜನೆಗೆ 2018–19 ನೇ ಸಾಲಿಗೆ ರೂ. 5.00 ಕೋಟಿ ಅನುದಾನ ಒದಗಿಸಲಾಗಿದ್ದು, ಮಾರ್ಚ್–2019 ರ ಅಂತ್ಯದವರೆಗೆ ರೂ. 0.005 ಕೋಟಿ ವೆಚ್ಚ ಮಾಡಲಾಗಿದೆ. ಈ ಯೋಜನೆಯ ಪ್ರಾರಂಭದಿಂದ ಮಾರ್ಚ್–2019 ಅಂತ್ಯದವರೆಗೆ ಮಾಡಲಾದ ಕ್ರೋಢಿಕೃತ ವೆಚ್ಚ ರೂ. 0.25 ಕೋಟಿಗಳಾಗಿರುತ್ತದೆ.

50. ಪಾಂಡವಪುರ ತಾಲ್ಲೂಕಿನ ಅಕ್ಕಿತದಲ್ಲಿರುವ ಮಲ್ಲಿಗೆರೆ ಏತ ನಿರಾವರಿ ಯೋಜನೆಯನ್ನು ಅಭಿವೃದ್ಧಿಪಡಿಸಿ ಕುಡಿಯುವ ನೀರಿಗಾಗಿ 24 ಕೆರೆಗಳಿಗೆ ನೀರು ತುಂಬಿಸುವ ಯೋಜನೆ:

ಕೃಷ್ಣರಾಜಸಾಗರ ಅಣೆಕಟ್ಟೆಯ ಹಿನ್ನೀರಿನಿಂದ ನೀರೆತ್ತುವ ಸ್ಥಾವರದೊಂದಿಗೆ ಸ್ಥಾಪಿಸಲಾಗಿರುವ ಮಲ್ಲಿಗೆರೆ ಏತ ನೀರಾವರಿ ಯೋಜನೆಯನ್ನು ಅಭಿವೃದ್ಧಿಪಡಿಸಿ ಕೆ.ಆರ್.ಪೇಟೆ ಮತ್ತು ಪಾಂಡವಪುರ ತಾಲ್ಲೂಕಿನ 24 ಕೆರೆಗಳಿಗೆ 0.102 ಟಿ.ಎಂ.ಸಿ ನೀರನ್ನು ತುಂಬಿಸುವುದುಈ ಯೋಜನೆಯ ಮುಖ್ಯ ಉದ್ದೇಶವಾಗಿರುತ್ತದೆ. ಈ ಯೋಜನೆಯ ಅಂದಾಜು ಮೊತ್ತವಾದ ರೂ. 22.00 ಕೋಟಿಗಳಿಗೆ ಸರ್ಕಾರದ ಆದೇಶ ಸಂ.ಜಸಂಇ 97 ಎಂಎಂಕೆ 2017, ಬೆಂಗಳೂರು, ದಿನಾಂಕ 23.03.2018 ರಲ್ಲಿ ಆಡಳಿತಾತ್ಮಕ ಅನುಮೋದನೆ ದೊರೆತಿರುತ್ತದೆ. ಪ್ರಸ್ತುತ ಕಾಮಗಾರಿಯ ಟೆಂಡರ್ ಪ್ರಕ್ರಿಯೆಯಲ್ಲಿರುತ್ತದೆ.

ಈ ಯೋಜನೆಗೆ 2018–19 ನೇ ಸಾಲಿಗೆ ರೂ. 0.63 ಕೋಟಿ ಅನುದಾನ ಒದಗಿಸಲಾಗಿದೆ.

51. ದೊಡ್ಡಬೆಲೆ ತ್ಯಾಜ್ಯ ನೀರು ಶುದ್ಧೀಕರಣ ಘಟಕದ ಹತ್ತಿರದಿಂದ ರಾಮನಗರ ತಾಲ್ಲೂಕಿನ ಬಿಡದಿ ಹೋಬಳಿ ಹಾಗೂ ಕನಕಪುರ ತಾಲ್ಲೂಕಿನ ಹಾರೋಹಳ್ಳಿ ಹೋಬಳಿಯ ಕೆರೆಗಳಿಗೆ ನೀರು ತುಂಬಿಸುವ ಯೋಜನೆ.

ದೊಡ್ಡಬೆಲೆ ತ್ಯಾಜ್ಯ ನೀರು ಶುದ್ಧೀಕರಣ ಘಟಕದ ಹತ್ತಿರದಿಂದ ರಾಮನಗರ ತಾಲ್ಲೂಕಿನ ಬಿಡದಿ ಹೋಬಳಿ ಹಾಗೂ ಕನಕಪುರ ತಾಲ್ಲೂಕಿನ ಹಾರೋಹಳ್ಳಿ ಹೋಬಳಿಯ ಕೆರೆಗಳಿಗೆ ನೀರು ತುಂಬಿಸುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿರುತ್ತದೆ. ಈ ಯೋಜನೆಯ ಅಂದಾಜಿಗೆ ಸರ್ಕಾರದ ಆದೇಶ ಸಂಖ್ಯೆ: ಜಸಂಇ 70 ಎಂಎಂಕೆ 2018 ಬೆಂಗಳೂರು, ದಿ:15.03.2018 ರಲ್ಲಿ ರೂ. 146.00 ಕೋಟಿಗಳಿಗೆ ಆಡಳಿತಾತ್ಮಕ ಅನುಮೋದನೆ ದೊರೆತಿರುತ್ತದೆ. ಪ್ರಸ್ತುತ ಸದರಿ ಕಾಮಗಾರಿಯ ಟೆಂಡರ್ ಅನುಮೋದನೆಯಾಗಿದ್ದು, ಕಾಮಗಾರಿ ಪ್ರಾರಂಭಿಸಿಬೇಕಿರುತ್ತದೆ.

ಈ ಯೋಜನೆಗೆ 2018–19 ನೇ ಸಾಲಿಗೆ ರೂ. 6.00 ಕೋಟಿ ಅನುದಾನ ಒದಗಿಸಲಾಗಿದ್ದು, ಮಾರ್ಚ್–2019 ರ ಅಂತ್ಯದವರೆಗೆ ರೂ. 0.21 ಕೋಟಿ ವೆಚ್ಚ ಮಾಡಲಾಗಿದೆ. ಈ ಯೋಜನೆಯ ಪ್ರಾರಂಭದಿಂದ ಮಾರ್ಚ್–2019 ಅಂತ್ಯದವರೆಗೆ ಮಾಡಲಾದ ಕ್ರೋಢಿಕೃತ ವೆಚ್ಚ ರೂ. 0.33 ಕೋಟಿಗಳಾಗಿರುತ್ತದೆ.

52. ಮದ್ದೂರು ತಾಲ್ಲೂಕು ತಗ್ಗಹಳ್ಳಿ ಅಣೆಕಟ್ಟಿನ ಹಿನ್ನೀರನ್ನು ಏತ ನೀರಾವರಿ ಯೋಜನೆ ಮೂಲಕ ಮದ್ದೂರು ತಾಲ್ಲೂಕಿನ ಆತಗೂರು ಹೋಬಳಿಯಲ್ಲಿ ಬರುವ 17 ಕೆರೆಗಳಿಗೆ ಹಾಗೂ ಕುಣಿಗಲ್ ತಾಲ್ಲೂಕಿನ 3 ಕೆರೆಗಳಿಗೆ ನೀರು ತುಂಬಿಸುವ ಯೋಜನೆ.

ಮಂಡ್ಯ ಜಿಲ್ಲೆ ಮದ್ದೂರು ತಾಲ್ಲೂಕು ದೊಡ್ಡಅಂಕನಹಳ್ಳಿ ಗ್ರಾಮದ ಹತ್ತಿರತಗ್ಗಹಳ್ಳಿ ಅಣೆಕಟ್ಟಿನ ಹಿನ್ನೀರಿನಿಂದ ಏತ ನೀರಾವರಿ ಮೂಲಕ 0.277 ಟಿ.ಎಂ.ಸಿ ನೀರನ್ನು ಎತ್ತಿ 24 ಗಂಟೆ 90 ದಿನಗಳ ಕಾಲ 25.855 ಕಿ.ಮೀ. ಉದ್ದದ ಎಂ.ಎಸ್ ರೈಸಿಂಗ್ ಮೈನ್‌ಮೂಲಕ 35.67 ಕ್ಯೂಸೆಕ್ಸ್ ಕುಡಿಯುವ ನೀರನ್ನು ಮದ್ದೂರು ತಾಲ್ಲೂಕಿನ ಆತಗೂರು ಹೋಬಳಿಯಲ್ಲಿ ಬರುವ 17 ಕೆರೆಗಳಿಗೆ ಹಾಗೂ ಕುಣಿಗಲ್ ತಾಲ್ಲೂಕಿನ 3 ಕೆರೆಗಳಿಗೆ ನೀರನ್ನು ತುಂಬಿಸುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿರುತ್ತದೆ. ಈ ಯೋಜನೆಯ ಅಂದಾಜು ಮೊತ್ತವಾದ ರೂ. 45.00 ಕೋಟಿಗಳಿಗೆ ಸರ್ಕಾರದ ಆದೇಶ ಸಂ.ಜಸಂಇ 39 ಎಂಎಂಕೆ 2018, ಬೆಂಗಳೂರು, ದಿನಾಂಕ 28.09.2018 ರಲ್ಲಿ ಆಡಳಿತಾತ್ಮಕ ಅನುಮೋದನೆ ದೊರೆತಿರುತ್ತದೆ. ಸದರಿ ಕಾಮಗಾರಿಯ ಟೆಂಡರ್ ಪ್ರಕ್ರಿಯೆಯಲ್ಲಿರುತ್ತದೆ.

ಈ ಯೋಜನೆಗೆ 2018–19 ನೇ ಸಾಲಿಗೆ ರೂ. 15.00 ಕೋಟಿ ಅನುದಾನ ಒದಗಿಸಲಾಗಿದೆ.

53. ಮಂಡ್ಯ ಜಿಲ್ಲೆ ಮದ್ದೂರು ತಾಲ್ಲುಕು ಹೊಸ ಮದ್ದೂರು ಶಾಖೆಯ ನಾಲೆಯ ಸರಪಳಿ 47.00 ಕಿ.ಮೀ ಇಂದ ಮುಂದಿನ ಭಾಗದ ಭಾದಿತ ಅಚ್ಚುಕಟ್ಟು ಪ್ರದೇಶಕ್ಕೆ ನೀರನ್ನು ಒದಗಿಸಲು ಹೆಬ್ಬಳ್ಳದಿಂದ ನೀರನ್ನು ಎತ್ತುವ ಯೋಜನೆ.

ಮಂಡ್ಯ ಜಿಲ್ಲೆ,ಮದ್ದೂರು ತಾಲ್ಲೂಕಿನ ಹಳೆಯ ಚಿಕ್ಕರಸಿನಕೆರೆ ಏತ ನೀರಾವರಿ ಯೋಜನೆಯಲ್ಲಿ ಅಳಚದಿಸಿದ್ದ ಪಂಪ್ ಮತ್ತು ಮೋಟಾರ್‌ಗಳನ್ನು ಹಾಗೂ ಪ್ಯಾನಲ್ ಬೋರ್ಡ್‌ಗಳು ಹಾಗೂ ಹಲವಾರು ಬೆಲೆ ಬಾಳುವ ಬಿಡಿ ಭಾಗಗಳು ಕಳ್ಳತನವಾಗಿತ್ತು. ಅಲ್ಲದೆ, ಕೆಶಿಪ್ ರವರು ಸದರಿ ಯೋಜನೆಯನ್ನು ಮಳವಳ್ಳಿ –ಮದ್ದೂರು ಹೆದ್ದಾರಿ ರಸ್ತೆಯ ಕಾರಿಡಾರ್ ಆಫ್ ಇಂಪ್ಯಾಕ್ಟ್ ಲೈನ್ ನಿಂದ ಹೊರಕ್ಕೆ ಸ್ಥಳಾಂತರಿಸಬೇಕೆಂದು ತಿಳಿಸಿರುತ್ತಾರೆ. ಅದುದರಿಂದ ಹಳೆಯ ಯೋಜನೆಗೆ ನಿರ್ಧರಿಸಿದ 1450 ಎಕರೆ ಅಚ್ಚುಕಟ್ಟುಗಳ ಜೊತೆಗೆ 30ನೇ ವಿತರಣಾ ನಾಲೆಯ ಅಚ್ಚುಕಟ್ಟು 290 ಎಕರೆ ಹಾಗೂ 31ನೇ ವಿತರಣಾ ನಾಲೆ ಅಚ್ಚುಕಟ್ಟು 928 ಎಕರೆಗಳು ಒಟ್ಟಾರೆ ಎಲ್ಲ ಅಚ್ಚುಕಟ್ಟು ಸೇರಿ 2676 ಎಕರೆ ಅಚ್ಚುಕಟ್ಟುಗಳಿಗೆ ನೀರೊದಗಿಸುವ ಹಿತದೃಷ್ಟಿಯಿಂದ ಚಿಕ್ಕರಸಿನಕೆರೆ ಏತ ನೀರಾವರಿ ಯೋಜನೆಯನ್ನು ಪುನರುಜ್ಜೀವನಗೊಳಿಸಲು ಉದ್ದೇಶಿಸಿದ್ದು, ಈ ಸಲುವಾಗಿ ಬಾಧಿತ ಅಚ್ಚುಕಟ್ಟು ಪ್ರದೇಶಗಳಿಗೆ ಏತ ನೀರಾವರಿ ಮೂಲಕ 0.36 ಟಿ.ಎಂ.ಸಿ ನೀರನ್ನು ಹೆಬ್ಬಳ್ಳದಿಂದ ಎತ್ತಿ 20 ಗಂಟೆ 120 ದಿನಗಳ ಕಾಲ 6.10 ಕಿ.ಮೀ. ಉದ್ದದ ಎಂ.ಎಸ್ ರೈಸಿಂಗ್ ಮೈನ್‌ಮೂಲಕ 42.059 ಕ್ಯೂಸೆಕ್ಸ್ ನೀರನ್ನು ಒದಗಿಸುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿರುತ್ತದೆ. ಈ ಯೋಜನೆಯ ಅಂದಾಜು ಮೊತ್ತವಾದ ರೂ. 17.74 ಕೋಟಿಗಳಿಗೆ ಸರ್ಕಾರದ ಆದೇಶ ಸಂ. ಜಸಂಇ 166 ಎಂಎಂಕೆ 2018, ಬೆಂಗಳೂರು ದಿ: 28.02.2019 ರಲ್ಲಿ ಆಡಳಿತಾತ್ಮಕ ಅನುಮೋದನೆ ದೊರೆತಿರುತ್ತದೆ. ಸದರಿ ಕಾಮಗಾರಿ ಡಿ.ಪಿ.ಅರ್ ಗೆ ತಾಂತ್ರಿಕ ಮಂಜೂರಾತಿ ನೀಡಬೇಕಿರುತ್ತದೆ.

ಈ ಯೋಜನೆಗೆ 2018–19 ನೇ ಸಾಲಿಗೆ ರೂ. 0.50 ಕೋಟಿ ಅನುದಾನ ಒದಗಿಸಲಾಗಿದೆ.

54. ಹೊಳೆನರಸೀಪುರ ತಾಲ್ಲೂಕು ಮಾವಿನಕೆರೆ ಗ್ರಾಮದ ಹತ್ತಿರ ಹೇಮಾವತಿ ನದಿಯಿಂದ ನೀರನ್ನು ಎತ್ತಿ ಹಾಸನ ತಾಲ್ಲೂಕಿನ ದುದ್ದ ಹಾಗೂ ಶಾಂತಿಗ್ರಾಮ ಹೋಬಳಿಗಳ 160 ಕೆರೆಗಳು ಹಾಗೂ 10 ಕಟ್ಟೆಗಳಿಗೆ ಕುಡಿಯುವ ನೀರಿಗಾಗಿ ನೀರನ್ನು ತುಂಬಿಸುವ ಯೋಜನೆ.

ಹೊಳೆನರಸೀಪುರ ತಾಲ್ಲೂಕು ಮಾವಿನಕೆರೆ ಗ್ರಾಮದ ಹತ್ತಿರ ಹೇಮಾವತಿ ನದಿಯಿಂದ 0.905 ಟಿ.ಎಂ,ಸಿ ನೀರನ್ನು ಎತ್ತಿ 120 ದಿನಗಳ ಕಾಲ ಗ್ರಾವಿಟಿ ಮೇನ್ ಮೂಲಕ ಹಾಸನ ತಾಲ್ಲೂಕಿನ ದುದ್ದ ಹಾಗೂ ಶಾಂತಿಗ್ರಾಮ ಹೋಬಳಿಗಳ 160 ಕೆರೆಗಳು ಹಾಗೂ 10 ಕಟ್ಟೆಗಳಿಗೆ ಕುಡಿಯುವ ನೀರಿಗಾಗಿ ನೀರನ್ನು ತುಂಬಿಸಲು ಯೋಜಿಸಲಾಗಿದೆ. ಈ ಯೋಜನೆಯ ಅಂದಾಜು ಮೊತ್ತವಾದ ರೂ.333.00 ಕೋಟಿಗಳಿಗೆ ಸರ್ಕಾರದ ಆದೇಶ ಸಂಖ್ಯೆ: ಜಸಂಇ 120 ಎನ್.ಹೆಚ್.ಪಿ 2018 ಬೆಂಗಳೂರು ದಿ:28.09.2018 ರಲ್ಲಿ ಆಡಳಿತಾತ್ಮಕ ಅನುಮೋದನೆ ದೊರೆತಿರುತ್ತದೆ. ಸದರಿ ಕಾಮಗಾರಿಯ ಟೆಂಡರ್ ಅನುಮೋದನೆಯಾಗಿದ್ದು, ಕಾಮಗಾರಿಯನ್ನು ಪ್ರಾರಂಭಿಸಲಾಗಿರುತ್ತದೆ.

ಈ ಯೋಜನೆಗೆ 2018–19 ನೇ ಸಾಲಿಗೆ ರೂ.111.20 ಕೋಟಿ ಅನುದಾನ ಒದಗಿಸಲಾಗಿದ್ದು, ಮಾರ್ಚ್–2019ರ ಅಂತ್ಯದವರೆಗೆ ರೂ.0.35 ಕೋಟಿಗಳ ವೆಚ್ಚ ಮಾಡಲಾಗಿದೆ. ಈ ಯೋಜನೆಯ ಪ್ರಾರಂಭದಿಂದ ಮಾರ್ಚ್–2019ರ ಅಂತ್ಯದವರೆಗೆ ಮಾಡಲಾದ ಕ್ರೋಢಿಕೃತ ವೆಚ್ಚ ರೂ.0.35 ಕೋಟಿ ಆಗಿರುತ್ತದೆ.

55. ಆನೆಕೆರೆ ಶಂಭುದೇವರ ಕೆರೆಯಿಂದ ನೀರನ್ನು ಎತ್ತಿ ಚನ್ನರಾಯಪಟ್ಟಣ ತಾಲ್ಲೂಕು ದಂಡಿಗನ ಹೋಬಳಿಯ ಆಲಗೊಂಡನಹಳ್ಳಿ ಏತ ನೀರಾವರಿ ಯೋಜನೆಯ ಅಡಿಯಲ್ಲಿ ಬರುವ 300 ಎಕರೆ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಒದಗಿಸಲು ಹಾಗೂ ಚನ್ನರಾಯಪಟ್ಟಣ ತಾಲ್ಲೂಕು ದಂಡಿಗನಹಳ್ಳಿ ಹೋಬಳಿ ವ್ಯಾಪ್ತಿಯ 26 ಕೆರೆಗಳನ್ನು ಕುಡಿಯುವ ನೀರಿಗಾಗಿ ತುಂಬಿಸುವ ಯೋಜನೆ.

ಆನೆಕೆರೆ ಶಂಭುದೇವರ ಕೆರೆಯಿಂದ 120 ದಿನಗಳಲ್ಲಿ 0.225 ಟಿ.ಎಂ.ಸಿ (22 ಕ್ಯೂಸೆಕ್ಸ್) 126.50 ಮೀ ಹೆಡ್‌ಗೆ ಎತ್ತಿ ಚನ್ನರಾಯಪಟ್ಟಣ ತಾಲ್ಲೂಕಿನ ದಂಡಿಗನಹಳ್ಳಿ ಹೋಬಳಿ ವ್ಯಾಪ್ತಿಯ 26 ಕೆರೆಗಳಿಗೆ ಕುಡಿಯುವ ನೀರನ್ನು ತುಂಬಿಸುವುದು ಹಾಗೂ ಆಲಗೊಂಡನಹಳ್ಳಿ

ಏತ ನೀರಾವರಿ ಯೋಜನೆಯಡಿಯಲ್ಲಿ ಬರುವ 300 ಎಕರೆ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಒದಗಿಸುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿರುತ್ತದೆ. ಈ ಯೋಜನೆಯ ಅಂದಾಜಿಗೆ ಸರ್ಕಾರದ ಆದೇಶ ಸಂಖ್ಯೆ: ಜಸಂಇ 76 ಎನ್‌ಹೆಚ್‌ಪಿ 2017, ಬೆಂಗಳೂರು, ದಿನಾಂಕ: 26.06.2018 ರಲ್ಲಿ ರೂ.47.00 ಕೋಟಿ ಮೊತ್ತಕ್ಕೆ ಆಡಳಿತಾತ್ಮಕ ಅನುಮೋದನೆ ದೊರೆತಿರುತ್ತದೆ. ಸರ್ವೆ ಕಾರ್ಯ ಪೂರ್ಣಗೊಂಡಿದ್ದು, ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.

ಈ ಯೋಜನೆಗೆ 2018–19ನೇ ಸಾಲಿಗೆ ರೂ.2.00 ಕೋಟಿ ಅನುದಾನ ಒದಗಿಸಲಾಗಿದೆ.

56. ಹೇಮಾವತಿ ನದಿಯಿಂದ ನೀರನ್ನು ಎತ್ತಿ ಚನ್ನರಾಯಪಟ್ಟಣ ತಾಲ್ಲೂಕಿನ ಶಂಭುದೇವನಕೆರೆಗೆ ತುಂಬಿಸುವ (Augumentation) ಯೋಜನೆ.

ಹಾಸನ ಜಿಲ್ಲೆ ಚನ್ನರಾಯಪಟ್ಟಣ ತಾಲ್ಲೂಕಿನ ದಂಡಿಗನಹಳ್ಳಿ ಹೋಬಳಿಯ ಕುಂಬೇನಹಳ್ಳಿ ಗ್ರಾಮದ ಬಳಿ ಹೇಮಾವತಿ ನದಿಯಿಂದ 120 ದಿನಗಳಲ್ಲಿ 0.177 ಟಿ.ಎಂ.ಸಿ (18 ಕ್ಯೂಸೆಕ್ಸ್) 46.00 ಮೀ ಸ್ಟಾಟಿಕ್ ಹೆಡ್‌ಗೆ ಎತ್ತಿ ಚನ್ನರಾಯಪಟ್ಟಣ ತಾಲ್ಲೂಕಿನ ಶಂಭುದೇವರ ಕೆರೆಗೆ ನೀರು ತುಂಬಿಸುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿರುತ್ತದೆ. ಈ ಯೋಜನೆಯ ಅಂದಾಜಿಗೆ ಸರ್ಕಾರದ ಆದೇಶ ಸಂಖ್ಯೆ: ಜಸಂಇ 3 ಎನ್‌ಹೆಚ್‌ಪಿ 2019, ಬೆಂಗಳೂರು, ದಿನಾಂಕ: 01.02.2019ರಲ್ಲಿ ರೂ.26.00 ಕೋಟಿ ಮೊತ್ತಕ್ಕೆ ಆಡಳಿತಾತ್ಮಕ ಅನುಮೋದನೆ ದೊರೆತಿರುತ್ತದೆ. ಪ್ರಸ್ತುತ ಕಾಮಗಾರಿಯ ಟೆಂಡರ್ ಪ್ರಕ್ರಿಯೆಯಲ್ಲಿರುತ್ತದೆ.

ಈ ಯೋಜನೆಗೆ 2018–19ನೇ ಸಾಲಿಗೆ ರೂ.2.00 ಕೋಟಿ ಅನುದಾನ ಒದಗಿಸಲಾಗಿದೆ.

57. ಬಾಗೂರು ನವಿಲೆ ಸುರಂಗ ನಿರ್ಗಮನದ ಕಾಲುವೆಯಿಂದ ನೀರನ್ನು ಎತ್ತಿ ಹಾಸನ ಜಿಲ್ಲೆ ಚನ್ನರಾಯಪಟ್ಟಣ ತಾಲ್ಲೂಕಿನ ಬಾಗೂರು ಹೋಬಳಿಯ 19 ಕೆರೆಗಳನ್ನು ಕುಡಿಯುವ ನೀರಿಗಾಗಿ ತುಂಬಿಸುವ ಯೋಜನೆ.

ಬಾಗೂರು ನವಿಲೆ ಸುರಂಗ ನಿರ್ಗಮನದ ಕಾಲುವೆಯಿಂದ ಜುಲೈ ನಿಂದ ಸೆಪ್ಟೆಂಬರ್ ಅವಧಿಯಲ್ಲಿ 90 ದಿನಗಳಲ್ಲಿ 0.154 ಟಿ.ಎಂ.ಸಿ (22 ಕ್ಯೂಸೆಕ್ಸ್) 110.88 ಮೀ ಹೆಡ್‌ಗೆ ಎತ್ತಿ ಚನ್ನರಾಯಪಟ್ಟಣ ತಾಲ್ಲೂಕಿನ 19 ಕೆರೆಗಳಿಗೆ ಕುಡಿಯುವ ನೀರನ್ನು ತುಂಬಿಸುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿರುತ್ತದೆ. ಈ ಯೋಜನೆಯ ಅಂದಾಜಿಗೆ ಸರ್ಕಾರದ ಆದೇಶ ಸಂಖ್ಯೆ ಜಸಂಇ 13 ಎನ್‌ಹೆಚ್‌ಪಿ 2017, ಬೆಂಗಳೂರು ದಿನಾಂಕ 23.11.2018ರಲ್ಲಿ ಹಾಗೂ ಸೇರ್ಪಡೆ ಆದೇಶ ಸಂಖ್ಯೆ ಜಸಂಇ 13 ಎನ್‌ಹೆಚ್‌ಪಿ 2017, ಬೆಂಗಳೂರು ದಿನಾಂಕ 28.11.2018ರಲ್ಲಿ ರೂ.32.00.00 ಕೋಟಿ ಮೊತ್ತಕ್ಕೆ ಆಡಳಿತಾತ್ಮಕ ಅನುಮೋದನೆ ದೊರೆತಿರುತ್ತದೆ. ಪ್ರಸ್ತುತ ಕಾಮಗಾರಿಯ ಟೆಂಡರ್ ಪ್ರಕ್ರಿಯೆಯಲ್ಲಿರುತ್ತದೆ.

ಈ ಯೋಜನೆಗೆ 2018–19ನೇ ಸಾಲಿಗೆ ರೂ.0.20 ಕೋಟಿ ಅನುದಾನ ಒದಗಿಸಲಾಗಿದೆ.

58. ಹೇಮಾವತಿ ನದಿಯಿಂದ ಗುಡ್ಡೇಹೊಸಹಳ್ಳಿ ಗ್ರಾಮದ ಬಳಿಯಿಂದ ಲಿಫ್ಟ್ ಮುಖೇನ ನೀರನ್ನು ಎತ್ತಿ ಕೆ.ಆರ್.ಪೇಟೆ, ನಾಗಮಂಗಲ ಹಾಗೂ ಚನ್ನರಾಯಪಟ್ಟಣ ತಾಲ್ಲೂಕಿನ ಕೆರೆಗಳನ್ನು ಕುಡಿಯುವ ನೀರಿಗಾಗಿ ತುಂಬಿಸುವ ಯೋಜನೆ.

ಹೇಮಾವತಿ ನದಿಯಿಂದ ಗುಡ್ಡೇಹೊಸಹಳ್ಳಿ ಗ್ರಾಮದ ಬಳಿಯಿಂದ ಲಿಫ್ಟ್ ಮುಖೇನ ನೀರನ್ನು 67.00 ಕ್ಯೂಸೆಕ್ಸ್ ಮೊದಲನೇ ಹಂತದಲ್ಲಿ 104.84 ಮೀ, ಎರಡನೇ ಹಂತದ ಬಲಭಾಗದಲ್ಲಿ 123.12 ಮೀ ಹಾಗೂ ಎರಡನೇ ಹಂತದ ಎಡ ಭಾಗದಲ್ಲಿ 42.10 ಮೀ ಹೆಡ್ ಗೆ ಎತ್ತಿ ಮೊದಲನೇ ಹಂತದ 17.30ಕಿಮೀ ಉದ್ದ, ಎರಡನೇ ಹಂತದ ಬಲಭಾಗದ 9.125 ಕಿಮೀ ಹಾಗೂ ಎರಡನೇ ಹಂತದ ಎಡ ಭಾಗದ 2.00 ಕಿಮೀ ಉದ್ದದ ರೈಸಿಂಗ್ ಮೇನ್ ಮುಖಾಂತರ 54 ದಿನಗಳ ಕಾಲ ಕೆ.ಆರ್.ಪೇಟೆ, ನಾಗಮಂಗಲ ಹಾಗೂ ಚನ್ನರಾಯಪಟ್ಟಣ ತಾಲ್ಲೂಕಿನ 69 ಕೆರೆಗಳಿಗೆ ಹಾಗೂ 23 ಕಟ್ಟಗಳಿಗೆನೀರು ತುಂಬಿಸುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿರುತ್ತದೆ. ಈ ಯೋಜನೆಗೆ ನೀರಿನ ಅಗತ್ಯತೆಯು 310.29 ಎಂ.ಸಿ.ಎಫ್.ಟಿ ಆಗಿರುತ್ತದೆ. ಈ ಯೋಜನೆಯ ಅಂದಾಜಿಗೆ ಸರ್ಕಾರದ ಆದೇಶ ಸಂಖ್ಯೆ: ಜಸಂಇ 38 ಎಂಎಂಕೆ2018, ಬೆಂಗಳೂರು, ದಿನಾಂಕ: 21.01.2019 ರಲ್ಲಿ ರೂ. 212.00 ಕೋಟಿಗಳ ಆಡಳಿತಾತ್ಮಕ ಅನುಮೋದನೆ ದೊರೆತಿರುತ್ತದೆ. ಸದರಿ ಕಾಮಗಾರಿಯ ಟೆಂಡರ್ ಪ್ರಕ್ರಿಯೆಯಲ್ಲಿದೆ.

ಈ ಯೋಜನೆಗೆ 2018–19 ನೇ ಸಾಲಿಗೆ ರೂ. 70.70 ಕೋಟಿ ಅನುದಾನ ಒದಗಿಸಲಾಗಿರುತ್ತದೆ.

59. ಹೇಮಾವತಿ ಯೋಜನೆ ತುಮಕೂರು ಶಾಖಾ ನಾಲೆ ಕಿ.ಮೀ 105.725 ರಿಂದ ಗುರುತ್ವಾಕರ್ಷಣ ಕೊಳವೆಗಳ ಮೂಲಕ ತುಮಕೂರು ಜಿಲ್ಲೆ ಗುಬ್ಬಿ ಮತ್ತು ತಿರಾ ತಾಲ್ಲೋಕಿನ 42 ಗ್ರಾಮಗಳ ಕುಡಿಯುವ ನೀರಿನ ಬೇಡಿಕೆಯನ್ನು ನೀಗಿಸಲು ಹಾಗಲವಾಡಿ ಹೋಬಳಿ ಮಂಚಲದೊರೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಮಠದಹಳ್ಳ ಮತ್ತು ಇತರೆ ಕೆರೆಗಳಿಗೆ ಪೂರೈಸುವ ಯೋಜನೆ.

ತುಮಕೂರು ಜಿಲ್ಲೆ, ಗುಬ್ಬಿ ತಾಲ್ಲೂಕಿನ 42 ಗ್ರಾಮಗಳಿಗೆ ಕುಡಿಯುವ ನೀರಿಗಾಗಿ ಹೇಮಾವತಿ ಯೋಜನೆಯ ತುಮಕೂರು ಶಾಖಾ ನಾಲೆಯ ಸರ: 105.725 ಕಿ.ಮೀ. ನಿಂದ ಗುರುತ್ವಾಕರ್ಷಣ ಕೊಳವೆಗಳ ಮೂಲಕ 64.48 ಎಂ.ಸಿ.ಎಫ್.ಟಿ ನೀರನ್ನು ದಿನದ 24 ಗಂಟೆಗಳಂತೆ 49 ದಿನಗಳ ಅವಧಿಯಲ್ಲಿ ಗುಬ್ಬಿ ತಾಲ್ಲೂಕಿನ ಮಠದಹಳ್ಳ, ಕುರುಬರಹಳ್ಳಿ ಮ್ತತು ಶೇಷನಹಳ್ಳಿ ಕೆರೆಗಳಿಗೆ ನೀರನ್ನು ಹರಿಸುವ ಯೋಜನೆಯಾಗಿರುತ್ತದೆ. ಈ ಯೋಜನೆಯ ಅಂದಾಜಿಗೆ ಸರ್ಕಾರದ ಆದೇಶ ಸಂಖ್ಯೆ: ಜಸಂಇ 43 ಎನ್‌ಹೆಚ್‌ಪಿ 2018 ಬೆಂಗಳೂರು, ದಿ: 08.03.2019 ರಲ್ಲಿ ರೂ. 25.65 ಕೋಟಿಗಳಿಗೆ ಆಡಳಿತಾತ್ಮಕ ಅನುಮೋದನೆ ದೊರೆತಿರುತ್ತದೆ. ಅಂದಾಜು ಪಟ್ಟಿಗೆ ತಾಂತ್ರಿಕ ಮಂಜೂರಾತಿ ನೀಡಬೇಕಿರುತ್ತದೆ.

ಈ ಯೋಜನೆಗೆ 2018–19 ನೇ ಸಾಲಿಗೆ ರೂ. 12.00 ಕೋಟಿ ಅನುದಾನ ಒದಗಿಸಲಾಗಿರುತ್ತದೆ.

60. ರಾಮನಗರ ಜಿಲ್ಲೆ, ಚನ್ನಪಟ್ಟಣ, ರಾಮನಗರ, ಮಾಗಡಿ ಮತ್ತು ಕನಕಪುರ ತಾಲೂಕುಗಳಿಗೆ ಕುಡಿಯುವ ನೀರು ಸರಬರಾಜು ಮಾಡಲು ಸತ್ಯಗಾಲದ ಸಮೀಪದಲ್ಲಿ ಕಾವೇರಿ ನದಿಯಿಂದ ಇಗ್ಗಲೂರು ಹತ್ತಿರದ ಹೆಚ್.ಡಿ.ದೇವೇಗೌಡ ಬ್ಯಾರೇಜ್‌ಗೆ ಗುರುತ್ವಾಕರ್ಷಣೆ ಮೂಲಕ ನೀರು ಹರಿಸುವ ಯೋಜನೆಯ

ರಾಮನಗರ ಜಿಲ್ಲೆ, ಚನ್ನಪಟ್ಟಣ, ರಾಮನಗರ, ಮಾಗಡಿ ಮತ್ತು ಕನಕಪುರ ತಾಲೂಕುಗಳಿಗೆ ಕುಡಿಯುವ ನೀರು ಸರಬರಾಜು ಮಾಡಲು ಸತ್ಯಗಾಲದ ಸಮೀಪದಲ್ಲಿ ಕಾವೇರಿ ನದಿಯಿಂದ ಇಗ್ಗಲೂರು ಹತ್ತಿರದ ಹೆಚ್.ಡಿ.ದೇವೇಗೌಡ ಬ್ಯಾರೇಜ್‌ಗೆ ಗುರುತ್ವಾಕರ್ಷಣೆ ಮೂಲಕ ನೀರು ಹರಿಸುವ ಯೋಜನೆಯಾಗಿರುತ್ತದೆ. ಈ ಯೋಜನೆಯ ಅಂದಾಜಿಗೆ ಸರ್ಕಾರದ ಆದೇಶ ಸಂಖ್ಯೆ: ಜಸಂಇ 112 ಎಂಎಂಕೆ 2018 ಬೆಂಗಳೂರು, ದಿ:23.11.2018 ರಲ್ಲಿ ರೂ.540.00 ಕೋಟಿಗಳಿಗೆ ಅಡಳಿತಾತ್ಮಕ ಅನುಮೋದನೆ ದೊರೆತಿರುತ್ತದೆ. ಪ್ರಸ್ತುತ ಸದರಿ ಕಾಮಗಾರಿಯ ಟೆಂಡರ್ ಅನುಮೋದನೆಯಾಗಿದ್ದು, ಕಾಮಗಾರಿ ಪ್ರಾರಂಭಿಸಿಬೇಕಿರುತ್ತದೆ.

ಈ ಯೋಜನೆಗೆ 2018–19 ನೇ ಸಾಲಿಗೆ ರೂ. 0.50 ಕೋಟಿ ಅನುದಾನ ಒದಗಿಸಲಾಗಿರುತ್ತದೆ.

61. ಸೋಮವಾರಪೇಟೆ ತಾಲ್ಲೂಕಿನ ಕಟ್ಟೇಪುರ ಗ್ರಾಮದ ಬಳಿ ಹೇಮಾವತಿ ನದಿಯಿಂದ ನೀರನ್ನು ಎತ್ತಿ ಹಾಸನ ಜಿಲ್ಲೆ ಅರಕಲಗೂಡು ತಾಲ್ಲೂಕಿನ ಕಸಬಾ, ಮಲ್ಲಿಪಟ್ಟಣ, ಕೋಣನೂರು, ದೊಡ್ಡಮಗ್ಗೆ ಹೋಬಳಿಯ ಗ್ರಾಮಗಳ 150 ಕೆರೆಗಳು ಹಾಗೂ 50 ಕಟ್ಟೆಗಳಿಗೆ ಕುಡಿಯುವ ನೀರಿಗಾಗಿ ತುಂಬಿಸುವ ಯೋಜನೆಯ ಕಾಮಗಾರಿ.

ಸೋಮವಾರಪೇಟೆ ತಾಲ್ಲೂಕಿನ ಕಟ್ಟೇಪುರ ಗ್ರಾಮದ ಬಳಿ ಹೇಮಾವತಿ ನದಿಯಿಂದ ನೀರನ್ನು ಎತ್ತಿ ಹಾಸನ ಜಿಲ್ಲೆ ಅರಕಲಗೂಡು ತಾಲ್ಲೂಕಿನ ಕಸಬಾ, ಮಲ್ಲಿಪಟ್ಟಣ, ಕೋಣನೂರು, ದೊಡ್ಡಮಗ್ಗೆ ಹೋಬಳಿಯ ಗ್ರಾಮಗಳ 150 ಕೆರೆಗಳು ಹಾಗೂ 50 ಕಟ್ಟೆಗಳಿಗೆ ಕುಡಿಯುವ ನೀರಿನ ಸೌಲಭ್ಯ ಕಲ್ಪಿಸಲಾಗುವುದು, ಈ ಯೋಜನೆಯ ಒಂದನೇ ಹಂತದಲ್ಲಿ 620.07 ಎಂ.ಸಿ.ಎಫ್.ಟಿ, 60 ಕ್ಯೂಸೆಕ್ಸ್‌ನಂತೆ 120 ದಿನಗಳವರೆಗೆ ನೀರನ್ನು ಜುಲೈ ನಿಂದ ಅಕ್ಟೋಬರ್ ತಿಂಗಳವರೆಗೆ ಪಂಪ್ ಮಾಡಲು ಉದ್ದೇಶಿಸಲಾಗಿದೆ. ಸದರಿ ಯೋಜನೆಗೆ ಸರ್ಕಾರದ ಆದೇಶ ಸಂಖ್ಯೆ: ಜಸಂಇ 11 ಎಂಎಂಕೆ 2019, ಬೆಂಗಳೂರು. ದಿನಾಂಕ 01.03.2019 ರಂದು ಒಟ್ಟಾರೆ ರೂ.190.00 ಕೋಟಿಗಳ ಮೊತ್ತದ ವಿವರವಾದ ಯೋಜನಾ ಅಂದಾಜಿಗೆ ತಾತ್ವಿಕ ಅನುಮೋದನೆ ನೀಡಿದೆ ಮತ್ತು 2019–20 ನೇ ಸಾಲಿನಲ್ಲಿ ಕಾಮಗಾರಿಯನ್ನು ರೂ.120.00 ಕೋಟಿಗಳ ಅಂದಾಜು ಮೊತ್ತಕ್ಕೆ ಸೀಮಿತಗೊಳಿಸಿ ಕೈಗೆತ್ತಿಕೊಳ್ಳುವ ಷರತ್ತಿಗೊಳಪಟ್ಟು ಅನುಮೋದನೆ ನೀಡಲಾಗಿರುತ್ತದೆ. ಸದರಿ ಕಾಮಗಾರಿ ಟೆಂಡರ್ ಪ್ರಗತಿಯಲ್ಲಿದೆ.

ಈ ಯೋಜನೆಗೆ 2018–19 ನೇ ಸಾಲಿಗೆ ರೂ. 0.50 ಕೋಟಿ ಅನುದಾನ ಒದಗಿಸಲಾಗಿರುತ್ತದೆ.

ಅಣೆಕಟ್ಟು ಹಾಗೂ ಅವುಗಳ ನಾಲೆಗಳ ಆಧುನೀಕರಣ

1. ಮಂದಗೆರೆ ಅಣೆಕಟ್ಟು ನಾಲೆಗಳ ಆಧುನೀಕರಣ ಕಾಮಗಾರಿ:

ಮಂದಗೆರೆ ಅಣೆಕಟ್ಟನ್ನು ಕೆ.ಆರ್. ಪೇಟೆ ತಾಲ್ಲೂಕು ಮಂಡ್ಯ ಜಿಲ್ಲೆಯ ಮಂದಗೆರೆ ಗ್ರಾಮದ ಬಳಿ ಹೇಮಾವತಿ ನದಿಗೆ ಅಡ್ಡಲಾಗಿ 1903 ರಲ್ಲಿ ನಿರ್ಮಿಸಲಾಗಿರುತ್ತದೆ. ಈ ಅಣೆಕಟ್ಟೆಯು ಕಾವೇರಿ ಮೇಲ್ಭಾಗದ ಕಣಿವೆಯಲ್ಲಿ ಬರುತ್ತದೆ. ಈ ಅಣೆಕಟ್ಟಿಗೆ ಎರಡು ನಾಲೆಗಳಿದ್ದು, ಮಂದಗೆರೆ ಎಡ ದಂಡೆ ನಾಲೆಯು 33.50 ಕಿಮೀ ಉದ್ದವಿದ್ದು, ಈ ನಾಲೆಯಡಿ 1938 ಹೆ ಅಚ್ಚುಕಟ್ಟು ಪ್ರದೇಶವಿದೆ. ಮಂದಗೆರೆ ಅಣೆಕಟ್ಟು ಬಲದಂಡೆ ನಾಲೆಯು 47.50 ಕಿಮೀ ಉದ್ದವಿದ್ದು, ಈ ನಾಲೆಯಡಿ 4850 ಹೆ ಅಚ್ಚುಕಟ್ಟು ಪ್ರದೇಶವಿದೆ. ಖಾರೀಫ್ ಋತುವಿನಲ್ಲಿ 719 ಹೆ ಅಚ್ಚುಕಟ್ಟು ಹಾಗು ಬೇಸಿಗೆ ಋತುವಿನಲ್ಲಿ 1110 ಹೆ ಒಟ್ಟು 1827 ಹೆ ಭಾದಿತ ಅಚ್ಚುಕಟ್ಟು ಇರುತ್ತದೆ. ಈ ನಾಲೆಗಳ ಅಚ್ಚುಕಟ್ಟು ಪ್ರದೇಶ ಕೆ.ಆರ್. ಪೇಟೆ ತಾಲ್ಲೂಕು, ಮಂಡ್ಯ ಜಿಲ್ಲೆ ಮತ್ತು ಕೆ.ಆರ್ ನಗರ ತಾಲ್ಲೂಕು, ಮೈಸೂರು ಜಿಲ್ಲೆಗಳಲ್ಲಿ ಹರಡಿದೆ.

ಈ ನಾಲೆಗಳಲ್ಲಿ ಕೊನೆಯ ಭಾಗದ ರೈತರಿಗೆ ನೀರು ತಲುಪಿಸಲು ಆಗುತ್ತಿರುವ ವಿಳಂಬ ಹಾಗೂ ಬಾಧಿತ ಅಚ್ಚುಕಟ್ಟು ಪ್ರದೇಶವನ್ನು ಪುನರ್‌ಸ್ಥಾಪಿಸುವ ಹಿನ್ನೆಲೆಯಲ್ಲಿ ಸರ್ವೆ ಕಾರ್ಯ ಕೈಗೊಂಡು ನಾಲೆಯನ್ನು ಆಧುನೀಕರಣಗೊಳಿಸಲು ಉದ್ದೇಶಿಲಾಗಿರುತ್ತದೆ. ಮಂದಗೆರೆ ಅಣೆಕಟ್ಟು ಮತ್ತು ಹೇಮಗಿರಿ ಅಣೆಕಟ್ಟೆಯನ್ನು ಆಧುನೀಕರಣಗೊಳಿಸಲು ರೂ. 141.00 ಕೋಟಿಗಳಿಗೆ ಸರ್ಕಾರದ ಆದೇಶ ಸಂಖ್ಯೆ: ಜಸಂಇ 91 ಎಂಎಂಕೆ 2009, ಬೆಂಗಳೂರು, ದಿನಾಂಕ: 13.04.2011ರಲ್ಲಿ ಆಡಳಿತಾತ್ಮಕ ಅನುಮೋದನೆ ದೊರೆತಿರುತ್ತದೆ.

ಮಂದಗೆರೆ ಅಣೆಕಟ್ಟು ನಾಲೆಗಳ ಆಧುನೀಕರಣ ಕಾಮಗಾರಿಗಳನ್ನು 2012–13 ನೇ ಸಾಲಿನಲ್ಲಿ ಕೈಗೊಂಡು ಪೂರ್ಣಗೊಳಿಸಲಾಗಿರುತ್ತದೆ. ಒಟ್ಟಾರೆ 113.70 ಕಿ.ಮೀ ಪೈಕಿ 113.10 ಕಿ.ಮೀ ಉದ್ದ ಲೈನಿಂಗ್ ಕಾಮಗಾರಿ ಹಾಗೂ ಒಟ್ಟಾರೆ 731 ಸಿ.ಡಿ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿರುತ್ತದೆ.

ಈ ಯೋಜನೆಗೆ 2018–19 ನೇ ಸಾಲಿಗೆ ರೂ. 0.50 ಕೋಟಿ ಅನುದಾನ ಒದಗಿಸಲಾಗಿದ್ದು, ಮಾರ್ಚ್–2019 ರ ಅಂತ್ಯದವರೆಗೆ ರೂ. 0.78 ಕೋಟಿ ವೆಚ್ಚ ಮಾಡಲಾಗಿದೆ. ಈ ಯೋಜನೆಯ ಪ್ರಾರಂಭದಿಂದ ಮಾರ್ಚ್–2019 ಅಂತ್ಯದವರೆಗೆ ಮಾಡಲಾದ ಕ್ರೋಢಿಕೃತ ವೆಚ್ಚ ರೂ. 178.88 ಕೋಟಿಗಳಾಗಿರುತ್ತದೆ.

2. ಹೇಮಗಿರಿ ಅಣೆಕಟ್ಟು ನಾಲೆಯ ಆಧುನೀಕರಣ ಕಾಮಗಾರಿ:

ಹೇಮಗಿರಿ ಅಣೆಕಟ್ಟನ್ನು ಕೆ.ಆರ್. ಪೇಟೆ ತಾಲ್ಲೂಕು ಮಂಡ್ಯ ಜಿಲ್ಲೆಯ ಬಂಡಿಹೊಳೆ ಗ್ರಾಮದ ಬಳಿ ಹೇಮಾವತಿ ನದಿಗೆ ಅಡ್ಡಲಾಗಿ 1880 ರಲ್ಲಿ ನಿರ್ಮಿಸಲಾಗಿರುತ್ತದೆ. ಈ ಅಣೆಕಟ್ಟೆಯು ಕಾವೇರಿ ಮೇಲ್ಭಾಗದ ಕಣಿವೆಯಲ್ಲಿ ಬರುತ್ತದೆ. ಈ ಅಣೆಕಟ್ಟೆಗೆ ಒಂದು ನಾಲೆಯಿದ್ದು, ಹೇಮಗಿರಿ ಎಡದಂಡೆ ನಾಲೆಯು 35.85 ಕಿಮೀ ಉದ್ದವಿದ್ದು, ಈ ನಾಲೆಯಡಿ 1602 ಹೆ ಅಚ್ಚುಕಟ್ಟು ಪ್ರದೇಶವಿದೆ. ಖಾರೀಫ್ ಋತುವಿನಲ್ಲಿ 237 ಹೆ ಅಚ್ಚುಕಟ್ಟು ಹಾಗು ಬೇಸಿಗೆ ಋತುವಿನಲ್ಲಿ 587ಹೆ ಒಟ್ಟು 821 ಹೆ ಭಾದಿತ ಅಚ್ಚುಕಟ್ಟು ಇರುತ್ತದೆ.

ಈ ನಾಲೆಗಳಲ್ಲಿ ಕೊನೆಯ ಭಾಗದ ರೈತರಿಗೆ ನೀರು ತಲುಪಿಸಲು ಆಗುತ್ತಿರುವ ವಿಳಂಬ ಹಾಗೂ ಬಾಧಿತ ಅಚ್ಚುಕಟ್ಟು ಪ್ರದೇಶವನ್ನು ಪುನರ್‌ಸ್ಥಾಪಿಸಿರುವ ಹಿನ್ನೆಲೆಯಲ್ಲಿ ಸರ್ವೆ ಕಾರ್ಯ ಕೈಗೊಂಡು ನಾಲೆಯನ್ನು ಆಧುನೀಕರಣಗೊಳಿಸಲು ಉದ್ದೇಶಿಲಾಗಿರುತ್ತದೆ. ಮಂದಗೆರೆ ಅಣೆಕಟ್ಟು ಮತ್ತು ಹೇಮಗಿರಿ ಅಣೆಕಟ್ಟೆಯನ್ನು ಆಧುನೀಕರಣಗೊಳಿಸಲು ರೂ. 141.00 ಕೋಟಿಗಳಿಗೆ ಸರ್ಕಾರದ ಆದೇಶ ಸಂಖ್ಯೆ: ಜಸಂಇ 91 ಎಂಎಂಕೆ 2009, ಬೆಂಗಳೂರು, ದಿನಾಂಕ: 13.04.2011 ರಲ್ಲಿ ಆಡಳಿತಾತ್ಮಕ ಅನುಮೋದನೆ ದೊರೆತಿರುತ್ತದೆ.

ಹೇಮಗಿರಿ ಅಣೆಕಟ್ಟು ಎಡದಂಡೆ ನಾಲೆಯ ಆಧುನೀಕರಣ ಕಾಮಗಾರಿಗಳನ್ನು 2012–13ನೇ ಸಾಲಿನಲ್ಲಿ ಕೈಗೊಂಡು ಪೂರ್ಣಗೊಳಿಸಲಾಗಿರುತ್ತದೆ. ಒಟ್ಟಾರೆ 35.85 ಕಿ.ಮೀ ಪೈಕಿ 35.65 ಕಿ.ಮೀ ಉದ್ದ ಲೈನಿಂಗ್ ಕಾಮಗಾರಿ ಹಾಗೂ ಒಟ್ಟಾರೆ 274 ಸಿ.ಡಿ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿರುತ್ತದೆ.

ಈ ಯೋಜನೆಗೆ 2018–19 ನೇ ಸಾಲಿಗೆ ರೂ. 0.50 ಕೋಟಿ ಅನುದಾನ ಒದಗಿಸಲಾಗಿದ್ದು, ಮಾರ್ಚ್–2019 ರ ಅಂತ್ಯದವರೆಗೆ ರೂ. 0.33 ಕೋಟಿ ವೆಚ್ಚ ಮಾಡಲಾಗಿದೆ. ಈ ಯೋಜನೆಯ ಪ್ರಾರಂಭದಿಂದ ಮಾರ್ಚ್–2019 ಅಂತ್ಯದವರೆಗೆ ಮಾಡಲಾದ ಕ್ರೋಢಿಕೃತ ವೆಚ್ಚ ರೂ. 43.99 ಕೋಟಿಗಳಾಗಿರುತ್ತದೆ.

3. ಕೃಷ್ಣರಾಜ (ಕಟ್ಟೇಪುರ) ಅಣೆಕಟ್ಟು ಹಾಗೂ ಅದರ ನಾಲೆಗಳ ಆಧುನೀಕರಣ

ಕೃಷ್ಣರಾಜ (ಕಟ್ಟೇಪುರ) ಅಣೆಕಟ್ಟೆಯು ಹಾಸನ ಜಿಲ್ಲೆಯ ಅರಕಲಗೂಡು ತಾಲ್ಲೂಕಿನ ಕಟ್ಟೇಪುರ ಗ್ರಾಮದ ಬಳಿ ಕಾವೇರಿ ನದಿಗೆ ಅಡ್ಡಲಾಗಿ ಕಟ್ಟಿರುವ ಮೊದಲನೇ ಅಣೆಕಟ್ಟು ಆಗಿರುತ್ತದೆ.ಈ ಅಣೆಕಟ್ಟೆಯನ್ನು 1732 ರಲ್ಲಿ ನಿರ್ಮಾಣ ಮಾಡಿದ್ದು, ಕಾವೇರಿ ಮೇಲ್ಭಾಗದ ಕಣಿವೆಯಲ್ಲಿ ಬರುತ್ತದೆ. ಈ ಅಣೆಕಟ್ಟೆಗೆ 2 ನಾಲೆಗಳಿದ್ದು, ಎಡದಂಡೆ ನಾಲೆಯು 40.20 ಕಿ.ಮೀ ಉದ್ದವಿದ್ದು, ಹಾಸನ ಜಿಲ್ಲೆ ಅರಕಲಗೂಡು ತಾಲ್ಲೂಕಿನ 949 ಹೆ. ಅಚ್ಚುಕಟ್ಟು ಪ್ರದೇಶವಿರುತ್ತದೆ. ಬಲದಂಡೆ ನಾಲೆಯು 83.60 ಕಿ.ಮೀ ಉದ್ದವಿದ್ದು, ಹಾಸನ ಜಿಲ್ಲೆಯ ಅರಕಲಗೂಡು ತಾಲ್ಲೂಕು ಹಾಗೂ ಮೈಸೂರು ಜಿಲ್ಲೆಯ ಕೆ.ಆರ್.ನಗರ ತಾಲ್ಲೂಕಿನಲ್ಲಿ 2,600 ಹೆ. ಅಚ್ಚುಕಟ್ಟು ಪ್ರದೇಶವಿರುತ್ತದೆ.944 ಹೆ.ಅಚ್ಚುಕಟ್ಟು ಪ್ರದೇಶವು ಬಾಧಿತವಾಗಿದೆ. ಈ ಹಿನ್ನೆಲೆಯಲ್ಲಿ ಕೃಷ್ಣರಾಜ (ಕಟ್ಟೇಪುರ) ಅಣೆಕಟ್ಟು ಹಾಗೂ ಅದರ ನಾಲೆಗಳ ಆಧುನೀಕರಣ ಕಾಮಗಾರಿಗಳ

ರೂ.90.00 ಕೋಟಿಗಳ ಯೋಜನಾ ವರದಿಗೆ ಸರ್ಕಾರಿ ಆದೇಶ ಸಂಖ್ಯೆ ಜಸಂಇ 63 ಎನ್‌ಹೆಚ್‌ಪಿ 2009, ಬೆಂಗಳೂರು, ದಿ: 08.02.2010 ರಲ್ಲಿ ಆಡಳಿತಾತ್ಮಕ ಅನುಮೋದನೆ ದೊರೆತಿರುತ್ತದೆ.ಈ ಯೋಜನೆಯ ಕಾಮಗಾರಿಯನ್ನು 2014–15ನೇ ಸಾಲಿನಲ್ಲಿ ಪೂರ್ಣಗೊಳಿಸಲಾಗಿದೆ.

ಈ ಯೋಜನೆಗೆ 2018–19 ನೇ ಸಾಲಿಗೆ ರೂ. 0.50 ಕೋಟಿ ಅನುದಾನ ಒದಗಿಸಲಾಗಿದ್ದು, ಮಾರ್ಚ್–2019 ರ ಅಂತ್ಯದವರೆಗೆ ರೂ. 0.58 ಕೋಟಿ ವೆಚ್ಚ ಮಾಡಲಾಗಿದೆ. ಈ ಯೋಜನೆಯ ಪ್ರಾರಂಭದಿಂದ ಮಾರ್ಚ್–2019 ಅಂತ್ಯದವರೆಗೆ ಮಾಡಲಾದ ಕ್ರೋಢಿಕೃತ ವೆಚ್ಚ ರೂ. 135.00 ಕೋಟಿಗಳಾಗಿರುತ್ತದೆ.

4. ಮಿರ್ಲೆ ಮತ್ತು ರಾಮಸಮುದ್ರ ಅಣೆಕಟ್ಟು ಹಾಗೂ ಅದರ ನಾಲೆಗಳ ಆಧುನೀಕರಣ

ಮಿರ್ಲೆ ಅಣೆಕಟ್ಟೆಯನ್ನು ಮೈಸೂರು ಜಿಲ್ಲೆಯ ಕೆ.ಆರ್ ನಗರ ತಾಲ್ಲೂಕಿನ ಚುಂಚುನಕಟ್ಟೆ ಗ್ರಾಮದ ಬಳಿ ಕಾವೇರಿ ನದಿಗೆ ಅಡ್ಡಲಾಗಿ 1850 ರಲ್ಲಿ ನಿರ್ಮಾಣ ಮಾಡಿದ್ದು, ಕಾವೇರಿ ಮೇಲ್ಭಾಗದ ಕಣಿವೆಯಲ್ಲಿ ಬರುತ್ತದೆ. ಈ ಅಣೆಕಟ್ಟೆಗೆ ಅತ್ತಿಕಟ್ಟೆ ನಾಲೆ ಎಂಬ ಎಡದಂಡೆ ನಾಲೆಯಿದ್ದು, 10.6 ಕಿ.ಮೀ ಉದ್ದವಿರುತ್ತದೆ. ಮೈಸೂರು ಜಿಲ್ಲೆ, ಕೆ.ಆರ್ ನಗರ ತಾಲ್ಲೂಕಿನ 1,942 ಹೆ.ಅಚ್ಚುಕಟ್ಟು ಪ್ರದೇಶವಿರುತ್ತದೆ. ಅತ್ತೀಕಟ್ಟೆ ನಾಲೆಗೆ 3.50 ಕಿ.ಮೀ ಉದ್ದದ ಒಂದು ಶಾಖಾ ನಾಲೆಯಿದ್ದು, ಕಾಕನ ಕಾಲುವೆ ಎಂದು ಕರೆಯಲ್ಪಡುತ್ತದೆ ಹಾಗೂ 55 ಕಿ.ಮೀ ಉದ್ದದ 4 ಬಸಿ ಕಾಲುವೆಗಳು ಇರುತ್ತವೆ. 40 ಹೆ. ಅಚ್ಚುಕಟ್ಟು ಪ್ರದೇಶವು ಬಾಧಿತವಾಗಿದೆ.

ರಾಮಸಮುದ್ರ ಅಣೆಕಟ್ಟೆಯನ್ನು ಮೈಸೂರು ಜಿಲ್ಲೆಯ ಕೆ.ಆರ್ ನಗರ ತಾಲ್ಲೂಕಿನ ಚುಂಚುನಕಟ್ಟೆ ಗ್ರಾಮದ ಬಳಿ ಕಾವೇರಿ ನದಿಗೆ ಅಡ್ಡಲಾಗಿ 1850 ರಲ್ಲಿ ನಿರ್ಮಾಣ ಮಾಡಿದ್ದು, ಈ ಅಣೆಕಟ್ಟೆಗೆ 59.2 ಕಿ.ಮೀ ಉದ್ದದ ಬಲದಂಡೆ ನಾಲೆಯಿರುತ್ತದೆ. ಮೈಸೂರು ಜಿಲ್ಲೆ, ಕೆ.ಆರ್ ನಗರ ತಾಲ್ಲೂಕಿನ 2761 ಹೆ.ಅಚ್ಚುಕಟ್ಟು ಪ್ರದೇಶವಿರುತ್ತದೆ.70 ಹೆ.ಅಚ್ಚುಕಟ್ಟು ಪ್ರದೇಶವು ಬಾಧಿತವಾಗಿದೆ.ಈ ಹಿನ್ನೆಲೆಯಲ್ಲಿ ಮಿರ್ಲೆ ಮತ್ತು ರಾಮಸಮುದ್ರ ಅಣೆಕಟ್ಟು ಹಾಗೂ ಅಣೆಕಟ್ಟು ನಾಲೆಗಳ ಆಧುನೀಕರಣ ಕಾಮಗಾರಿಗಳ ರೂ.64.00 ಕೋಟಿಗಳ ಯೋಜನಾ ವರದಿಗೆ ಸರ್ಕಾರಿ ಆದೇಶ ಸಂಖ್ಯೆ: ಜಸಂಇ 77 ಎಂಎಂಕೆ 2009, ಬೆಂಗಳೂರು, ದಿ: 05.11.2011 ರಲ್ಲಿ ಆಡಳಿತಾತ್ಮಕ ಅನುಮೋದನೆ ದೊರೆತಿರುತ್ತದೆ.ಈ ಅಣೆಕಟ್ಟು ನಾಲೆಗಳ ಆಧುನೀಕರಣ ಕಾಮಗಾರಿಗಳುಬಹುತೇಕ ಪೂರ್ಣಗೊಂಡಿದ್ದು, 67.60 ಕಿ.ಮೀ ಉದ್ದದ ನಾಲಾ ಲೈನಿಂಗ್ ಕಾಮಗಾರಿ ಪೂರ್ಣಗೊಂಡಿದ್ದು, 517 ಸಿ.ಡಿ ಕಾಮಗಾರಿಗಳಲ್ಲಿ 452 ಸಿ.ಡಿ ಕಾಮಗಾರಿಗಳು ಪೂರ್ಣಗೊಂಡಿರುತ್ತದೆ.

ಈ ಯೋಜನೆಗೆ 2018–19 ನೇ ಸಾಲಿಗೆ ರೂ. 0.50 ಕೋಟಿ ಅನುದಾನ ಒದಗಿಸಲಾಗಿದ್ದು, ಮಾರ್ಚ್–2019 ರ ಅಂತ್ಯದವರೆಗೆ ರೂ. 0.67 ಕೋಟಿ ವೆಚ್ಚ ಮಾಡಲಾಗಿದೆ. ಈ ಯೋಜನೆಯ ಪ್ರಾರಂಭದಿಂದ ಮಾರ್ಚ್–2019 ಅಂತ್ಯದವರೆಗೆ ಮಾಡಲಾದ ಕ್ರೋಢಿಕೃತ ವೆಚ್ಚ ರೂ. 105.62 ಕೋಟಿಗಳಾಗಿರುತ್ತದೆ.

5. ಚಾಮರಾಜ ಅಣೆಕಟ್ಟು ಹಾಗೂ ಅದರ ನಾಲೆಗಳ ಆಧುನೀಕರಣ

ಚಾಮರಾಜ ಅಣೆಕಟ್ಟೆಯನ್ನು ಮೈಸೂರು ಜಿಲ್ಲೆಯ ಕೆ.ಆರ್ ನಗರ ತಾಲ್ಲೂಕಿನ ಸಕ್ಕರೆ ಗ್ರಾಮದ ಬಳಿ ಕಾವೇರಿ ನದಿಗೆ ಅಡ್ಡಲಾಗಿ 1885 ರಲ್ಲಿ ನಿರ್ಮಾಣ ಮಾಡಿದ್ದು, ಕಾವೇರಿ ಮೇಲ್ಭಾಗದ ಕಣಿವೆಯಲ್ಲಿ ಬರುತ್ತದೆ. ಈ ಅಣೆಕಟ್ಟೆಗೆ ಎರಡು ನಾಲೆಗಳಿದ್ದು, ಎಡದಂಡೆ ನಾಲೆಯು

39 ಕಿ.ಮೀ ಉದ್ದವಿದ್ದು, ಈ ನಾಲೆಗೆ 69 ಕಿ.ಮೀ ಉದ್ದದ 11 ಶಾಖಾ ನಾಲೆಗಳು ಇರುತ್ತವೆ. ಈ ನಾಲೆಗೆ ಮೈಸೂರು ಜಿಲ್ಲೆ, ಕೆ.ಆರ್.ನಗರ ತಾಲ್ಲೂಕಿನ 3,995 ಹೆ. ಅಚ್ಚುಕಟ್ಟು ಪ್ರದೇಶವಿರುತ್ತದೆ. ಬಲದಂಡೆ ನಾಲೆಯು 63.00 ಕಿ.ಮೀ ಉದ್ದವಿದ್ದು, ಈ ನಾಲೆಗೆ 73.65 ಕಿ.ಮೀ ಉದ್ದದ 15 ಶಾಖಾ ನಾಲೆಗಳು ಇರುತ್ತವೆ. ಈ ನಾಲೆಗೆ ಮೈಸೂರು ಜಿಲ್ಲೆ, ಕೆ.ಆರ್ ನಗರ ಹಾಗೂ ಹುಣಸೂರು ತಾಲ್ಲೂಕುಗಳಲ್ಲಿ 5275 ಹೆ. ಅಚ್ಚುಕಟ್ಟು ಪ್ರದೇಶವಿರುತ್ತದೆ.2000 ಹೆ.ಅಚ್ಚುಕಟ್ಟು ಪ್ರದೇಶವು ಬಾಧಿತವಾಗಿದೆ. ಈ ಹಿನ್ನೆಲೆಯಲ್ಲಿ ಚಾಮರಾಜ ಅಣೆಕಟ್ಟು ಹಾಗೂ ಅದರ ನಾಲೆಗಳ ಆಧುನೀಕರಣ ಕಾಮಗಾರಿಗಳ ರೂ.132.00 ಕೋಟಿಗಳ ಯೋಜನಾ ವರದಿಗೆ ಸರ್ಕಾರಿ ಆದೇಶ ಸಂಖ್ಯೆ: ಜಸಂಇ 76 ಎಂಎಂಕೆ 2009, ಬೆಂಗಳೂರು, ದಿ: 11.01.2012 ರಲ್ಲಿ ಆಡಳಿತಾತ್ಮಕ ಅನುಮೋದನೆ ದೊರೆತಿರುತ್ತದೆ. ಈ ಯೋಜನೆಯ ಆಧುನೀಕರಣ ಕಾಮಗಾರಿಗಳುಭೌತಿಕವಾಗಿ ಪೂರ್ಣಗೊಂಡಿದ್ದು, ಒಟ್ಟಾರೆ 102 ಕಿ.ಮೀ ಉದ್ದದ ನಾಲಾ ಲೈನಿಂಗ್ ಕಾಮಗಾರಿ ಹಾಗೂ 669 ಸಿ.ಡಿ ಕಾಮಗಾರಿಗಳು ಪೂರ್ಣಗೊಂಡಿರುತ್ತದೆ.

ಈ ಯೋಜನೆಗೆ 2018–19 ನೇ ಸಾಲಿಗೆ ರೂ. 0.50 ಕೋಟಿ ಅನುದಾನ ಒದಗಿಸಲಾಗಿದ್ದು, ಮಾರ್ಚ್–2019 ರ ಅಂತ್ಯದವರೆಗೆ ರೂ. 0.048 ಕೋಟಿ ವೆಚ್ಚ ಮಾಡಲಾಗಿದೆ. ಈ ಯೋಜನೆಯ ಪ್ರಾರಂಭದಿಂದ ಮಾರ್ಚ್–2019 ಅಂತ್ಯದವರೆಗೆ ಮಾಡಲಾದ ಕ್ರೋಢಿಕೃತ ವೆಚ್ಚ ರೂ. 207.25 ಕೋಟಿಗಳಾಗಿರುತ್ತದೆ.

6. ಮಾಧವಮಂತ್ರಿ ಅಣೆಕಟ್ಟು ಮತ್ತು ಅದರ ನಾಲೆ ಆಧುನೀಕರಣ

ಮಾಧವಮಂತ್ರಿ ಅಣೆಕಟ್ಟೆಯನ್ನು ಮೈಸೂರು ಜಿಲ್ಲೆ, ಟಿ.ನರಸೀಪುರ ತಾಲ್ಲೂಕಿನ, ತಲಕಾಡು ಗ್ರಾಮದ ಬಳಿ ಕಾವೇರಿ ನದಿಗೆ ಅಡ್ಡಲಾಗಿ ಕ್ರಿ.ಶ 1140 ರಲ್ಲಿ ನಿರ್ಮಿಸಲಾಗಿರುತ್ತದೆ. ಈ ಅಣೆಕಟ್ಟೆಯು ಕಾವೇರಿ ಮಧ್ಯ ಭಾಗದ ಕಣಿವೆಯಲ್ಲಿ ಬರುತ್ತದೆ. ಈ ಅಣೆಕಟ್ಟೆಗೆ 29.10 ಕಿ.ಮೀ ಉದ್ದದ ಎಡದಂಡೆ ನಾಲೆಯಿದ್ದು, ಮೈಸೂರು ಜಿಲ್ಲೆ, ಟಿ.ನರಸೀಪುರ ತಾಲ್ಲೂಕಿನ 1,590 ಹೆ. ಹಾಗೂ ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲ್ಲೂಕಿನ 766 ಹೆ. ಅಚ್ಚಕಟ್ಟು ಪ್ರದೇಶವಿರುತ್ತದೆ. 550 ಹೆ. ಅಚ್ಚುಕಟ್ಟು ಪ್ರದೇಶವು ಬಾಧಿತವಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಮಾಧವಮಂತ್ರಿ ಅಣೆಕಟ್ಟು ಹಾಗೂ ಅಣೆಕಟ್ಟು ನಾಲೆಗಳ ಆಧುನೀಕರಣ ಕಾಮಗಾರಿಗಳ ರೂ.19.00 ಕೋಟಿಗಳ ಯೋಜನಾ ವರದಿಗೆ ಸರ್ಕಾರಿ ಆದೇಶ ಸಂಖ್ಯೆ ಜಸಂಇ 53 ಎಂಎಂಕೆ 2011, ಬೆಂಗಳೂರು, ದಿ: 18.10.2011 ರಲ್ಲಿ ಆಡಳಿತಾತ್ಮಕ ಅನುಮೋದನೆ ದೊರೆತಿರುತ್ತದೆ. ಈ ಯೋಜನೆಯ ಆಧುನೀಕರಣ ಕಾಮಗಾರಿಗಳು ಪೂರ್ಣಗೊಂಡಿದ್ದು, ಯೋಜಿತ 21 ಕಿ.ಮೀ ಉದ್ದದ ಲೈನಿಂಗ್ ಕಾಮಗಾರಿ ಹಾಗೂ 93 ಸಿ.ಡಿ ಕಾಮಗಾರಿಗಳು ಪೂರ್ಣಗೊಂಡಿರುತ್ತದೆ.

ಈ ಯೋಜನೆಗೆ 2018–19 ನೇ ಸಾಲಿಗೆ ರೂ. 1.00 ಕೋಟಿ ಅನುದಾನ ಒದಗಿಸಲಾಗಿದ್ದು, ಮಾರ್ಚ್–2019 ರ ಅಂತ್ಯದವರೆಗೆ ರೂ. 0.0055 ಕೋಟಿ ವೆಚ್ಚ ಮಾಡಲಾಗಿದೆ. ಈ ಯೋಜನೆಯ ಪ್ರಾರಂಭದಿಂದ ಮಾರ್ಚ್–2019 ಅಂತ್ಯದವರೆಗೆ ಮಾಡಲಾದ ಕ್ರೋಢಿಕೃತ ವೆಚ್ಚ ರೂ.21.50 ಕೋಟಿಗಳಾಗಿರುತ್ತದೆ.

7. ದೇವರಾಯ ಅಣೆಕಟ್ಟು ಮತ್ತು ಅದರ ನಾಲೆ ಆಧುನೀಕರಣ

ದೇವರಾಯ ಅಣೆಕಟ್ಟೆಯನ್ನು ಮಂಡ್ಯ ಜಿಲ್ಲೆ, ಶ್ರೀರಂಗಪಟ್ಟಣ ತಾಲ್ಲೂಕಿನ ಮಜ್ಜಿಗೆರೆ ಗ್ರಾಮದ ಬಳಿ ಕಾವೇರಿ ನದಿಗೆ ಅಡ್ಡಲಾಗಿ 17ನೇ ಶತಮಾನದಲ್ಲಿ ನಿರ್ಮಿಸಲಾಗಿರುತ್ತದೆ. ಈ ಅಣೆಕಟ್ಟೆಯು ಕಾವೇರಿ ಕೆಳ ಭಾಗದ ಕಣಿವೆಯಲ್ಲಿ ಬರುತ್ತದೆ. ಈ ಅಣೆಕಟ್ಟೆಗೆ 36.30 ಕಿ.ಮೀ ಉದ್ದದ ಬಲದಂಡೆ ನಾಲೆಯಿದ್ದು, ಮಂಡ್ಯ ಜಿಲ್ಲೆ, ಶ್ರೀರಂಗಪಟ್ಟಣ ತಾಲ್ಲೂಕು ಹಾಗೂ ಮೈಸೂರು ಜಿಲ್ಲೆಯ ಮೈಸೂರು ತಾಲ್ಲೂಕಿನ 1,427 ಹೆ. ಅಚ್ಚಕಟ್ಟು ಪ್ರದೇಶವಿರುತ್ತದೆ. 290 ಹೆ. ಅಚ್ಚುಕಟ್ಟು ಪ್ರದೇಶವು ಬಾಧಿತವಾಗಿರುತ್ತದೆ. ಈ ನಾಲೆಯಲ್ಲಿ ನೀರನ್ನು ಸರಾಗವಾಗಿ ಹರಿಸಲು ಹಾಗೂ ಬಾಧಿತ ಅಚ್ಚುಕಟ್ಟಿಗೆ ನೀರನ್ನು ಒದಗಿಸುವ ಸಲುವಾಗಿ ಈ ನಾಲೆಗೆ ಸಿ.ಸಿ ಲೈನಿಂಗ್ ಒದಗಿಸಿ ಆಧುನೀಕರಣಗೊಳಿಸಲು ಉದ್ದೇಶಿಸಿದ ಹಿನ್ನೆಲೆಯಲ್ಲಿ ದೇವರಾಯ ಅಣೆಕಟ್ಟು ಹಾಗೂ ಅಣೆಕಟ್ಟು ನಾಲೆಗಳ ಆಧುನೀಕರಣ ಕಾಮಗಾರಿಗಳ ರೂ.21.00 ಕೋಟಿಗಳ ಯೋಜನಾ ವರದಿಗೆ ಸರ್ಕಾರಿ ಆದೇಶ ಸಂಖ್ಯೆ ಜಸಂಇ 51 ಎಂಎಂಕೆ 2011, ಬೆಂಗಳೂರು, ದಿ: 18.10.2011 ರಲ್ಲಿ ಆಡಳಿತಾತ್ಮಕ ಅನುಮೋದನೆ ದೊರೆತಿರುತ್ತದೆ. ಈ ಅಧುನೀಕರಣ ಕಾಮಗಾರಿ ಭೌತಿಕವಾಗಿ ಪೂರ್ಣಗೊಂಡಿದ್ದು, ಒಟ್ಟಾರೆ 22.68 ಕಿ.ಮೀ ಉದ್ದದ ಲೈನಿಂಗ್ ಕಾಮಗಾರಿ ಹಾಗೂ 257 ಸಿ.ಡಿ ಕಾಮಗಾರಿಗಳು ಪೂರ್ಣಗೊಂಡಿರುತ್ತದೆ.

ಈ ಯೋಜನೆಗೆ 2018–19 ನೇ ಸಾಲಿಗೆ ರೂ. 0.50 ಕೋಟಿ ಅನುದಾನ ಒದಗಿಸಲಾಗಿದ್ದು, ಮಾರ್ಚ್–2019 ರ ಅಂತ್ಯದವರೆಗೆ ರೂ. 0.074 ಕೋಟಿ ವೆಚ್ಚ ಮಾಡಲಾಗಿದೆ. ಈ ಯೋಜನೆಯ ಪ್ರಾರಂಭದಿಂದ ಮಾರ್ಚ್–2019 ಅಂತ್ಯದವರೆಗೆ ಮಾಡಲಾದ ಕ್ರೋಢಿಕೃತ ವೆಚ್ಚ ರೂ. 22.67 ಕೋಟಿಗಳಾಗಿರುತ್ತದೆ.

8. ಚಿಕ್ಕದೇವರಾಯ ಸಾಗರ ವಿಸ್ತರಣಾ ನಾಲೆಯ ಆಧುನೀಕರಣ ಕಾಮಗಾರಿ

ಮಂಡ್ಯ ಜಿಲ್ಲೆ, ಶ್ರೀರಂಗಪಟ್ಟಣ ತಾಲ್ಲೂಕಿನ ಕೃಷ್ಣರಾಜಸಾಗರ ಅಣೆಕಟ್ಟೆಯ ಕೆಳಭಾಗದಲ್ಲಿ ಕಾವೇರಿ ನದಿಗೆ ಅಡ್ಡಲಾಗಿ ಚಿಕ್ಕದೇವರಾಯಸಾಗರ ಅಣೆಕಟ್ಟೆಯನ್ನು ಸುಮಾರು 17ನೇ ಶತಮಾನದಲ್ಲಿ ನಿರ್ಮಿಸಲಾಗಿದ್ದು, ಈ ಅಣೆಕಟ್ಟೆಯಿಂದ ಹೊರಡುವ ಸಿ.ಡಿ.ಎಸ್ ಎಡದಂಡೆ ನಾಲೆಯು ಅಣೆಕಟ್ಟೆಯಿಂದ 105 ಕಿ.ಮೀ ಕ್ರಮಿಸಿ ಬನ್ನೂರು ಕೆರೆಯನ್ನು ತಲುಪುತ್ತದೆ. ಕೆರೆಯನ್ನು ತುಂಬಿಸಿದ ನಂತರ ಕೆರೆಯಿಂದ ಸಿ.ಡಿ.ಎಸ್ ವಿಸ್ತರಣಾ ನಾಲೆಯು 26 ಕಿ.ಮೀ ಉದ್ದವಿದ್ದು, 155 ಕ್ಯೂಸೆಕ್ಸ್ ನೀರು ಹರಿವಿನ ಸಾಮರ್ಥ್ಯ ಹೊಂದಿದ್ದು, ಇದರ ಅಡಿಯಲ್ಲಿ ಮೈಸೂರು ಜಿಲ್ಲೆಯ ಟಿ.ನರಸೀಪುರ ತಾಲ್ಲೂಕಿನ ಒಟ್ಟು 1997.97 ಹೆ. ಅಚ್ಚುಕಟ್ಟು ಪ್ರದೇಶವಿರುತ್ತದೆ. 303.38 ಹೆ.ಅಚ್ಚುಕಟ್ಟು ಪ್ರದೇಶವು ಬಾಧಿತವಾಗಿರುತ್ತದೆ. ಈ ನಾಲೆಯಲ್ಲಿ ನೀರನ್ನು ಸರಾಗವಾಗಿ ಹರಿಸಲು ಹಾಗೂ ಬಾಧಿತ ಅಚ್ಚುಕಟ್ಟಿಗೆ ನೀರನ್ನು ಒದಗಿಸುವ ಸಲುವಾಗಿ ಈ ನಾಲೆಗೆ ಸಿ.ಸಿ ಲೈನಿಂಗ್ ಒದಗಿಸಿ ಆಧುನೀಕರಣಗೊಳಿಸಲು ಉದ್ದೇಶಿಸಿದ ಹಿನ್ನೆಲೆಯಲ್ಲಿ ಚಿಕ್ಕದೇವರಾಯ ಸಾಗರ ವಿಸ್ತರಣಾ ನಾಲೆಯ ಆಧುನೀಕರಣ ಕಾಮಗಾರಿಯ ರೂ. 17.00 ಕೋಟಿಗಳ ಯೋಜನಾ ವರದಿಗೆ ಸರ್ಕಾರಿ ಆದೇಶ ಸಂ: ಜಸಂಇ 41 ಎಂಎಂಕೆ 2012, ದಿ: 13.07.2012 ರಲ್ಲಿ ಆಡಳಿತಾತ್ಮಕ ಅನುಮೋದನೆ ದೊರೆತಿರುತ್ತದೆ. ಈ ಅಧುನೀಕರಣ ಕಾಮಗಾರಿ ಭೌತಿಕವಾಗಿ ಪೂರ್ಣಗೊಂಡಿದ್ದು, ಒಟ್ಟಾರೆ 26.00 ಕಿ.ಮೀ ಉದ್ದದ ಲೈನಿಂಗ್ ಕಾಮಗಾರಿ ಹಾಗೂ 143 ಸಿ.ಡಿ ಕಾಮಗಾರಿಗಳು ಪೂರ್ಣಗೊಂಡಿರುತ್ತದೆ.

ಈ ಯೋಜನೆಗೆ 2018–19 ನೇ ಸಾಲಿಗೆ ರೂ. 0.50 ಕೋಟಿ ಅನುದಾನ ಒದಗಿಸಲಾಗಿದ್ದು, ಮಾರ್ಚ್–2019 ರ ಅಂತ್ಯದವರೆಗೆ ರೂ. 0.001 ಕೋಟಿ ವೆಚ್ಚ ಮಾಡಲಾಗಿದೆ. ಈ ಯೋಜನೆಯ ಪ್ರಾರಂಭದಿಂದ ಮಾರ್ಚ್–2019 ಅಂತ್ಯದವರೆಗೆ ಮಾಡಲಾದ ಕ್ರೋಢಿಕೃತ ವೆಚ್ಚ ರೂ. 20.67 ಕೋಟಿಗಳಾಗಿರುತ್ತದೆ.

9. ವಿರಿಜ ಅಣೆಕಟ್ಟು ಮತ್ತು ಅದರ ನಾಲೆಗಳ ಆಧುನೀಕರಣ

ವಿರಿಜ ಅಣೆಕಟ್ಟೆಯನ್ನು ಮಂಡ್ಯ ಜಿಲ್ಲೆ, ಶ್ರೀರಂಗಪಟ್ಟಣ ತಾಲ್ಲೂಕಿನ, ಬೆಳಗೊಳ ಗ್ರಾಮದ ಬಲಮುರಿ ಕ್ಷೇತ್ರದ ಹತ್ತಿರ ಕಾವೇರಿ ನದಿಯ ಬಲಭಾಗದ ಶಾಖೆಗೆ 17ನೇ ಶತಮಾನದಲ್ಲಿ ನಿರ್ಮಿಸಲಾಗಿರುತ್ತದೆ. ಈ ಅಣೆಕಟ್ಟೆಯು ಕಾವೇರಿ ಮಧ್ಯಭಾಗದ ಕಣಿವೆಯಲ್ಲಿ ಬರುತ್ತದೆ. ಈ ಅಣೆಕಟ್ಟೆಗೆ ಒಟ್ಟಾರೆ 93.60 ಕಿ.ಮೀ ಉದ್ದದ ನಾಲೆಯಿರುತ್ತದೆ. ಮೈಸೂರು ಜಿಲ್ಲೆ, ಟಿ.ನರಸೀಪುರ ಹಾಗೂ ಮೈಸೂರು ತಾಲ್ಲೂಕುಗಳಲ್ಲಿ 5,360 ಹೆ. ಅಚ್ಚಕಟ್ಟು ಪ್ರದೇಶವಿರುತ್ತದೆ. 356.53 ಹೆ.ಅಚ್ಚುಕಟ್ಟು ಪ್ರದೇಶವು ಬಾಧಿತವಾಗಿರುತ್ತದೆ. ಈ ನಾಲೆಯಲ್ಲಿ ನೀರನ್ನು ಸರಾಗವಾಗಿ ಹರಿಸಲು ಹಾಗೂ ಬಾಧಿತ ಅಚ್ಚುಕಟ್ಟಿಗೆ ನೀರನ್ನು ಒದಗಿಸುವ ಸಲುವಾಗಿ ಈ ನಾಲೆಗೆ ಸಿ.ಸಿ ಲೈನಿಂಗ್ ಒದಗಿಸಿ ಆಧುನೀಕರಣಗೊಳಿಸಲು ಉದ್ದೇಶಿಸಿದ ಹಿನ್ನೆಲೆಯಲ್ಲಿ ವಿರಿಜ ಅಣೆಕಟ್ಟು ಹಾಗೂ ಅದರ ನಾಲೆಗಳ ಆಧುನೀಕರಣ ಕಾಮಗಾರಿಗಳ ರೂ.83 ಕೋಟಿಗಳ ಯೋಜನಾ ವರದಿಗೆ ಸರ್ಕಾರಿ ಆದೇಶ ಸಂಖ್ಯೆ ಜಸಂಇ 35 ಎಂಎಂಕೆ 2013, ಬೆಂಗಳೂರು, ದಿ: 19.02.2014 ರಲ್ಲಿ ಆಡಳಿತಾತ್ಮಕ ಅನುಮೋದನೆ ದೊರೆತಿರುತ್ತದೆ. ಈ ಆಧುನೀಕರಣ ಕಾಮಗಾರಿಗಳು ಭೌತಿಕವಾಗಿ ಪೂರ್ಣಗೊಂಡಿದ್ದು,ಒಟ್ಟಾರೆ 69.19 ಕಿ.ಮೀ ಉದ್ದದ ಲೈನಿಂಗ್ ಕಾಮಗಾರಿ ಹಾಗೂ 435 ಸಿ.ಡಿ ಕಾಮಗಾರಿಗಳು ಪೂರ್ಣಗೊಂಡಿರುತ್ತದೆ.

ಈ ಯೋಜನೆಗೆ 2018–19 ನೇ ಸಾಲಿಗೆ ರೂ. 2.00 ಕೋಟಿ ಅನುದಾನ ಒದಗಿಸಲಾಗಿದ್ದು, ಮಾರ್ಚ್–2019 ರ ಅಂತ್ಯದವರೆಗೆ ರೂ. 0.01 ಕೋಟಿ ವೆಚ್ಚ ಮಾಡಲಾಗಿದೆ. ಈ ಯೋಜನೆಯ ಪ್ರಾರಂಭದಿಂದ ಮಾರ್ಚ್–2019 ಅಂತ್ಯದವರೆಗೆ ಮಾಡಲಾದ ಕ್ರೋಢಿಕೃತ ವೆಚ್ಚ ರೂ. 104.55 ಕೋಟಿಗಳಾಗಿರುತ್ತದೆ.

10. ರಾಜಪರಮೇಶ್ವರಿ ಅಣೆಕಟ್ಟು ಮತ್ತು ಅದರ ನಾಲೆಯ ಆಧುನೀಕರಣ

ರಾಜಪರಮೇಶ್ವರಿಅಣೆಕಟ್ಟೆಯನ್ನು ಮಂಡ್ಯ ಜಿಲ್ಲೆ, ಶ್ರೀರಂಗಪಟ್ಟಣ ತಾಲ್ಲೂಕಿನ, ಮಹದೇವಪುರ ಗ್ರಾಮದ ಬಳಿ ಕಾವೇರಿ ನದಿಗೆ ಅಡ್ಡಲಾಗಿ ಕ್ರಿ.ಶ.19 ನೇ ಶತಮಾನದಲ್ಲಿ ನಿರ್ಮಿಸಲಾಗಿರುತ್ತದೆ. ಈ ಅಣೆಕಟ್ಟೆಯು ಕಾವೇರಿ ಮಧ್ಯಭಾಗದ ಕಣಿವೆಯಲ್ಲಿ ಬರುತ್ತದೆ. ಈ ಅಣೆಕಟ್ಟೆಗೆ 37.60 ಕಿ.ಮೀ ಉದ್ದದ ಬಲದಂಡೆ ನಾಲೆಯಿದ್ದು, ಮಂಡ್ಯ ಜಿಲ್ಲೆ ಶ್ರೀರಂಗಪಟ್ಟಣ ತಾಲ್ಲೂಕು, ಮೈಸೂರು ಜಿಲ್ಲೆ ಟಿ.ನರಸೀಪುರ ಹಾಗೂ ಮೈಸೂರು ತಾಲ್ಲೂಕುಗಳಲ್ಲಿ 2,219 ಹೆ. ಅಚ್ಚಕಟ್ಟು ಪ್ರದೇಶವಿರುತ್ತದೆ. 356.50 ಹೆ.ಅಚ್ಚುಕಟ್ಟು ಪ್ರದೇಶವು ಬಾಧಿತವಾಗಿರುತ್ತದೆ. ಈ

ನಾಲೆಯಲ್ಲಿ ನೀರನ್ನು ಸರಾಗವಾಗಿ ಹರಿಸಲು ಹಾಗೂ ಬಾಧಿತ ಅಚ್ಚುಕಟ್ಟಿಗೆ ನೀರನ್ನು ಒದಗಿಸುವ ಸಲುವಾಗಿ ಈ ನಾಲೆಗೆ ಸಿ.ಸಿ ಲೈನಿಂಗ್ ಒದಗಿಸಿ ಆಧುನೀಕರಣಗೊಳಿಸಲು ಉದ್ದೇಶಿಸಿದ ಹಿನ್ನೆಲೆಯಲ್ಲಿ ರಾಜಪರಮೇಶ್ವರಿ ಅಣೆಕಟ್ಟು ಮತ್ತು ಅದರ ನಾಲೆಯ ಆಧುನಿಕರಣ ಕಾಮಗಾರಿಗಳ ರೂ.26.50 ಕೋಟಿಗಳಿಗೆ ಯೋಜನಾ ವರದಿಗೆ ಸರ್ಕಾರಿ ಆದೇಶ ಸಂಖ್ಯೆ ಜಸಂಇ 41 ಎಂಎಂಕೆ 2013, ಬೆಂಗಳೂರು, ದಿ: 20.09.2013 ರಲ್ಲಿ ಆಡಳಿತಾತ್ಮಕ ಅನುಮೋದನೆ ದೊರೆತಿರುತ್ತದೆ. ಈ ಅಧುನೀಕರಣ ಕಾಮಗಾರಿ ಭೌತಿಕವಾಗಿ ಪೂರ್ಣಗೊಂಡಿದ್ದು, ಒಟ್ಟಾರೆ 37.60 ಕಿ.ಮೀ ಉದ್ದ ಲೈನಿಂಗ್ ಕಾಮಗಾರಿ ಹಾಗೂ ಒಟ್ಟಾರೆ 135 ಸಿ.ಡಿ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿರುತ್ತದೆ.

ಈ ಯೋಜನೆಗೆ 2018–19 ನೇ ಸಾಲಿಗೆ ರೂ. 0.75 ಕೋಟಿ ಅನುದಾನ ಒದಗಿಸಲಾಗಿದ್ದು, ಮಾರ್ಚ್–2019 ರ ಅಂತ್ಯದವರೆಗೆ ರೂ. 5.08 ಕೋಟಿ ವೆಚ್ಚ ಮಾಡಲಾಗಿದೆ. ಈ ಯೋಜನೆಯ ಪ್ರಾರಂಭದಿಂದ ಮಾರ್ಚ್–2019 ಅಂತ್ಯದವರೆಗೆ ಮಾಡಲಾದ ಕ್ರೋಢಿಕೃತ ವೆಚ್ಚ ರೂ. 43.56 ಕೋಟಿಗಳಾಗಿರುತ್ತದೆ.

11. ರಾಮಸ್ವಾಮಿ ಅಣೆಕಟ್ಟು ಮತ್ತು ಅದರ ನಾಲೆಯ ಆಧುನೀಕರಣ:–

ರಾಮಸ್ವಾಮಿಅಣೆಕಟ್ಟೆಯನ್ನು ಮಂಡ್ಯ ಜಿಲ್ಲೆ ಶ್ರೀರಂಗಪಟ್ಟಣ ತಾಲ್ಲೂಕಿನ ಮಂಡ್ಯ ಕೊಪ್ಪಲು ಗ್ರಾಮದ ಬಳಿ ಕಾವೇರಿ ನದಿಗೆ 19ನೇ ಶತಮಾನದಲ್ಲಿ ರಲ್ಲಿ ನಿರ್ಮಿಸಲಾಗಿರುತ್ತದೆ. ಈ ಅಣೆಕಟ್ಟೆಯು ಕಾವೇರಿ ಕೆಳ ಭಾಗದ ಕಣಿವೆಯಲ್ಲಿ ಬರುತ್ತದೆ. ಈ ಅಣೆಕಟ್ಟೆಗೆ 86.50 ಕಿ.ಮೀ ಉದ್ದದ ಎಡದಂಡೆ ನಾಲೆಯಿದ್ದು, ಮಂಡ್ಯ ಜಿಲ್ಲೆ ಶ್ರೀರಂಗಪಟ್ಟಣ ತಾಲ್ಲೂಕಿನಲ್ಲಿ 4,856 ಹೆ. ಅಚ್ಚಕಟ್ಟು ಪ್ರದೇಶವಿರುತ್ತದೆ. 447 ಹೆ.ಅಚ್ಚುಕಟ್ಟು ಪ್ರದೇಶವು ಬಾಧಿತವಾಗಿರುತ್ತದೆ. ಈ ಹಿನ್ನೆಲೆಯಲ್ಲಿ ರಾಮಸ್ವಾಮಿ ಅಣೆಕಟ್ಟು ಮತ್ತು ಅದರ ನಾಲೆಯ ಆಧುನಿಕರಣ ಕಾಮಗಾರಿಗಳ ರೂ. 80.00 ಕೋಟಿ ಮೊತ್ತದ ಯೋಜನಾ ವರದಿಗೆ ಸರ್ಕಾರಿ ಆದೇಶ ಸಂಖ್ಯೆ ಜಸಂಇ 174 ಎಂಎಂಕೆ 2013, ಬೆಂಗಳೂರು, ದಿ: 19.02.2014 ರಲ್ಲಿ ಆಡಳಿತಾತ್ಮಕ ಅನುಮೋದನೆ ದೊರೆತಿರುತ್ತದೆ. ಈ ಆಧುನೀಕರಣ ಕಾಮಗಾರಿಗಳು ಪ್ರಗತಿಯಲ್ಲಿದ್ದು, 86.19 ಕಿ.ಮೀ ಉದ್ದ ಲೈನಿಂಗ್ ಕಾಮಗಾರಿ ಪೂರ್ಣಗೊಂಡಿದ್ದು, 201 ಸಿ.ಡಿ ಕಾಮಗಾರಿಗಳು ಪೂರ್ಣಗೊಂಡಿರುತ್ತದೆ.

ಈ ಯೋಜನೆಗೆ 2018–19 ನೇ ಸಾಲಿಗೆ ರೂ. 2.00 ಕೋಟಿ ಅನುದಾನ ಒದಗಿಸಲಾಗಿದ್ದು, ಮಾರ್ಚ್–2019 ರ ಅಂತ್ಯದವರೆಗೆ ರೂ. 0.82 ಕೋಟಿ ವೆಚ್ಚ ಮಾಡಲಾಗಿದೆ. ಈ ಯೋಜನೆಯ ಪ್ರಾರಂಭದಿಂದ ಮಾರ್ಚ್–2019 ಅಂತ್ಯದವರೆಗೆ ಮಾಡಲಾದ ಕ್ರೋಢಿಕೃತ ವೆಚ್ಚ ರೂ. 80.85 ಕೋಟಿಗಳಾಗಿರುತ್ತದೆ.

12. ಹುಲ್ಲಹಳ್ಳಿ ಅಣೆಕಟ್ಟು ಎಡದಂಡೆಯಲ್ಲಿ ಬರುವ ರಾಂಪುರ ನಾಲೆಯ ಸರಪಳಿ:0.00 ರಿಂದ 53.410. ಕಿ.ಮೀ. ವರೆಗೆ ಅಭಿವೃದ್ಧಿ ಕಾಮಗಾರಿ

ಹುಲ್ಲಹಳ್ಳಿ ಅಣೆಕಟ್ಟೆಯನ್ನು ಮೈಸೂರು ಜಿಲ್ಲೆ ನಂಜನಗೂಡು ತಾಲ್ಲೂಕಿನ ಹುಲ್ಲಹಳ್ಳಿ ಗ್ರಾಮದ ಬಳಿ ಕಬಿನಿ ನದಿಗೆ ಅಡ್ಡಲಾಗಿ 1889 ರಲ್ಲಿ ನಿರ್ಮಿಸಲಾಗಿರುತ್ತದೆ. ಈ ಸ್ಥಳವು ಕಾವೇರಿ ಕೆಳಭಾಗದ ಕಣಿವೆಯಲ್ಲಿ ಬರುತ್ತದೆ (lower Cauvery). ಈ ಅಣೆಕಟ್ಟೆಗೆ 2 ನಾಲೆಗಳಿದ್ದು,

ಎಡದಂಡೆ ನಾಲೆಯು 55.00 ಕಿ.ಮೀ ಉದ್ದವಿದ್ದು, 2,881 ಹೆ. ಅಚ್ಚುಕಟ್ಟು ಪ್ರದೇಶವಿದ್ದು, ಬಲದಂಡೆ ನಾಲೆಯು 72.00 ಕಿ.ಮೀ ಉದ್ದವಿದ್ದು, 2,909 ಹೆ. ಅಚ್ಚುಕಟ್ಟು ಪ್ರದೇಶವಿದ್ದು, ನಂಜನಗೂಡು ತಾಲ್ಲೂಕು ಮೈಸೂರು ಜಿಲ್ಲೆಯಲ್ಲಿ ಒಟ್ಟಾರೆ 5791 ಹೆ.ಅಚ್ಚುಕಟ್ಟು ಪ್ರದೇಶವಿರುತ್ತದೆ. ಎಡದಂಡೆಯಲ್ಲಿ ಬರುವ ನಾಲೆಯನ್ನು ರಾಂಪುರ ನಾಲೆ ಎಂದು ಕರೆಯಲಾಗುತ್ತಿದ್ದು ಇದರಡಿಯಲ್ಲಿ 235.00 ಹೆ.ಅಚ್ಚುಕಟ್ಟು ಪ್ರದೇಶವು ಬಾಧಿತವಾಗಿದೆ. ಈ ಹಿನ್ನೆಲೆಯಲ್ಲಿ ರಾಂಪುರ ನಾಲೆಯ ಸರಪಳಿ:0.00 ರಿಂದ 53.410. ಕಿ.ಮೀ. ವರೆಗೆ ನಾಲೆಯನ್ನು ಆಧುನೀಕರಣಗೊಳಿಸುವ ಕಾಮಗಾರಿಯ ರೂ.43.50 ಕೋಟಿಗಳ ಯೋಜನಾ ವರದಿಗೆ ಸರ್ಕಾರಿ ಆದೇಶ ಸಂಖ್ಯೆ ಜಸಂಇ 9 ಎಂ.ಎಂ.ಕೆ 2014, ಬೆಂಗಳೂರು, ದಿ: 19.02.2014 ರಲ್ಲಿ ಆಡಳಿತಾತ್ಮಕ ಅನುಮೋದನೆ ದೊರೆತಿರುತ್ತದೆ. ರಾಂಪುರ ನಾಲೆಯ ಸರ: 0.00 ರಿಂದ 55.00 ಕಿಮೀ ವರೆಗಿನ ಸಿ.ಸಿ ಲೈನಿಂಗ್ ಕಾಮಗಾರಿಯು ಭೌತಿಕವಾಗಿ ಪೂರ್ಣಗೊಂಡಿರುತ್ತದೆ.

ಈ ಯೋಜನೆಗೆ 2018–19 ನೇ ಸಾಲಿಗೆ ರೂ. 0.50 ಕೋಟಿ ಅನುದಾನ ಒದಗಿಸಲಾಗಿದ್ದು, ಮಾರ್ಚ್–2019 ರ ಅಂತ್ಯದವರೆಗೆ ರೂ. 11.89 ಕೋಟಿ ವೆಚ್ಚ ಮಾಡಲಾಗಿದೆ. ಈ ಯೋಜನೆಯ ಪ್ರಾರಂಭದಿಂದ ಮಾರ್ಚ್–2019 ಅಂತ್ಯದವರೆಗೆ ಮಾಡಲಾದ ಕ್ರೋಢಿಕೃತ ವೆಚ್ಚ ರೂ. 63.26 ಕೋಟಿಗಳಾಗಿರುತ್ತದೆ.

13. ಹುಲ್ಲಹಳ್ಳಿ ಅಣೆಕಟ್ಟು ಬಲದಂಡೆಯಲ್ಲಿ ಬರುವ ಹುಲ್ಲಹಳ್ಳಿ ನಾಲೆಯ ಸರಪಳಿ: 0.00 ರಿಂದ 72.00 ಕಿ.ಮೀ. ವರೆಗೆ ಅಭಿವೃದ್ಧಿ ಕಾಮಗಾರಿ.

ಹುಲ್ಲಹಳ್ಳಿ ಅಣೆಕಟ್ಟೆಯನ್ನು ಮೈಸೂರು ಜಿಲ್ಲೆ ನಂಜನಗೂಡು ತಾಲ್ಲೂಕಿನ ಹುಲ್ಲಹಳ್ಳಿ ಗ್ರಾಮದ ಬಳಿ ಕಬಿನಿ ನದಿಗೆ ಅಡ್ಡಲಾಗಿ 1889 ರಲ್ಲಿ ನಿರ್ಮಿಸಲಾಗಿರುತ್ತದೆ. ಈ ಸ್ಥಳವು ಕಾವೇರಿ ಕೆಳಭಾಗದ ಕಣಿವೆಯಲ್ಲಿ ಬರುತ್ತದೆ (ಟಣಿಜಿಜಿ ಅಚಿಣಜಿಣಿಥಿ). ಈ ಅಣೆಕಟ್ಟೆಗೆ 2 ನಾಲೆಗಳಿದ್ದು, ಎಡದಂಡೆ ನಾಲೆಯು 55.00 ಕಿ.ಮೀ ಉದ್ದವಿದ್ದು, 2,881 ಹೆ. ಅಚ್ಚುಕಟ್ಟು ಪ್ರದೇಶವಿದ್ದು, ಬಲದಂಡೆ ನಾಲೆಯು 72.00 ಕಿ.ಮೀ ಉದ್ದವಿದ್ದು, 2,909 ಹೆ. ಅಚ್ಚುಕಟ್ಟು ಪ್ರದೇಶವಿದ್ದು, ನಂಜನಗೂಡು ತಾಲ್ಲೂಕು ಮೈಸೂರು ಜಿಲ್ಲೆಯಲ್ಲಿ ಒಟ್ಟಾರೆ 5791 ಹೆ. ಅಚ್ಚುಕಟ್ಟು ಪ್ರದೇಶವಿರುತ್ತದೆ. ಬಲದಂಡೆಯಲ್ಲಿ ಬರುವ ನಾಲೆಯನ್ನು ಹುಲ್ಲಹಳ್ಳು ನಾಲೆ ಎಂದು ಕರೆಯಲಾಗುತ್ತಿದ್ದು ಇದರಡಿಯಲ್ಲಿ 944 ಹೆ. ಅಚ್ಚುಕಟ್ಟು ಪ್ರದೇಶವು ಬಾಧಿತವಾಗಿದೆ. ಈ ಹಿನ್ನೆಲೆಯಲ್ಲಿ ಹುಲ್ಲಹಳ್ಳಿ ನಾಲೆಯ ಸರಪಳಿ: 0.00 ರಿಂದ 72.00 ಕಿ.ಮೀ. ವರೆಗೆ ನಾಲೆಯನ್ನು ಆಧುನೀಕರಣಗೊಳಿಸುವ ಕಾಮಗಾರಿಯ ರೂ.99.00 ಕೋಟಿಗಳ ಯೋಜನಾ ವರದಿಗೆ ಸರ್ಕಾರಿ ಆದೇಶ ಸಂಖ್ಯೆ ಜಸಂಇ 70 ಎಂ.ಎಂ. ಕೆ 2014, ಬೆಂಗಳೂರು, ದಿ: 30.12.2014 ರಲ್ಲಿ ಆಡಳಿತಾತ್ಮಕ ಅನುಮೋದನೆ ದೊರೆತಿರುತ್ತದೆ. ಪ್ರಸ್ತುತ ಕಾಮಗಾರಿಯು ಭೌತಿಕವಾಗಿ ಪೂರ್ಣಗೊಂಡಿರುತ್ತದೆ.

ಈ ಯೋಜನೆಗೆ 2018–19 ನೇ ಸಾಲಿಗೆ ರೂ. 2.00 ಕೋಟಿ ಅನುದಾನ ಒದಗಿಸಲಾಗಿದ್ದು, ಮಾರ್ಚ್–2019 ರ ಅಂತ್ಯದವರೆಗೆ ರೂ. 9.10 ಕೋಟಿ ವೆಚ್ಚ ಮಾಡಲಾಗಿದೆ. ಈ ಯೋಜನೆಯ ಪ್ರಾರಂಭದಿಂದ ಮಾರ್ಚ್–2019 ಅಂತ್ಯದವರೆಗೆ ಮಾಡಲಾದ ಕ್ರೋಢಿಕೃತ ವೆಚ್ಚ ರೂ. 142.56 ಕೋಟಿಗಳಾಗಿರುತ್ತದೆ.

14. ವಿಶ್ವೇಶ್ವರಯ್ಯ ನಾಲಾ ಜಾಲದ ಅಭಿವೃದ್ಧಿ ಕಾಮಗಾರಿ:

ವಿಶ್ವೇಶ್ವರಯ್ಯ ನಾಲಾ ಜಾಲದ ಮುಖ್ಯ ನಾಲೆ, ಶಾಖಾ ನಾಲೆಗಳು, ಉಪ ಶಾಖೆಗಳು ಮತ್ತು ವಿತರಣಾ ನಾಲೆಗಳ ಒಟ್ಟು ಉದ್ದ 1523.30 ಕಿ.ಮೀ ಗಳಾಗಿದ್ದು, ಇದರ ಪೈಕಿ ಹಿಂದಿನ ಆಧುನೀಕರಣ ಯೋಜನೆಯ ಅಡಿಯಲ್ಲಿ ಮುಖ್ಯ ನಾಲೆ ಮತ್ತು ಆಯ್ದ ಕೆಲವು ಶಾಖಾ ನಾಲೆಗಳ ಒಟ್ಟು 522.50 ಕಿ.ಮೀ ಉದ್ದದ ಅಭಿವೃದ್ಧಿ ಹಾಗೂ ಸೂಕ್ಷ್ಮ ಸ್ಥಳಗಳಲ್ಲಿ ಕೆ.ಆರ್.ಎಸ್ ಆಧುನೀಕರಣದ ಅಡಿಯಲ್ಲಿ ನಿರ್ವಹಿಸಿರುವ ಲೈನಿಂಗ್ ಹೊರತುಪಡಿಸಿ, ಉಳಿದಂತೆ ಸುಮಾರು 1000.80 ಕಿ.ಮೀ ಉದ್ದದ ವಿಶ್ವೇಶ್ವರಯ್ಯ ನಾಲಾ ಜಾಲದ ಪೈಕಿ 452 ಕಿ.ಮೀ ಉದ್ದದ ನಾಲಾ ಜಾಲವನ್ನು ಆದ್ಯತೆಯ ಮೇರೆಗೆ ಅಭಿವೃದ್ಧಿಗೊಳಿಸುವುದು ಅಗತ್ಯವೆಂದು ಗುರುತಿಸಿದ್ದು, ಇದಕ್ಕೆ ಸಂಬಂಧಿಸಿದ ರೂ.330.00 ಕೋಟಿಗಳ ಈ ವಿಶ್ವೇಶ್ವರಯ್ಯ ನಾಲಾ ಜಾಲದ ಅಭಿವೃದ್ಧಿ ಕಾಮಗಾರಿಯ ವಿಸ್ತೃತ ಯೋಜನಾ ವರದಿಗೆ ಸರ್ಕಾರದ ಆದೇಶ ಸಂಖ್ಯೆ ಜಸಂಇ 68 ಎಂಎಂಕೆ 2012, ಬೆಂಗಳೂರು ದಿನಾಂಕ 24.08.2012 ರಲ್ಲಿ ಆಡಳಿತಾತ್ಮಕ ಅನುಮೋದನೆ ದೊರೆತಿರುತ್ತದೆ.ಈ ಯೋಜನೆಯ 11 ಅಂದಾಜುಗಳನ್ನು 5 ಪ್ಯಾಕೇಜ್‌ಗಳ ಮುಖಾಂತರ ಕೈಗೊಳ್ಳಲು ಯೋಜಿಸಿದ್ದು, ಈ 5 ಪ್ಯಾಕೇಜ್‌ಗಳ ಕಾಮಗಾರಿಗಳು ಪ್ರಗತಿಯಲ್ಲಿದ್ದು, 475.52 ಕಿ.ಮೀ ಪೈಕಿ 470.92 ಕಿ.ಮೀ ಉದ್ದ ಲೈನಿಂಗ್ ಕಾಮಗಾರಿ ಪೂರ್ಣಗೊಂಡಿದ್ದು, 1682 ಸಿ.ಡಿ ಕಾಮಗಾರಿಗಳಲ್ಲಿ 1682 ಸಿ.ಡಿ ಕಾಮಗಾರಿಗಳು ಪೂರ್ಣಗೊಂಡಿರುತ್ತದೆ.

ಈ ಯೋಜನೆಗೆ 2018–19 ನೇ ಸಾಲಿಗೆ ರೂ. 2.00 ಕೋಟಿ ಅನುದಾನ ಒದಗಿಸಲಾಗಿದ್ದು, ಮಾರ್ಚ್–2019 ರ ಅಂತ್ಯದವರೆಗೆ ರೂ. 11.05 ಕೋಟಿ ವೆಚ್ಚ ಮಾಡಲಾಗಿದೆ. ಈ ಯೋಜನೆಯ ಪ್ರಾರಂಭದಿಂದ ಮಾರ್ಚ್–2019 ಅಂತ್ಯದವರೆಗೆ ಮಾಡಲಾದ ಕ್ರೋಢಿಕೃತ ವೆಚ್ಚ ರೂ. 331.24 ಕೋಟಿಗಳಾಗಿರುತ್ತದೆ.

15. ಕೆ.ಆರ್.ಎಸ್ ಯೋಜನೆ ಅಡಿಯ ವಿಶ್ವೇಶ್ವರಯ್ಯ ನಾಲಾ ಜಾಲದ (1270 ಕಿ.ಮೀ) 2ನೇ ಹಂತದ ಅಭಿವೃದ್ಧಿ:

ಸದರಿ ಕಾಮಗಾರಿಯ ಯೋಜನಾ ವರದಿ ತಯಾರಿಕೆಯನ್ನು ಒ/ ಖಖಛಿಟಿ ಹಾ. ಐಣಜ. ಇವರಿಗೆ ವಹಿಸಲಾಗಿದ್ದು. ಸರ್ವೆ ಕಾರ್ಯ ಪೂರ್ಣಗೊಂಡಿದ್ದು, ಯೋಜನಾ ವರದಿಯನ್ನು ತಯಾರಿಸಲಾಗಿರುತ್ತದೆ.

ವಿಶ್ವೇಶ್ವರಯ್ಯ ನಾಲಾ ಜಾಲದ 2 ನೇ ಹಂತದಲ್ಲಿ 14 ನಾಲ್ಕು ಪ್ಯಾಕೇಜ್‌ಗಳಿದ್ದು, ಈ ಪೈಕಿ 4 ಪ್ಯಾಕೇಜ್‌ಗಳಾದ (1) ವಿಶ್ವೇಶ್ವರಯ್ಯ ನಾಲಾ ಜಾಲದ ಮುಖ್ಯ ಕಾಲುವೆ ಮತ್ತು ಅದರ ವಿತರಣಾ ಕಾಲುವೆಗಳು, ಪಿಕಪ್ ನಾಲೆಗಳು ಹಾಗೂ ಎಲ್.ಬಿ.ಎಲ್,ಎಲ್ ವಿತರಣಾ ನಾಲೆಗಳ ಆಧುನೀಕರಣ ಕಾಮಗಾರಿ. (2) ವಿಶ್ವೇಶ್ವರಯ್ಯ ನಾಲಾ ಜಾಲದಡಿ ಆರ್.ಬಿ.ಎಲ್,ಎಲ್ ವಿತರಣಾ ನಾಲೆಗಳ ಆಧುನೀಕರಣ ಕಾಮಗಾರಿ. (3) ವಿಶ್ವೇಶ್ವರಯ್ಯ ನಾಲಾ ಜಾಲದಡಿ ಸಂಪರ್ಕ ನಾಲೆಯ ಮುಖ್ಯ ನಾಲೆ ಮತ್ತು ಅದರಡಿ ಬರುವ ವಿತರಣಾ ನಾಲೆಗಳ ಆಧುನೀಕರಣ ಕಾಮಗಾರಿ ಹಾಗೂ (4) ಹಳೆ ಮದ್ದೂರು ಶಾಖಾ ನಾಲೆಯ ವಿತರಣಾ ನಾಲೆಗಳ ಮತ್ತು ಪಿಕಪ್‌ಗಳ ಅಭಿವೃದ್ಧಿ ಕಾಮಗಾರಿ ಗಳ ರೂ, 522.37 ಕೋಟಿಗಳ ಮೊತ್ತದ ಡಿ.ಪಿ.ಆರ್ ಪ್ರಸ್ತಾವನೆಗಳಿಗೆ ಸರ್ಕಾರದ ಆದೇಶ ಪತ್ರ ಸಂ: ಜಸಂಇ 29 ಎಂಎಂಕೆ 2018, ಬೆಂಗಳೂರು, ದಿನಾಂಕ: 07.03.2019 ರಲ್ಲಿ ಎರಡು ಹಂತದಲ್ಲಿ ಕೈಗೊಳ್ಳಲು ತಾತ್ವಿಕ ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿದೆ. ಮೊದಲನೇ ಹಂತದ ಕಾಮಗಾರಿಗಳನ್ನು ರೂ, 300.00 ಕೋಟಿಗಳ ವೆಚ್ಚದಲ್ಲಿ ಟೆಂಡರ್ ಮುಖಾಂತರ ಕೈಗೊಳ್ಳಲು ಅನುಮೋದನೆ ನೀಡಲಾಗಿದೆ. ಸರ್ಕಾರಿ ಆದೇಶದನ್ವಯ ರೂ, 300.00 ಕೋಟಿಗಳ ವೆಚ್ಚದಲ್ಲಿ ವಿಶ್ವೇಶ್ವರಯ್ಯ ನಾಲಾ ಜಾಲದ ವಿ.ಸಿ ಮುಖ್ಯ ಕಾಲುವೆಯನ್ನು ಸರಪಳಿ 0.00 ಯಿಂದ 40.00 ಕಿ.ಮೀ ವರೆಗೆ ಗೆ ಮಾತ್ರ ಆಧುನೀಕರಣ ಕೈಗೊಳ್ಳಬಹುದಾಗಿದ್ದು, ಅದರಂತೆ ಕಾರ್ಯಕ್ರಮ ರೂಪಿಸಿ ತಾಂತ್ರಿಕ ಮಂಜೂರಾತಿ ನೀಡಲಾಗಿದ್ದು, ಟೆಂಡರ್ ಪ್ರಕ್ರಿಯೆಯು ಪ್ರಗತಿಯಲ್ಲಿರುತ್ತದೆ. ಉಳಿದ 11 ಪ್ಯಾಕೇಜ್‌ಗಳಿಗೆ ಆಡಳಿತಾತ್ಮಕ ಅನುಮೋದನೆ ಪಡೆಯಲು ಕ್ರಮ ವಹಿಸಲಾಗಿದೆ.

ಈ ಯೋಜನೆಗೆ 2018–19 ನೇ ಸಾಲಿಗೆ ರೂ. 174.20 ಕೋಟಿ ಅನುದಾನ ಒದಗಿಸಲಾಗಿದ್ದು, ಮಾರ್ಚ್–2019 ರ ಅಂತ್ಯದವರೆಗೆ ಯಾವುದೇ ವೆಚ್ಚ ಮಾಡಲಾಗಿರುವುದಿಲ್ಲ. ಈ ಯೋಜನೆಯ ಪ್ರಾರಂಭದಿಂದ ಮಾರ್ಚ್–2019 ಅಂತ್ಯದವರೆಗೆ ಮಾಡಲಾದ ಕ್ರೋಢಿಕೃತ ವೆಚ್ಚ ರೂ. 0.85 ಕೋಟಿಗಳಾಗಿರುತ್ತದೆ.

16. ಅರ್ಕಾವತಿ ನದಿ ಪಾತ್ರದ ಪುನಃಶ್ಚೇತನ

ಅರ್ಕಾವತಿ ನದಿಯು ಕಾವೇರಿ ನದಿಯ ಒಂದು ಉಪನದಿಯಾಗಿದ್ದು, ಇದು ನಂದಿಬೆಟ್ಟದಲ್ಲಿ ಉಗಮಗೊಂಡು ಸುಮಾರು 190 ಕಿ.ಮೀ ದೂರ ಕ್ರಮಿಸಿ ಕನಕಪುರ ತಾಲ್ಲೂಕಿನ ಸಂಗಮದಲ್ಲಿ ಕಾವೇರಿ ನದಿಯನ್ನು ಸೇರುತ್ತದೆ.ಬೆಂಗಳೂರು ನಗರಕ್ಕೆ ಕುಡಿಯುವ ನೀರಿನ ಸರಬರಾಜಿಗೆ ಈ ನದಿಗೆ ಹೆಸರುಘಟ್ಟ ಜಲಾಶಯ ಮತ್ತು ಕುಮುದ್ವತಿ ಉಪನದಿ ಸೇರಿದ ನಂತರ ತಿಪ್ಪಗೊಂಡನಹಳ್ಳಿ ಜಲಾಶಯಗಳನ್ನು

ನಿರ್ಮಿಸಲಾಗಿದೆ.ಈ ಜಲಾಶಯಗಳಿಗೆ ಒಳ ಹರಿವು ಕಡಿಮೆಯಾದ ಕಾರಣ ಕಾವೇರಿ ನದಿಯಿಂದ ನೀರೊದಗಿಸುವ ಯೋಜನೆಯನ್ನು ಕೈಗೆತ್ತಿಕೊಂಡು ಬೆಂಗಳೂರು ನಗರಕ್ಕೆ ನೀರು ಪೂರೈಸಲಾಗುತ್ತಿದೆ. ಆದರೆ, ಪೂರೈಕೆಯಲ್ಲಿ ಒತ್ತಡ ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಅರ್ಕಾವತಿ ನದಿಯ ಉಗಮ ಸ್ಥಾನದಿಂದ ತಿಪ್ಪಗೊಂಡನಹಳ್ಳಿ ಜಲಾಶಯದವರೆಗೆ ಹೆಸರಘಟ್ಟ ಜಲಾನಯನ ಪ್ರದೇಶ, ಕುಮುದ್ವತಿ ಜಲಾನಯನ ಪ್ರದೇಶ ಮತ್ತು ಅರ್ಕಾವತಿ ಜಲಾನಯನ ಪ್ರದೇಶದ ನದಿ ಪಾತ್ರಗಳನ್ನು ಪುನಃಶ್ಚೇತನಗೊಳಿಸಲು ಉದ್ದೇಶಿಸಿದ್ದು, ಈ ಹಿನ್ನೆಲೆಯಲ್ಲಿ ಅರ್ಕಾವತಿ ನದಿ ಪಾತ್ರದ ಪುನಃಶ್ಚೇತನ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ರೂ.22.43 ಕೋಟಿಗಳ ಅಂದಾಜಿಗೆ ಸರ್ಕಾರಿ ಆದೇಶ ಸಂಖ್ಯೆ: ಜಸಂಇ 23 ಎಂಎಂಕೆ 2009, ಬೆಂಗಳೂರು, ದಿನಾಂಕ: 19.10.2011 ರಲ್ಲಿ ಆಡಳಿತಾತ್ಮಕ ಅನುಮೋದನೆ ದೊರೆತಿರುತ್ತದೆ. ಈ ಯೋಜನೆಯ ಕಾಮಗಾರಿಗಳು ಪೂರ್ಣಗೊಂಡಿರುತ್ತದೆ.

ಈ ಯೋಜನೆಗೆ 2018–19 ನೇ ಸಾಲಿಗೆ ರೂ. 0.20 ಕೋಟಿ ಅನುದಾನ ಒದಗಿಸಲಾಗಿದ್ದು, ಮಾರ್ಚ್–2019 ರ ಅಂತ್ಯದವರೆಗೆ ವೆಚ್ಚ ಮಾಡಲಾಗಿರುವುದಿಲ್ಲ. ಈ ಯೋಜನೆಯ ಪ್ರಾರಂಭದಿಂದ ಮಾರ್ಚ್–2019 ಅಂತ್ಯದವರೆಗೆ ಮಾಡಲಾದ ಕ್ರೋಢಿಕೃತ ವೆಚ್ಚ ರೂ. 25.69 ಕೋಟಿಗಳಾಗಿರುತ್ತದೆ.

17. ಅರ್ಕಾವತಿ ನದಿಯ ಪುನಶ್ಚೇತನ ಕಾಮಗಾರಿ–ಎರಡನೇ ಹಂತ

ಅರ್ಕಾವತಿ ನದಿಯ ಪುನಶ್ಚೇತನ ಕಾಮಗಾರಿಯ ವಿಸ್ತೃತ ಯೋಜನಾ ವರದಿಯನ್ನು ತಯಾರಿಸಲು ಸಮಾಲೋಚಕರನ್ನು ನೇಮಕ ಮಾಡಲು ದಿನಾಂಕ 25.10.2014 ರಂದು global expression of interest ಅನ್ನು ರಾಷ್ಟ್ರ ಮಟ್ಟದ ಹಾಗೂ ಅಂತರರಾಷ್ಟ್ರ ಮಟ್ಟದ ವೃತ ಪತ್ರಿಕೆಗಳ ಮುಖಾಂತರ ಆಹ್ವಾನಿಸಲಾಗಿದೆ. ದಿನಾಂಕ 10.04.2015 ರಂದು ಎಲ್ಲಾ ಬಿಡ್ ಗಳನ್ನು ತಿರಸ್ಕರಿಸಲಾಗಿದೆ.ಮುಂದುವರೆದು, ಸಮಾಲೋಚಕರನ್ನು ನೇಮಿಸಲು ಕ್ರಮ ವಹಿಸಲಾಗಿದೆ.

18. ಚಿಕ್ಕದೇವರಾಯ ಸಾಗರ ಅಣೆಕಟ್ಟು ನಾಲೆಯ ಆಧುನೀಕರಣ ಕಾಮಗಾರಿ

ಚಿಕ್ಕದೇವರಾಯಸಾಗರ ಅಣೆಕಟ್ಟನ್ನು ಮಂಡ್ಯ ಜಿಲ್ಲೆಯ ಪಾಂಡವಪುರ ತಾಲ್ಲೂಕಿನಲ್ಲಿ ಕಾವೇರಿ ನದಿಗೆ ಅಡ್ಡಲಾಗಿ 17ನೇ ಶತಮಾನದಲ್ಲಿ ನಿರ್ಮಿಸಲಾಗಿದ್ದು, ಈ ಅಣೆಕಟ್ಟು ಕೆ.ಆರ್.ಎಸ್ ಅಣೆಕಟ್ಟಿನ ಕೆಳಭಾಗದಲ್ಲಿ ಸುಮಾರು 2 ಕಿ.ಮೀ ದೂರದಲ್ಲಿರುತ್ತದೆ. ಸಿ.ಡಿ.ಎಸ್ ಅಣೆಕಟ್ಟಿನ ಉದ್ದ 520 ಮೀ ಗಳಾಗಿದ್ದು ಇದರ ಮೇಲಿನ ಹರಿವಿನ ಸಾಮರ್ಥ್ಯ(Discharge Capacity) 4,955 ಕ್ಯೂಮೆಕ್ಸ್ (3.50 ಲಕ್ಷ ಕ್ಯುಸೆಕ್ಸ್) ಗಳಾಗಿರುತ್ತದೆ.

ಈ ಅಣೆಕಟ್ಟೆಗೆ ಎಡ ಭಾಗದಲ್ಲಿ ಕಾಲುವೆಯಿದ್ದು, ಈ ಎಡದಂಡೆ ಕಾಲುವೆಯ ಉದ್ದ 104.00 ಕಿಮೀ ಗಳಾಗಿರುತ್ತದೆ ಮತ್ತು ಈ ಕಾಲುವೆಯ ನೀರಿನ ಹರಿವಿನ ಸಾಮರ್ಥ್ಯ (Head Discharge)990 ಕ್ಯೂಸೆಕ್ಸ್ ಗಳಾಗಿರುತ್ತದೆ. ಈ ನಾಲೆಯಿಂದ 18,812 ಎಕರೆ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲು ಯೋಜಿಸಲಾಗಿದೆ. ಸದರಿ ನಾಲೆಯು ಬನ್ನೂರು ಕೆರೆಗೆ ಸೇರಿ ಕೊನೆಗೊಳ್ಳುತ್ತದೆ. ಬನ್ನೂರು ಕೆರೆಯಿಂದ

ಸಿ.ಡಿ.ಎಸ್. ವಿಸ್ತರಣಾ ಕಾಲುವೆ ಮತ್ತು ಬನ್ನೂರು ಕೆರೆ ಕಾಲುವೆ ಕಾಲುವೆಗಳು ಹೊರಡುತ್ತವೆ. ಬನ್ನೂರು ಕೆರೆ ಕಾಲುವೆಯ ಅಚ್ಚುಕಟ್ಟು ಪ್ರದೇಶ 2200 ಎಕರೆ ಗಳಾಗಿರುತ್ತದೆ ಮತ್ತು ಸಿ.ಡಿ.ಎಸ್. ವಿಸ್ತರಣಾ ಕಾಲುವೆಯು 26.00 ಕಿ.ಮೀಗಳಿದ್ದು ಇದರ ಅಚ್ಚುಕಟ್ಟು ಪ್ರದೇಶ 4,937 ಎಕರೆಗಳಾಗಿರುತ್ತದೆ. ಒಟ್ಟಾರೆಯಾಗಿ ಸಿ.ಡಿ.ಎಸ್ ಅಣೆಕಟ್ಟಿನ ನಾಲಾ ಜಾಲದ ಅಚ್ಚುಕಟ್ಟು ಪ್ರದೇಶ 25,949 ಎಕರೆಗಳಾಗಿರುತ್ತದೆ. ಈ ಸಿ.ಡಿ.ಎಸ್. ನಾಲಾ ಜಾಲದಲ್ಲಿ ಮಂಡ್ಯ ಜಿಲ್ಲೆಯ ಪಾಂಡವಪುರ ಮತ್ತು ಶ್ರೀರಂಗಪಟ್ಟಣ ತಾಲ್ಲೂಕು ಮೈಸೂರು ಜಿಲ್ಲೆಯ ಟಿ.ನರಸೀಪುರ ಮತ್ತು ಮೈಸೂರು ತಾಲ್ಲೂಕಿನ ಪ್ರದೇಶಗಳು ನೀರಾವರಿ ಸೌಲಭ್ಯ ಪಡೆಯುತ್ತವೆ.394.15 ಹೆಕ್ಟೇರ್ ರಷ್ಟು ಭಾದಿತ ಅಚ್ಚುಕಟ್ಟು ಇರುತ್ತದೆ.ಈ ಹಿನ್ನೆಲೆಯಲ್ಲಿ ಚಿಕ್ಕದೇವರಾಯ ಸಾಗರ ಅಣೆಕಟ್ಟು ನಾಲೆಯ ಆಧುನೀಕರಣ ಕಾಮಗಾರಿಯ ರೂ. 240.00 ಕೋಟಿಗಳ ಯೋಜನಾ ವರದಿಗೆ ಸರ್ಕಾರಿ ಆದೇಶ ಸಂ: ಜಸಂಇ 19 ಎಂಎಂಕೆ 2014, ದಿನಾಂಕ 31.03.2015 ರಲ್ಲಿ ಆಡಳಿತಾತ್ಮಕ ಅನುಮೋದನೆ ದೊರೆತಿರುತ್ತದೆ. ಈ ಕಾಮಗಾರಿಯನ್ನು 2 ಪ್ಯಾಕೇಜ್‌ಗಳ ಮುಖಾಂತರ ಕೈಗೊಳ್ಳಲು ಯೋಜಿಸಲಾಗಿದೆ. ಈ ಆಧುನೀಕರಣ ಕಾಮಗಾರಿಗಳು ಭೌತಿಕವಾಗಿ ಪೂರ್ಣಗೊಂಡಿದ್ದು, ಒಟ್ಟಾರೆ 104.00 ಕಿ.ಮೀ ಉದ್ದದ ಲೈನಿಂಗ್ ಕಾಮಗಾರಿ ಹಾಗೂ 1012 ಸಿ.ಡಿ ಕಾಮಗಾರಿಗಳು ಪೂರ್ಣಗೊಂಡಿರುತ್ತದೆ.

ಈ ಯೋಜನೆಗೆ 2018–19 ನೇ ಸಾಲಿಗೆ ರೂ. 3.00 ಕೋಟಿ ಅನುದಾನ ಒದಗಿಸಲಾಗಿದ್ದು, ಮಾರ್ಚ್–2019 ರ ಅಂತ್ಯದವರೆಗೆ ರೂ. 77.23 ಕೋಟಿ ವೆಚ್ಚ ಮಾಡಲಾಗಿದೆ. ಈ ಯೋಜನೆಯ ಪ್ರಾರಂಭದಿಂದ ಮಾರ್ಚ್–2019 ಅಂತ್ಯದವರೆಗೆ ಮಾಡಲಾದ ಕ್ರೋಢಿಕೃತ ವೆಚ್ಚ ರೂ. 350.65 ಕೋಟಿಗಳಾಗಿರುತ್ತದೆ.

19. ಶಿಂಷಾ ಅಣೆಕಟ್ಟೆಯ ಬಲದಂಡೆ ನಾಲೆಯ ಸರಪಳಿ 0.00 ರಿಂದ 20.246 ಕಿ.ಮೀ ಆಧುನೀಕರಣ:

ಶಿಂಷಾ ನದಿಗೆ ಅಡ್ಡಲಾಗಿ 1892ರಲ್ಲಿ ತಗ್ಗಹಳ್ಳಿ ಅಣೆಕಟ್ಟನ್ನು ನಿರ್ಮಿಸಲಾಗಿದ್ದು, ಇದರಡಿಯಲ್ಲಿ ಶಿಂಷಾ ಎಡದಂಡೆ ಮತ್ತು ಶಿಂಷಾ ಬಲದಂಡೆ ಎಂಬ ಎರಡು ನಾಲೆಗಳು ಇರುತ್ತವೆ. ಶಿಂಷಾ ಬಲದಂಡೆ ನಾಲೆಯು (ಖಖಃಅ) ಒಟ್ಟು 20.246 ಕಿ.ಮೀ. ಉದ್ದವಿದ್ದು, ಪ್ರಾರಂಭಿಕ ರೀಚ್‌ನಲ್ಲಿ 100 ಕ್ಯುಸೆಕ್ಸ್ ನೀರು ಹರಿಯುವಿಕೆ ಇದ್ದು, ಈ ನಾಲೆಯಿಂದ ಮಾರಸಿಂಗನಹಳ್ಳಿ ಕೆರೆ, ಹೊಸಕೆರೆ ಕೆರೆ, ಕೊತ್ತನಹಳ್ಳಿ ಕೆರೆ ಮತ್ತು ಚಾಮನಹಳ್ಳಿ ಚಿಕ್ಕಕೆರೆಗಳಿಗೆ ನೀರು ಹರಿಸಲಾಗುತ್ತಿದೆ. ಈ ನಾಲೆ ಅಡಿಯಲ್ಲಿ 3250 ಎಕರೆ ಅಚ್ಚುಕಟ್ಟು ಪ್ರದೇಶವಿದ್ದು, ಪ್ರಸ್ತುತ 800 ಎಕರೆಯಷ್ಟು ಅಚ್ಚುಕಟ್ಟು ಭಾದಿತವಾಗಿರುತ್ತದೆ. ಶಿಂಷಾ ಅಣೆಕಟ್ಟೆಯ ಬಲದಂಡೆ ನಾಲೆಯ ಕಿ.ಮೀ 0.00 ರಿಂದ 20.246 ಕಿ.ಮೀ ವರೆಗೆ ಆಧುನೀಕರಣ ಮಾಡುವ ಕಾಮಗಾರಿಗೆ ರೂ. 28.00 ಕೋಟಿಗಳ ಯೋಜನಾ ವರದಿಗೆ ಸರ್ಕಾರಿ ಆದೇಶ ಸಂ: ಜಸಂಇ 91 ಎಂಎಂಕೆ 2015, ದಿನಾಂಕ 06.01.2016 ರಲ್ಲಿ ಆಡಳಿತಾತ್ಮಕ ಅನುಮೋದನೆ ದೊರೆತಿರುತ್ತದೆ. ಸದರಿ ಕಾಮಗಾರಿಯು ಭೌತಿಕವಾಗಿ ಪೂರ್ಣಗೊಂಡಿದ್ದು, ಒಟ್ಟಾರೆ 20.246 ಕಿ.ಮೀ ಉದ್ದದ ಲೈನಿಂಗ್ ಕಾಮಗಾರಿ ಹಾಗೂ 166 ಸಿ.ಡಿ ಕಾಮಗಾರಿಗಳು ಪೂರ್ಣಗೊಂಡಿರುತ್ತದೆ.

ಈ ಯೋಜನೆಗೆ 2018–19 ನೇ ಸಾಲಿಗೆ ರೂ. 1.00 ಕೋಟಿ ಅನುದಾನ ಒದಗಿಸಲಾಗಿದ್ದು, ಮಾರ್ಚ್–2019 ರ ಅಂತ್ಯದವರೆಗೆ ರೂ. 0.069 ಕೋಟಿ ವೆಚ್ಚ ಮಾಡಲಾಗಿದೆ. ಈ ಯೋಜನೆಯ ಪ್ರಾರಂಭದಿಂದ ಮಾರ್ಚ್–2019 ಅಂತ್ಯದವರೆಗೆ ಮಾಡಲಾದ ಕ್ರೋಢಿಕೃತ ವೆಚ್ಚ ರೂ. 26.07 ಕೋಟಿಗಳಾಗಿರುತ್ತದೆ.

20. ಹೆಬ್ಬಳ್ಳ ಚೆನ್ನಯ್ಯ ಮುಖ್ಯ ಕಾಲುವೆಯ ಸರಪಳಿ 0 ಯಿಂದ 40.00 ಕಿ.ಮೀ. ವರೆಗಿನ ಆಧುನೀಕರಣ ಕಾಮಗಾರಿ

ಮಂಡ್ಯ ಜಿಲ್ಲೆ, ಮಂಡ್ಯ ತಾಲ್ಲೂಕು ಭೂತನ ಹೊಸೂರು ಗ್ರಾಮದ ಬಳಿ ಹರಿಯುವ ಹೆಬ್ಬಳ್ಳಕ್ಕೆ ಅಡ್ಡಲಾಗಿ ಅಣೆಯನ್ನು ನಿರ್ಮಿಸಿದ್ದು, ಈ ಅಣೆಯ ಬಲ ಭಾಗದಲ್ಲಿಹೆಬ್ಬಳ್ಳ ಚೆನ್ನಯ್ಯ ನಾಲೆಯನ್ನು ನಿರ್ಮಿಸಲಾಗಿರುತ್ತದೆ.ಈ ನಾಲೆಯು ಮುಖ್ಯವಾಗಿ ವಿಶ್ವೇಶ್ವರಯ್ಯ ನಾಲೆಯಿಂದ ಬರುವ ಸೋರುವಿಕೆ ನೀರನ್ನು ಒಯ್ಯುತ್ತಿದ್ದು, ಒಟ್ಟಾರೆ 19500 ಎಕರೆ ಅಚ್ಚುಕಟ್ಟು ಪ್ರದೇಶಕ್ಕೆ ನೀರೊದಗಿಸುವ ಈ ನಾಲೆಯನ್ನು ಕ್ರಿ.ಶ.1950 ರಲ್ಲಿ ನಿರ್ಮಿಸಲಾಗಿರುತ್ತದೆ. ಸದರಿ ನಾಲೆಯ ಉದ್ದ 40.00 ಕಿ.ಮೀ ಆಗಿರುತ್ತದೆ.

ಸದರಿ ನಾಲೆಯು ತುಂಬಾ ಹಳೆಯದಾಗಿದ್ದು, ನಿರ್ಮಾಣ ಅವಧಿಯಿಂದಲೂ ಇಲ್ಲಿಯವರೆಗೆ ಲೈನಿಂಗ್ ಕೈಗೊಂಡಿರುವುದಿಲ್ಲ.ನಾಲೆಯನ್ನು ಆಧುನೀಕರಣಗೊಳಿಸುವುದರಿಂದ 12,331.00ಎಕರೆ ಭಾದಿತ ಅಚ್ಚುಕಟ್ಟು ಪ್ರದೇಶಕ್ಕೆ ನೀರನ್ನು ಹರಿಸಿ, ನೀರಿನ ಹರಿವನ್ನು ಉತ್ತಮಗೊಳಿಸಿ ಹೆಚ್ಚುವರಿ ನೀರಿನ ಬಳಕೆಯನ್ನು ನಿಯಂತ್ರಿಸುವುದು, ನೀರು ನಿರ್ವಹಣೆಯ ದಕ್ಷತೆಯನ್ನು ಉತ್ತಮಗೊಳಿಸುವುದು ಈ ಆಧುನೀಕರಣದ ಉದ್ದೇಶಿಸಲಾಗಿದೆ.

ಈ ಯೋಜನೆಯ ರೂ 68.00 ಕೋಟಿ ಮೊತ್ತದ ಅಂದಾಜಿಗೆ, ಸರ್ಕಾರಿ ಆದೇಶ ಸಂ:ಜಸಂಇ 174 ಎಂಎಂಕೆ 2015, ಬೆಂಗಳೂರು, ದಿನಾಂಕ: 04.03.2016 ರಲ್ಲಿ ಆಡಳಿತಾತ್ಮಕ ಅನುಮೋದನೆ ದೊರೆತಿರುತ್ತದೆ. ಪ್ರಸ್ತುತ ಸದರಿ ಕಾಮಗಾರಿ ಪ್ರಗತಿಯಲ್ಲಿದ್ದು, 40.00 ಕಿ.ಮೀ ಪೈಕಿ 39.80 ಕಿ.ಮೀ ಉದ್ದ ಲೈನಿಂಗ್ ಕಾಮಗಾರಿ ಪೂರ್ಣಗೊಂಡಿದ್ದು, 261 ಸಿ.ಡಿ ಕಾಮಗಾರಿಗಳಲ್ಲಿ 172 ಸಿ.ಡಿ ಕಾಮಗಾರಿಗಳು ಪೂರ್ಣಗೊಂಡಿರುತ್ತದೆ.

ಈ ಯೋಜನೆಗೆ 2018–19 ನೇ ಸಾಲಿಗೆ ರೂ. 3.00 ಕೋಟಿ ಅನುದಾನ ಒದಗಿಸಲಾಗಿದ್ದು, ಮಾರ್ಚ್–2019 ರ ಅಂತ್ಯದವರೆಗೆ ರೂ. 55.67 ಕೋಟಿ ವೆಚ್ಚ ಮಾಡಲಾಗಿದೆ. ಈ ಯೋಜನೆಯ ಪ್ರಾರಂಭದಿಂದ ಮಾರ್ಚ್–2019 ಅಂತ್ಯದವರೆಗೆ ಮಾಡಲಾದ ಕ್ರೋಢಿಕೃತ ವೆಚ್ಚ ರೂ. 58.92 ಕೋಟಿಗಳಾಗಿರುತ್ತದೆ.

21. ಹಾರಂಗಿ ಬಲದಂಡೆ ನಾಲೆಯ ಸರಪಳಿ 25 .00 ಕಿಮೀ ನಿಂದ 138.79 ಕಿಮೀ ವರೆಗೆ ಸಿ.ಡಿ ಕೆಲಸಗಳ ಅಭಿವೃದ್ಧಿ ಹಾಗೂ ಮೆಕಾನಿಕಲ್ ಪೇವರ್ ಬಳಸಿ ಸಿಸಿ ಲೈನಿಂಗ್ ಅಳವಡಿಸುವ ಕಾಮಗಾರಿ.

ಹಾರಂಗಿ ಜಲಾಶಯವನ್ನು ಹಾರಂಗಿ ನದಿಗೆ ಅಡ್ಡಲಾಗಿ ನಿರ್ಮಿಸಲಾಗಿರುತ್ತದೆ. ಈ ಜಲಾಶಯಕ್ಕೆ ಎರಡು ನಾಲೆಗಳಿದ್ದು, ಹಾರಂಗಿ ಬಲ ದಂಡೆ ನಾಲೆ ಉದ್ದ 138 ಕಿಮೀ ಮತ್ತು ಸಾಮರ್ಥ್ಯ 1500 ಕ್ಯೂಸೆಕ್ಸ್ ಹಾಗೂ ಹಾರಂಗಿ ಎಡ ದಂಡೆ ನಾಲೆ ಉದ್ದ 153 ಕಿಮೀ ಮತ್ತು ಸಾಮರ್ಥ್ಯ 400 ಕ್ಯೂಸೆಕ್ಸ್ ಇರುತ್ತವೆ. ಹಾರಂಗಿ ಎಡ ದಂಡೆ ಕಾಲುವೆ ಅಡಿಯಲ್ಲಿ ಹರಿ ನೀರಾವರಿಯಲ್ಲಿ 29,472 ಎಕರೆ ಅಚ್ಚುಕಟ್ಟು ಪ್ರದೇಶವಿರುತ್ತದೆ. ಏತ ಯೋಜನೆಯಡಿಯಲ್ಲಿ 1,500 ಎಕರೆ ಅಚ್ಚುಕಟ್ಟು ಪ್ರದೇಶವಿರುತ್ತದೆ. ಹಾರಂಗಿ ಬಲ ದಂಡೆ ಕಾಲುವೆ ಅಡಿಯಲ್ಲಿ ಹರಿ ನೀರಾವರಿಯಲ್ಲಿ 71,539 ಎಕರೆ ಅಚ್ಚುಕಟ್ಟು ಪ್ರದೇಶವಿರುತ್ತದೆ. ಏತ ಯೋಜನೆಯಡಿಯಲ್ಲಿ 30,000 ಎಕರೆ ಅಚ್ಚುಕಟ್ಟು ಪ್ರದೇಶವಿರುತ್ತದೆ.

ಹಾರಂಗಿ ಬಲದಂಡೆ ನಾಲೆಯ ಸರಪಳಿ 25.00 ಕಿಮೀ ನಿಂದ 60.00 ಕಿಮೀ ವರೆಗೆ ನಾಲೆಯನ್ನು ಆಧುನೀಕರಣಗೊಳಿಸುವ ಕಾಮಗಾರಿಯ ರೂ.73.34 ಕೋಟಿಗಳ ಯೋಜನಾ ವರದಿಗೆ ಸರ್ಕಾರಿ ಆದೇಶ ಸಂಖ್ಯೆ ಜಸಂಇ 82 ಎಂಎಂಕೆ 2015, ಬೆಂಗಳೂರು ದಿನಾಂಕ 04.03.2016 ರಲ್ಲಿ ಆಡಳಿತಾತ್ಮಕ ಅನುಮೋದನೆ ದೊರೆತಿರುತ್ತದೆ.ಪ್ರಸ್ತುತ ಕಾಮಗಾರಿಯು ಪ್ರಗತಿಯಲ್ಲಿದ್ದು, 35.00 ಕಿ.ಮೀ ಪೈಕಿ 34.00 ಕಿ.ಮೀ ಉದ್ದ ಲೈನಿಂಗ್ ಕಾಮಗಾರಿ ಪೂರ್ಣಗೊಂಡಿದ್ದು, ಸಿ.ಡಿ ಕಾಮಗಾರಿಗಳು ಪ್ರಗತಿಯಲ್ಲಿರುತ್ತದೆ.

ಹಾರಂಗಿ ಬಲದಂಡೆ ನಾಲೆಯ ಸರಪಳಿ 60.00 ಕಿಮೀ ನಿಂದ 138.79 ಕಿಮೀ ಅಡಿಯಲ್ಲಿ 9418 ಎಕರೆ ಬಾಧಿತ ಅಚ್ಚುಕಟ್ಟು ಇರುತ್ತದೆ. ಈ ಹಿನ್ನೆಲೆಯಲ್ಲಿ ಸರಪಳಿ: 60.00 ಕಿಮೀ ನಿಂದ 138.79 ಕಿಮೀ ವರೆಗೆ ನಾಲೆಯನ್ನು ಆಧುನೀಕರಣಗೊಳಿಸುವ ಕಾಮಗಾರಿಯ ರೂ.99.12 ಕೋಟಿಗಳ ಯೋಜನಾ ವರದಿಗೆ ಸರ್ಕಾರಿ ಆದೇಶ ಸಂಖ್ಯೆ ಜಸಂಇ 83 ಎಂಎಂಕೆ 2015, ಬೆಂಗಳೂರು ದಿನಾಂಕ 31.03.2016 ರಲ್ಲಿ ಆಡಳಿತಾತ್ಮಕ ಅನುಮೋದನೆ ದೊರೆತಿರುತ್ತದೆ.ಸದರಿ ಕಾಮಗಾರಿಯು ಪ್ರಗತಿಯಲ್ಲಿದ್ದು, 78.79 ಕಿ.ಮೀ ಪೈಕಿ 75.50 ಕಿ.ಮೀ ಉದ್ದ ಲೈನಿಂಗ್ ಕಾಮಗಾರಿ ಪೂರ್ಣಗೊಂಡಿದ್ದು, 269 ಸಿ.ಡಿ ಕಾಮಗಾರಿಗಳು ಪ್ರಗತಿಯಲ್ಲಿರುತ್ತದೆ.

ಈ ಯೋಜನೆಗೆ 2018–19 ನೇ ಸಾಲಿಗೆ ರೂ. 5.00 ಕೋಟಿ ಅನುದಾನ ಒದಗಿಸಲಾಗಿದ್ದು, ಮಾರ್ಚ್–2019 ರ ಅಂತ್ಯದವರೆಗೆ ರೂ. 91.18 ಕೋಟಿ ವೆಚ್ಚ ಮಾಡಲಾಗಿದೆ. ಈ ಯೋಜನೆಯ ಪ್ರಾರಂಭದಿಂದ ಮಾರ್ಚ್–2019 ಅಂತ್ಯದವರೆಗೆ ಮಾಡಲಾದ ಕ್ರೋಢಿಕೃತ ವೆಚ್ಚ ರೂ. 214.76 ಕೋಟಿಗಳಾಗಿರುತ್ತದೆ.

22. ಹೊಳೆನರಸೀಪುರ ತಾಲ್ಲೂಕು, ಕಟ್ಟೆಬೆಳಗುಲಿ ಸಮೀಪ ಹೇಮಾವತಿ ನದಿಗೆ ನಿರ್ಮಿಸಲಾಗಿರುವ ಶ್ರೀರಾಮದೇವರ ಅಣೆಕಟ್ಟು ಆಧುನೀಕರಣ ಕಾಮಗಾರಿ

ಹೊಳೆನರಸೀಪುರ ತಾಲ್ಲೂಕು ಕಟ್ಟೆಬೆಳಗುಳಿ ಹತ್ತಿರ ಹೇಮಾವತಿ ನದಿಗೆ ಅಡ್ಡಲಾಗಿ 1870 ರಲ್ಲಿ ಶ್ರೀರಾಮದೇವರ ಅಣೆಕಟ್ಟಯನ್ನು ನಿರ್ಮಿಸಲಾಗಿದೆ.ಶ್ರೀರಾಮದೇವರ ನಾಲೆ ಅಣೆಕಟ್ಟಯು ಶಿಥಿಲಾವಸ್ಥೆಯಲ್ಲಿದ್ದುದರಿಂದ ಸದರಿ ಅಣೆಕಟ್ಟೆಯ ಮರು ನಿರ್ಮಾಣ ಮಾಡಲು ಯೋಜಿಸಲಾಗಿದೆ.ಶ್ರೀರಾಮದೇವರ ಅಣೆಕಟ್ಟಿನ ಪುನರ್ ನಿರ್ಮಾಣ ಕಾಮಗಾರಿ ರೂ.122.00 ಕೋಟಿ ಮೊತ್ತದ ವಿಸ್ತೃತ ಯೋಜನಾ ವರದಿಗೆ ಸರ್ಕಾರದ ಆದೇಶ ಸಂಖ್ಯೆ:ಜಸಂಇ 55/ಎನ್‌ಹೆಚ್‌ಪಿ 2018, ಬೆಂಗಳೂರು ದಿ:06.08.2018 ರಲ್ಲಿ ಆಡಳಿತಾತ್ಮಕ ಅನುಮೋದನೆ ದೊರೆತಿರುತ್ತದೆ. ಸದರಿ ಕಾಮಗಾರಿಯು ಪ್ರಗತಿಯಲ್ಲಿದೆ.

ಉತ್ತರ ನಾಲೆ ಮತ್ತು ದಕ್ಷಿಣ ನಾಲೆಯ ಕಟ್ ಅಂಡ್ ಕವರ್ ಹಾಗೂ ಅಣೆಕಟ್ಟೆಯ ಅಡಿಯಪಾಯ ಮತ್ತು ತಡೆಗೋಡೆಗಳ ಮಣ್ಣಿನ ಅಗೆತದ ಕೆಲಸವು ಪ್ರಗತಿಯಲ್ಲಿರುತ್ತದೆ.

ಈ ಯೋಜನೆಗೆ 2018–19 ನೇ ಸಾಲಿಗೆ ರೂ. 1.00 ಕೋಟಿ ಅನುದಾನ ಒದಗಿಸಲಾಗಿದ್ದು, ಮಾರ್ಚ್–2019 ರ ಅಂತ್ಯದವರೆಗೆ ರೂ. 1.56 ಕೋಟಿ ವೆಚ್ಚ ಮಾಡಲಾಗಿದೆ. ಈ ಯೋಜನೆಯ ಪ್ರಾರಂಭದಿಂದ ಮಾರ್ಚ್–2019 ಅಂತ್ಯದವರೆಗೆ ಮಾಡಲಾದ ಕ್ರೋಢಿಕೃತ ವೆಚ್ಚ ರೂ. 2.80 ಕೋಟಿಗಳಾಗಿರುತ್ತದೆ.

23. ಹಲಸೂರು ಅಣೆಕಟ್ಟೆಯ ನುಗು ಬಲದಂಡೆ ಮತ್ತು ಎಡದಂಡೆ ನಾಲೆಗಳ ಆಧುನೀಕರಣ ಹಾಗೂ ನುಗು ಮೇಲ್ದಂಡೆ ನಾಲೆಯ ಆಧುನೀಕರಣ:

ಹಲಸೂರು ಅಣೆಕಟ್ಟೆಯನ್ನು ನುಗು ನದಿಗೆ ಅಡ್ಡಲಾಗಿ ಮೈಸೂರು ಜಿಲ್ಲೆಯ ಹೆಚ್.ಡಿ ಕೋಟೆ ತಾಲ್ಲೂಕಿನ ಬೀರವಾಲ್ ಗ್ರಾಮದ ಬಳಿ 1889 ರಲ್ಲಿ ನಿರ್ಮಿಸಲಾಗಿದ್ದು, ಈ ಅಣೆಕಟ್ಟೆ ಅಡಿಯಲ್ಲಿ ಇರುವ 33.50 ಕಿ.ಮೀ. ಉದ್ದ ಹಾಗೂ 70 ಕ್ಯೂಸೆಕ್ಸ್ ಹರಿವಿನ ಸಾಮರ್ಥ್ಯ ಇರುವ ಎಡದಂಡೆ ನಾಲೆಯಿಂದ 1958 ಎಕರೆ ಮತ್ತು 38.43 ಕಿ.ಮೀ. ಉದ್ದ ಹಾಗೂ 124 ಕ್ಯೂಸೆಕ್ಸ್ ಹರಿವಿನ ಸಾಮರ್ಥ್ಯ ಇರುವ ಬಲದಂಡೆ ನಾಲೆಯಿಂದ 3153 ಎಕರೆ ಅಚ್ಚುಕಟ್ಟು ಪ್ರದೇಶಕ್ಕೆ ನೀರಾವರಿ ಸೌಲಭ್ಯ ಒದಗಿಸಲಾಗುತ್ತಿದೆ.

ತದನಂತರ, ಹಲಸೂರು ಅಣೆಕಟ್ಟೆಯ ಮೇಲ್ಭಾಗದಲ್ಲಿ 2.50 ಕಿ.ಮೀ. ದೂರದಲ್ಲಿ 5.54 ಟಿ.ಎಂ.ಸಿ. ಸಾಮರ್ಥ್ಯದ ನುಗು ಜಲಾಶಯ ಯೋಜನೆಯನ್ನು ಕೈಗೊಂಡು 1959 ರಲ್ಲಿ ಪೂರ್ಣಗೊಳಿಸಲಾಗಿದೆ. ಈ ಜಲಾಶಯಕ್ಕೆ ನುಗು ಮೇಲ್ದಂಡೆನಾಲೆಯಿದ್ದು,ಸದರಿ ನಾಲೆಯು 666 ಕ್ಯೂಸೆಕ್ಸ್ ಸಾಮರ್ಥ್ಯ ಹೊಂದಿದ್ದು 87 ಕಿ.ಮೀ ಉದ್ದವಿದ್ದು, ಈ ಕಾಲುವೆಯಿಂದ 13000 ಎಕರೆ ಅಚ್ಚುಕಟ್ಟು ಪ್ರದೇಶಕ್ಕೆ ನೀರಾವರಿ ಸೌಲಭ್ಯ ಒದಗಿಸಲಾಗುತ್ತಿದೆ.

ನುಗು ಜಲಾಶಯದ ನಿರ್ಮಾಣದ ನಂತರ ಹಲಸೂರು ಅಣೆಕಟ್ಟೆ ಎಡದಂಡೆ ನಾಲೆಯನ್ನು ನುಗು ಎಡದಂಡೆ ನಾಲೆಯೆಂದು ಹಾಗೂ ಹಲಸೂರು ಅಣೆಕಟ್ಟೆಯ ಬಲದಂಡೆ ನಾಲೆಯನ್ನು ನುಗು ಬಲದಂಡೆ ನಾಲೆಯೆಂದು ಕರೆಯಲಾಗುತ್ತಿದೆ.

ಹಲಸೂರು ಅಣೆಕಟ್ಟೆಯ ನಾಲೆಗಳಾದ ನುಗು ಎಡದಂಡೆ ಹಾಗೂ ನುಗು ಬಲದಂಡೆ ನಾಲೆಗಳು ಬಹುತೇಕ ಮೆದು ಮಣ್ಣಿನಲ್ಲಿ ಹಾದುಹೋಗುತ್ತಿದ್ದು, ಸತತ ನೀರಿನ ಹರಿವಿನಿಂದಾಗಿ ನಾಲೆಗಳ ಪಾರ್ಶ್ವಗಳಲ್ಲಿ ನೀರಿನ ಕೊರೆತ ಉಂಟಾಗಿ ನಾಲೆಗಳು ನಿಗದಿತ ವಿನ್ಯಾಸವನ್ನು ಹೊಂದಿರದೆ ಸ್ವರೂಪವನ್ನು ಕಳೆದುಕೊಂಡಿದ್ದು, ನೀರಿನ ಹರಿಯುವಿಕೆಯಲ್ಲಿ ವ್ಯತ್ಯಯವಾಗಿ ನಾಲೆಯ ಕೊನೆಯ ಭಾಗದವರೆಗೆ ಸಮರ್ಪಕ ನೀರಿನ ಹರಿಯುವಿಕೆಗೆ ತೊಂದರೆಯಾಗಿರುತ್ತದೆ. ಈ ಹಿನ್ನೆಲೆಯಲ್ಲಿ, ನುಗು ಬಲದಂಡೆ ಮತ್ತು ಎಡದಂಡೆ ನಾಲೆಗಳಿಗೆ ಮೆಕ್ಯಾನಿಕಲ್ ಪೇವರ್ ಬಳಸಿ ಸಿ.ಸಿ. ಲೈನಿಂಗ್ ಮತ್ತು ಮ್ಯಾನ್ಯುಯಲ್ ಸಿ.ಸಿ. ಲೈನಿಂಗ್ ಒದಗಿಸುವ ಹಾಗೂ ಕೆಲವು ಸಿ.ಡಿ ಕಾಮಗಾರಿಗಳ ಅಭಿವೃದ್ಧಿ/ಪುನರ್ ನಿರ್ಮಾಣ ಮಾಡುವ ಕಾಮಗಾರಿಯ ರೂ.35.00 ಕೋಟಿಗಳ ಅಂದಾಜಿಗೆ ಸರ್ಕಾರದ ಆದೇಶ ಸಂಖ್ಯೆ. ಜಸಂಇ 172 ಎಂಎಂಕೆ 2013, ಬೆಂಗಳೂರು ದಿ: 19.02.2014 ರಲ್ಲಿ ಆಡಳಿತಾತ್ಮಕ ಅನುಮೋದನೆ ದೊರೆತಿರುತ್ತದೆ. ಈ ಆಧುನೀಕರಣ ಕಾಮಗಾರಿಯು ಭೌತಿಕವಾಗಿ ಪೂರ್ಣಗೊಂಡಿರುತ್ತದೆ.

ಈ ಯೋಜನೆಗೆ 2018–19 ನೇ ಸಾಲಿಗೆ ರೂ. 0.38 ಕೋಟಿ ಅನುದಾನ ಒದಗಿಸಲಾಗಿದ್ದು, ಮಾರ್ಚ್–2019 ರ ಅಂತ್ಯದವರೆಗೆ ರೂ. 6.83 ಕೋಟಿ ವೆಚ್ಚ ಮಾಡಲಾಗಿದೆ. ಈ ಯೋಜನೆಯ ಪ್ರಾರಂಭದಿಂದ ಮಾರ್ಚ್–2019 ಅಂತ್ಯದವರೆಗೆ ಮಾಡಲಾದ ಕ್ರೋಢಿಕೃತ ವೆಚ್ಚ ರೂ. 41.65 ಕೋಟಿಗಳಾಗಿರುತ್ತದೆ.

ಮುಂದುವರೆದು, ನುಗು ಮೇಲ್ದಂಡೆ ನಾಲೆಯ ಸರಪಳಿ 0.00 ರಿಂದ 87.51 ಕಿ.ಮೀ ವರೆಗಿನ ನಾಲೆಯನ್ನು ಆಧುನೀಕರಣಗೊಳಿಸುವ ಕಾಮಗಾರಿಯ ರೂ.113.000 ಕೋಟಿಗಳ ಯೋಜನಾ ವರದಿಗೆ ಸರ್ಕಾರಿ ಆದೇಶ ಸಂಖ್ಯೆ ಜಸಂಇ 89 ಎಂಎಂಕೆ 2015, ಬೆಂಗಳೂರು ದಿ: 06.10.2015 ರಲ್ಲಿ ಆಡಳಿತಾತ್ಮಕ ಅನುಮೋದನೆ ದೊರೆತಿರುತ್ತದೆ. ಈ ಆಧುನೀಕರಣ ಕಾಮಗಾರಿಯ 86.50 ಕಿ.ಮೀ ಉದ್ದಕ್ಕೆ ಲೈನಿಂಗ್ ಹಾಗೂ 331 ಸಂಖ್ಯೆ ಅಡ್ಡಮೋರಿ ಕಾಮಗಾರಿಗಳು ಪೂರ್ಣಗೊಂಡಿದ್ದು, ಪ್ರಸ್ತುತ ಕಾಮಗಾರಿ ಭೌತಿಕವಾಗಿ ಪೂರ್ಣಗೊಂಡಿರುತ್ತದೆ.

ಈ ಯೋಜನೆಗೆ 2018–19 ನೇ ಸಾಲಿಗೆ ರೂ. 1.00 ಕೋಟಿ ಅನುದಾನ ಒದಗಿಸಲಾಗಿದ್ದು, ಮಾರ್ಚ್–2019 ರ ಅಂತ್ಯದವರೆಗೆ ರೂ. 8.57 ಕೋಟಿ ವೆಚ್ಚ ಮಾಡಲಾಗಿದೆ. ಈ ಯೋಜನೆಯ ಪ್ರಾರಂಭದಿಂದ ಮಾರ್ಚ್–2019 ಅಂತ್ಯದವರೆಗೆ ಮಾಡಲಾದ ಕ್ರೋಢಿಕೃತ ವೆಚ್ಚ ರೂ. 117.68 ಕೋಟಿಗಳಾಗಿರುತ್ತದೆ.

24. ಚಿಕ್ಕಹೊಳೆ ಜಲಾಶಯದ ಎಡದಂಡೆ ಹಾಗೂ ಬಂಡಿಗೆರೆ ನಾಲೆಗಳ ಅಭಿವೃದ್ಧಿ:

ಚಿಕ್ಕಹೊಳೆ ಜಲಾಶಯವನ್ನು ಚಾಮರಾಜನಗರ ತಾಲ್ಲೂಕಿನ ಅಟ್ಟಿಗುಳಿಪುರ ಗ್ರಾಮದ ಹತ್ತಿರ ಸುವರ್ಣಾವತಿ ನದಿಯ ಉಪ ನದಿಯಾದ ಚಿಕ್ಕಹೊಳೆ ನದಿಗೆ ಅಡ್ಡಲಾಗಿ ನಿರ್ಮಿಸಲಾಗಿರುತ್ತದೆ. ಈ ಜಲಾಶಯದ ನೀರಿನ ಸಂಗ್ರಹಣಾ ಸಾಮರ್ಥ್ಯವು 0.376 ಖಿಒಅ ಇದ್ದು, ಸುಮಾರು 1650 ಊಚಿ (4076 ಚಿಛಿಡಿಛ) ಅಚ್ಚಕಟ್ಟು ಪ್ರದೇಶದಲ್ಲಿ ಭತ್ತ ಹಾಗೂ ಅರೆ ನೀರಾವರಿ ಬೆಳೆಗಳಿಗೆ ನೀರು ಒದಗಿಸಲಾಗುತ್ತಿರುತ್ತದೆ.

ಚಿಕ್ಕಹೊಳೆ ಎಡದಂಡೆ ನಾಲೆಯು 18.00ಕಿ.ಮೀ ಉದ್ದವಿದ್ದು, ಈ ಪೈಕಿ ಸುಸ್ಥಿಯಲ್ಲಿರದ 1.055ಕಿ.ಮೀ ಉದ್ದಕ್ಕೆ ಸಿ.ಸಿ.ಲೈನಿಂಗ್ ಅನ್ನು ಹಾಲಿ ಇರುವ ನಾಲೆಯ ಸೆಕ್ಷನ್‌ಗೆ ತಕ್ಕಂತೆ ನಿರ್ವಹಿಸುವ ಹಾಗೂ ಬಲದಂಡೆಯಲ್ಲಿರುವ ಬಂಡಿಗೆರೆ ನಾಲೆಯು 12.00 ಕಿ.ಮೀ ಉದ್ದವಿದ್ದು, ಈ ಪೈಕಿ ಸುಸ್ಥಿಯಲ್ಲಿರದ 1.10 ಕಿ.ಮೀ ನಲ್ಲಿ ವಿವಿಧ ಸರಪಳಿಗಳಲ್ಲಿ ರಿವೆಟ್‌ಮೆಂಟ್ ಸೈಡ್ ಲೈನಿಂಗ್ ಅನ್ನು ಹಾಲಿ ಇರುವ ನಾಲೆಯ

ಸೆಕ್ಷನ್‌ಗೆ ತಕ್ಕಂತೆ ಮಾಡುವುದು ಹಾಗೂ ಸದರಿ ನಾಲೆಯ 9.10 ಕಿ.ಮೀ ಉದ್ದಕ್ಕೆ ಬೆಡ್‌ಗೆ ಸಿ.ಸಿ.ಲೈನಿಂಗ್ ಒದಗಿಸುವ ಕಾಮಗಾರಿಯ ರೂ. 3.80 ಕೋಟಿ ಮೊತ್ತದ ಅಂದಾಜಿಗೆ ನಿಗಮದ ದಿನಾಂಕ: 03.10.2015 ರ ಆದೇಶದಲ್ಲಿ ಆಡಳಿತಾತ್ಮಕ ಅನುಮೋದನೆ ಆಗಿರುತ್ತದೆ. ಪ್ರಸ್ತುತ ಈ ಆಧುನೀಕರಣ ಕಾಮಗಾರಿಯು ಭೌತಿಕವಾಗಿ ಪೂರ್ಣಗೊಂಡಿರುತ್ತದೆ.

ಈ ಯೋಜನೆಗೆ 2018–19 ನೇ ಸಾಲಿಗೆ ಅನುದಾನ ಒದಗಿಸಲಾಗಿರುವುದಿಲ್ಲ, ಮಾರ್ಚ್–2019 ರ ಅಂತ್ಯದವರೆಗೆ ವೆಚ್ಚ ಮಾಡಲಾಗಿರುವುದಿಲ್ಲ. ಈ ಯೋಜನೆಯ ಪ್ರಾರಂಭದಿಂದ ಮಾರ್ಚ್–2019 ಅಂತ್ಯದವರೆಗೆ ಮಾಡಲಾದ ಕ್ರೋಢಿಕೃತ ವೆಚ್ಚ ರೂ. 3.75 ಕೋಟಿಗಳಾಗಿರುತ್ತದೆ.

25. ಕಬಿನಿ ಬಲದಂಡೆ ನಾಲೆಯ ವಿತರಣಾ ನಾಲೆ–45 ರಲ್ಲಿ ಸಿ.ಸಿ.ಲೈನಿಂಗ್ ಮಾಡುವ ಕಾಮಗಾರಿ

ಹೆಗ್ಗಡದೇವನ ಕೋಟೆ ತಾಲ್ಲೂಕಿನಲ್ಲಿ ಹರಿಯುವ ಕಬಿನಿ ನದಿಗೆ ಅಡ್ಡಲಾಗಿ ಕಬಿನಿ ಜಲಾಶಯವನ್ನು ನಿರ್ಮಿಸಲಾಗಿದ್ದು, ಇದಕ್ಕೆ ಎರಡು ನಾಲೆಗಳನ್ನು ನಿರ್ಮಿಸಲಾಗಿದೆ. 202 ಕಿ.ಮೀ ಉದ್ದವಿರುವ ಕಬಿನಿ ಬಲದಂಡೆ ನಾಲೆಯಿಂದ 1,07,000 ಎಕರೆ ಪ್ರದೇಶಕ್ಕೆ ಹಾಗೂ 26.00 ಕಿ.ಮೀ ಉದ್ದವಿರುವ ಕಬಿನಿ ಎಡದಂಡೆ ನಾಲೆಯಿಂದ 3000 ಎಕರೆ ಪ್ರದೇಶಕ್ಕೆ ಅಂದರೆ ಈ ಯೋಜನೆಯ ಹರಿ ನೀರಾವರಿ ಅಡಿಯಲ್ಲಿ ಸುಮಾರು 1,10,000 ಎಕರೆ ಪ್ರದೇಶಕ್ಕೆ ನೀರನ್ನು ಒದಗಿಸಲಾಗುತ್ತಿದೆ. ಕಬಿನಿ ಬಲದಂಡೆ ನಾಲೆಯಡಿ 62 ಸಂಖ್ಯೆ ವಿಸ್ತರಣಾ ನಾಲೆಗಳು ಹಾಗೂ 11 ಸಂಖ್ಯೆ ಡಿ.ಪಿ.ಒ ಗಳು ಇರುತ್ತವೆ.

ಕಬಿನಿ ಬಲದಂಡೆ ನಾಲೆಯ ವಿತರಣಾ ನಾಲೆ–45 ಸರಪಳಿ 129.05 ಕಿ.ಮೀ. ನಿಂದ ಪ್ರಾರಂಭಗೊಂಡಿರುವ ವಿತರಣಾ ನಾಲೆಯು 4.504 ಕಿ.ಮೀ. ಉದ್ದ ಹಾಗೂ 8.21 ಕ್ಯೂಸೆಕ್ಸ್ ನೀರು ಹರಿವಿನ ಸಾಮರ್ಥ್ಯ ಹೊಂದಿದ್ದು 638 ಎಕರೆ (258.30 ಹೆ) ಅಚ್ಚುಕಟ್ಟು ಪ್ರದೇಶಕ್ಕೆ ನೀರನ್ನು ಒದಗಿಸಲಾಗುತ್ತಿದೆ.

ಈ ವಿತರಣಾ ನಾಲೆಯು ಕಪ್ಪು ಮತ್ತು ಮೆದು ಮಣ್ಣಿನಿಂದ ಕೂಡಿರುವ ಪ್ರದೇಶಗಳಲ್ಲಿ ಹಾಯ್ದು ಹೋಗಿದ್ದು, ನಿರಂತರ ನೀರಿನ ಹರಿವಿನಿಂದಾಗಿ ನಾಲೆಯ ಪಾರ್ಶ್ವಗಳು ಕೊರೆದುಹೋಗಿ ತನ್ನ ಆಕಾರವನ್ನು ಕಳೆದು ಕೊಂಡಿರುತ್ತದೆ. ಇದರಿಂದಾಗಿ ಕಾಲುವೆಯ ತಳ ಭಾಗದಲ್ಲಿ ಮಣ್ಣು ಮತ್ತು ಸಿಲ್ಟ್ ಶೇಖರಣೆಗೊಂಡಿದ್ದು ನೀರಿನ ಹರಿಯುವಿಕೆಯಲ್ಲಿ ವ್ಯತ್ಯಯವಾಗಿ ಕೊನೆ ಭಾಗದ ಅಚ್ಚುಕಟ್ಟಿಗೆ ನೀರು ಹರಿಸಲು ತೊಂದರೆಯಾಗಿರುತ್ತದೆ. ಕೊನೆಯ ಭಾಗದ ಅಚ್ಚುಕಟ್ಟಿಗೆ ಸಮರ್ಪಕವಾಗಿ ನೀರನ್ನು ಹರಿಸುವ ಸಲುವಾಗಿ ಸದರಿ ವಿತರಣಾ ನಾಲೆಗೆ ಸಿ.ಸಿ. ಲೈನಿಂಗ್ ಮಾಡುವ ಕಾಮಗಾರಿಯ ಅಂದಾಜನ್ನು ರೂ.0.99 ಕೋಟಿಗಳಿಗೆ ತಯಾರಿಸಿದ್ದು, ಸಿ.ಇ.ಆರ್ ಸಂಖ್ಯೆ:387/2014–15 ದಿ:31.03.2015 ರಲ್ಲಿ ತಾಂತ್ರಿಕ ಮಂಜೂರಾತಿಆಗಿರುತ್ತದೆ.ಸದರಿಕಾಮಗಾರಿಯು ಪೂರ್ಣಗೊಂಡಿರುತ್ತದೆ.

ಈ ಯೋಜನೆಗೆ 2018–19 ನೇ ಸಾಲಿಗೆ ಅನುದಾನ ಒದಗಿಸಲಾಗಿರುವುದಿಲ್ಲ, ಮಾರ್ಚ್–2019 ರ ಅಂತ್ಯದವರೆಗೆ ಯಾವುದೇ ವೆಚ್ಚವಾಗಿರುವುದಿಲ್ಲ. ಈ ಯೋಜನೆಯ ಪ್ರಾರಂಭದಿಂದ ಮಾರ್ಚ್–2019 ಅಂತ್ಯದವರೆಗೆ ಮಾಡಲಾದ ಕ್ರೋಢಿಕೃತ ವೆಚ್ಚ ರೂ. 0.84 ಕೋಟಿಗಳಾಗಿರುತ್ತದೆ.

26. ಕಬಿನಿ ಬಲದಂಡೆ ನಾಲೆಯ ವಿತರಣಾ ನಾಲೆ–46 ರಲ್ಲಿ ಸಿ.ಸಿ.ಲೈನಿಂಗ್ ಮಾಡುವ ಕಾಮಗಾರಿ.

ಹೆಗ್ಗಡದೇವನ ಕೋಟೆ ತಾಲ್ಲೂಕಿನಲ್ಲಿ ಹರಿಯುವ ಕಬಿನಿ ನದಿಗೆ ಅಡ್ಡಲಾಗಿ ಕಬಿನಿ ಜಲಾಶಯವನ್ನು ನಿರ್ಮಿಸಲಾಗಿದ್ದು, ಇದಕ್ಕೆ ಎರಡು ನಾಲೆಗಳನ್ನು ನಿರ್ಮಿಸಲಾಗಿದೆ. 202 ಕಿ.ಮೀ ಉದ್ದವಿರುವ ಕಬಿನಿ ಬಲದಂಡೆ ನಾಲೆಯಿಂದ 1,07,000 ಎಕರೆ ಪ್ರದೇಶಕ್ಕೆ ಹಾಗೂ 26.00 ಕಿ.ಮೀ ಉದ್ದವಿರುವ ಕಬಿನಿ ಎಡದಂಡೆ ನಾಲೆಯಿಂದ 3000 ಎಕರೆ ಪ್ರದೇಶಕ್ಕೆ ಅಂದರೆ ಈ ಯೋಜನೆಯ ಹರಿ ನೀರಾವರಿ ಅಡಿಯಲ್ಲಿ ಸುಮಾರು 1,10,000 ಎಕರೆ ಪ್ರದೇಶಕ್ಕೆ ನೀರನ್ನು ಒದಗಿಸಲಾಗುತ್ತಿದೆ. ಕಬಿನಿ ಬಲದಂಡೆ ನಾಲೆಯಡಿ 62 ಸಂಖ್ಯೆ ವಿಸ್ತರಣಾ ನಾಲೆಗಳು ಹಾಗೂ 11 ಸಂಖ್ಯೆ ಡಿ.ಪಿ.ಒ ಗಳು ಇರುತ್ತವೆ.

ಕಬಿನಿ ಬಲದಂಡೆ ನಾಲೆಯ ವಿತರಣಾ ನಾಲೆ–46 ಸರಪಳಿ 132.78 ಕಿ.ಮೀ. ನಿಂದ ಪ್ರಾರಂಭಗೊಂಡಿರುವ ವಿತರಣಾ ನಾಲೆಯು 5.25 ಕಿ.ಮೀ. ಉದ್ದ ಹಾಗೂ 18.72 ಕ್ಯೂಸೆಕ್ಸ್ ನೀರು ಹರಿವಿನ ಸಾಮರ್ಥ್ಯ ಹೊಂದಿದ್ದು 756 ಎಕರೆ ಅಚ್ಚುಕಟ್ಟು ಪ್ರದೇಶಕ್ಕೆ ನೀರನ್ನು ಒದಗಿಸಲಾಗುತ್ತಿದೆ. ಸದರಿ ವಿತರಣಾ ನಾಲೆಗೆ ಸಿ.ಸಿ. ಲೈನಿಂಗ್ ಮಾಡುವ ಕಾಮಗಾರಿಯ ಅಂದಾಜನ್ನು ರೂ.1.40 ಕೋಟಿಗಳಿಗೆ ತಯಾರಿಸಿದ್ದು, ಸಿ.ಇ.ಆರ್ ಸಂಖ್ಯೆ :898/2016–17 ರಲ್ಲಿ ತಾಂತ್ರಿಕ ಮಂಜೂರಾತಿ ಆಗಿರುತ್ತದೆ. ಸದರಿ ಕಾಮಗಾರಿಯು ಪ್ರಗತಿಯಲ್ಲಿದ್ದು, 4.01 ಕಿ.ಮೀ ಉದ್ದ ಲೈನಿಂಗ್ ಕಾಮಗಾರಿ ಪೂರ್ಣಗೊಂಡಿರುತ್ತದೆ.

ಈ ಯೋಜನೆಗೆ 2018–19 ನೇ ಸಾಲಿನಲ್ಲಿ ರೂ.0.45ಕೋಟಿ ಅನುದಾನ ಒದಗಿಸಲಾಗಿದ್ದು, ಮಾರ್ಚ್–2019 ರ ಅಂತ್ಯದವರೆಗೆ ಯಾವುದೇ ವೆಚ್ಚವಾಗಿರುವುದಿಲ್ಲ.

27. ಕಬಿನಿ ಬಲದಂಡೆ ನಾಲೆಯ ವಿತರಣಾ ನಾಲೆ–55 ರಲ್ಲಿ ಸಿ.ಸಿ.ಲೈನಿಂಗ್ ಮಾಡುವ ಕಾಮಗಾರಿ.

ಹೆಗ್ಗಡದೇವನ ಕೋಟೆ ತಾಲ್ಲೂಕಿನಲ್ಲಿ ಹರಿಯುವ ಕಬಿನಿ ನದಿಗೆ ಅಡ್ಡಲಾಗಿ ಕಬಿನಿ ಜಲಾಶಯವನ್ನು ನಿರ್ಮಿಸಲಾಗಿದ್ದು, ಇದಕ್ಕೆ ಎರಡು ನಾಲೆಗಳನ್ನು ನಿರ್ಮಿಸಲಾಗಿದೆ. 202 ಕಿ.ಮೀ ಉದ್ದವಿರುವ ಕಬಿನಿ ಬಲದಂಡೆ ನಾಲೆಯಿಂದ 1,07,000 ಎಕರೆ ಪ್ರದೇಶಕ್ಕೆ ಹಾಗೂ 26.00 ಕಿ.ಮೀ ಉದ್ದವಿರುವ ಕಬಿನಿ ಎಡದಂಡೆ ನಾಲೆಯಿಂದ 3000 ಎಕರೆ ಪ್ರದೇಶಕ್ಕೆ ಅಂದರೆ ಈ ಯೋಜನೆಯ ಹರಿ ನೀರಾವರಿ ಅಡಿಯಲ್ಲಿ

ಸುಮಾರು 1,10,000 ಎಕರೆ ಪ್ರದೇಶಕ್ಕೆ ನೀರನ್ನು ಒದಗಿಸಲಾಗುತ್ತಿದೆ. ಕಬಿನಿ ಬಲದಂಡೆ ನಾಲೆಯಡಿ 62 ಸಂಖ್ಯೆ ವಿಸ್ತರಣಾ ನಾಲೆಗಳು ಹಾಗೂ 11 ಸಂಖ್ಯೆ ಡಿ.ಪಿ.ಒ ಗಳು ಇರುತ್ತವೆ.

ಕಬಿನಿ ಬಲದಂಡೆ ನಾಲೆಯ ವಿತರಣಾ ನಾಲೆ–55 ಸರಪಳಿ 148.70 ಕಿ.ಮೀ. ನಿಂದ ಪ್ರಾರಂಭಗೊಂಡಿರುವ ವಿತರಣಾ ನಾಲೆಯು 8.25 ಕಿ.ಮೀ. ಉದ್ದ ಹಾಗೂ 95.09 ಕ್ಯೂಸೆಕ್ಸ್ ನೀರು ಹರಿವಿನ ಸಾಮರ್ಥ್ಯ ಹೊಂದಿದ್ದು 4008 ಎಕರೆ ಅಚ್ಚುಕಟ್ಟು ಪ್ರದೇಶಕ್ಕೆ ನೀರನ್ನು ಒದಗಿಸಲಾಗುತ್ತಿದೆ. ಸದರಿ ವಿತರಣಾ ನಾಲೆಗೆ ಸಿ.ಸಿ. ಲೈನಿಂಗ್ ಮಾಡುವ ಕಾಮಗಾರಿಯ ಅಂದಾಜನ್ನು ರೂ.3.20 ಕೋಟಿಗಳಿಗೆ ತಯಾರಿಸಿದ್ದು, ಸದರಿ ಅಂದಾಜಿಗೆ ನಿಗಮದ ಪತ್ರ ದಿ: 29.12.2016 ರಲ್ಲಿಆಡಳಿತಾತ್ಮಕ ಅನುಮೋದನೆ ನೀಡಲಾಗಿದ್ದು, ಸಿ.ಇ.ಆರ್ ಸಂಖ್ಯೆ :897/2016–17 ರಲ್ಲಿ ತಾಂತ್ರಿಕ ಮಂಜೂರಾತಿಆಗಿರುತ್ತದೆ.ಸದರಿ ಕಾಮಗಾರಿಯು ಪ್ರಗತಿಯಲ್ಲಿದ್ದು, 5.95 ಕಿ.ಮೀ ಪೈಕಿ 4.25 ಕಿ.ಮೀ ಉದ್ದ ಲೈನಿಂಗ್ ಕಾಮಗಾರಿ ಪೂರ್ಣಗೊಂಡಿರುತ್ತದೆ.

ಈ ಯೋಜನೆಗೆ 2018–19ನೇ ಸಾಲಿನಲ್ಲಿ ರೂ. 1.05 ಕೋಟಿ ಅನುದಾನ ಒದಗಿಸಲಾಗಿದ್ದು, ಮಾರ್ಚ್–2019 ರ ಅಂತ್ಯದವರೆಗೆ ಯಾವುದೇ ವೆಚ್ಚವಾಗಿರುವುದಿಲ್ಲ.

28. ಕಬಿನಿ ಬಲದಂಡೆ ನಾಲೆಯ ವಿತರಣಾ ನಾಲೆ–42 ರಡಿ ಬರುವ ಹೊನ್ನೂರು ವಿತರಣಾ ನಾಲೆಯ ಸರ:0.00 ದಿಂದ 16.60 ಕಿ.ಮೀ ವರೆಗೆ ಹಾಗೂ ಸಂತೇಮರಹಳ್ಳಿ ವಿತರಣಾ ನಾಲೆಯ ಸರ:0.00 ದಿಂದ 19.45 ಕಿ.ಮೀ ವರೆಗೆ ಲೈನಿಂಗ್ ಮಾಡುವ ಕಾಮಗಾರಿ

ಹೆಗ್ಗಡದೇವನ ಕೋಟೆ ತಾಲ್ಲೂಕಿನಲ್ಲಿ ಹರಿಯುವ ಕಬಿನಿ ನದಿಗೆ ಅಡ್ಡಲಾಗಿ ಕಬಿನಿ ಜಲಾಶಯವನ್ನು ನಿರ್ಮಿಸಲಾಗಿದ್ದು, ಇದಕ್ಕೆ ಎರಡು ನಾಲೆಗಳನ್ನು ನಿರ್ಮಿಸಲಾಗಿದೆ. 202 ಕಿ.ಮೀ ಉದ್ದವಿರುವ ಕಬಿನಿ ಬಲದಂಡೆ ನಾಲೆಯಿಂದ 1,07,000 ಎಕರೆ ಪ್ರದೇಶಕ್ಕೆ ಹಾಗೂ 26.00 ಕಿ.ಮೀ ಉದ್ದವಿರುವ ಕಬಿನಿ ಎಡದಂಡೆ ನಾಲೆಯಿಂದ 3000 ಎಕರೆ ಪ್ರದೇಶಕ್ಕೆ ಅಂದರೆ ಈ ಯೋಜನೆಯ ಹರಿ ನೀರಾವರಿ ಅಡಿಯಲ್ಲಿ ಸುಮಾರು 1,10,000 ಎಕರೆ (44516 ಹೆ) ಪ್ರದೇಶಕ್ಕೆ ನೀರನ್ನು ಒದಗಿಸಲಾಗುತ್ತಿದೆ. ಕಬಿನಿ ಬಲದಂಡೆ ನಾಲೆಯಡಿ 62 ಸಂಖ್ಯೆ ವಿಸ್ತರಣಾ ನಾಲೆಗಳು ಹಾಗೂ 11 ಸಂಖ್ಯೆ ಡಿ.ಪಿ.ಒ ಗಳು ಇರುತ್ತವೆ.

ಕಬಿನಿ ಬಲದಂಡೆ ಮುಖ್ಯ ನಾಲೆಯ ಸರಪಳಿ 114.365 ಕಿ.ಮೀ ನಲ್ಲಿ ಇರುವ ವಿತರಣಾ ನಾಲೆ 42 ರ ನಾಲೆಯು 11890 ಎಕರೆ ಅಚ್ಚುಕಟ್ಟು ಹೊಂದಿದ್ದು, 1.865 ಕಿ.ಮೀ ಉದ್ದಕ್ಕೆ ಸಾಗಿದ ನಂತರ ಎರಡು ಶಾಖೆಗಳಾಗಿ ವಿಭಾಗವಾಗಿರುತ್ತದೆ. ಒಂದನೇ ಶಾಖೆಯಹೊನ್ನೂರು ವಿತರಣಾ ನಾಲೆಯು 16.60 ಕಿ.ಮೀ ಉದ್ದವಿದ್ದು 6058 ಎಕರೆ ಅಚ್ಚುಕಟ್ಟು ಹೊಂದಿದೆಹಾಗೂ ಎರಡನೇ ಶಾಖೆಯಸಂತೇಮರಹಳ್ಳಿ ವಿತರಣಾ ನಾಲೆಯು 19.45 ಕಿ.ಮೀ ಉದ್ದವಿದ್ದು 5832 ಎಕರೆ ಅಚ್ಚುಕಟ್ಟು ಹೊಂದಿದೆ.

ಈ ವಿತರಣಾ ನಾಲೆಗಳಲ್ಲಿ ಕಾಂಕ್ರೀಟ್ ಲೈನಿಂಗ್‌ಗಳು ನೀರಿನ ಹರಿವಿನಿಂದ ಹಾಗೂ ಮಳೆಯ ನೀರಿನಿಂದ ಹಾಳಾಗಿದ್ದು, ಕೆಲವು ಭಾಗಗಳಿಗೆ ಸುಮಾರು 30 ವರ್ಷಗಳಿಂದ ಕಾಂಕ್ರೀಟ್ ಲೈನಿಂಗ್ ಮಾಡದೇ ಇರುವುದರಿಂದ ನಾಲೆಗಳು ಅವುಗಳ ಸ್ವರೂಪ ಮತ್ತು ಆಕಾರವನ್ನು ಕಳೆದುಕೊಂಡು ನೀರಿನ ಹರಿವಿನಲ್ಲಿ ವ್ಯತ್ಯಯವಾಗಿ ಕೊನೆ ಭಾಗದ ಅಚ್ಚುಕಟ್ಟಿಗೆ ನೀರನ್ನು ಸರಾಗವಾಗಿ ಒದಗಿಸಲು ಕಷ್ಟಸಾಧ್ಯವಾಗಿರುತ್ತದೆ. ಈ ವಿತರಣಾ ನಾಲೆಯಲ್ಲಿ ನೀರನ್ನು ಕೊನೆಯ ಭಾಗದವರೆಗೂ ಸರಾಗವಾಗಿ ಹರಿಸಲು ಅನುಕೂಲವಾಗುವಂತೆ, ಹಾಳಾಗಿರುವ ಹಾಗೂ ಲೈನಿಂಗ್ ಮಾಡದೇ ಇರುವ ಆಯ್ದಭಾಗಗಳಲ್ಲಿ ಲೈನಿಂಗ್ ಮಾಡಲು ಉದ್ದೇಶಿಸಲಾಗಿರುತ್ತದೆ.

ಕಬಿನಿ ಬಲದಂಡೆ ನಾಲೆಯ ವಿತರಣಾ ನಾಲೆ–42 ರಡಿ ಬರುವ ಹೊನ್ನೂರು ವಿತರಣಾ ನಾಲೆಯ ಸರ:0.00 ದಿಂದ 16.60 ಕಿ.ಮೀ ವರೆಗೆ ಹಾಗೂ ಸಂತೇಮರಹಳ್ಳಿ ವಿತರಣಾ ನಾಲೆಯ ಸರ:0.00 ದಿಂದ 19.45 ಕಿ.ಮೀ ವರೆಗೆ ಲೈನಿಂಗ್ ಮಾಡುವ ಕಾಮಗಾರಿಯ ರೂ.11.10 ಕೋಟಿಗಳ ಅಂದಾಜಿಗೆ ಸರ್ಕಾರಿ ಆದೇಶ ಸಂಖ್ಯೆ: ಜಸಂಇ 169 ಎಂಎಂಕೆ2013 ದಿನಾಂಕ: 19.02.2014 ರಲ್ಲಿ ಆಡಳಿತಾತ್ಮಕ ಅನುಮೋದನೆ ಹಾಗೂ ರೂ.10.35 ಕೋಟಿಗಳಿಗೆ ಸಿ.ಇ.ಆರ್ ಸಂಖ್ಯೆ: 323/13–14 ರಲ್ಲಿ ತಾಂತ್ರಿಕ ಮಂಜೂರಾತಿ ಆಗಿದ್ದು, ಪ್ರಸ್ತುತ ಕಾಮಗಾರಿ ಭೌತಿಕವಾಗಿ ಪೂರ್ಣಗೊಂಡಿರುತ್ತದೆ.

ಈ ಯೋಜನೆಗೆ 2018–19 ನೇ ಸಾಲಿಗೆ ರೂ. 0.50 ಕೋಟಿ ಅನುದಾನ ಒದಗಿಸಲಾಗಿದ್ದು, ಮಾರ್ಚ್–2019 ರ ಅಂತ್ಯದವರೆಗೆ ರೂ. 0.14 ಕೋಟಿ ವೆಚ್ಚ ಮಾಡಲಾಗಿದೆ. ಈ ಯೋಜನೆಯ ಪ್ರಾರಂಭದಿಂದ ಮಾರ್ಚ್–2019 ಅಂತ್ಯದವರೆಗೆ ಮಾಡಲಾದ ಕ್ರೋಢಿಕೃತ ವೆಚ್ಚ ರೂ. 10.39 ಕೋಟಿಗಳಾಗಿರುತ್ತದೆ.

29. ಹೇಮಾವತಿ ಬಲದಂಡೆ ನಾಲೆಯ ಸರಪಳಿ 63.750ಮೀ ನಲ್ಲಿ ಪ್ರಾರಂಭವಾಗುವ 35ನೇ ವಿತರಣಾ ನಾಲೆಯ ಆಧುನೀಕರಣ.

ಹೇಮಾವತಿ ಬಲದಂಡೆ ನಾಲೆಯು ಹೇಮಾವತಿ ಅಣೆಕಟ್ಟೆಯ ಬಲಭಾಗದಿಂದ ಪ್ರಾರಂಭವಾಗುತ್ತದೆ. ಈ ನಾಲೆಯ ಸರಪಳಿ 63.75 ಕಿ.ಮೀನಲ್ಲಿ 35ನೇ ವಿತರಣಾ ನಾಲೆಯು ಪ್ರಾರಂಭವಾಗಿದ್ದು ಇದರ ಉದ್ದವು 19.447 ಕಿ.ಮೀಗಳಾಗಿದೆ. ಈ ವಿತರಣಾ ನಾಲೆಯನ್ನು ಅಂದಾಜು 1984–85ನೇ ಸಾಲಿನಲ್ಲಿ ನಿರ್ಮಿಸಲಾಗಿದೆ. ಈ ನಾಲೆಯಿಂದ ಹೊಳೆನರಸೀಪುರ ತಾಲ್ಲೂಕು ಕಸಬಾ ಹೋಬಳಿಯ ಒಟ್ಟು 4231 ಎಕರೆ ಅಚ್ಚುಕಟ್ಟು ಪ್ರದೇಶಕ್ಕೆ ನೀರಾವರಿ ಸೌಲಭ್ಯವನ್ನು ಕಲ್ಪಿಸುವ ಸಲುವಾಗಿ ನಿರ್ಮಿಸಲಾಗಿದೆ.

ಮುಖ್ಯ ನಾಲೆಗೆ ಒಳಪಡುವ ವಿತರಣಾ ನಾಲೆಗಳಲ್ಲಿ 35ನೇ ವಿತರಣಾ ನಾಲೆಯೇ ಅತಿ ದೊಡ್ಡ ನಾಲೆಯಾಗಿದ್ದು, ನಾಲೆಯು 19.447 ಕಿ.ಮೀ ಉದ್ದವಿದ್ದು ಮುಖ್ಯ ನಾಲೆಯಿಂದ ಸರಪಳಿ 63.750 ಕಿ.ಮೀನಲ್ಲಿ ಪ್ರಾರಂಭವಾಗಿ 51.00 ಕ್ಯೂಸೆಕ್ಸಗಳ ನೀರಿನ ಹರಿವಿನ ಸಾಮರ್ಥ್ಯವನ್ನು ಹೊಂದಿದೆ. ಅಚ್ಚುಕಟ್ಟುದಾರರು ಬೆಳೆ ಪದ್ಧತಿಯ ಉಲ್ಲಂಘನೆಯಿಂದ ಅರೆಖುಷ್ಕಿ ಬೆಳೆಗಳನ್ನು ಬೆಳೆಯುವ ಭಾಗದಲ್ಲಿ ಭತ್ತ ಬೆಳೆದಿದ್ದರಿಂದ ಮುಖ್ಯ ನಾಲೆ ಮತ್ತು ವಿತರಣಾ ನಾಲೆಗಳಲ್ಲಿ ನೀರಿನ ಕೊರತೆ ಉಂಟಾಗಿ ವಿತರಣಾ ನಾಲೆಗಳಿಗೆ ಆನ್ ಅಂಡ್ ಆಫ್ ಪದ್ಧತಿಯನ್ನು ಅಳವಡಿಸಿ ಮುಖ್ಯ ನಾಲೆಯ ಕೊನೆಯ ಭಾಗದವರೆಗೆ ನೀರನ್ನು ಹರಿಸಲು ಪ್ರತಿ ವರ್ಷವೂ ಶ್ರಮಿಸಲಾಗುತ್ತಿದೆ.

ಈ ಕಾರಣಗಳಿಂದಾಗಿ ಹೇಮಾವತಿ ಬಲದಂಡೆ ನಾಲೆಯ ವಿತರಣಾ ನಾಲೆ 35ರ ಆದುನೀಕರಣ ಮಾಡಿ ಇದರ ಅಡಿಯಲ್ಲಿ ಬರುವ 4231 ಎಕರೆ ಅಚ್ಚುಕಟ್ಟು ಪ್ರದೇಶಕ್ಕೆ ಅರೆಖುಷ್ಕಿ ಬೆಳೆಗೆ ನೀರನ್ನು ಪೂರೈಸುವ ಉದ್ದೇಶದಿಂದ ಆಧುನೀಕರಣ ಕಾಮಗಾರಿಯನ್ನು ಕೈಗೊಳ್ಳಲಾಗಿದೆ.

ಸದರಿ ಕಾಮಗಾರಿಯ ರೂ.19.34 ಕೋಟಿ ಮೊತ್ತದ ಅಂದಾಜಿಗೆ ಸರ್ಕಾರದ ಪತ್ರ ದಿನಾಂಕ:ಜಸಂಇ 01 ಎನ್‌ಎಚ್‌ಪಿ 2016 ದಿ:04.03.2016 ರಂದು ಆಡಳಿತಾತ್ಮಕ ಅನುಮೋದನೆ ದೊರೆತಿರುತ್ತದೆ. ಸದರಿ ಕಾಮಗಾರಿಯು ಪ್ರಗತಿಯಲ್ಲಿದ್ದು, 19.447 ಕಿ.ಮೀ ಪೈಕಿ 19.00 ಕಿ.ಮೀ ಉದ್ದದ ಲೈನಿಂಗ್ ಪೂರ್ಣಗೊಂಡಿದೆ.. 145 ಸಂಖ್ಯೆಯ ಸಿ.ಡಿ ಕಾಮಗಾರಿಗಳು ಪೂರ್ಣಗೊಂಡಿದೆ.

ಈ ಯೋಜನೆಗೆ 2018–19 ನೇ ಸಾಲಿಗೆ ರೂ. 2.00 ಕೋಟಿ ಅನುದಾನ ಒದಗಿಸಲಾಗಿದ್ದು, ಮಾರ್ಚ್–2019 ರ ಅಂತ್ಯದವರೆಗೆ ರೂ. 1.99 ಕೋಟಿ ವೆಚ್ಚ ಮಾಡಲಾಗಿದೆ. ಈ ಯೋಜನೆಯ ಪ್ರಾರಂಭದಿಂದ ಮಾರ್ಚ್–2019 ಅಂತ್ಯದವರೆಗೆ ಮಾಡಲಾದ ಕ್ರೋಢಿಕೃತ ವೆಚ್ಚ ರೂ. 17.85 ಕೋಟಿಗಳಾಗಿರುತ್ತದೆ.

30. ಹನಗೋಡು ಸರಣಿಯ ಅಣೆಕಟ್ಟೆಯಡಿ ಬರುವ ನಾಲಾ ಜಾಲಾಕ್ಕೆ ಮೆಕ್ಯಾನಿಕಲ್ ಪೇವರ್ ಬಳಸಿ ಸಿಸಿ ಲೈನಿಂಗ್ ಹಾಗೂ ಅಡ್ಡಮೋರಿ ಕಟ್ಟಡಗಳ ಅಭಿವೃದ್ಧಿ ಕಾಮಗಾರಿ.

ಹನಗೋಡು ಅಣೆಕಟ್ಟೆಯನ್ನು ಲಕ್ಷ್ಮಣತೀರ್ಥ ನದಿಗೆ ಅಡ್ಡಲಾಗಿ (tributary of Cauvery river) ಸುಮಾರು 300 ವರ್ಷಗಳ ಹಿಂದೆ ನಿರ್ಮಿಸಲಾಗಿರುತ್ತದೆ. ಈ ಅಣೆಕಟ್ಟು ಒಂದು ಬಲದಂಡ ನಾಲೆ ಮತ್ತು 3 ಬ್ರಾಂಚ್ ನಾಲೆಗಳನ್ನು ಒಳಗೊಂಡಿರುತ್ತದೆ. ಹನಗೊಡು ಅಣೆಕಟ್ಟೆಯ ಉದ್ದ 96 ಮೀ ಮತ್ತು ಎತ್ತರ 2 ಮೀ ಇದ್ದು, ಕೇವಲ ನೀರನ್ನು ಡೈವರ್ಷನ್ ಮಾಡುವ ವಿಧಾನವಾಗಿದ್ದು, ಇಲ್ಲಿ ಸಂಗ್ರಹ ಸಾಮರ್ಥ್ಯ ಇರುವುದಿಲ್ಲ. ಅಣೆಕಟ್ಟೆಗೆ 645 ಚದರ ಮೈಲಿ ಜಲಾನಯನ ಪ್ರದೇಶವಿರುತ್ತದೆ. ಅಣೆಕಟ್ಟಿನಿಂದ ನೀರಾವರಿ ಉದ್ದೇಶಕ್ಕೆ ಮುಖ್ಯ ನಾಲೆಗೆ 5 ಗೇಟುಗಳನ್ನು ಅಳವಡಿಸಿದ್ದು ಈ ಅಣೆಕಟ್ಟೆಯಡಿಯಲ್ಲಿ ಬರುವ ಸರಣಿ ಕಾಲುವೆಗಳು, ಕೆರೆಗಳು, ಪಿಕಪ್‌ಗಳ ಸುಮಾರು 24,325 ಎಕರೆ ಅಚ್ಚುಕಟ್ಟು ಪ್ರದೇಶಕ್ಕೆ ನೀರನ್ನು ಸರಬರಾಜು ಮಾಡಲಾಗುತ್ತಿದೆ. ಹನಗೋಡು ಮುಖ್ಯ ನಾಲೆಯು 735 ಕ್ಯೂಸೆಕ್ಸಗಳ ನೀರಿನ ಹರಿವಿನ ಸಾಮರ್ಥ್ಯವನ್ನು ಹೊಂದಿದೆ. ಈ ಹಿನ್ನೆಲೆಯಲ್ಲಿ ಹನಗೋಡು ಸರಣಿಯ ಅಣೆಕಟ್ಟೆಯು ಮುಖ್ಯ ನಾಲೆ ಸರಪಳಿ 0.00 ಯಿಂದ 17.80 ಕಿ.ಮೀ. ವರೆಗೆ, ಹನುಮಂತಪುರ ಶಾಖಾ ನಾಲೆಯ ಸರಪಳಿ 0.0 ರಿಂದ 20.157 ಕಿಮೀ ವರೆಗೆ, ಕರಿಮುದ್ದನಹಳ್ಳಿ ಬಲದಂಡೆ ನಾಲೆಯ ಸರಪಳಿ 0.00 ರಿಂದ 16.833 ಕಿಮೀ.ವರೆಗೆ, ಕರಿಮುದ್ದನಹಳ್ಳಿ ಎಡದಂಡೆ ನಾಲೆ ಸರಪಳಿ 0.00 ರಿಂದ 11.205 ಕಿಮೀ.ವರೆಗೆ, ನಲ್ಲೂರು ನಾಲೆಯ ಸರಪಳಿ 0.00 ಯಿಂದ 10.957 ಕಿಮೀ ವರೆಗೆ ಮತ್ತುಉದ್ದೂರು ನಾಲೆಯ ಸರಪಳಿ 0.00 ಯಿಂದ 38.014 ಕಿಮೀ ವರೆಗೆ ಹಾಗೂ ಉದ್ದೂರು ಶಾಖಾ ನಾಲೆಗಳ ಅಡ್ಡಮೋರಿ ಅಭಿವೃದ್ಧಿಪಡಿಸುವ ಕಾಮಗಾರಿಯ ರೂ. 151.65 ಕೋಟಿಗಳ ಯೋಜನಾ ವರದಿಗೆ ಸರ್ಕಾರಿ ಆದೇಶ ಸಂಖ್ಯೆ ಜಸಂಇ 100 ಎಂಎಂಕೆ 2016, ಬೆಂಗಳೂರು ದಿನಾಂಕ 20.02.2017 ರಲ್ಲಿ ಆಡಳಿತಾತ್ಮಕ ಅನುಮೋದನೆ ದೊರೆತಿರುತ್ತದೆ.ಸದರಿ ಕಾಮಗಾರಿಯ ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡಿದ್ದು, ಕಾಮಗಾರಿ ಪ್ರಾರಂಭಿಸಲಾಗಿದೆ.

ಈ ಯೋಜನೆಗೆ 2018–19 ನೇ ಸಾಲಿಗೆ ರೂ. 5.00 ಕೋಟಿ ಅನುದಾನ ಒದಗಿಸಲಾಗಿದ್ದು, ಮಾರ್ಚ್–2019 ರ ಅಂತ್ಯದವರೆಗೆ ರೂ. 2.67 ಕೋಟಿ ವೆಚ್ಚ ಮಾಡಲಾಗಿದೆ. ಈ ಯೋಜನೆಯ ಪ್ರಾರಂಭದಿಂದ ಮಾರ್ಚ್–2019 ಅಂತ್ಯದವರೆಗೆ ಮಾಡಲಾದ ಕ್ರೋಢಿಕೃತ ವೆಚ್ಚ ರೂ. 17.58 ಕೋಟಿಗಳಾಗಿರುತ್ತದೆ.

31. ಕೃಷ್ಣರಾಜಸಾಗರ ಯೋಜನೆಯ ಬಲದಂಡೆ ಕೆಳಮಟ್ಟದ ನಾಲೆಯ ಆಧುನೀಕರಣ ಕಾಮಗಾರಿ

ಕೃಷ್ಣರಾಜಸಾಗರ ಜಲಾಶಯದ ನಿರ್ಮಾಣವನ್ನು 1911 ರಲ್ಲಿ ಪ್ರಾರಂಭಿಸಿ 1934 ರಲ್ಲಿ ಪೂರ್ಣಗೊಳಿಸಲಾಗಿದೆ. ಈ ಜಲಾಶಯದ ಬಲಭಾಗದಲ್ಲಿ +60' ಮಟ್ಟದಲ್ಲಿ ಇರುವ ಆರ್.ಬಿ.ಎಲ್.ಎಲ್. ನಾಲೆಯ ಉದ್ದವು 31.96 ಕಿ.ಮೀ. ಇದ್ದು, 250 ಕ್ಯೂಸೆಕ್ಸ್ ನೀರು ಹರಿವಿನ ಸಾಮರ್ಥ್ಯ ಹೊಂದಿರುತ್ತದೆ. ಈ 250 ಕ್ಯುಸೆಕ್ಸ್ ನಲ್ಲಿ ಸುಮಾರು 50 ಕ್ಯುಸೆಕ್ಸ್ ನೀರನ್ನು ಮೈಸೂರು ನಗರದ ಕುಡಿಯುವ ನೀರಿಗೆ ಉಪಯೋಗಿಸಲಾಗುತ್ತಿದೆ ಹಾಗೂ ಇನ್ನು ಉಳಿದ 200 ಕ್ಯುಸೆಕ್ಸ್ ನೀರನ್ನು ನೀರಾವರಿಗೆ ಉಪಯೋಗಿಸಿಕೊಳ್ಳಲಾಗುತ್ತಿದೆ. ಈ ನಾಲೆಯಿಂದ ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ತಾಲ್ಲೂಕಿನ ಹಾಗೂ ಮೈಸೂರು ಜಿಲ್ಲೆಯ ಮೈಸೂರು ತಾಲ್ಲೂಕಿನ ಒಟ್ಟಾರೆ ಅಚ್ಚುಕಟ್ಟು 3789 ಎಕರೆ (1533.38 ಹೆಕ್ಟೇರ್) ಪ್ರದೇಶಕ್ಕೆ ನೀರನ್ನು ಒದಗಿಸಲಾಗುತ್ತಿದೆ.

ಆರ್.ಬಿ.ಎಲ್.ಎಲ್ ನಾಲೆಯು ಸುಮಾರು 100 ವರ್ಷಗಳಷ್ಟು ಹಳೆಯದಾಗಿದ್ದು, ನಾಲೆಯಲ್ಲಿ ಸತತವಾಗಿ ನೀರು ಹರಿದಿರುವುದರಿಂದ ಹಲವು ಕಡೆ ನಾಲೆಯು ಅಗಲವಾಗಿ ಪಾರ್ಶ್ವಗಳು ಕೊರೆದಿರುವುದರಿಂದ, ನಾಲೆಯು ತನ್ನ ಮೂಲ ಸ್ವರೂಪವನ್ನು ಕಳೆದುಕೊಂಡು, ನಾಲೆಯಲ್ಲಿ ನೀರಿನ ಹರಿವಿನ ವೇಗವು ಕಡಿಮೆಯಾಗಿರುತ್ತದೆ. ನಾಲೆಯಲ್ಲಿ ಹೂಳು ತುಂಬಿ ಗಿಡಗೆಂಟೆಗಳು ಬೆಳೆದಿರುವುದರಿಂದ ನಾಲೆಯಲ್ಲಿ ನೀರಿನ ಹರಿವಿನ ವೇಗ ಮತ್ತಷ್ಟು ಕಡಿಮೆಯಾಗಿರುತ್ತದೆ. ನಾಲೆಯ ತಳ ಅಗಲವು 12.00 ಮೀ ನಿಂದ ಕೊನೆಭಾಗದಲ್ಲಿ 2.00 ಮೀ ರವೆರೆಗೆ ಇದ್ದು, ನಾಲೆಯ ಸೆಕ್ಷನ್ ಕ್ರಮಬದ್ಧವಾಗಿರುವುದಿಲ್ಲ. ನಾಲೆಯು ತುಂಬಾ ಹಳೆಯದಾಗಿದ್ದು, ಏರಿಯ ಉದ್ದಕ್ಕೂ ಅಲ್ಲಲ್ಲಿ ಮಣ್ಣನ್ನು ತೆಗೆದಿರುವುದರಿಂದ ನಾಲಾ ಏರಿಯು ತುಂಬಾ ಶಿಥಿಲವಾಗಿ ಹಲವು ಕಡೆ ನೀರು ಉರುಳಿ ಏರಿಯಲ್ಲಿ ಕೊರತೆ ಉಂಟಾಗಿದ್ದು, ಹಲವು ಸಂದರ್ಭಗಳಲ್ಲಿ ನಾಲಾ ಏರಿಯು ಒಡೆದು ನೀರು ನಿರ್ವಹಣೆಗೆ ತುಂಬಾ ಅಡಚಣೆ ಉಂಟಾಗಿರುತ್ತದೆ. ಈ ಎಲ್ಲಾ ಕಾರಣಗಳಿಂದ ನಾಲೆಯ ಕೊನೆಭಾಗಕ್ಕೆ ನೀರನ್ನು ಒದಗಿಸಲು ತೊಂದರೆಯಾಗಿದ್ದು, 3789 ಎಕರೆ ಅಚ್ಚುಕಟ್ಟು ಪ್ರದೇಶದಲ್ಲಿ 3581 ಎಕರೆ ಅಚ್ಚುಕಟ್ಟು ಪ್ರದೇಶಕ್ಕೆ ನೀರನ್ನು ಒದಗಿಸಲಾಗುತ್ತಿದ್ದು, 208 ಎಕರೆಯಷ್ಟು ಭಾದಿತ ಅಚ್ಚುಕಟ್ಟು ಪ್ರದೇಶವಾಗಿರುತ್ತದೆ. ಅಲ್ಲದೆ, ಈ ಹಿಂದೆ ಕಲ್ಲು / ಇಟ್ಟಿಗೆಗಳಿಂದ ನಿರ್ಮಿಸಿರುವ Cart bridges, Road bridges, Super passages, Aqueducts, sluices ಗಳು ಹಳೆಯಕಾಲದವಾಗಿದ್ದು, ತುಂಬಾ ಶಿಥಿಲಾವಸ್ಥೆಯಲ್ಲಿರುತ್ತವೆ.

ಕೃಷ್ಟರಾಜಸಾಗರ ಯೊಜನೆಯ ಬಲದಂಡೆ ಕೆಳಮಟ್ಟದ ನಾಲೆಯ ಆಧುನೀಕರಣಕಾಮಗಾರಿಯ ರೂ.46.00 ಕೋಟಿ ಮೊತ್ತದ ಯೋಜನಾ ವರದಿಗೆ ಸರ್ಕಾರದ ಆದೇಶ ಸಂಖ್ಯೆ: ಜಸಂಇ 11 ಎಂಎಂಕೆ 2017, ಬೆಂಗಳೂರು ದಿನಾಂಕ 12.07.2017 ರಲ್ಲಿ ಆಡಳಿತಾತ್ಮಕ ಅನುಮೋದನೆ ದೊರೆತಿರುತ್ತದೆ. ಸದರಿ ಕಾಮಗಾರಿಯು ಪ್ರಗತಿಯಲ್ಲಿದ್ದು, 29.00 ಕಿ.ಮೀ ಪೈಕಿ 10.26 ಕಿ.ಮೀ ಉದ್ದದ ಲೈನಿಂಗ್ ಕಾಮಗಾರಿಯು ಪೂರ್ಣಗೊಂಡಿದೆ. 65 ಸಂಖ್ಯೆಯ ಸಿ.ಡಿ ಕಾಮಗಾರಿಗಳ ಪೈಕಿ 26 ಸಂಖ್ಯೆಯ ಪೂರ್ಣಗೊಂಡಿದೆ. ಉಳಿಕೆ ಕಾಮಗಾರಿಗಳು ಪ್ರಗತಿಯಲ್ಲಿದೆ.

ಈ ಯೋಜನೆಗೆ 2018–19 ನೇ ಸಾಲಿಗೆ ರೂ. 3.00 ಕೋಟಿ ಅನುದಾನ ಒದಗಿಸಲಾಗಿದ್ದು, ಮಾರ್ಚ್–2019 ರ ಅಂತ್ಯದವರೆಗೆ ರೂ. 11.14 ಕೋಟಿ ವೆಚ್ಚ ಮಾಡಲಾಗಿದೆ. ಈ ಯೋಜನೆಯ ಪ್ರಾರಂಭದಿಂದ ಮಾರ್ಚ್–2019 ಅಂತ್ಯದವರೆಗೆ ಮಾಡಲಾದ ಕ್ರೋಢಿಕೃತ ವೆಚ್ಚ ರೂ. 11.14 ಕೋಟಿಗಳಾಗಿರುತ್ತದೆ.

32. ತುಮಕೂರು ಜಿಲ್ಲೆ, ಕುಣಿಗಲ್ ತಾಲ್ಲೂಕಿನ, ಮಾರ್ಕೋನಹಳ್ಳಿ ಜಲಾಶಯದ ಎಡದಂಡೆ ಮತ್ತು ಬಲದಂಡೆ ನಾಲೆಗಳ ಅಧುನೀಕರಣ ಕಾಮಗಾರಿ.

ತುಮಕೂರು ಜಿಲ್ಲೆ, ಕುಣಿಗಲ್ ತಾಲ್ಲೂಕು, ಅಮೃತೂರು ಹೋಬಳಿಯ, ಮಾರ್ಕೋನಹಳ್ಳಿ ಜಲಾಶಯವನ್ನು ವೀರ ವೈಷ್ಣವಿನದಿ ಮತ್ತು ಶಿಂಷಾ ನದಿಗಳ ಸಂಗಮದ ಸ್ಥಳದಲ್ಲಿ ರೂ.29.00 ಲಕ್ಷಗಳಿಗೆ 1938 ರಲ್ಲಿ ಪ್ರಾರಂಭಿಸಿ 1940ರಲ್ಲಿ ಪೂರ್ಣಗೊಳಿಸಲಾಗಿರುತ್ತದೆ. ಸದರಿ ಜಲಾಶಯದಡಿ 5942.00 ಹೆಕ್ಟೇರ್ ಅಧಿಕೃತ ಅಚ್ಚುಕಟ್ಟನ್ನು ಹೊಂದಿರುತ್ತದೆ. ಜಲಾಶಯವು2.40 ಟಿ.ಎಂ.ಸಿ ನೀರಿನ ಶೇಕರಣ ಸಾವ್ಮರ್ಥ್ಯ ಹೊಂದಿದೆ. ಸದರಿ ಜಲಾಶಯಕ್ಕೆ ಎರಡು ಮುಖ್ಯ ನಾಲೆಗಳಿದ್ದು, ಎಡದಂಡೆ ನಾಲೆಯು 28.80 ಕಿ.ಮೀ ಉದ್ದವಿದ್ದು 3952.00 ಹೆಕ್ಟೇರ್ ಮತ್ತು ಬಲದಂಡೆ ನಾಲೆಯು 18.80 ಕಿ.ಮೀ ಉದ್ದವಿದ್ದು 560.00 ಹೆಕ್ಟೇರ್ ಅಧಿಕೃತ ಅಚ್ಚುಕಟ್ಟನ್ನು ಹೊಂದಿರುತ್ತದೆ.

ಮಾರ್ಕೋನಹಳ್ಳಿ ಜಲಾಶಯದ ಎಡದಂಡೆ ನಾಲೆಯ ಅಧುನೀಕರಣದ ಕಾಮಗಾರಿಯ ರೂ.49.00 ಕೋಟಿಗಳಿಗೆ ಮತ್ತು ಮಾರ್ಕೋನಹಳ್ಳಿ ಜಲಾಶಯದ ಬಲದಂಡೆ ನಾಲೆಯ ಅಧುನೀಕರಣದ ಕಾಮಗಾರಿಯ ರೂ.17.00 ಕೋಟಿಗಳ ಡಿ.ಪಿ.ಆರ್. ಪ್ರಸ್ತಾವನೆಗೆ ಸರ್ಕಾರಿ ಆದೇಶ ಸಂ. ಜಸಂಇ 90 ಎನ್.ಹೆಚ್.ಪಿ. 2017 ಬೆಂಗಳೂರು ದಿನಾಂಕ : 19.08.2017 ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿರುತ್ತದೆ. ಸದರಿ ಕಾಮಗಾರಿಪ್ರಗತಿಯಲ್ಲಿರುತ್ತದೆ.

ಎಡದಂಡೆ ನಾಲೆಯ 28.80 ಕಿ.ಮೀ ಪೈಕಿ 20.00 ಕಿ.ಮೀ ಉದ್ದದ ಲೈನಿಂಗ್ ಕಾಮಗಾರಿ ಹಾಗೂ 58 ಸಂಖ್ಯೆಯ ಸಿ.ಡಿ ಕಾಮಗಾರಿಗಳ ಪೈಕಿ 46 ಸಂಖ್ಯೆಯ ಕಾಮಗಾರಿಗಳು ಪೂರ್ಣಗೊಂಡಿರುತ್ತದೆ ಮತ್ತು ಬಲದಂಡೆ ನಾಲೆಯ 18.80 ಕಿ.ಮೀ ಪೈಕಿ 16.50 ಕಿ.ಮೀ ಉದ್ದದ ಲೈನಿಂಗ್ ಕಾಮಗಾರಿಯ ಹಾಗೂ 32 ಸಂಖ್ಯೆಯ ಸಿ.ಡಿ ಕಾಮಗಾರಿಗಳ ಪೈಕಿ 26 ಸಂಖ್ಯೆಯ ಕಾಮಗಾರಿಗಳು ಪೂರ್ಣಗೊಂಡಿದೆ.

ಈ ಯೋಜನೆಗೆ 2018–19 ನೇ ಸಾಲಿಗೆ ರೂ. 7.00 ಕೋಟಿ ಅನುದಾನ ಒದಗಿಸಲಾಗಿದ್ದು, ಮಾರ್ಚ್–2019 ರ ಅಂತ್ಯದವರೆಗೆ ರೂ. 37.11 ಕೋಟಿ ವೆಚ್ಚ ಮಾಡಲಾಗಿದೆ. ಈ ಯೋಜನೆಯ ಪ್ರಾರಂಭದಿಂದ ಮಾರ್ಚ್–2019 ಅಂತ್ಯದವರೆಗೆ ಮಾಡಲಾದ ಕ್ರೋಢಿಕೃತ ವೆಚ್ಚ ರೂ. 39.07 ಕೋಟಿಗಳಾಗಿರುತ್ತದೆ.

33. ಹಾರಂಗಿ ಎಡದಂಡೆ ನಾಲೆಯ ಸರಪಳಿ 27.083 ಕಿಮೀ ನಿಂದ 149.385 ಕಿಮೀ ವರೆಗೆ ಸಿ.ಡಿ ಕೆಲಸಗಳ ಅಭಿವೃದ್ಧಿ ಹಾಗೂ ಮೆಕಾನಿಕಲ್ ಪೇವರ್ ಬಳಸಿ ಸಿಸಿ ಲೈನಿಂಗ್ ಅಳವಡಿಸುವ ಕಾಮಗಾರಿ.

ಹಾರಂಗಿ ಜಲಾಶಯವನ್ನು ಹಾರಂಗಿ ನದಿಗೆ ಅಡ್ಡಲಾಗಿ ನಿರ್ಮಿಸಲಾಗಿರುತ್ತದೆ. ಈ ಜಲಾಶಯಕ್ಕೆ ಎರಡು ನಾಲೆಗಳಿದ್ದು, ಹಾರಂಗಿ ಬಲ ದಂಡೆ ನಾಲೆ ಉದ್ದ 138 ಕಿಮೀ ಮತ್ತು ಸಾಮರ್ಥ್ಯ 1500 ಕ್ಯೂಸೆಕ್ಸ್ ಹಾಗೂ ಹಾರಂಗಿ ಎಡ ದಂಡೆ ನಾಲೆ ಉದ್ದ 153 ಕಿಮೀ ಮತ್ತು ಸಾಮರ್ಥ್ಯ 400 ಕ್ಯೂಸೆಕ್ಸ್ ಇರುತ್ತವೆ. ಹಾರಂಗಿ ಎಡ ದಂಡೆ ಕಾಲುವೆ ಅಡಿಯಲ್ಲಿ ಹರಿ ನೀರಾವರಿಯಲ್ಲಿ 29,472 ಎಕರೆ ಅಚ್ಚುಕಟ್ಟು ಪ್ರದೇಶವಿರುತ್ತದೆ. ಏತ ಯೋಜನೆಯಡಿಯಲ್ಲಿ 1,500 ಎಕರೆ ಅಚ್ಚುಕಟ್ಟು ಪ್ರದೇಶವಿರುತ್ತದೆ. ಹಾರಂಗಿ ಬಲ ದಂಡೆ ಕಾಲುವೆ ಅಡಿಯಲ್ಲಿ ಹರಿ ನೀರಾವರಿಯಲ್ಲಿ 71,539 ಎಕರೆ ಅಚ್ಚುಕಟ್ಟು ಪ್ರದೇಶವಿರುತ್ತದೆ. ಏತ ಯೋಜನೆಯಡಿಯಲ್ಲಿ 30,000 ಎಕರೆ ಅಚ್ಚುಕಟ್ಟು ಪ್ರದೇಶವಿರುತ್ತದೆ.

ಹಾರಂಗಿ ಎಡದಂಡೆ ನಾಲೆಯ ಸರಪಳಿ 27.083 ಕಿಮೀ ನಿಂದ 85.905 ಕಿಮೀ ವರೆಗೆ ನಾಲೆಯನ್ನು ಆಧುನೀಕರಣಗೊಳಿಸುವ ಕಾಮಗಾರಿಯ ರೂ.116.00 ಕೋಟಿಗಳ ಯೋಜನಾ ವರದಿಗೆ ಸರ್ಕಾರಿ ಆದೇಶ ಸಂಖ್ಯೆ ಜಸಂಇ 05 ಎಂಎಂಕೆ 2017, ಬೆಂಗಳೂರು ದಿನಾಂಕ 12.09.2017 ರಲ್ಲಿ ಆಡಳಿತಾತ್ಮಕ ಅನುಮೋದನೆ ದೊರೆತಿರುತ್ತದೆ. ಪ್ರಸ್ತುತ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.53.22 ಕಿ.ಮೀ ಪೈಕಿ 45.42 ಕಿ.ಮೀ ಉದ್ದದ ಲೈನಿಂಗ್ ಕಾಮಗಾರಿಯ ಹಾಗೂ 403 ಸಂಖ್ಯೆಯ ಸಿ.ಡಿ ಕಾಮಗಾರಿಗಳ ಪೈಕಿ 343 ಸಂಖ್ಯೆಯ ಕಾಮಗಾರಿಗಳು ಪೂರ್ಣಗೊಂಡಿದೆ.

ಹಾರಂಗಿ ಎಡದಂಡೆ ನಾಲೆಯ ಸರಪಳಿ 85.905 ಕಿಮೀ ನಿಂದ 149.385 ಕಿಮೀವರೆಗೆ ನಾಲೆಯನ್ನು ಆಧುನೀಕರಣಗೊಳಿಸುವ ಕಾಮಗಾರಿಯ ರೂ.62.15 ಕೋಟಿಗಳ ಯೋಜನಾ ವರದಿಗೆ ಸರ್ಕಾರಿ ಆದೇಶ ಸಂಖ್ಯೆ ಜಸಂಇ 05 ಎಂಎಂಕೆ 2017, ಬೆಂಗಳೂರು ದಿನಾಂಕ 12.09.2017 ರಲ್ಲಿ ಆಡಳಿತಾತ್ಮಕ ಅನುಮೋದನೆ ದೊರೆತಿರುತ್ತದೆ. ಪ್ರಸ್ತುತ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ. 63.00 ಕಿ.ಮೀ ಪೈಕಿ 30.00 ಕಿ.ಮೀ ಉದ್ದದ ಲೈನಿಂಗ್ ಕಾಮಗಾರಿಯ ಹಾಗೂ 323 ಸಂಖ್ಯೆಯ ಸಿ.ಡಿ ಕಾಮಗಾರಿಗಳ ಪೈಕಿ 62 ಸಂಖ್ಯೆಯ ಕಾಮಗಾರಿಗಳು ಪೂರ್ಣಗೊಂಡಿದೆ.

ಈ ಯೋಜನೆಗೆ 2018–19 ನೇ ಸಾಲಿಗೆ ರೂ. 13.00 ಕೋಟಿ ಅನುದಾನ ಒದಗಿಸಲಾಗಿದ್ದು, ಮಾರ್ಚ್–2019 ರ ಅಂತ್ಯದವರೆಗೆ ರೂ. 2.50 ಕೋಟಿ ವೆಚ್ಚ ಮಾಡಲಾಗಿದೆ. ಈ ಯೋಜನೆಯ ಪ್ರಾರಂಭದಿಂದ ಮಾರ್ಚ್–2019 ಅಂತ್ಯದವರೆಗೆ ಮಾಡಲಾದ ಕ್ರೋಢಿಕೃತ ವೆಚ್ಚ ರೂ. 2.76 ಕೋಟಿಗಳಾಗಿರುತ್ತದೆ.

34. ಸುವರ್ಣಾವತಿ ಜಲಾಶಯದ ಎಡದಂಡೆ ಹಾಗೂ ಬಲದಂಡೆ ನಾಲೆಗಳ ಅಭಿವೃದ್ಧಿ:

ಸುವರ್ಣಾವತಿ ಅಣೆಕಟ್ಟೆಯನ್ನು ಚಾಮರಾಜನಗರ ತಾಲ್ಲೂಕಿನ ಅಟ್ಟಿಗುಳಿಪುರ ಗ್ರಾಮದ ಹತ್ತಿರ ಸುವರ್ಣಾವತಿ ನದಿಗೆ ಅಡ್ಡಲಾಗಿ ನಿರ್ಮಿಸಲಾಗಿರುತ್ತದೆ. ಈ ಜಲಾಶಯದ ನೀರಿನ ಸಂಗ್ರಹಣಾ ಸಾರ್ಮರ್ಥ್ಯವು 1.259 ಟಿ.ಎಂ.ಸಿ ಇದ್ದು, ಸುಮಾರು 4246.90 ಹೆ (10494.09 ಎಕರೆ ಎಡದಂಡೆ, ಬಲದಂಡೆ ಹಾಗೂ ನದಿ ನಾಲೆಗಳನ್ನು ಸೇರಿಸಿ) ಅಚ್ಚಕಟ್ಟು ಪ್ರದೇಶದಲ್ಲಿ ಭತ್ತ ಹಾಗೂ ಅರೆ ನೀರಾವರಿ ಬೆಳೆಗಳಿಗೆ ನೀರು ಒದಗಿಸಲಾಗುತ್ತಿದೆ. ಸುವರ್ಣಾವತಿ ಅಣೆಕಟ್ಟೆಗೆ ಎರಡು ನಾಲೆಗಳಿದೆ. ಸುವರ್ಣಾವತಿ ಎಡದಂಡೆ ನಾಲೆಯು 5.40ಕಿ.ಮೀ ಉದ್ದವಿದ್ದು, 162 ಹೆ ಅಚ್ಚುಕಟ್ಟ ಪ್ರದೇಶವನ್ನು ಹೊಂದಿದೆ ಹಾಗೂ ಸುವರ್ಣಾವತಿ ಬಲದಂಡೆ ನಾಲೆಯು 19.90 ಕಿ.ಮೀ ಉದ್ದವಿದ್ದು, 2671 ಹೆ ಅಚ್ಚುಕಟ್ಟ ಪ್ರದೇಶವನ್ನು ಹೊಂದಿದೆ.

ಸುವರ್ಣಾವತಿ ಎಡದಂಡೆ ನಾಲೆಯು ಒಟ್ಟು 5.40ಕಿ.ಮೀ ಉದ್ದವಿದ್ದು, ಈ ಪೈಕಿ ಸುಸ್ಥಿಯಲ್ಲಿರದ 4.30 ಕಿ.ಮೀ ಉದ್ದಕ್ಕೆ ಸಿ.ಸಿ.ಲೈನಿಂಗ್ ಅನ್ನು ಹಾಲಿ ಇರುವ ನಾಲೆಯ ಸೆಕ್ಷನ್‌ಗೆ ತಕ್ಕಂತೆ ನಿರ್ವಹಿಸುವ ಹಾಗೂ ಬಲದಂಡೆಯಲ್ಲಿರುವ ನಾಲೆಯು 19.90 ಕಿ.ಮೀ ಉದ್ದವಿದ್ದು, ಈ ಪೈಕಿ ಸುಸ್ಥಿಯಲ್ಲಿರದ 3.380 ಕಿ.ಮೀ ನಲ್ಲಿ ವಿವಿಧ ಸರಪಳಿಗಳಲ್ಲಿ ಸಿ.ಸಿ.ಲೈನಿಂಗ್ ಅನ್ನು ಅನುಮೋದಿತ ನಾಲೆಯ ಸೆಕ್ಷನ್‌ಗೆ ತಕ್ಕಂತೆ ಮಾಡುವುದು ಹಾಗೂ 16 ಅಡ್ಡಮೋರಿಗಳ ಮರು ನಿರ್ಮಾಣ, ಮತ್ತು 7 ಅಡ್ಡಮೋರಿಗಳ ದುರಸ್ಥಿ ಕೆಲಸಗಳನ್ನು ಒಳಗೊಂಡಿರುವ ಕಾಮಗಾರಿಯ ರೂ. 3.65 ಕೋಟಿ ಮೊತ್ತದ ಅಂದಾಜಿಗೆ ನಿಗಮದ ದಿನಾಂಕ: 31.12.2016 ರ ಆದೇಶದಲ್ಲಿ ಆಡಳಿತಾತ್ಮಕ ಅನುಮೋದನೆ ದೊರೆತಿರುತ್ತದೆ. ಸದರಿ ಕಾಮಗಾರಿಯು ಪೂರ್ಣಗೊಂಡಿರುತ್ತದೆ.

ಈ ಯೋಜನೆಗೆ 2018–19 ನೇ ಸಾಲಿಗೆ ರೂ.1.50 ಕೋಟಿ ಅನುದಾನ ಒದಗಿಸಲಾಗಿದ್ದು, ಮಾರ್ಚ್–2019 ರ ಅಂತ್ಯದವರೆಗೆ ರೂ. 2.78 ಕೋಟಿ ವೆಚ್ಚ ಮಾಡಲಾಗಿದೆ. ಈ ಯೋಜನೆಯ ಪ್ರಾರಂಭದಿಂದ ಮಾರ್ಚ್–2019 ಅಂತ್ಯದವರೆಗೆ ಮಾಡಲಾದ ಕ್ರೋಢಿಕೃತ ವೆಚ್ಚ ರೂ.2.78 ಕೋಟಿಗಳಾಗಿರುತ್ತದೆ.

35. ಹೆಬ್ಬಳ್ಳ ನಾಲೆಗಳಿಗೆ ಸಿಸಿ ಲೈನಿಂಗ್ ಕಾಮಗಾರಿ:

ಹೆಬ್ಬಳ್ಳ ಜಲಾಶಯವನ್ನು ಮೈಸೂರು ಜಿಲ್ಲೆಯ ಹೆಗ್ಗಡದೇವನ ಕೋಟೆ ತಾಲ್ಲೂಕಿನ ಹೆಬ್ಬಳ್ಳ ಗ್ರಾಮದ ಹತ್ತಿರ ಹೆಬ್ಬಳ್ಳ ಹಳ್ಳಕ್ಕೆ ಅಡ್ಡಲಾಗಿ ನಿರ್ಮಿಸಲಾಗಿದೆ. ಈ ಯೋಜನೆಯ ಮೂಲ ಅಂದಾಜು ರೂ.15.08 ಲಕ್ಷಗಳಾಗಿದ್ದು, ಈ ಯೋಜನೆಯ ಕಾಮಗಾರಿಯನ್ನು 1958ರಲ್ಲಿ ಪ್ರಾರಂಭಿಸಿ 1966 ರಲ್ಲಿ ಪೂರ್ಣಗೊಂಡಿದೆ ಹಾಗೂ 1972ರಿಂದ ಕಾರ್ಯಗತಗೊಳಿಸಲಾಗಿದೆ. ಈ ಯೋಜನೆಯ ಪರಿಷ್ಕೃತ ಅಂದಾಜು ಮೊತ್ತ ರೂ. 58.00 ಲಕ್ಷಗಳು. ಈ ಯೋಜನೆಯ ಅಕ್ಷಾಂಶ Latitude-12º -03 ' -42" NರೇಖಾಂಶLongitude -76 º -20' –00" ಇ.ಈ ಯೋಜನೆಯು 145.00 ಚದರ ಕಿ.ಮೀ ಜಲಾನಯನ ಪ್ರದೇಶ ಹೊಂದಿದೆ, ಜಲಾಶಯವು ಮಣ್ಣಿನ ಏರಿಯಿಂದ ನಿರ್ಮಿಸಿದ್ದು, 996.7 ಮೀಟರ್ ಉದ್ದ ಹಾಗೂ 19.2 ಮೀಟರ್ ಎತ್ತರ ಮತ್ತು ಏರಿಯ ಮೇಲೆ ಅಳತೆ 4.5 ಮೀಟರ್ ಇರುತ್ತದೆ, ಕೋಡಿ ಉದ್ದ 134.16 ಮೀಟರ್ ಇದ್ದು, 10982 ಕ್ಯುಸೆಕ್ಸ್ ನೀರನ್ನು ಹೊರಬಿಡುವ ಸಾಮರ್ಥ್ಯ ಹೊಂದಿರುತ್ತದೆ. ಜಲಾಶಯದ ಒಟ್ಟು ಸಂಗ್ರಹಣಾ ಸಾಮರ್ಥ್ಯ 423 ಎಂ.ಸಿ.ಎಫ್.ಟಿ (0.423 ಟಿ.ಎಂ.ಸಿ) 381 ಎಂ.ಸಿ.ಎಫ್.ಟಿ ಲೈವ್ ಸ್ಟೋರೆಜ್ ಮತ್ತು 42 ಎಂ.ಸಿ.ಎಫ್.ಟಿ ಡೆಡ್ ಸ್ಟೋರೆಜ್ ಇರುತ್ತದೆ.

ಈ ಜಲಾಶಯಕ್ಕೆ ಒಂದು ಹೆಬ್ಬಳ್ಳ ಎಡದಂಡೆ ನಾಲೆಯನ್ನುಮಾತ್ರ ಹೊಂದಿರುತ್ತದೆ. ನಾಲೆಯು 27.20 ಕಿ.ಮೀ ಉದ್ದ ಇದ್ದು, 110 ಕ್ಯುಸೆಕ್ಸ್ ನೀರು ಹರಿಸುವ ಸಾಮರ್ಥ್ಯ ಹೊಂದಿರುತ್ತದೆ ಮತ್ತು 3050 ಎಕರೆ ಅಚ್ಚುಕಟ್ಟು ಪ್ರದೇಶಕ್ಕೆ ನೀರನ್ನು ಒದಗಿಸುವ ಸಾಮರ್ಥ್ಯ ಹೊಂದಿರುತ್ತದೆ. ಈ ಜಲಾಶಯದ ಅಚ್ಚುಕಟ್ಟಿಗೆ ನೀರಾವರಿ ಬೆಳೆ ಭತ್ತಕ್ಕೆ ವಿನ್ಯಾಸಗೊಳಿಸಲಾಗಿದೆ.

ಹೆಬ್ಬಳ್ಳ ಎಡದಂಡೆ ನಾಲೆಯು 27.20 ಕಿ.ಮೀ ಉದ್ದ ಇದ್ದು ಬಹಳ ಹಿಂದೆ ನಿರ್ಮಿಸಿರುವುದರಿಂದ ನೈಸರ್ಗಿಕ ಕಾರಣಗಳಾದ ಮಳೆ ಹಾಗೂ ನೀರಿನ ಹರಿವಿನಿಂದ ಶಿಥಿಲಗೊಂಡಿರುವುದರಿಂದ, ಹೆಬ್ಬಳ್ಳ ಎಡದಂಡೆ ನಾಲೆಯ ಸರಪಳಿ 0.00 ಕಿಮೀ ಯಿಂದ 27.20 ಕಿ.ಮೀ ವರೆಗೆ ಆಧುನೀಕರಣ ಕಾಮಗಾರಿಯನ್ನು ಕೈಗೊಳ್ಳಲು ಉದ್ದೇಶಿಸಲಾಗಿರುತ್ತದೆ. ಸದರಿ ಕಾಮಗಾರಿಯ ರೂ. 15.25 ಕೋಟಿ ಮೊತ್ತದ ಅಂದಾಜಿಗೆ ಸರ್ಕಾರಿ ಆದೇಶ ಸಂಖ್ಯೆ ಜಸಂಇ 02 ಎಂಎಂಕೆ 2016 ದಿನಾಂಕ: 20.02.2017 ರಲ್ಲಿ ಆಡಳಿತಾತ್ಮಕ ಅನುಮೋದನೆ ದೊರೆತಿರುತ್ತದೆ.ಪ್ರಸ್ತುತ ಕಾಮಗಾರಿ ಪ್ರಗತಿಯಲ್ಲಿರುತ್ತದೆ.

ಸದರಿ ನಾಲೆಯ ಜಂಗಲ್ ಮತ್ತು ಹೂಳೂ ತೆಗೆಯು ಕಾಮಗಾರಿ ಪೂರ್ಣಗೊಂಡಿದೆ. 27.20 ಕಿ.ಮೀ ಪೈಕಿ 1.00 ಕಿ.ಮೀ ಉದ್ದದ ಲೈನಿಂಗ್ ಕಾಮಗಾರಿಯು ಪೂರ್ಣಗೊಂಡಿದೆ.

ಈ ಯೋಜನೆಗೆ 2018–19 ನೇ ಸಾಲಿಗೆ ರೂ. 1.00 ಕೋಟಿ ಅನುದಾನ ಒದಗಿಸಲಾಗಿದ್ದು, ಮಾರ್ಚ್–2019 ರ ಅಂತ್ಯದವರೆಗೆ ರೂ. 0.03 ಕೋಟಿ ವೆಚ್ಚ ಮಾಡಲಾಗಿದೆ. ಈ ಯೋಜನೆಯ ಪ್ರಾರಂಭದಿಂದ ಮಾರ್ಚ್–2019 ಅಂತ್ಯದವರೆಗೆ ಮಾಡಲಾದ ಕ್ರೋಢಿಕೃತ ವೆಚ್ಚ ರೂ. 0.03 ಕೋಟಿಗಳಾಗಿರುತ್ತದೆ.

36. ಹೊಸಹೊಳಲು ಎಡಮೇಲ್ದಂಡೆ ಕಾಲುವೆಯ ಸರಪಳಿ 0.00 ರಿಂದ 15.90 ಕಿಮೀ ವರೆಗೆ ಸಿಸಿ ಲೈನಿಂಗ್ ಮತ್ತು ಅಡ್ಡಮೋರಿ ನಿರ್ಮಾಣ ಕಾಮಗಾರಿ

ಹೊಸಹೊಳಲು ದೊಡ್ಡಕೆರೆಯು ತಾಲ್ಲೂಕು ಕೇಂದ್ರವಾದ ಕೃಷ್ಣರಾಜಪೇಟೆಯಿಂದ 6 ಕಿ.ಮೀ ದೂರದಲ್ಲಿದೆ. ಹೊಸಹೊಳಲು ಕೆರೆಯು ಸುಮಾರು 60 ವರ್ಷಗಳ ಹಿಂದೆ ಕಟ್ಟಲ್ಪಟ್ಟಿರುತ್ತದೆ. ಕೆರೆಯ ನಾಲೆಗಳಿಂದ ಸುಮಾರು 550 ಎಕರೆ ಅಚ್ಚುಕಟ್ಟು ಪ್ರದೇಶವು ನೀರಾವರಿ ಸೌಲಭ್ಯವನ್ನು ಹೊಂದಿರುತ್ತದೆ. ಸದರಿ ಕೆರೆಗೆ ಹೇಮಾವತಿ ಎಡದಂಡೆ ನಾಲೆಯ ಬಸಿ ನೀರು ಬರುತ್ತಿದು, 51 ಕ್ಯೂಸೆಕ್ಸ್‌ಗಳಷ್ಟು ಬೀಳುವ ನೀರನ್ನು ಉಪಯೋಗಿಸಿಕೊಳ್ಳಬಹುದಾಗಿದೆ.

ಹೇಮಾವತಿ ಎಡದಂಡೆ ವಿತರಣಾ ನಾಲಾ 62 ರ 1,230 ಎಕರೆ ಹಾಗೂ ವಿತರಣಾ ನಾಲೆ 64 ರ 2,760 ಎಕರೆ, ಅಂದರೆ ಒಟ್ಟಾರೆ 3,960 ಎಕರೆ ವಂಚಿತ ಕೆರೆಯ ಹೆಚ್ಚುವರಿ 51.00 ಕ್ಯೂಸೆಕ್ಸ್ ನೀರನ್ನು ಬಳಸಲು ಹೊಸಹೊಳಲು ಎಡಮೇಲ್ದಂಡೆ ಕಾಲುವೆ ಸರಪಳಿ 0.00 ರಿಂದ 17.00 ಕಿಮೀ ನಿರ್ಮಾಣ ಕಾಮಗಾರಿ ರೂ.7.50 ಕೋಟಿಗಳಿಗೆ ಆಡಳಿತಾತ್ಮಕ ಮಂಜೂರಾತಿಯನ್ನು ಸರ್ಕಾರದ ಆದೇಶ ಸಂಖ್ಯೆ: ನೀನಿ/ಎಸ್.ಹೆಚ್.ಪಿ/98/23–11–1998 ರಲ್ಲಿ ನೀಡಿರುತ್ತದೆ.

ಪ್ರಸ್ತುತ ಹೊಸಹೊಳಲು ಎಡಮೇಲ್ದಂಡೆ ನಾಲೆ ಸರಪಳಿ 0.00 ರಿಂದ 15.90 ಕಿಮೀ ವರೆಗೆ ಸಿಸಿ ಲೈನಿಂಗ್ ಕಾಮಗಾರಿಯನ್ನು ಹೊಸಹೊಳಲು ಎಡಮೇಲ್ದಂಡೆ ನಾಲೆಯ ಸರಪಳಿ 0.00 ರಿಂದ 11.00 ಕಿಮೀ ವರೆಗೆ ಹಾಗೂಸರಪಳಿ 11.00 ರಿಂದ 15.90 ಕಿಮೀ ವರೆಗೆ ಎರಡು ಹಂತದಲ್ಲಿ ಕೈಗೊಳ್ಳಲು ಉದ್ದೇಶಿಸಿದ್ದು, ಹೊಸಹೊಳಲು ಎಡಮೇಲ್ದಂಡೆ ನಾಲೆಯ ಸರಪಳಿ 0.00 ರಿಂದ 11.00 ಕಿಮೀ ವರೆಗಿನ ಭಾಗದಲ್ಲಿ ಸಿಸಿ ಲೈನಿಂಗ್ ಮತ್ತು ಅಡ್ಡಮೋರಿ ನಿರ್ಮಾಣ ಕಾಮಗಾರಿಯ ರೂ. 6.25 ಕೋಟಿ ಮೊತ್ತದ ಡಿ.ಪಿ.ಆರ್‌ಗೆ ಸರ್ಕಾರದ ಆದೇಶ ಸಂಖ್ಯೆ: ಜಸಂಇ 45 ಎನ್‌ಹೆಚ್‌ಪಿ 2017 ದಿನಾಂಕ 12.06.2017 ರಲ್ಲಿ ಆಡಳಿತಾತ್ಮಕ ಅನುಮೋದನೆ ದೊರೆತಿದ್ದು, ಟೆಂಡರ್ ಪ್ರಕ್ರಿಯೆಯಲ್ಲಿದೆ.

ಉಳಿದಂತೆ ಹೊಸಹೊಳಲು ಎಡಮೇಲ್ದಂಡೆ ನಾಲೆಯ ಸರಪಳಿ 11.00 ರಿಂದ 15.90 ಕಿಮೀ ವರೆಗಿನ ಕಾಮಗಾರಿಯನ್ನು ರೂ. 10.50 ಕೋಟಿಗಳಿಗೆ ತಯಾರಿಸಿ ಆಡಳಿತಾತ್ಮಕ ಅನುಮೋದನೆ ಕೋರಿ ಸರ್ಕಾರಕ್ಕೆ ಸಲ್ಲಿಸಲಾಗಿದೆ. ಜಲ ಸಂಪನ್ಮೂಲ ಇಲಾಖೆಯಿಂದ ತೆಗೆದುಕೊಳ್ಳಲಾದ ಕಾಮಗಾರಿಗಳ ಕಾರ್ಯಭಾರ ಈಗಾಗಲೇ ಅಧಿಕವಾಗಿರುವುದರಿಂದ ಸದರಿ ಕಾಮಗಾರಿಯ ಪ್ರಸ್ತಾವನೆಯನ್ನು ಕೈಬಿಡುವಂತೆ ಸರ್ಕಾರವು ಸೂಚಿಸಿರುತ್ತದೆ.

ಈ ಯೋಜನೆಗೆ 2018–19 ನೇ ಸಾಲಿಗೆ ರೂ. 2.00 ಕೋಟಿ ಅನುದಾನ ಒದಗಿಸಲಾಗಿದ್ದು, ಮಾರ್ಚ್–2019 ರ ಅಂತ್ಯದವರೆಗೆ ರೂ. 0.09 ಕೋಟಿ ವೆಚ್ಚ ಮಾಡಲಾಗಿದೆ. ಈ ಯೋಜನೆಯ ಪ್ರಾರಂಭದಿಂದ ಮಾರ್ಚ್–2019 ಅಂತ್ಯದವರೆಗೆ ಮಾಡಲಾದ ಕ್ರೋಢಿಕೃತ ವೆಚ್ಚ ರೂ. 0.09 ಕೋಟಿಗಳಾಗಿರುತ್ತದೆ.

37. ಹಾರೋಹಳ್ಳಿ ಮೇಲ್ದಂಡೆ ನಾಲೆಯ ಆಧುನೀಕರಣ ಕಾಮಗಾರಿ

ವಿರಿಜಾ ನಾಲೆಯ 69.00 ಕಿ.ಮೀ ನಿಂದ ಹಾರೋಹಳ್ಳಿ ಮೇಲ್ದಂಡೆ ನಾಲೆ ಪ್ರಾರಂಭವಾಗುತ್ತಿದ್ದು, ಈ ನಾಲೆಯನ್ನು 1970 ರಲ್ಲಿ ನಿರ್ಮಾಣ ಮಾಡಲಾಗಿದೆ. ಇದರ ಉದ್ದ 26.00 ಕಿ.ಮೀ ಇದ್ದು, ನಾಲೆಯ ಸಾಮಾರ್ಥ್ಯ 91 ಕ್ಯೂಸೆಕ್ಸ್ ಇರುತ್ತದೆ. ಈ ನಾಲೆಯು ವರುಣಾ ವಿದಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಮೈಸೂರು ಜಿಲ್ಲೆಯ ತಿ. ನರಸೀಪುರ ತಾಲ್ಲೂಕಿನ 1821 ಎಕರೆ (736.94ಹೆ) ಅಚ್ಚುಕಟ್ಟು ಪ್ರದೇಶಕ್ಕೆ ನೀರನ್ನು ಒದಗಿಸುತ್ತದೆ.

ಹಾರೋಹಳ್ಳಿ ಮೇಲ್ದಂಡೆ ನಾಲೆಯು ಹಳೆಯದಾಗಿರುವುದರಿಂದ ನಾಲೆಯ ಸ್ವರೂಪವು ಹಲವು ಕಡೆ ಅಗಲವಾಗಿದ್ದು, ನಾಲೆಯ ಪಾರ್ಶ್ವಗಳು ಹಲವು ಕಡೆ ಕೊರೆದಿರುತ್ತದೆ. ಹಲವು ಕಡೆ ನಿಗದಿತ ಅಗಲಕ್ಕಿಂತ ಜಾಸ್ತಿ ಅಗಲವಿರುವುದರಿಂದ ನಾಲೆಯ ಹರಿವಿನ ವೇಗವು ಕಡಿಮೆಯಾಗಿದ್ದು, ಇದರಿಂದ ನಾಲೆಯಲ್ಲಿ ಹೂಳು ತುಂಬಿರುತ್ತದೆ. ಆದುದರಿಂದ ಹಾರೋಹಳ್ಳಿ ಮೇಲ್ದಂಡೆ ನಾಲೆಯ ಆಧುನೀಕರಣ ಕಾಮಗಾರಿಯನ್ನು ಕೈಗೊಳ್ಳಲು ಉದ್ದೇಶಿಸಲಾಗಿದೆ.ಸದರಿ ವಿವರವಾದ ಯೋಜನಾ ವರದಿಗೆ ಸರ್ಕಾರಿ ಆದೇಶ ಸಂಖ್ಯೆ: ಜಸಂಇ 10 ಎಂಎಂಕೆ 2017 ಬೆಂಗಳೂರು, ದಿನಾಂಕ: 19.08.2017 ರಲ್ಲಿ ರೂ, 27.80 ಕೋಟಿಗಳಿಗೆ ಆಡಳಿತಾತ್ಮಕ ಅನುಮೋದನೆ ದೊರೆತಿರುತ್ತದೆ.

ಸದರಿ ಕಾಮಗಾರಿಪ್ರಗತಿಯಲ್ಲಿದ್ದು, 26.00 ಕಿ.ಮೀ ಪೈಕಿ 5.00 ಕಿ.ಮೀ ಉದ್ದದ ಲೈನಿಂಗ್ ಕಾಮಗಾರಿಯು ಪೂರ್ಣಗೊಂಡಿದೆ. 11 ಸಂಖ್ಯೆಯ ಸಿ.ಡಿ ಕಾಮಗಾರಿಗಳು ಪೂರ್ಣಗೊಂಡಿದೆ. ಉಳಿಕೆ ಕಾಮಗಾರಿಗಳು ಪ್ರಗತಿಯಲ್ಲಿದೆ.

ಈ ಯೋಜನೆಗೆ 2018–19 ನೇ ಸಾಲಿಗೆ ರೂ. 2.00 ಕೋಟಿ ಅನುದಾನ ಒದಗಿಸಲಾಗಿದ್ದು, ಮಾರ್ಚ್–2019 ರ ಅಂತ್ಯದವರೆಗೆ ರೂ. 2.16 ಕೋಟಿ ವೆಚ್ಚ ಮಾಡಲಾಗಿದೆ. ಈ ಯೋಜನೆಯ ಪ್ರಾರಂಭದಿಂದ ಮಾರ್ಚ್–2019 ಅಂತ್ಯದವರೆಗೆ ಮಾಡಲಾದ ಕ್ರೋಢಿಕೃತ ವೆಚ್ಚ ರೂ. 3.83 ಕೋಟಿಗಳಾಗಿರುತ್ತದೆ.

38. ಮಾಧವಮಂತ್ರಿ ಅಣೆಕಟ್ಟು ನಾಲೆಯ ಸರಪಳಿ 21ನೇ ಕಿ.ಮೀ ನಿಂದ ಸರಪಳಿ 29.20 ಕಿ.ಮೀ ವರೆಗೆ ಆಧುನೀಕರಣ ಕಾಮಗಾರಿ.

ಮಾಧವಮಂತ್ರಿ ಅಣೆಕಟ್ಟು ನಾಲೆಯ ಸರಪಳಿ: 21ನೇ ಕಿ.ಮೀ ನಿಂದ ಸರಪಳಿ 29.20 ಕಿ.ಮೀ ಹಾಗೂ ಅಡ್ಡಮೋರಿಗಳು ದುಸ್ಥಿತಿಯಲ್ಲಿರುವ ಕಾರಣ ನಾಲೆಯ ಕೊನೆ ಭಾಗದ ಅಚ್ಚುಕಟ್ಟು ಪ್ರದೇಶಕ್ಕೆ ನೀರು ಹರಿಸುವುದು ಕಷ್ಟ ಸಾಧ್ಯವಾಗಿರುತ್ತದೆ. ನಾಲೆಯ ಬದುಗಳಲ್ಲಿನ ನೀರು ಸೊರುವಿಕೆ, ನಾಲೆಯ ತಳಭಾಗದ ಸವೆತದಿಂದ ಹರಿವಿನ ಆಳವು ಹೆಚ್ಚಾಗಿರುವುದು, ಪೈಪ್ ಕಲ್ವರ್ಟ್‌ಗಳು ಮುಚ್ಚಿಹೋಗಿರುವುದು, ಕಾಲುವೆಯ ಏರಿ ಭಾಗಗಳಲ್ಲಿ ನೀರಿನ ಹರಿವಿನ ಮಟ್ಟ ಹೆಚ್ಚಾಗಿರುವುದು, ಕಾಲುವೆಗಳ ಅಗಲ ಕಡಿಮೆ ಆಗಿರುವುದು ಹಾಗೂ ಅಡ್ಡಮೋರಿಗಳು ದುಸ್ಥಿತಿಯಲ್ಲಿರುವ ಕಾರಣ ಕಾಲುವೆಗಳ ಆಧುನೀಕಣವನ್ನು ಕೈಗೆತ್ತಿಕೊಳ್ಳುವುದು ಅತ್ಯವಶ್ಯಕವಾಗಿರುತ್ತದೆ. ಆದುದರಿಂದ ಮಾಧವಮಂತ್ರಿ ಅಣೆಕಟ್ಟು ನಾಲೆಯ ಸರಪಳಿ 21ನೇ ಕಿ.ಮೀ ನಿಂದ ಸರಪಳಿ 29.20 ಕಿ.ಮೀ ವರೆಗೆ ಆಧುನೀಕರಣ ಕಾಮಗಾರಿಯನ್ನು ಕೈಗೊಳ್ಳಲು ಉದ್ದೇಶಿಸಲಾಗಿದೆ. ಸದರಿ ಕಾಮಗಾರಿಯ ಅಂದಾಜು ಮೊತ್ತವಾದ ರೂ.8.27 ಕೋಟಿಗಳಿಗೆ ಸರ್ಕಾರದ ಆದೇಶ ಸಂ. ಜಸಂಇ 10 ಎಂಎಂಕೆ 2018, ಬೆಂಗಳೂರು, ದಿನಾಂಕ: 24.01.2018ರಲ್ಲಿ ಆಡಳಿತಾತ್ಮಕ ಅನುಮೋದನೆ ದೊರೆತಿರುತ್ತದೆ. ಸದರಿ ಕಾಮಗಾರಿಯು ಟೆಂಡೆರ್ ಪ್ರಕ್ರಿಯೆಯಲ್ಲಿರುತ್ತದೆ.

ಈ ಯೋಜನೆಗೆ 2018–19 ನೇ ಸಾಲಿಗೆ ರೂ. 1.00 ಕೋಟಿ ಅನುದಾನ ಒದಗಿಸಲಾಗಿದೆ.

39. ಬಂಗಾರದೊಡ್ಡಿ ನಾಲೆಯ ಆಧುನೀಕರಣ ಕಾಮಗಾರಿ

ಕೃಷ್ಣರಾಜಸಾಗರ ಜಲಾಶಯದಕೆಳಭಾಗದಲ್ಲಿ 10 ಕಿ.ಮೀ ದೂರದಲ್ಲಿ ಶ್ರೀರಂಗಪಟ್ಟಣದ ಪಶ್ಚಿಮವಾಹಿನಿಯ ಬಳಿ 16ನೇ ಶತಮಾನದಲ್ಲಿ ಕಾವೇರಿ ನದಿಗೆ ಅಡ್ಡಲಾಗಿ ಬಂಗಾರದೊಡ್ಡಿ ಅಣೆಕಟ್ಟನ್ನು ನಿರ್ಮಿಸಲಾಗಿದೆ. ಈ ಅಣೆಕಟ್ಟನ್ನು ನಾಲೆಯ ಉದ್ದವು 8.20 ಕಿ.ಮೀ. ಇದ್ದು, 32 ಕ್ಯೂಸೆಕ್ಸ್ ನೀರು ಹರಿವಿನ ಸಾಮರ್ಥ್ಯ ಹೊಂದಿರುತ್ತದೆ. ಈ ನಾಲೆಯಿಂದ ಶ್ರೀರಂಗಪಟ್ಟಣದ ತಾಲ್ಲೂಕಿನ 996 ಎಕರೆ ಅಚ್ಚುಕಟ್ಟು ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲಾಗಿದೆ. 996 ಎಕರೆ ಅಚ್ಚುಕಟ್ಟು ಪ್ರದೇಶದಲ್ಲಿ 862 ಎಕರೆ ಅಚ್ಚುಕಟ್ಟು ಪ್ರದೇಶಕ್ಕೆ ನೀರನ್ನು ಒದಗಿಸಲಾಗುತ್ತಿದ್ದು, 134 ಎಕರೆಯಷ್ಟು ಭಾದಿತ ಅಚ್ಚುಕಟ್ಟು ಪ್ರದೇಶವಾಗಿರುತ್ತದೆ. ಈ ನಾಲೆಯು ಶ್ರೀರಂಗಪಟ್ಟಣದ ಬಳಿ ಕಾವೇರಿ ನದಿಯ ದಕ್ಷಿಣ ಶಾಖೆಯನ್ನು ಹಾದು ಹೋಗುತ್ತಿದ್ದು, ಸರಪಳಿ 2.20 ಕಿ.ಮೀ ನಲ್ಲಿ ಮೇಲ್ಗಾಲುವೆಯನ್ನು ಕಲ್ಲುಕಂಬಗಳಿಂದ ಹಾಗೂ ಕಲ್ಲು ಚಪ್ಪಡಿಗಳಿಂದ ನಿರ್ಮಿಸಲಾಗಿರುತ್ತದೆ. ಈ ರೀತಿಯ ನಿರ್ಮಾಣವು ಅಂದಿನ ಕಾಲದಲ್ಲಿ ಪ್ರಪಂಚದ ಎರಡನೆಯದಾಗಿ ಹಾಗೂ ಇದು ವಿಶ್ವ ವಿಖ್ಯಾತಿ ಹೊಂದಿರುವ ಕಟ್ಟಡವಾಗಿರುತ್ತದೆ. ಅಲ್ಲದೆ, ಈ ಹಿಂದೆ ಕಲ್ಲು / ಇಟ್ಟಿಗೆಗಳಿಂದ ನಿರ್ಮಿಸಿರುವ ಅಚಿಡಿಣ ಛಡಿಜಝಜ ಖಂಚಿಜ ಛಡಿಜಝಜ ಖಣಂಜಡಿ ಂಚಿಚಿಝಜ ಂಡಣಜಜಣಛಿಣ, ಟಣಛಿಜ ಗಳು ಹಳೆಯಕಾಲದವಾಗಿದ್ದು, ತುಂಬಾ ಶಿಥಿಲಾವಸ್ಥೆಯಲ್ಲಿರುತ್ತವೆ. ನಾಲೆಯಲ್ಲಿ ನೀರನ್ನು ಸಮರ್ಪಕವಾಗಿ ಹರಿಸಲು ಹಾಗೂ ಭಾದಿತ ಅಚ್ಚುಕಟ್ಟು ಪ್ರದೇಶಕ್ಕೆ ನೀರನ್ನು ಒದಗಿಸುವ ಸಲುವಾಗಿ ಈ ನಾಲೆಗೆ ಮ್ಯಾನ್ಯೂಯಲ್ ಲೈನಿಂಗ್ ಒದಗಿಸಿ ಶಿಥಿಲವಾಗಿರುವ ಅಡ್ಡಮೋರಿಗಳ ಪುನರ್ ನಿರ್ಮಿಸಿ /ಅಭಿವೃದ್ಧಿಗೊಳಿಸುವ ಸಲುವಾಗಿ ಬಂಗಾರದೊಡ್ಡಿ ನಾಲೆಯ ಆಧುನೀಕರಣ ಕಾಮಗಾರಿಯ ರೂ.14.00 ಕೋಟಿಗಳ ಯೋಜನಾ ವರದಿಗೆ ಸರ್ಕಾರಿ ಆದೇಶ ಸಂಖ್ಯೆ ಜಸಂಇ 163 ಎಂಎಂಕೆ 2017, ಬೆಂಗಳೂರು, ದಿ: 20.02.2018ರಲ್ಲಿ ಆಡಳಿತಾತ್ಮಕ ಅನುಮೋದನೆ ದೊರೆತಿರುತ್ತದೆ. ಪ್ರಸ್ತುತ ಕಾಮಗಾರಿಯು ಟೆಂಡರ್ ಪ್ರಕ್ರಿಯೆಯಲ್ಲಿರುತ್ತದೆ.

ಈ ಯೋಜನೆಗೆ 2018–19 ನೇ ಸಾಲಿಗೆ ರೂ. 2.00 ಕೋಟಿ ಅನುದಾನ ಒದಗಿಸಲಾಗಿದೆ.

ಇತರೆ ಯೋಜನೆಗಳು:

1. Installation of combined lift and fully automated drip irrigation system in 4 villages of Nanjangudu taluk, Mysore District:

ಡಿ.ಡಿ.ಅರಸು ನಾಲೆಯ ಡಿಸ್ಟ್ರಿಬ್ಯೂಟರಿ–26 ರ ಲ್ಯಾಟರಲ್–10 ರ ಕೊನೆಯ ಭಾಗದ ಬಾಧಿತ ಪ್ರದೇಶಕ್ಕೆ ಹನಿ ನೀರಾವರಿ ಮೂಲಕ ಕಬಿನಿ ನದಿಯಿಂದ ನೀರನ್ನು ಒದಗಿಸುವ ಯೋಜನೆಯ ರೂ.15.00 ಕೋಟಿ ಮೊತ್ತದ ಡಿ.ಪಿ.ಆರ್‌ಗೆ ನಬಾರ್ಡ್ RIDF-XXI ಅಡಿಯಲ್ಲಿ ಸರ್ಕಾರದ ದಿನಾಂಕ:01.03.2016 ರ ಆದೇಶದಲ್ಲಿ ಆಡಳಿತಾತ್ಮಕ ಅನುಮೋದನೆ ದೊರತಿರುತ್ತದೆ.180 ಹೆ. ಪ್ರದೇಶಕ್ಕೆ ಪೈಪ್ ಲೈನ್ ನೆಟ್‌ವರ್ಕ್ ಹಾಗೂ ಇನ್‌ಟೇಕ್ ಚಾನೆಲ್ ಹಾಗೂ ಜಾಕ್‌ವೆಲ್‌ಗೆ ಮಣ್ಣು ಅಗೆತ ಕಾಮಗಾರಿ ಪೂರ್ಣಗೊಂಡಿದ್ದು, ಪ್ರಸ್ತುತ ರೈಸಿಂಗ್ ಮೈನ್ ಕಾಮಗಾರಿ ಪ್ರಗತಿಯಲ್ಲಿದೆ. ಬಾಕಿ ಉಳಿದ ಕಾಮಗಾರಿಗಳು ಪ್ರಗತಿಯಲ್ಲಿವೆ.

ಈ ಯೋಜನೆಗೆ 2018–19 ನೇ ಸಾಲಿಗೆ ರೂ. 12.35 ಕೋಟಿ ಅನುದಾನ ಒದಗಿಸಲಾಗಿದ್ದು, ಮಾರ್ಚ್–2019 ರ ಅಂತ್ಯದವರೆಗೆ ರೂ. 6.57 ಕೋಟಿ ವೆಚ್ಚ ಮಾಡಲಾಗಿದೆ. ಈ ಯೋಜನೆಯ ಪ್ರಾರಂಭದಿಂದ ಮಾರ್ಚ್–2019 ಅಂತ್ಯದವರೆಗೆ ಮಾಡಲಾದ ಕ್ರೋಢಿಕೃತ ವೆಚ್ಚ ರೂ. 11.18 ಕೋಟಿಗಳಾಗಿರುತ್ತದೆ.

2. ಮಂಡ್ಯ ಜಿಲ್ಲೆ ಮಳವಳ್ಳಿ ತಾಲ್ಲೂಕಿನ ಪುರಿಗಾಲಿ ಸಮಗ್ರ ಹನಿ/ತುಂತುರು ನೀರಾವರಿ ಯೋಜನೆ

Main Delivery Chamber

M.S. Pipe Laying

HDPE Pipe Laying

ಮಂಡ್ಯ ಜಿಲ್ಲೆ ಮಳವಳ್ಳಿ ತಾಲ್ಲೂಕಿನ ಪುರಿಗಾಲಿಯಲ್ಲಿ ಸಮಗ್ರ ಹನಿ/ತುಂತುರು ನೀರಾವರಿ ಪದ್ಧತಿಯನ್ನು 51 ಗ್ರಾಮಗಳಿಗೆ 25327.75 ಎಕರೆ (10250 ಹೆಕ್ಟೇರ್) ಪ್ರದೇಶಕ್ಕೆ ಅಳವಡಿಸಲು ಯೋಜಿಸಲಾಗಿರುತ್ತದೆ. ಈ ಯೋಜನೆಗೆ ಬೇಕಿರುವ 0.3535 ಟಿ.ಎಂ.ಸಿ ನೀರನ್ನು ಕಾವೇರಿ ನದಿಯಿಂದ ಎತ್ತಿ ನಿಕಟ ಕೊಳವೆ ಜಾಲದ ಮೂಲಕ ಖಚಿತ ನೀರಾವರಿಯನ್ನು ಒದಗಿಸಲು ಹಾಗೂ 16 ಕೆರೆಗಳಿಗೆ ಕುಡಿಯುವ ನೀರನ್ನು ಒದಗಿಸಲು ತುಂಬಿಸಲು ಉದ್ದೇಶಿಸಲಾಗಿದೆ.

ಸದರಿ ಏತ ನೀರಾವರಿ ಯೋಜನೆಯನ್ನು ಕಾವೇರಿ ನದಿ ದಂಡೆಯ ಬಿಳಿ ಜಗಳಿ ಮೋಳೆಯ ಹಳ್ಳಿ ಹತ್ತಿರ ನಿರ್ಮಿಸಲು ಉದ್ದೇಶಿಸಲಾಗಿದೆ. ಒಟ್ಟಾರೆ 10250 ಹೆ. ಅಚ್ಚುಕಟ್ಟು ಪ್ರದೇಶವನ್ನು 2 ಭಾಗಗಳನ್ನಾಗಿ ವಿಂಗಡಿಸಲಾಗಿದ್ದು, ಅನುಕ್ರಮವಾಗಿ ಪಂಪಿಂಗ್ ಜೋನ್ ಮತ್ತು ಗ್ರಾವಿಟಿ ಜೋನ್ ಆಗಿರುತ್ತದೆ. ಪಂಪಿಂಗ್ ಜೋನ್ ಅನ್ನು ಪುನಃ 2 ಭಾಗಗಳನ್ನಾಗಿ ವಿಂಗಡಿಸಲಾಗಿದ್ದು, ಪಂಪಿಂಗ್ ಜೋನ್ ಅಡಿಯಲ್ಲಿ 6150 ಹೆ. ಪ್ರದೇಶಕ್ಕೆ ಅವಶ್ಯ ಪ್ರಮಾಣದ ನೀರನ್ನು ಕಾವೇರಿ ನದಿಯಿಂದ ಏರು ಕೊಳವೆ ಮೂಲಕ ಎತ್ತಿ ಮುಖ್ಯ ವಿತರಣಾ ಚೇಂಬರ್ ಮುಖಾಂತರ ಪಂಪ್ ಮಾಡುವ ಮೂಲಕ ಹರಿಸಲಾಗುವುದು. ನಂತರ, ಗ್ರಾವೀಟಿ ಜೋನ್ ಅಡಿಯಲ್ಲಿ 4100 ಹೆ. ಪ್ರದೇಶಕ್ಕೆ ಗ್ರಾವೀಟಿ ಮೂಲಕ ನೀರಾವರಿ ಸೌಲಭ್ಯ ಕಲ್ಪಿಸಲಾಗುವುದು.

ಸದರಿ ಯೋಜನೆಯ ಅಂದಾಜು ಮೊತ್ತ ರೂ.593.00 ಕೋಟಿಗಳಿಗೆ ಸರ್ಕಾರಿ ಆದೇಶ ಸಂ: ಜಸಂಇ79 ಎಂಎಂಕೆ 2015, ಬೆಂಗಳೂರು, ದಿನಾಂಕ: 01.03.2016ರಲ್ಲಿ ಆಡಳಿತಾತ್ಮಕ ಅನುಮೋದನೆ ದೊರೆತಿರುತ್ತದೆ. ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.

ಮುಖ್ಯ ವಿತರಣಾ ತೊಟ್ಟಿಯ ಸಿವಿಲ್ ಕಾಮಗಾರಿಯು ಪೂರ್ಣಗೊಂಡಿರುತ್ತದೆ. ಸಂಪ್ ವೆಲ್ ಮತ್ತು ಪಂಪ್ ಹೌಸ್‌ನ ಸಿವಿಲ್ ಕಾಮಗಾರಿ, ಫೋರ್ ಬೇ ನ ಸಿವಿಲ್ ಕಾಮಗಾರಿಯ, ಇಂಟೇಕ್‌ವೆಲ್ ನ ಮಣ್ಣು ಅಗೆತದ ಕಾಮಗಾರಿ, ವಿದ್ಯುತ್ ಸಬ್‌ಸ್ಟೇಷನ್‌ನ ಕಾಮಗಾರಿ ಮತ್ತು ನೀರು ಬಳಕೆದಾರರ ಸಹಕಾರ ಸಂಘಗಳ ಕಟ್ಟಡಗಳ ಕಾಮಗಾರಿ ಪ್ರಗತಿಯಲ್ಲಿರುತ್ತದೆ. ಈ ಯೋಜನೆಯ ಏರು ಕೊಳವೆ ಮಾರ್ಗಕ್ಕೆ ಎಂ.ಎಸ್ ಪೈಪ್ ಅನ್ನು 23.34 ಕಿ.ಮೀ ವರೆಗೆ ಅಳವಡಿಸಲಾಗಿದೆ ಮತ್ತು ಪ್ರೈಮರಿ ಡಿಸ್ಟ್ರಿಬ್ಯೂಷನ್‌ಗೆ ಎಂ.ಎಸ್ ಪೈಪ್ ಅನ್ನು 14.80 ಕಿ.ಮೀ ವರೆಗೆ, ಹೆಚ್.ಡಿ.ಪಿ.ಇ. ಪೈಪ್ ಅನ್ನು 189.88ಕಿ.ಮೀ. ವರೆಗೆ, ಪಿ.ವಿ.ಸಿ ಪೈಪನ್ನು 99.44 ಕಿ.ಮೀ ವರೆಗೆ ಅಳವಡಿಸಲಾಗಿದೆ.

ಈ ಯೋಜನೆಗೆ 2018–19 ನೇ ಸಾಲಿಗೆ ರೂ. 41.00 ಕೋಟಿ ಅನುದಾನ ಒದಗಿಸಲಾಗಿದ್ದು, ಮಾರ್ಚ್–2019 ರ ಅಂತ್ಯದವರೆಗೆ ರೂ. 242.62 ಕೋಟಿ ವೆಚ್ಚ ಮಾಡಲಾಗಿದೆ. ಈ ಯೋಜನೆಯ ಪ್ರಾರಂಭದಿಂದ ಮಾರ್ಚ್–2019 ಅಂತ್ಯದವರೆಗೆ ಮಾಡಲಾದ ಕ್ರೋಢಿಕೃತ ವೆಚ್ಚ ರೂ. 292.02 ಕೋಟಿಗಳಾಗಿರುತ್ತದೆ.

3. ಮಾರೇಹಳ್ಳಿ ಕೆರೆ ಚಾನೆಲ್‌ಗಳ ಆಧುನೀಕರಣ ಕಾಮಗಾರಿ:

ಮಾರೇಹಳ್ಳಿ ಕೆರೆಯನ್ನು ಮಂಡ್ಯ ಜಿಲ್ಲೆ, ಮಳವಳ್ಳಿ ತಾಲ್ಲೂಕು, ರಾವಣಿ ಗ್ರಾಮದ ಬಳಿ 1903 ರಲ್ಲಿ ನಿರ್ಮಿಸಲಾಗಿರುತ್ತದೆ. ಈ ಕೆರೆಯ ನೀರಿನ ಶೇಖರಣಾ ಸಾಮರ್ಥ್ಯ 132.5 ಎಂ.ಸಿ.ಎಫ್.ಟಿ. ಗಳಾಗಿದೆ.

ಸದರಿ ಯೋಜನೆಯ 3786.14 ಎಕರೆ ಅಚ್ಚುಕಟ್ಟು ಪ್ರದೇಶಕ್ಕೆಸಮರ್ಪಕ ನೀರಾವರಿ ಸೌಲಭ್ಯವನ್ನು ಒದಗಿಸಲು ಹಾಗೂ ಸುತ್ತಮುತ್ತಲ ಗ್ರಾಮಗಳಿಗೆ ಕುಡಿಯುವ ಒದಗಿಸಲು, ಮಾರೇಹಳ್ಳಿ ಕೆರೆ ಅಡಿಯಲ್ಲಿನ ಒಟ್ಟಾರೆ 29.32 ಕಿ.ಮೀ ಉದ್ದದ ಮೇಲ್ಮಟ್ಟದ ನಾಲೆ, ಕೆಳಮಟ್ಟದ ನಾಲೆ ಹಾಗೂ ಕಣಿಗಲ್ ಅಣೆಕಟ್ಟು ನಾಲೆಗಳನ್ನು ಆಧುನಿಕರಣಗೊಳಿಸಲು ಉದ್ದೇಶಿಸಲಾಗಿದೆ.

ಈ ಯೋಜನೆಯ ರೂ 19.90ಕೋಟಿ ಮೊತ್ತದ ಅಂದಾಜಿಗೆ, ಸರ್ಕಾರಿ ಆದೇಶ ಸಂ:ಜಸಂಇ79 ಎಂಎಂಕೆ 2015, ಬೆಂಗಳೂರು, ದಿನಾಂಕ: 01.03.2016 ರ ರಲ್ಲಿ ಆಡಳಿತಾತ್ಮಕ ಅನುಮೋದನೆ ದೊರೆತಿರುತ್ತದೆ.ಸದರಿ ಕಾಮಗಾರಿಯು ಪ್ರಗತಿಯಲ್ಲಿದ್ದು, ಒಟ್ಟಾರೆ 29.32 ಕಿ.ಮೀ ಲೈನಿಂಗ್ ಕಾಮಗಾರಿ ಪೂರ್ಣಗೊಂಡಿದ್ದು, 199 ಸಿ.ಡಿ ಕಾಮಗಾರಿಗಳು ಪೂರ್ಣಗೊಂಡಿರುತ್ತದೆ.

ಈ ಯೋಜನೆಗೆ 2018–19 ನೇ ಸಾಲಿಗೆ ರೂ. 1.50 ಕೋಟಿ ಅನುದಾನ ಒದಗಿಸಲಾಗಿದ್ದು, ಮಾರ್ಚ್–2019 ರ ಅಂತ್ಯದವರೆಗೆ ರೂ. 0.31 ಕೋಟಿ ವೆಚ್ಚ ಮಾಡಲಾಗಿದೆ. ಈ ಯೋಜನೆಯ ಪ್ರಾರಂಭದಿಂದ ಮಾರ್ಚ್–2019 ಅಂತ್ಯದವರೆಗೆ ಮಾಡಲಾದ ಕ್ರೋಢಿಕೃತ ವೆಚ್ಚ ರೂ. 15.37 ಕೋಟಿಗಳಾಗಿರುತ್ತದೆ.

4. ಕಬಿನಿ ಬಲದಂಡೆ ನಾಲೆಯ ವಿತರಣಾ ನಾಲೆ 38 ಮತ್ತು 39ರಲ್ಲಿ ಬರುವ ಮೂಗೂರು ಗ್ರಾಮದಲ್ಲಿನ ಮೂಗೂರು ಕೆರೆಯನ್ನು ಸೌಂದರೀಕರಣಗೊಳಿಸುವ ಕಾಮಗಾರಿ.

ಮೈಸೂರು ಜಿಲ್ಲೆಯ ಟಿ.ನರಸೀಪುರ ತಾಲ್ಲೂಕಿನ ವ್ಯಾಪ್ತಿಯ ಮೂಗೂರು ಗ್ರಾಮದಲ್ಲಿ ಮೂಗೂರು ಕೆರೆಯು ಇರುತ್ತದೆ. ಈ ಕೆರೆಯು ಕಬಿನಿ ಬಲದಂಡೆ ನಾಲೆಯ ವಿತರಣಾ ನಾಲೆ 38& 39 ರ ಅಚ್ಚುಕಟ್ಟು ವ್ಯಾಪ್ತಿಯಲ್ಲಿ ಬರುತ್ತದೆ. ಸದರಿ ಕೆರೆಯ ಸಾಮರ್ಥ್ಯವು 1.818 ಎಂ.ಸಿ.ಎಫ್.ಟಿ, ಸದರಿ ಕೆರೆಯ ವಿಸ್ತೀರ್ಣವು 39–37 ಎಕರೆಗಳಾಗಿರುತ್ತದೆ. ಈ ಕೆರೆಯು ಯಾವುದೇ ಅಚ್ಚುಕಟ್ಟು ಪ್ರದೇಶವನ್ನು ಹೊಂದಿರುವುದಿಲ್ಲ. ಮಾನ್ಯ ಲೋಕೋಪಯೋಗಿ ಸಚಿವರು ಈ ಕೆರೆಯನ್ನು ಸೌಂದರ್ಯಕರಿಸಿ ಸಮಗ್ರವಾಗಿ ಅಭಿವೃದ್ಧಿ ಪಡಿಸುವ ಕೆಲಸವನ್ನು ಕೈಗೊಳ್ಳಲು ಸೂಚಿಸಿದ್ದು, ಅದರನ್ವಯ ಅಂದಾಜು ಪಟ್ಟಿಯನ್ನು ತಯಾರಿಸಲಾಗಿರುತ್ತದೆ. ಈ ಕಾಮಗಾರಿಯ ರೂ.2.18 ಕೋಟಿಗಳ ಅಂದಾಜಿಗೆ ದಿನಾಂಕ: 04.06.2016 ರಲ್ಲಿ ನಿಗಮ ಕಚೇರಿಯಿಂದ ಆಡಳಿತಾತ್ಮಕ ಅನುಮೋದನೆ ದೊರೆತಿರುತ್ತದೆ. ಪ್ರಸ್ತುತ ಕಾಮಗಾರಿಯು ಪೂರ್ಣಗೊಂಡಿರುತ್ತದೆ.

ಈ ಯೋಜನೆಗೆ 2018–19 ನೇ ಸಾಲಿಗೆ ರೂ. 0.05 ಕೋಟಿ ಅನುದಾನ ಒದಗಿಸಲಾಗಿದ್ದು, ಮಾರ್ಚ್–2019 ರ ಅಂತ್ಯದವರೆಗೆ ರೂ. 1.14 ಕೋಟಿ ವೆಚ್ಚ ಮಾಡಲಾಗಿದೆ. ಈ ಯೋಜನೆಯ ಪ್ರಾರಂಭದಿಂದ ಮಾರ್ಚ್–2019 ಅಂತ್ಯದವರೆಗೆ ಮಾಡಲಾದ ಕ್ರೋಢಿಕೃತ ವೆಚ್ಚ ರೂ. 1.92 ಕೋಟಿಗಳಾಗಿರುತ್ತದೆ.

5. ಮೈಸೂರು ಜೆಲ್ಲೆ ಟಿ.ನರಸೀಪುರ ತಾಲ್ಲೂಕಿನ ತಲಕಾಡು ಗ್ರಾಮದ ಬಳಿಯ ಮಾಧವಮಂತ್ರಿ ಅಣೆಕಟ್ಟಿನ ಅಭಿವೃದ್ಧಿ ಕಾಮಗಾರಿ.

ಮಾಧವಮಂತ್ರಿ ಅಣೆಕಟ್ಟನ್ನು ಕ್ರಿ.ಶ.1140ನೇ ಇಸವಿಯಲ್ಲಿ ಕಾವೇರಿ ನದಿಗೆ ಅಡ್ಡಲಾಗಿ ಮೈಸೂರು ಜಿಲ್ಲೆ, ಟಿ. ನರಸೀಪುರ ತಾಲ್ಲೂಕು, ತಲಕಾಡು ಸಮೀಪದಲ್ಲಿ ದೊಡ್ಡ ಕಲ್ಲುಗಳಿಂದ (ರಾಕ್ ಫಿಲ್ ಡ್ಯಾಮ್) ನದಿಯ ತಳಮಟ್ಟದಿಂದ ಜೋಡಿಸಿ ನಿರ್ಮಿಸಲಾಗಿದ್ದು, ಅಣೆಕಟ್ಟೆಯು 1076 ಮೀ ಉದ್ದವಿರುತ್ತದೆ. 2013 ರ ಆಗಸ್ಟ್ ಮಾಹೆಯಲ್ಲಿ ಉಂಟಾದ ಭಾರಿ ಪ್ರವಾಹದಿಂದ ಅಣೆಕಟ್ಟೆಯ ತಳಭಾಗದಲ್ಲಿ ಕೊರೆತ ಉಂಟಾಗಿ ಜೋಡಿಸಿದ್ದ ಕಲ್ಲುಗಳು ನೀರಿನ ಸೆಳೆತಕ್ಕೆ ಸಡಿಲಗೊಂಡು ಅಣೆಕಟ್ಟೆಯ ಭಾಗವು ಕುಸಿದು ಅಣೆಕಟ್ಟೆಯು ಹಾನಿಗೊಳಗಾಗಿದ್ದು, ಹಾನಿಗೊಳಗಾದ ಮಾಧವಮಂತ್ರಿ ಅಣೆಕಟ್ಟೆಯ ಸಮಗ್ರ ಅಭಿವೃದ್ಧಿಗೊಳಿಸುವ ಸಲುವಾಗಿ ಯೋಜನಾ ವರದಿಯನ್ನು ಹಾಗೂ ಬಿಡ್ ಡಾಕ್ಯೂಮೆಂಟ್ ಅನ್ನು ಸಿದ್ದಪಡಿಸಲು ಮೆ:: ಸ್ಟುಪ್ ಕನ್ಸಲ್ಟೆಂಟ್ಸ್ ಪ್ರೈ ಲಿ ರವರಿಗೆ ರೂ.90,54,056/– ಮೊತ್ತಕ್ಕೆ ವಹಿಸಲಾಗಿದೆ. ಕನ್ಸಲ್ಟೆಂಟ್ಸ್ ರವರು ಸಿದ್ದಪಡಿಸಿದ ರೂ 62.21 ಕೋಟಿ ಮೊತ್ತದ ವಿವರವಾದ ಯೋಜನಾ ವರದಿಗೆ ಸರ್ಕಾರದ ಆದೇಶ ಸಂಖ್ಯೆ: ಜಸಂಇ 67 ಎಂಎಂಕೆ 2016 ಬೆಂಗಳೂರು, ದಿ:02.03.2017 ರಲ್ಲಿ ಆಡಳಿತಾತ್ಮಕ ಅನುಮೋದನೆ ದೊರೆತಿರುತ್ತದೆ. ಪ್ರಸ್ತುತ ಕಾಮಗಾರಿಯು ಪ್ರಗತಿಯಲ್ಲಿದ್ದು, ಅಣೆಕಟ್ಟಿನ ಮಣ್ಣು ಅಗೆತದ ಕಾಮಗಾರಿ ಪ್ರಗತಿಯಲ್ಲಿದೆ.

ಈ ಯೋಜನೆಗೆ 2018–19 ನೇ ಸಾಲಿಗೆ ರೂ. 1.00 ಕೋಟಿ ಅನುದಾನ ಒದಗಿಸಲಾಗಿದ್ದು, ಮಾರ್ಚ್–2019 ರ ಅಂತ್ಯದವರೆಗೆ ಯಾವುದೇ ವೆಚ್ಚವಾಗಿರುವುದಿಲ್ಲ. ಈ ಯೋಜನೆಯ ಪ್ರಾರಂಭದಿಂದ ಮಾರ್ಚ್–2019 ಅಂತ್ಯದವರೆಗೆ ಮಾಡಲಾದ ಕ್ರೋಢಿಕೃತ ವೆಚ್ಚ ರೂ. 0.04 ಕೋಟಿಗಳಾಗಿರುತ್ತದೆ.

6. ಕೊಡಗು ಜಿಲ್ಲೆಯ ಭಾಗಮಂಡಲದ ಹತ್ತಿರ ಮಡಿಕೇರಿ–ತಲಕಾವೇರಿ ಮತ್ತು ನಾಪೊಕ್ಲು–ತಲಕಾವೇರಿ ರಸ್ತೆಗಳ ಛೇದಕದಲ್ಲಿ ಕಾವೇರಿ ನದಿಗೆ ಅಡ್ಡಲಾಗಿ ಮೇಲು ಸೇತುವೆ ನಿರ್ಮಿಸುವ ಕಾಮಗಾರಿ:

ಕೊಡಗು ಜಿಲ್ಲೆಯ ಭಾಗಮಂಡಲದ ಹತ್ತಿರ ಮಡಿಕೇರಿ–ತಲಕಾವೇರಿ ಮತ್ತು ನಾಪೊಕ್ಲು –ತಲಕಾವೇರಿ ರಸ್ತೆಗಳ ಛೇದಕದಲ್ಲಿ ಕಾವೇರಿ ನದಿಗೆ ಅಡ್ಡಲಾಗಿ ಮೇಲು ಸೇತುವೆ ನಿರ್ಮಿಸುವ ಕಾಮಗಾರಿಯ ಅಂದಾಜು ಮೊತ್ತವಾದ ರೂ. 29.62 ಕೋಟಿಗಳಿಗೆ ಸರ್ಕಾರದ ಆದೇಶ ಸಂ. ಜಸಂಇ 65 ಎಂಎಂಕೆ 2016, ಬೆಂಗಳೂರು, ದಿನಾಂಕ 06.10.2016 ರಲ್ಲಿ ಆಡಳಿತಾತ್ಮಕ ಅನುಮೋದನೆ ದೊರೆತಿರುತ್ತದೆ. ಸದರಿ ಕಾಮಗಾರಿಯು ಪ್ರಗತಿಯಲ್ಲಿದ್ದು, 194 ಠಿಟಜಿ ಗಳ ಪೈಕಿ 94 ಠಿಟಜಿ ಕಾಂಕ್ರೀಟ್ ಹಾಗೂ 3 ಸಂಖ್ಯೆ ಠಿಟಜಿ ಛಿಚಿಠಿ ಪೂರ್ಣಗೊಂಡಿರುತ್ತದೆ.

ಈ ಯೋಜನೆಗೆ 2018–19 ನೇ ಸಾಲಿಗೆ ರೂ. 3.00 ಕೋಟಿ ಅನುದಾನ ಒದಗಿಸಲಾಗಿದ್ದು, ಮಾರ್ಚ್–2019 ರ ಅಂತ್ಯದವರೆಗೆ ರೂ. 1.53 ಕೋಟಿ ವೆಚ್ಚ ಮಾಡಲಾಗಿದೆ. ಈ ಯೋಜನೆಯ ಪ್ರಾರಂಭದಿಂದ ಮಾರ್ಚ್–2019 ಅಂತ್ಯದವರೆಗೆ ಮಾಡಲಾದ ಕ್ರೋಢಿಕೃತ ವೆಚ್ಚ ರೂ. 1.53 ಕೋಟಿಗಳಾಗಿರುತ್ತದೆ.

7. ಕೃಷ್ಣರಾಜಸಾಗರ ಅಣೆಕಟ್ಟೆಯ ದಕ್ಷಿಣದ್ವಾರದ ಬಳಿ ಮಹಾನುಭಾವರಾದ ನಾಲ್ವಡಿ ಕೃಷ್ಣರಾಜ ಒಡೆಯರು ಹಾಗೂ ಸರ್.ಎಂ ವಿಶ್ವೇಶ್ವರಾಯ ರವರ ಪುತ್ಥಳಿ ಹಾಗೂ ಮಂಟಪ ಸ್ಥಾಪನೆಯ ಕಾಮಗಾರಿ

ಕೃಷ್ಣರಾಜಸಾಗರ ಅಣೆಕಟ್ಟೆಯ ದಕ್ಷಿಣದ್ವಾರದ ಹೊರಗಡೆ ಇರುವ ವಿಶಾಲವಾದ ಪ್ರಾಂಗಣದಲ್ಲಿ 1894 ರಿಂದ 1940 ವರೆಗೆ ಮೈಸೂರು ರಾಜ್ಯ ಸಂಸ್ಥಾನವನ್ನಾಳಿದ ಮಹಾರಾಜರಾದ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರು ಮತ್ತುಗಮನಾರ್ಹ ಭಾರತೀಯ ಅಭಿಯಂತರರು, ವಿದ್ವಾಂಸರು, ರಾಜನೀತಿಜ್ಞ ಹಾಗೂ 1912 ರಿಂದ 1918 ವರೆಗೆ ಮೈಸೂರು ಸಂಸ್ಥಾನದ ದಿವಾನರಾದ ಮೋಕ್ಷಗುಂಡಂ ಸರ್.ಎಂ.ವಿಶ್ವೇಶ್ವರಾಯ ರವರ ಪುತ್ಥಳಿಗಳನ್ನು ಸ್ಥಾಪಿಸುವ ಕಾಮಗಾರಿಯ ರೂ.8.50ಕೋಟಿಗಳ ಯೋಜನಾ ವರದಿಗೆ ಸರ್ಕಾರದ ಆದೇಶ ಸಂಖ್ಯೆ : ಜಸಂಇ 84 ಎಂಎಂಕೆ 2017, ಬೆಂಗಳೂರು ದಿನಾಂಕ:19.06.2017 ರಲ್ಲಿ ಆಡಳಿತಾತ್ಮಕ ಅನುಮೋದನೆ ದೊರೆತಿರುತ್ತದೆ. ಸದರಿ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.

ಈಗಾಗಲೇ 800 ಮೀ ರಸ್ತೆ ಡಾಂಬರೀಕರಣ ಪೂರ್ಣಗೊಂಡಿದ್ದು, ಮಂಟಪದ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.

ಈ ಯೋಜನೆಗೆ 2018–19 ನೇ ಸಾಲಿಗೆ ರೂ. 0.88 ಕೋಟಿ ಅನುದಾನ ಒದಗಿಸಲಾಗಿದ್ದು, ಮಾರ್ಚ್–2019 ರ ಅಂತ್ಯದವರೆಗೆ ರೂ. 0.23 ಕೋಟಿ ವೆಚ್ಚ ಮಾಡಲಾಗಿದೆ. ಈ ಯೋಜನೆಯ ಪ್ರಾರಂಭದಿಂದ ಮಾರ್ಚ್–2019 ಅಂತ್ಯದವರೆಗೆ ಮಾಡಲಾದ ಕ್ರೋಢಿಕೃತ ವೆಚ್ಚ ರೂ. 0.23 ಕೋಟಿಗಳಾಗಿರುತ್ತದೆ.

8. ಕೊಳ್ಳೇಗಾಲ ತಾಲ್ಲೂಕಿನ ಸರ್‌ಕಾಟನ್, ಹಂಪಾಪುರ ಮತ್ತು ಗುಪ್ಪಮ್ಮ ಕಾಲುವೆಗಳನ್ನು ಅಭಿವೃದ್ಧಿ ಪಡಿಸುವ ಕಾಮಗಾರಿ.

ಸರ್‌ಕಾಟನ್, ಹಂಪಾಪುರ ಮತ್ತು ಗುಪ್ಪಮ್ಮ ಕಾಲುವೆಗಳಲ್ಲಿ ಕೊಳ್ಳೇಗಾಲ ಪಟ್ಟಣದ ಚರಂಡಿಯ ಕೊಳಚೆ ನೀರು ಹರಿಯುವುದರಿಂದ ಸಾಂಕ್ರಾಮಿಕ ರೋಗಗಳು ಉಂಟಾಗಿ ಜನರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತಿರುವುದನ್ನು ನಿವಾರಿಸುವ ಸಲುವಾಗಿ ಸರ್ ಕಾಟನ್ ನಾಲೆಗೆ ಕಟ್ ಅಂಡ್ ಕವರ್‌ಡಕ್ಟ್ ಹಾಗೂ ಹಂಪಾಪುರ ನಾಲೆಯ ಮತ್ತು ಗುಪ್ಪಮ್ಮ ನಾಲೆಗಳಿಗೆ ಟ್ರಫ್ ಬಾಕ್ಸ್ ನಿರ್ಮಾಣ ಮಾಡಲು ಉದ್ದೇಶಿಸಲಾಗಿದೆ. ಈ ಕಾಮಗಾರಿಯ ರೂ.20.30ಕೋಟಿಗಳಅಂದಾಜಿಗೆ ದಿನಾಂಕ:20.09.2017 ರಲ್ಲಿ ಸರ್ಕಾರದಿಂದ ಆಡಳಿತಾತ್ಮಕ ಅನುಮೋದನೆ ದೊರೆತಿರುತ್ತದೆ. ಸದರಿ ಕಾಮಗಾರಿಯು ಪ್ರಗತಿಯಲ್ಲಿದ್ದು, ಒಟ್ಟಾರೆ 6.85 ಕಿ.ಮೀ ಪೈಕಿ 4.20 ಕಿ.ಮೀ ಲೈನಿಂಗ್ ಕಾಮಗಾರಿ ಪೂರ್ಣಗೊಂಡಿರುತ್ತದೆ.

ಈ ಯೋಜನೆಗೆ 2018–19 ನೇ ಸಾಲಿಗೆ ರೂ. 4.00 ಕೋಟಿ ಅನುದಾನ ಒದಗಿಸಲಾಗಿದ್ದು, ಮಾರ್ಚ್–2019 ರ ಅಂತ್ಯದವರೆಗೆ ರೂ. 3.57 ಕೋಟಿ ವೆಚ್ಚ ಮಾಡಲಾಗಿದೆ. ಈ ಯೋಜನೆಯ ಪ್ರಾರಂಭದಿಂದ ಮಾರ್ಚ್–2019 ಅಂತ್ಯದವರೆಗೆ ಮಾಡಲಾದ ಕ್ರೋಢಿಕೃತ ವೆಚ್ಚ ರೂ. 3.82 ಕೋಟಿಗಳಾಗಿರುತ್ತದೆ.

9. ಸಿದ್ದಗಂಗಮಠ ಮತ್ತು ಸುತ್ತ–ಮುತ್ತಲ ಗ್ರಾಮಗಳಿಗೆ ಶುದ್ಧ ಕುಡಿಯುವ ನೀರನ್ನು ಒದಗಿಸುವ ಕಾಮಗಾರಿ.

ತುಮಕೂರು ಜಿಲ್ಲೆ, ತುಮಕೂರು ತಾಲ್ಲೂಕಿನಲ್ಲಿ ದೇವರಾಯಪಟ್ಟಣ ಕೆರೆಯಿಂದ 2.00 ಎಂ.ಎಲ್.ಡಿ ನೀರನ್ನು ಎತ್ತಿ ಸಂಸ್ಕರಿಸಿ ಸಿದ್ದಗಂಗಾಮಠ ಮತ್ತು ಸುತ್ತ–ಮುತ್ತಲಿನ ಹಳ್ಳಿಗಳಿಗೆ ಶುದ್ಧ ಕುಡಿಯುವ ನೀರೋದಗಿಸುವ ಯೋಜನೆಯಾಗಿರುತ್ತದೆ. ಈ ಯೋಜನೆಯ ಅಂದಾಜಿಗೆ ಸರ್ಕಾರದ ಆದೇಶ ಸಂಖ್ಯೆ: ಜಸಂಇ 27 ಎನ್‌ಹೆಚ್‌ಪಿ 2018 ಬೆಂಗಳೂರು, ದಿ: 21.03.2018 ರಲ್ಲಿ ರೂ. 9.00 ಕೋಟಿಗಳಿಗೆ ಆಡಳಿತಾತ್ಮಕ ಅನುಮೋದನೆ ದೊರೆತಿರುತ್ತದೆ. ಸದರಿ ಪ್ರಸ್ತಾವನೆಯನ್ನು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಿಂದ ತಾಣಾಣಟಿರ ಮತ್ತು ಥಿಟಜಚಿಡಿಚಿಟಿಥಿಜ ಗಾಗಿ ಸಲ್ಲಿಸಲಾಗಿರುತ್ತದೆ.

10. ರಾಮನಗರ ಜಿಲ್ಲೆ, ಕನಕಪುರ ತಾಲ್ಲೂಕಿನ ಹೆಗ್ಗನೂರು ಹನಿ ನೀರಾವರಿ ಯೋಜನೆ

ಅರ್ಕಾವತಿ ಜಲಾಶಯದ ಬಲದಂಡೆ ನಾಲೆಯ ಕೊನೆಯ ಅಂಚಿನಲ್ಲಿ ಇರುವ ಹೆಗ್ಗನೂರು, ಏಳಿಗೆಹಳ್ಳಿ, ಕಾಡಶಿವನದೊಡ್ಡಿ, ಕುಪ್ಪೆದೊಡ್ಡಿ ಹಾಗೂ ವೆಂಡರ್ ಲಿಂಗೇಗೌಡನದೊಡ್ಡಿ ಗ್ರಾಮಗಳ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ 890 ಎಕರೆ ಪ್ರದೇಶಕ್ಕೆ ನೀರಾವರಿ ಸೌಲಭ್ಯವನ್ನು ಒದಗಿಸಲು ಈ ಕಾಮಗಾರಿಯನ್ನು ಕೈಗೊಳ್ಳಲಾಗಿದೆ. ಈ ಕಾಮಗಾರಿಯ ರೂ 22.00 ಕೋಟಿಗಳ ವಿವರವಾದ ಯೋಜನಾ ವರದಿಗೆ ಸರ್ಕಾರಿ ಆದೇಶ ಸಂ. ಜಸಂಇ 17 ಎಂಎಂಕೆ 2017, ಬೆಂಗಳೂರು, ದಿನಾಂಕ 16–03–2018 ರಲ್ಲಿ ಆಡಳಿತಾತ್ಮಕ ಅನುಮೋದನೆಯನ್ನು ದೊರೆತಿರುತ್ತದೆ. ಪ್ರಸ್ತುತ ಕಾಮಗಾರಿ ಪ್ರಗತಿಯಲ್ಲಿರುತ್ತದೆ.

ಈ ಯೋಜನೆಗೆ 2018–19 ನೇ ಸಾಲಿಗೆ ರೂ. 4.70 ಕೋಟಿ ಅನುದಾನ ಒದಗಿಸಲಾಗಿದ್ದು, ಮಾರ್ಚ್–2019 ರ ಅಂತ್ಯದವರೆಗೆ ರೂ. 9.00 ಕೋಟಿ ವೆಚ್ಚ ಮಾಡಲಾಗಿದೆ. ಈ ಯೋಜನೆಯ ಪ್ರಾರಂಭದಿಂದ ಮಾರ್ಚ್–2019 ಅಂತ್ಯದವರೆಗೆ ಮಾಡಲಾದ ಕ್ರೋಢಿಕೃತ ವೆಚ್ಚ ರೂ. 9.00 ಕೋಟಿಗಳಾಗಿರುತ್ತದೆ.

11. ರಾಮನಗರ ಜಿಲ್ಲೆ, ಕನಕಪುರ ತಾಲ್ಲೂಕಿನ ಅರೆಕೊಪ್ಪ ಹನಿ ನೀರಾವರಿ ಯೋಜನೆ

ಅರ್ಕಾವತಿ ಜಲಾಶಯದ ಎಡದಂಡೆ ನಾಲೆಯ 23 ನೇ ಕಿ.ಮೀ ಅಂಚಿನಲ್ಲಿ ಇರುವ ಅರೆಕೊಪ್ಪ ಮತ್ತು ಆಲ್ಕುಳಿ ಗ್ರಾಮಗಳ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ 178 ಎಕರೆ (72 ಹೆ) ಪ್ರದೇಶಕ್ಕೆ ಹನಿ ನೀರಾವರಿ ವ್ಯವಸ್ಥೆಯ ಮೂಲಕ ನೀರಾವರಿ ಸೌಲಭ್ಯವನ್ನು ಒದಗಿಸಲು ವಿಶೇಷ ಘಟಕ ಯೋಜನೆಯಡಿ ಈ ಕಾಮಗಾರಿಯನ್ನು ಕೈಗೊಳ್ಳಲಾಗಿದೆ. ಸದರಿ ಕಾಮಗಾರಿಯ ರೂ 494.00 ಲಕ್ಷಗಳ ಅಂದಾಜು ಪಟ್ಟಿಗೆ ನಿಗಮದ ಆದೇಶ ಸಂ. ಕಾನೀನಿ/ತಾಂತ್ರಿಕ–3/ಎಂಪಿಡಿ–193/2016–17/402 ದಿನಾಂಕ 04–05–2017 ರಲ್ಲಿ ಆಡಳಿತಾತ್ಮಕ ಅನುಮೋದನೆಯನ್ನು ದೊರೆತಿರುತ್ತದೆ.ಪ್ರಸ್ತುತ ಕಾಮಗಾರಿ ಪ್ರಗತಿಯಲ್ಲಿರುತ್ತದೆ.

ಈ ಯೋಜನೆಗೆ 2018–19 ನೇ ಸಾಲಿಗೆ ರೂ. 0.84 ಕೋಟಿ ಅನುದಾನ ಒದಗಿಸಲಾಗಿದ್ದು, ಮಾರ್ಚ್–2019 ರ ಅಂತ್ಯದವರೆಗೆ ರೂ. 2.83 ಕೋಟಿ ವೆಚ್ಚ ಮಾಡಲಾಗಿದೆ. ಈ ಯೋಜನೆಯ ಪ್ರಾರಂಭದಿಂದ ಮಾರ್ಚ್–2019 ಅಂತ್ಯದವರೆಗೆ ಮಾಡಲಾದ ಕ್ರೋಢಿಕೃತ ವೆಚ್ಚ ರೂ. 2.83 ಕೋಟಿಗಳಾಗಿರುತ್ತದೆ.

12. ರಾಮನಗರ ತಾಲ್ಲೂಕು, ಕೂಟಗಲ್ ಹೋಬಳಿ, ಕೂಟಗಲ್ ಗ್ರಾಮದ ಹತ್ತಿರ ಕಣ್ವಾ ನದಿಗೆ ಅಡ್ಡಲಾಗಿ ಗ್ರಾಮಗಳ ಸಂಪರ್ಕ ಸೇತುವೆ ನಿರ್ಮಿಸುವ ಕಾಮಗಾರಿ:

ರಾಮನಗರ ಜಿಲ್ಲೆಯ ರಾಮನಗರ, ಚನ್ನಪಟ್ಟಣ, ಕನಕಪುರ ಮತ್ತು ಮಾಗಡಿ ತಾಲ್ಲೂಕುಗಳ ಗ್ರಾಮಗಳಿಗೆ ಸಂಪರ್ಕ ಕಲ್ಪಿಸಲು ಸೇತುವೆಯನ್ನು ನಿರ್ಮಿಸುವ ಕಾಮಗಾರಿಯ ಅಂದಾಜು ಮೊತ್ತವಾದ ರೂ. 4.00 ಕೋಟಿಗಳಿಗೆ ಸರ್ಕಾರದ ಆದೇಶ ಸಂ. ಜಸಂಇ 01 ಎಂಎಂಕೆ 2018, ಬೆಂಗಳೂರು, ದಿನಾಂಕ 06.02.2018 ರಲ್ಲಿ ಆಡಳಿತಾತ್ಮಕ ಅನುಮೋದನೆ ದೊರೆತಿರುತ್ತದೆ. ಪ್ರಸ್ತುತ ಕಾಮಗಾರಿಯ ಟೆಂಡರ್ ಪ್ರಕ್ರಿಯೆಯಲ್ಲಿದೆ.

ಈ ಯೋಜನೆಗೆ 2018–19 ನೇ ಸಾಲಿಗೆ ರೂ. 0.26 ಕೋಟಿ ಅನುದಾನ ಒದಗಿಸಲಾಗಿದೆ.

13. ಕೆ.ಆರ್.ಪೇಟೆ ತಾಲ್ಲೂಕು ದೇವಿರಮಣ್ಣಿ ಕೆರೆಯ ಪುನರುಜ್ಜೀವನ, ಪುನಶ್ಚೇತನ ಮತ್ತು ಸೌಂದರೀಕರಣಗೊಳಿಸುವ (Beautification) ಮತ್ತು ಇತರೆ ಅಭಿವೃದ್ಧಿ ಕಾಮಗಾರಿಯ

ಕೆ.ಆರ್.ಪೇಟೆ ಪಟ್ಟಣಕ್ಕೆ ಹತ್ತಿರವಿರುವ ದೇವಿರಮ್ಮಣ್ಣಿ ಕೆರೆಯು ಹಳೆಯ ಕೆರೆಯಾಗಿದ್ದು ಹೇಮಾವತಿ ಎಡದಂಡೆ ನಾಲೆಯ ವಿತರಣಾ ನಾಲೆ 55 ರಿಂದ 58 ರ ಅಚ್ಚುಕಟ್ಟು ಪ್ರದೇಶದಲ್ಲಿರುತ್ತದೆ. ಹೇಮಾವತಿ ಎಡದಂಡೆ ನಾಲೆಯ ಬಸಿ ನೀರಿನಿಂದ ಕೆರೆಯು ತುಂಬುತ್ತಿರುತ್ತದೆ. ಕೆರೆಯ ಸಾಮರ್ಥ್ಯವು 75.01 ಎಂ.ಸಿ.ಎಫ್.ಟಿ ಆಗಿರುತ್ತದೆ. ಸದರಿ ಕೆರೆಗೆ 260 ಎಕರೆ ಅಚ್ಚುಕಟ್ಟು ಪ್ರದೇಶವಿರುತ್ತದೆ. 242 ಎಕರೆ ಭತ್ತದ ಬೆಳೆಯನ್ನು ಮುಂಗಾರಿನಲ್ಲಿ ಹಾಗೂ 18 ಎಕರೆ ಪ್ರದೇಶದಲ್ಲಿ ತೋಟವಿರುತ್ತದೆ.

ಕೆರೆಯ ಪುನರುಜ್ಜೀವನ ಮತ್ತು ಪುನಶ್ಚೇತನ: ಕೆರೆಯ ಅಂಗಳದಲ್ಲಿ ಜಂಗಲ್ ತೆಗೆಯುವುದು, ಹೂಳನ್ನು ತೆಗೆಯುವುದು, ಅಗತ್ಯವಿರುವ ಕಡೆ ಸೋಪಾನಂ ಮತ್ತು ಕ್ಯಾಟಲ್ ರ್‍ಯಾಂಪ್ ನಿರ್ಮಿಸುವುದು, ಮರಗಳನ್ನು ಬೆಳೆಸುವುದು, ಏರಿಯ ದುರಸ್ತಿ ಇತ್ಯಾದಿ ಕಾಮಗಾರಿಗಳನ್ನು ಕೈಗೊಳ್ಳಲು ಉದ್ದೇಶಿಸಲಾಗಿದೆ.

ಕೆರೆಯ ಸೌಂದರ್ಯಕರಣ ಕಾಮಗಾರಿ : ಕೆರೆಯ ಅಂಗಳದ ಅಂಚಿನ ಏರಿಯಲ್ಲಿ ಹೂವಿನ ಗಿಡಗಳ ಉದ್ಯಾನವನ ನಿರ್ಮಿಸಿ ಕರ್ಬ್ ಸ್ಟೋನ್ ಅಳವಡಿಸಲು ಹಾಗೂ ಕೆರೆಯ ಅಂಗಳದ ಅಂಚಿನ ಏರಿಗೆ ಬೆಳಕಿನ ವ್ಯವಸ್ಥೆ ಅಳವಡಿಸಲು ಉದ್ದೇಶಿಸಲಾಗಿದೆ.

ಸದರಿ ಕಾಮಗಾರಿಗೆ ಸರ್ಕಾರದ ಆದೇಶ ಸಂಖ್ಯೆ ಜಸಂಇ 248 ಎಂಎಂಕೆ 2017,ಬೆಂಗಳೂರು, ದಿನಾಂಕ 03.03.2018 ರಲ್ಲಿ ರೂ. 3.00 ಕೋಟಿಗಳಿಗೆ ಆಡಳಿತಾತ್ಮಕ ಅನುಮೋದನೆ ದೊರೆತಿರುತ್ತದೆ. ಪ್ರಸ್ತುತ ಕಾಮಗಾರಿಯ ಟೆಂಡರ್ ಪ್ರಕ್ರಿಯೆಯಲ್ಲಿದೆ.

ಈ ಯೋಜನೆಗೆ 2018–19 ನೇ ಸಾಲಿನಲ್ಲಿ ರೂ. 16.50 ಕೋಟಿಗಳ ಅನುದಾನವನ್ನು ಒದಗಿಸಲಾಗಿದೆ.

14. ರಾಮನಗರ ಜಿಲ್ಲೆ, ರಾಮನಗರ ತಾಲ್ಲೂಕಿನ ಬೈರಮಂಗಲ ಜಲಾಶಯಕ್ಕೆ ಡೈವರ್ಷನ್ ಕಾಲುವೆ ಮತ್ತು ವಿಯರ್‌ನಿರ್ಮಿಸುವ ಯೋಜನೆ:

ರಾಮನಗರ ಜಿಲ್ಲೆ, ರಾಮನಗರ ತಾಲ್ಲೂಕಿನ ಬೈರಮಂಗಲ ಜಲಾಶಯಕ್ಕೆ ಡೈವರ್ಷನ್ ಕಾಲುವೆ ಮತ್ತು ವಿಯರ್ ನಿರ್ಮಿಸುವಕಾಮಗಾರಿಯ ಅಂದಾಜು ಮೊತ್ತವಾದ ರೂ. 110.00 ಕೋಟಿಗಳಿಗೆ ಸರ್ಕಾರದ ಆದೇಶ ಸಂಖ್ಯೆ: ಜಸಂಇ 112 ಎಂಎಂಕೆ 2018 ಬೆಂಗಳೂರು, ದಿ: 23.11.2018 ರಂದು ಅಡಳಿತಾತ್ಮಕ ಅನುಮೋದನೆ ದೊರೆತಿರುತ್ತದೆ. ಸದರಿ ಕಾಮಗಾರಿಯ ಟೆಂಡರ್ ಅನುಮೋದನೆಯಾಗಿದ್ದು, ಕಾಮಗಾರಿ ಪ್ರಾರಂಭಿಸಲಾಗಿದೆ.

ಈ ಯೋಜನೆಗೆ 2018–19 ನೇ ಸಾಲಿನಲ್ಲಿ ರೂ. 14.61 ಕೋಟಿಗಳ ಅನುದಾನವನ್ನು ಒದಗಿಸಲಾಗಿದೆ.

15. ಕಿಕ್ಕೇರಿ ಅಮಾನಿಕೆರೆ ಸೌಂದರೀಕರಣಗೊಳಿಸುವ (Beautification) ಮತ್ತು ಇತರೆ ಅಭಿವೃದ್ಧಿ ಕಾಮಗಾರಿಯ

ಮಂಡ್ಯ ಜಿಲ್ಲೆ, ಕೆ.ಆರ್.ಪೇಟೆ ತಾಲ್ಲೂಕಿನ ಕಿಕ್ಕೇರಿ ಗ್ರಾಮದ ದೊಡ್ಡಕೆರೆಯಾದ ಕಿಕ್ಕೇರಿ ಅಮ್ಮಾನಿಕೆರೆ ಸುಮಾರು 500 ವರ್ಷಗಳಷ್ಟು ಪುರಾತನವಾಗಿದ್ದು, ಹೊಯ್ಸಳರು ನಿರ್ಮಾಣ ಮಾಡಿರುವ ಬಗ್ಗೆ ಇತಿಹಾಸವಿರುತ್ತದೆ ಹಾಗೂ ಖ್ಯಾತ ಕವಿ ಶ್ರೀ ಕೆ.ಎಸ್. ನರಸಿಂಹಸ್ವಾಮಿಯವರ ಹುಟ್ಟೂರಾಗಿದೆ. ಈ ಕೆರೆಯ ವಿಸ್ತೀರ್ಣ ಸುಮಾರು 285 ಎಕರೆಗಳಿಷ್ಟಿದೆ.

ಕಿಕ್ಕೇರಿ ಗ್ರಾಮದಲ್ಲಿ ಹೊಯ್ಸಳ ಶಿಲ್ಪ ಕಲೆಯ ಲಕ್ಷ್ಮಿ ನರಸಿಂಹ ಸ್ವಾಮಿ ದೇವಸ್ಥಾನವಿದ್ದು, ಇದು ಕಿಕ್ಕೇರಿ ಕೆರೆಯ ದಡದಲ್ಲಿರುತ್ತದೆ. ಸದರಿ ದೇವಾಸ್ಥಾನವು ಹೊಯ್ಸಳ ಶಿಲ್ಪ ಕಲೆಯಿಂದ ಕೂಡಿದ್ದು, ರಾಜ್ಯದ ಹಲವು ಭಾಗಗಳಿಂದ ಈ ದೇವಾಸ್ಥಾನಕ್ಕೆ ಪ್ರವಾಸಿಗರು ಆಗಮಿಸುತ್ತಾರೆ. ಅಲ್ಲದೆ ಮೈಸೂರಿನ ಅಕ್ಕಪಕ್ಕ ಇರುವಂತಹ ಕೈಗಾರಿಕೆಗಳು ಹಾಗೂ ಇತರೆ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುವಂತಹ ಎಲ್ಲಾ ಜನಗಳಿಗೆ ವಾರಾಂತ್ಯಗಳಲ್ಲಿ ವಿಹರಿಸಲು ಅತ್ಯಂತ ಸೂಕ್ತ ತಾಣವಾಗಿರುತ್ತದೆ ಮತ್ತು ಈ ಪ್ರದೇಶದಲ್ಲಿ ಕೃಷ್ಣರಾಜಸಾಗರ ಬೃಂದಾವನದ ಉದ್ಯಾನವನದ ರೀತ್ಯ ಅಭಿವೃದ್ಧಿ ಪಡಿಸುವುದರಿಂದ ಸೂಕ್ತ ಪ್ರವಾಸಿ ತಾಣವಾಗಿ ಮಾರ್ಪಟ್ಟು ಸರ್ಕಾರಕ್ಕೆ ರಾಯಧನ ಲಭ್ಯವಾಗುತ್ತದೆ. ಈ ಕಾರಣದಿಂದ

ಕೆರೆಯನ್ನು ಸೌಂದರ್ಯಕರಣಗೊಳಿಸಿ ಹೆಚ್ಚು ಪ್ರವಾಸಿಗರನ್ನು ಆಕರ್ಷಿಸುವುದು ಮುಖ್ಯ ಉದ್ದೇಶವಾಗಿರುತ್ತದೆ. ಇದರಿಂದ ಸ್ಥಳೀಯರು ಆರ್ಥಿಕವಾಗಿ ಸಬಲರಾಗಲು ಅನುಕೂಲವಾಗುತ್ತದೆ.

ಸದರಿ ಕಾಮಗಾರಿಗೆ ಸರ್ಕಾರದ ಆದೇಶ ಸಂಖ್ಯೆ ಜಸಂಇ 239 ಎಂಎಂಕೆ 2017,ಬೆಂಗಳೂರು, ದಿನಾಂಕ 11.01.2018 ರಲ್ಲಿ ರೂ. 4.80 ಕೋಟಿಗಳಿಗೆ ಆಡಳಿತಾತ್ಮಕ ಅನುಮೋದನೆ ದೊರೆತಿರುತ್ತದೆ. ಪ್ರಸ್ತುತ ಕಾಮಗಾರಿಯ ಟೆಂಡರ್ ಪ್ರಕ್ರಿಯೆಯಲ್ಲಿದೆ.

ಈ ಯೋಜನೆಗೆ 2018–19 ನೇ ಸಾಲಿನಲ್ಲಿ ರೂ. 25.14 ಕೋಟಿಗಳ ಅನುದಾನವನ್ನು ಒದಗಿಸಲಾಗಿದೆ.

16. ಹಾಲುವಾಗಿಲು ಪಿಕಪ್ ಆಧುನೀಕರಣ ಕಾಮಗಾರಿ

ಹಾಲುವಾಗಿಲು ಪಿಕಪ್ 168 ಮೀ ಉದ್ದವಿದ್ದು, ಸದರಿ ಪಿಕಪ್ ನ ಆಧುನೀಕರಣ ಕಾಮಗಾರಿಯನ್ನು ಕೈಗೊಳ್ಳಲು ಉದ್ದೇಶಿಸಲಾಗಿದೆ. ಸದರಿ ಕಾಮಗಾರಿಯ ಅಂದಾಜಿಗೆ ಸರ್ಕಾರದ ಆದೇಶ ಸಂಖ್ಯೆ: ಜಸಂಇ 46 ಎನ್.ಹೆಚ್.ಪಿ 2017 ಬೆಂಗಳೂರು ದಿ:18.03.2017 ರಲ್ಲಿ ರೂ.4.35 ಕೋಟಿಗಳಿಗೆ ಆಡಳಿತಾತ್ಮಕ ಅನುಮೋದನೆ ದೊರೆತಿರುತ್ತದೆ. ಸದರಿ ಕಾಮಗಾರಿಯು ಪ್ರಗತಿಯಲ್ಲಿದೆ.

ಈ ಯೋಜನೆಗೆ 2018–19 ನೇ ಸಾಲಿಗೆ ರೂ. 0.80 ಕೋಟಿ ಅನುದಾನ ಒದಗಿಸಲಾಗಿದ್ದು, ಮಾರ್ಚ್–2019 ರ ಅಂತ್ಯದವರೆಗೆ ರೂ. 1.70 ಕೋಟಿ ವೆಚ್ಚ ಮಾಡಲಾಗಿದೆ. ಈ ಯೋಜನೆಯ ಪ್ರಾರಂಭದಿಂದ ಮಾರ್ಚ್–2019 ಅಂತ್ಯದವರೆಗೆ ಮಾಡಲಾದ ಕ್ರೋಢಿಕೃತ ವೆಚ್ಚ ರೂ. 1.70 ಕೋಟಿಗಳಾಗಿರುತ್ತದೆ.

17. ಕನಕಪುರ ತಾಲ್ಲೂಕು, ಅರಳಾಳುಸಂದ್ರ ಗ್ರಾಮದ ಹತ್ತಿರ ಅರ್ಕಾವತಿ ನದಿಗೆ ಅಡ್ಡಲಾಗಿ ಚೆಕ್ ಡ್ಯಾಂ ಹಾಗೂ ಸಂಪರ್ಕ ಸೇತುವೆ ನಿರ್ಮಿಸುವ ಕಾಮಗಾರಿ:

ರಾಮನಗರ ಜಿಲ್ಲೆಯ ಅರಳಾಳುಸಂದ್ರ ಗ್ರಾಮದ ಹತ್ತಿರ ಅರ್ಕಾವತಿ ನದಿಗೆ ಅಡ್ಡಲಾಗಿ ಚೆಕ್ ಡ್ಯಾಂ ಹಾಗೂ ಸಂಪರ್ಕ ಕಲ್ಪಿಸಲು ಸೇತುವೆಯನ್ನು ನಿರ್ಮಿಸುವ ಕಾಮಗಾರಿಯ ಅಂದಾಜು ಮೊತ್ತವಾದ ರೂ. 3.10 ಕೋಟಿಗಳಿಗೆ ಸರ್ಕಾರದ ಆದೇಶ ಸಂ. ಜಸಂಇ 07 ಎಂಎಂಕೆ 2018, ಬೆಂಗಳೂರು, ದಿನಾಂಕ 02.02.2018 ರಲ್ಲಿ ಆಡಳಿತಾತ್ಮಕ ಅನುಮೋದನೆ ದೊರೆತಿರುತ್ತದೆ. ಸದರಿ ಕಾಮಗಾರಿಯ ಟೆಂಡರ್ ಪ್ರಕ್ರಿಯೆಯುಲ್ಲಿರುತ್ತದೆ.

ಈ ಯೋಜನೆಗೆ 2018–19ನೇ ಸಾಲಿಗೆ ರೂ. 1.55 ಕೋಟಿ ಅನುದಾನ ಒದಗಿಸಲಾಗಿರುತ್ತದೆ. ಮಾರ್ಚ್–2019 ರ ಅಂತ್ಯದವರೆಗೆ ರೂ. 0.79 ಕೋಟಿ ವೆಚ್ಚ ಮಾಡಲಾಗಿದೆ. ಈ ಯೋಜನೆಯ ಪ್ರಾರಂಭದಿಂದ ಮಾರ್ಚ್–2019 ಅಂತ್ಯದವರೆಗೆ ಮಾಡಲಾದ ಕ್ರೋಢಿಕೃತ ವೆಚ್ಚ ರೂ. 0.79 ಕೋಟಿಗಳಾಗಿರುತ್ತದೆ.

18. ಹಾಸನ ನಗರದ ಚನ್ನಪಟ್ಟಣ ಕೆರೆಯ ಅಂಗಳದಲ್ಲಿ ವಿಹಾರಧಾಮ ಅಭಿವೃದ್ಧಿ ಹಾಗೂ ಉದ್ಯಾನವನ ನಿರ್ಮಾಣ ಕಾಮಗಾರಿ

ಹಾಸನ ನಗರದ ಮಧ್ಯಭಾಗದಲ್ಲಿ ನೂತನವಾಗಿ ನಿರ್ಮಿಸಿರುವ ಬಸ್ ನಿಲ್ದಾಣದ ಪಕ್ಕದಲ್ಲಿ ಚನ್ನಪಟ್ಟಣ ಕೆರೆ ಇದ್ದು, ಕೆರೆಯ ಆವರಣದಲ್ಲಿ ಲಭ್ಯವಿರುವ 53 ಎಕರೆ ಪ್ರದೇಶದಲ್ಲಿ ಆಧುನಿಕ ಮಾದರಿಯ ವಿಹಾರಧಾಮ ಹಾಗೂ ಉದ್ಯಾನವನವನ್ನು ನಿರ್ಮಿಸಲು ಉದ್ದೇಶಿಸಲಾಗಿದೆ. ಇವುಗಳಲ್ಲಿ ಪ್ರವೇಶ ದ್ವಾರ, ಸೈಕ್ಲಿಂಗ್ ಟ್ರ್ಯಾಕ್ ಜಾಗಿಂಗ್/ವಾಕಿಂಗ್ ಟ್ರ್ಯಾಕ್ & ಟ್ರೈನ್ ಟ್ರ್ಯಾಕ್, ಸ್ಟೋಪ್, ಯೋಗಾ ಗಾರ್ಡನ್,ಓಪೆನ್ ಜಿಮ್, ಜಲದರ್ಶಿನಿ, ಸ್ಮಾಲ್ & ಲಾರ್ಜ್ ಸ್ಟೇಜ್, ಪುಸ್ತಕ ಮಳಿಗೆ, ನೀರಿನ ಕಾರಂಜಿ, ಫುಡ್ ಕೋರ್ಟ್, ಮಕ್ಕಳ ಆಟದ ಪ್ರದೇಶ, ಇತಿಹಾಸ ಉದ್ಯಾನ, ವಾಟರ್ ಬಾಡಿ, ಭೂದೃಶ್ಯ, ಪಾರ್ಕಿಂಗ್, ಕಟ್ಟಡ ನವೀಕರಣ, ಬೋಟಿಂಗ್ ಡೆಕ್, ವಾಟರ್ ಪಾರ್ಕ್ ಹಾಗೂ ಮಳಿಗೆಗಳು ಇತ್ಯಾದಿ ಸೇರಿವೆ. ಸದರಿ ಕಾಮಗರಿಯ ಮಾಸ್ಟರ್ ಪ್ಲಾನ್ ಮತ್ತು ವಿವರವಾದ ಯೋಜನಾ ವರದಿಯನ್ನು ತಯಾರಿಸಲು M/s. Sincere Architects Engineers Private Limited sಸಂಸ್ಥೆಯವರನ್ನು ರೂ.88.50 ಲಕ್ಷ ಮೊತ್ತಕ್ಕೆ ಸಮಾಲೋಚಕರನ್ನಾಗಿ ನೇಮಿಸಲಾಗಿರುತ್ತದೆ. ಅದರಂತೆ ಸಮಾಲೋಚಕರು ಸದರಿ ಕಾಮಗಾರಿಯ ರೂ.144.00 ಕೋಟಿ ಮೊತ್ತಕ್ಕೆ concept plan ಮತ್ತು ವಿವರವಾದ ಯೋಜನಾ ವರದಿಯನ್ನು ತಯಾರಿಸಿರುತ್ತಾರೆ. ಸದರಿ ಕಾಮಗಾರಿಯ ಅಂದಾಜಿಗೆ ಸರ್ಕಾರದ ಆದೇಶ ಸಂಖ್ಯೆ: ಜಸಂಇ 13 ಎನ್‌ಹೆಚ್‌ಪಿ 2019, ದಿನಾಂಕ:28.02.2019 ರಲ್ಲಿ ರೂ.144.00 ಕೋಟಿಗಳಿಗೆ ತಾತ್ವಿಕ ಅನುಮೋದನೆ ದೊರೆತಿರುತ್ತದೆ ಮತ್ತು 2019–20ನೇ ಸಾಲಿನಲ್ಲಿ ಕಾಮಗಾರಿಯನ್ನು ರೂ.36.00 ಕೋಟಿಗಳ ಅಂದಾಜು ಮೊತ್ತಕ್ಕೆ ಸೀಮಿತಗೊಳಿಸಿ ಕೈಗೆತ್ತಿಕೊಳ್ಳುವ ಷರತ್ತಿಗೊಳಪಟ್ಟು ಅನುಮೋದನೆ ನೀಡಲಾಗಿದೆ.

ಈ ಯೋಜನೆಗೆ 2018–19ನೇ ಸಾಲಿಗೆ ರೂ. 0.20 ಕೋಟಿ ಅನುದಾನ ಒದಗಿಸಲಾಗಿರುತ್ತದೆ.

BRINDAVAN GARDEN, MYSORE

HEMAVATHY DAM, HASSAN



CAUVERY NEERAVARI NIGAMA LIMITED

16th Annual Report 2018-19

CONTENTS

Sl. No.	PARTICULARS	Page No.
1	Board of Directors	2
2	Meeting Notice	3
3	Director's Report	4-18
4	C &AG's Comments	19
5	SecretarialAudit Report	20-21
6	IndependentAuditor's Report	27-43
7	Balance Sheet	44
8	Statement of Profit & Loss	45
9	Cash Flow Statement	46
10	Statement of Changes in Equity	47
11	Corporate Information & Significant Accounting Policies & Statement of Accounts with Schedules	48-63
12	Project report forthe Financial year 2018-19	65-144

REGISTERED OFFICE:

Cauvery Bhavan Complex, Gokulam, 4th Stage, Manjunathapura, Mysore - 570 020

CORPORATE OFFICE:

Surface Water Data Centre Building, 3rd & 4th Floor, Ananda Rao Circle,
Bangalore - 560009
Ph: 080-22354900, 22352998 (Fax)

BOARD OF DIRECTORS

Sri. B.S. Yediyurappa	Chairman
Sri T.M. Vijay Bhaskar,I.A.S	Director
Smt. C.N. Meena Nagaraj, I.A.S	Director
Sri P. Ravikumar, I.A.S	Director
Sri I.S.N. Prasad, I.A.S.	Director
Sri Rakesh Singh, I.A.S	Director
Sri N. Lakshmanarao Peshve, K.E.S.	Director
Sri M. Shivaswamy	Director
Sri S.L. Shivaprasad	Director
Sri S. N. Prasad	Director
Sri K. Jaiprakash, K.E.S	Managing Director

General Manager – Finance
Sri.Gangadhara B.K

Director (Technical)
Shri M.Bangaraswamy

Company Secretary
Smt. Priyadarshini Bhandiwad, CS,LLB

Chief Administrative Officer
Smt. Mamatha Devi G.S

Board Committees

Audit Committee.
Sri Rakesh Singh, IAS
Sri N. Lakshmanarao Peshve, K.E.S.
Sri K.Jaiprakash, K.E.S
Managing Director, Member

Finance Sub Committee
Sri Rakesh Singh, IAS
Sri N. Lakshmanarao Peshve, K.E.S.
Sri K.Jaiprakash, K.E.S
Managing Director, Member

Technical Sub Committee

Sri S.N. Prasad,	Chairman
Sri L. Basavaraju	Member
Sri S.L. Shivaprasad	Member
Sri Raveendra Saiman	Member
Sri Cheluvaraju .R	Special Invitee
Sri C.M.Shivashankar,	Special Invitee
Sri Sri K.Jaiprakash, K.E.S	Member Secretary

Corporate Social Responsibility Committee
Sri Rakesh Singh, IAS
Sri N. Lakshmanarao Peshve, K.E.S.
Sri K.Jaiprakash, K.E.S
Managing Director, Member

Chief Financial Officer (CFO)
Sri.K.Devadas, B.com, ACA

Bankers
State Bank of India
Dr.Ambedkar Veedhi Branch,Bengaluru.

Vijaya Bank
Corporate Banking Branch,
Residency Road, Bengaluru.

Bank of India
Bengaluru Large Corporate Branch,
K.G. Road, Bengaluru.

Axis Bank
Anandrao Circle, Bengaluru.

Karnataka Gramina Bank
Bellary.

Trustees & Bond Holder
Canara Bank, J.C.Road,Bengaluru.

Registrar of Transfer Agents of Bond
BGSE Financial Limited, J.C.Road,Bengaluru.

Bonds Market
Bombay Stock Exchange,Mumbai.

Legal Opinion
Sri. M.R.C Ravi, LLB, Malleshwaram,Bengaluru.

Sri. K.S. Bheemaiah, LLB
Malleshwaram,Bengaluru.

Auditors
M/s. Khicha & Prabhu Kesavan
CharteredAccountants, Chennai.

Internal Auditors
M/s. K.K. Channani & Associates,
CharteredAccountants, Bengaluru.

CAUVERY NEERAVARI NIGAMA LIMITED

Registered Office
Cauvery Bhavan Complex, Gokulam, 4th Stage, Manjunathpura,
Mysore – 570 020.

16th ANNUAL GENERAL MEETING NOTICE

Notice is here by given that the16th Annual General Meeting of the Members of the Cauvery Neeravari Nigama Limited will be held on Monday 30th day of December 2019 at 4:00 PM at Chief Minister's Home Office, "Krishna", Bangalore to transact the following business:

ORDINARY BUSINESS

1. To receive, consider and adopt the Audited Balance Sheet for the Financial Year 2018 - 19 as at 31.03.2019, Statement of Profit and Loss, Cash Flow Statement, Changes in Equity for the year ended on that date along with the Notes attached there to, Director's Report, Auditors Report, Compliance Certificate and Comments of the Comptroller & Auditors General of India thereon.

2. To Fix Remuneration of Statutory Auditors appointed u/s 139 of the Companies Act 2013.

Place : Bangalore
Date: 27.12.2019

By Order of the Board
Sd/-
Company Secretary

Note:

A Member entitled to attend and vote at the meeting is entitled to appoint a proxy to attend and vote instead of himself and such proxy need not be a member of the company.

DIRECTORS' REPORT

To,
The Members of,
Cauvery Neeravari Nigama Limited

Your Directors have pleasure in presenting their 16th Annual Report of the Company together with the Audited Financial Balance Sheet, Cash flow Statement and the Report on the affairs of the company for the year ended 31st March, 2019.

Your Company was established as a wholly owned Government Company under provisions of Companies Act 1956.

FINANCIAL PERFORMANCE:

The Cauvery basin project envisages the entire project consisting of Dams, Canal Systems and Canal Networks. The Company has adopted IND-AS with effect from 1st April, 2016 and implemented IND-AS Standard wherever applicable and carried out in accordance. The Financial Statements comprise of the Balance Sheet, Statement of Profit & Loss, Cash Flow Statement of change in Equity as at 31st March 2019. The Company's Statement of Profit & Loss Account for the Financial Year ended 31st March, 2019 are given hereunder:

(Amount in Rs.)

Particulars	2018-19	2017-18
Employees benefit Expenses	1,180,587,452	981,843,277
Financial Costs	1,741,591,650	1,328,926,177
Depreciation	89,037,305	80,052,941
Other expenses	1,984,196,233	1,313,803,966
EXPENSES	**4,995,412,641**	**3,704,626,362**
Less Receipts		
Government Grant for Maintenance Works	2,498,900,000	2,157,869,000
Other Receipts	149,381,921	138,285,649
TOTAL EXPENSES	**2,347,130,720**	**1,408,471,713**
Less: Transfer to work in progress	2,347,130,720	1,408,471,713
NET PROFIT BEFORE TAX	**139,741,909**	181,734,230

CORPORATE SOCIAL RESPONSIBILITY:

As required u/s 135 of the Companies Act, 2013, the Board in its meeting held on 4th February 2015 formulated a Committee to look after Corporate Social Responsibility (CSR) initiatives of the Company.

This year for the 1st time, an amount of ₹.81.00 Lakhs accrued across 3 years, is being earmarked under CSR for under taking various activities as permitted under Companies Act 2013. The CSR Committee in its 2nd Meeting held on 30-11-2019, recommended to the Board to contribute during the financial year 2019-20, the CSR Fund of ₹.81.00 Lakhs to the Department of Women and Child Welfare, Government of Karnataka, to take up Welfare activities expenditure under the supervision of Karnataka State District Child Protection Unit, Bengaluru.

STATUTORY AUDITORS:

As per the provisions of the section 139 (5) of the Companies Act, 2013 the Comptroller and Auditor General of India, New Delhi vide letter No.CA.V/COY/KARNATAKA, CAUNER(1)/1 Dated 18-09-2019 has communicated the Appointment of M/s. Khicha&PrabuKesavan, Chartered Accountants, as Statutory Auditors for Financial Year 2018-19.

Many of the qualifications or remarks in the Auditors Report inviting reference to Notes to Accounts and Accounting Standards, which will be complied only on completion of the entire project. Further, the Auditors have expressed their opinion that the Company's Internal Financial Controls, obtaining confirmations and their reconciliation with the books of accounts of the company were not operating effectively. Though the company was unable to achieve the said controls in certain cases there is no risk of material misstatements in the books of accounts. Apart from this, Company's replies to Auditors' Observations has been furnished in the Addendum.

THE PRACTICING COMPANY SECRETARY IN THEIR REPORTS

Mr. R.C. VenkateshRao, PCS have given their report dated 24th December 2019. There was no qualification, reservation or adverse remark made by the Secretarial Auditor in his report which is placed as part of this Report.

DIRECTORS:
